

ನಿಗೂಢ

ವಿಶಿಷ್ಟ ವಿನೂತನ 18 ಲೇಖಕರ ಖೋ ಕಾದಂಬರಿ

ಸ್ನೇಹ ಬುಕ್ ಹೌಸ್

ಸಂಪಾದಕರು

ಹು ವಾ ಶ್ರೀಪ್ರಕಾಶ

ನಿಗೂಢ

ವಿಶಿಷ್ಟ ವಿನೂತನ 18 ಲೇಖಕರ ಖೋ ಕಾದಂಬರಿ

ಸಂಪಾದಕರು

ಹು ವಾ ಶ್ರೀಪ್ರಕಾಶ

ಸ್ನೇಹ ಬುಕ್ ಹೌಸ್
ಪ್ರಕಾಶಕರು ಮತ್ತು ಪುಸ್ತಕ ಮಾರಾಟಗಾರರು
ನಂ. 165, 10ನೇ ಮುಖ್ಯರಸ್ತೆ, ಶ್ರೀನಗರ
ಬೆಂಗಳೂರು–50, ಮೊಬೈಲ್ : 9845031335
email : snehabookhouse@gmail.com

NIGHOODA - Kho kadambari
written by 18 authors
Edited by HU. VA. Sri Prakash
Published by **Sneha Book House,** No. 165/a
Near Srinagara Bus Stand, 10th Main
Srinagar, Bengaluru - 560 050
Mob : 98450 31335, Email : snehabookhouse@gmail.com

ISBN	:	978-81-982108-6-9
ಮೊದಲ ಮುದ್ರಣ	:	2024
ಪುಟಗಳು	:	160
ಬಳಸಿದ ಕಾಗದ	:	70 ಜಿ.ಸಿ.ಎಮ್. ಎನ್.ಎಸ್. ಮ್ಯಾಪ್‌ಲಿಥೊ
ಪುಸ್ತಕದ ಅಳತೆ	:	ಡೆಮಿ 1/8
ಹಕ್ಕುಗಳು	:	ಲೇಖಕರವು
ಪ್ರತಿಗಳು	:	1000
ಬೆಲೆ	:	**ರೂ. 200/-**
ಮುಖಪುಟ ವಿನ್ಯಾಸ	:	ನಿತಿನ್ ಶೇಖರ್
ಪುಟ ವಿನ್ಯಾಸ	:	ಹರೀಶ್ ಕೆ.ಆರ್., 8553184584

ಸ್ನೇಹ ಬುಕ್ ಹೌಸ್
ಪ್ರಕಾಶಕರು ಮತ್ತು ಪುಸ್ತಕ ಮಾರಾಟಗಾರರು
ನಂ. 165, 10ನೇ ಮುಖ್ಯರಸ್ತೆ, ಶ್ರೀನಗರ
ಬೆಂಗಳೂರು–50, ಮೊಬೈಲ್ : 9845031335
email : snehabookhouse@gmail.com

ಮುದ್ರಣ
ಸ್ನೇಹ ಪ್ರಿಂಟ್ ಮೀಡಿಯಾ
ಬೆಂಗಳೂರು

ಮುನ್ನುಡಿ

ಖೋ ಕಾದಂಬರಿ...!

ನನ್ನ ಮಟ್ಟಿಗೆ ಇದು ಹೊಸ ಓದು. ಈ ಪ್ರಯೋಗದ ಬಗ್ಗೆ ಬಹಳಷ್ಟು ಕೇಳಿದ್ದೆನಾದರೂ ಓದೋ ಸಾಹಸ ಮಾಡಿರಲಿಲ್ಲ. ಹೌದು. ಅದನ್ನು ಸಾಹಸ ಅಂತಾನೇ ಭಾವಿಸಿದ್ದೆ ನಾನು.

ಒಂದು ಕಾದಂಬರಿಯನ್ನು ಖೋ ಕೊಟ್ಟುಕೊಂಡು ಬರೆಯೋದು ಸಾಧ್ಯವಾ? ಅದರ ಗುಣಮಟ್ಟ ಹೇಗಿದ್ದೀತು? ಆ ಕಾದಂಬರಿಗೆ ತನ್ನ ಅಸ್ತಿತ್ವ ಕಾಯ್ದುಕೊಳ್ಳಲು ಸಾಧ್ಯವಿದೆಯಾ? ಅಧ್ಯಾಯದಿಂದ ಅಧ್ಯಾಯಕ್ಕೆ ಬರಹಗಾರರು ಬದಲಾದಾಗ ಕಾದಂಬರಿ ಹದವೇ ಕೆಟ್ಟು ಹೋಗೋದಿಲ್ವಾ? ಹಲವಾರು ಪ್ರಶ್ನೆಗಳಿದ್ದುವ ನನ್ನಲ್ಲಿ.

ಎತ್ತು ಏರಿಗೆಳೆಯಿತು.. ಕೋಣ ನೀರಿಗೆಳೆಯಿತು ಅಂತೊಂದು ಗಾದೆಮಾತಿದೆ. ಅದೇ ರೀತಿ ಟೂ ಮೆನಿ ಕುಕ್ಸ್ ಸ್ಪಾಯ್ಲ್ ದ ಬ್ರಾಥ್ ಅಂತೊಂದು ಇಂಗ್ಲಿಷ್ ನಾಣ್ನುಡಿ ಇದೆ. ಈ ಖೋ ಕಾದಂಬರಿ ವಿಚಾರದಲ್ಲೂ ನನ್ನ ಎಣಿಕೆ ಅದೇ ಇದ್ದದ್ದು.

ನಾನು ಮೆಗಾಧಾರಾವಾಹಿಗಳಿಗೆ ಸಾವಿರಾರು ಎಪಿಸೋಡ್ ಸಂಭಾಷಣೆ ಬರೆದವನು. ಚಿತ್ರಕಥೆ ಕೂಡ ಬರೆದಿದ್ದೇನೆ. ಮೆಗಾಸೀರಿಯಲ್ ಕೂಡ ಒಂದರ್ಥದಲ್ಲಿ ಖೋ ಕಾದಂಬರಿಯೇ.

ಯಾರೋ ಚಿತ್ರಕಥೆ ರಚಿಸ್ತಾ ಇರ್ತಾರೆ.. ಇನ್ಯಾರೋ ಸಂಭಾಷಣೆ ಬರೀತಾ ಇರ್ತಾರೆ. ಅವರಿಂದ ಅದು ನನ್ನ ಕೈಗೆ ಬರುತ್ತದೆ. ನಾನೊಂದಷ್ಟು ಬರೀತೀನಿ. ಇನ್ಯಾವುದೋ ಬದಲಾದ ಪರಿಸ್ಥಿತಿಯಲ್ಲಿ ಅದು ನನ್ನ ಕೈಯಿಂದ ಇನ್ನೊಬ್ಬರ ಕೈಗೆ ಹೋಗುತ್ತದೆ. ಅವರು ಮುಂದಿನ ಚಿತ್ರಕಥೆ ಸಂಭಾಷಣೆ ಬರೀತಾ ಹೋಗ್ತಾರೆ. ಐದಾರು ವರ್ಷಗಳು ಸಾಗುವ ಮೆಗಾಧಾರಾವಾಹಿಯಲ್ಲಿ ಹತ್ತಾರು ಬರಹಗಾರರು ಕೈಯ್ಯಾಡಿಸಿ ಹೋಗಿರುತ್ತಾರೆ. ಬರಹಗಾರನ ಪ್ರಮುಖ ಚಾಲೆಂಜ್ ಅಂದರೆ

ಪಾತ್ರದ ಬೇಸಿಕ್ ಕ್ಯಾರಕ್ಟರ್, ಗುಣಸ್ವಭಾವ, ಮ್ಯಾನರಿಸಮ್, ಮಾತಿನ ಶೈಲಿ ಪಾತ್ರಪೋಷಣೆ ಇವೆಲ್ಲ ಬದಲಾಗದಂತೆ ಹಿಂದಿನ ಬರಹಗಾರನ ಸತ್ವ ಮತ್ತು ಶೈಲಿಯನ್ನು ಕಾಪಾಡೋದು.

ಬರಹಗಾರ ತಾನು ಎದ್ದು ಕಾಣೋದಕ್ಕಿಂತ ಹಿಂದಿನವರು ಸೃಷ್ಟಿಸಿದ ಪಾತ್ರಗಳಲ್ಲಿ ಪರಕಾಯ ಪ್ರವೇಶ ಮಾಡಿ ಬರೆಯುವುದೇ ಮುಖ್ಯವಾದ ಸವಾಲಾಗಿರುತ್ತದೆ. ಆಮೂಲಕ ತನ್ನ ಛಾಪು ಮೂಡಿಸಬೇಕಿರುತ್ತದೆ.

ಮೆಗಾ ಸೀರಿಯಲ್‌ಗಳಲ್ಲಿ ಅಂಥ ಚಾಲೆಂಜ್ ಗಳನ್ನು ಮೆಟ್ಟಿನಿಲ್ಲೋದಕ್ಕೆ ಅವಕಾಶ ಇದೆ. ಹಿಂದಿನ ಎಪಿಸೋಡ್‌ಗಳನ್ನು ನೋಡಿ ಪಾತ್ರವರ್ತನೆಗಳನ್ನು ಗ್ರಹಿಸಿ, ಕಥೆ ಅರ್ಥ ಮಾಡಿಕೊಂಡು ಬರೀತಾ ಹೋಗಬಹುದು. ಒಂದು ಚೌಕಟ್ಟಿನೊಂದಿಗೆ ಕಥೆ ಶುರುವಾದರೂ ಸಹ ಆ ನಂತರ ಹೇಗೆ ಬೇಕಾದ್ರೂ ವಿಸ್ತರಿಸಿಕೊಳ್ತಾ ಹೋಗೋ ಸ್ವಾತಂತ್ರ್ಯ ಇರುತ್ತದೆ.

ಆದರೆ ಖೋ ಕಾದಂಬರಿಯಲ್ಲಿ ಹಾಗಲ್ಲ. ಇಲ್ಲಿ ಕಥೆಗೆ ನಿರ್ದಿಷ್ಟ ಆರಂಭ ಅಂತ್ಯ ಎಲ್ಲವೂ ಫಿಕ್ಸ್ ಆಗಿವೆ. ಮೊದಲ ಹೆಜ್ಜೆಯಿಂದ ಕೊನೆ ಹೆಜ್ಜೆಯ ತನಕ ತಲುಪಿಸಿ ಕೊಡುವುದು ಖೋಪಡ್ಕೊಂಡು ಬರೆಯೋವ್ರ ಜವಾಬ್ದಾರಿ.

ಶ್ರೀ ಪ್ರಕಾಶ್ ಫೇಸ್ಬುಕ್‌ನಲ್ಲಿ ನನ್ನ ಗೆಳೆಯರು. ಬಹಳ ಸಹೃದಯಿ ವ್ಯಕ್ತಿತ್ವ, ಕವಿಮನಸ್ಸು. ಹಿರಿಯ ಗೆಳೆಯರು ಹೀಗೊಂದು ಪುಸ್ತಕ ರಚಿಸಿದ್ದೇವೆ. ಹದಿನೆಂಟು ಲೇಖಕರು ಬರೆದಿದ್ದಾರೆ.. ನೀವು ಮುನ್ನುಡಿ ಬರೆದುಕೊಡಬೇಕು ಅಂತ ಹೇಳಿದಾಗ, ನನ್ನಲ್ಲಿ ನಿಜಕ್ಕೂ ಈ ಪುಸ್ತಕದ ಬಗ್ಗೆ ಯಾವ ನಿರೀಕ್ಷೆಯೂ ಇರಲಿಲ್ಲ. ಇದು ಫೇಸ್ಬುಕ್ ಬರಹಗಳ ಗುಚ್ಛ ಇದ್ದೀತು. ಹವ್ಯಾಸಕ್ಕೆ ಬರೆದ ಲೇಖನಗಳ ಸಂಕಲನ ಇದ್ದೀತು. ತಮ್ಮ ಖುಷಿಗೊಂದು ಪುಸ್ತಕ ಮಾಡ್ಕೋತಾ ಇದಾರೆ ಎಂಬ ಭಾವನೆ ಇತ್ತು. ಆದರೆ ಅವರು ಫೈಲ್ ಗಳನ್ನು ಕಳಿಸಿದ ಕೂಡಲೇ ಮೊದಲ ಅಧ್ಯಾಯ ಓದಿದೆ. ತಕ್ಷಣಕ್ಕೆ ಬರಹ ನನ್ನನ್ನ ಸೆಳೆದುಕೊಂಡು ಬಿಟ್ಟಿತು. ಸುಬ್ಬಜ್ಜಿ, ಪದ್ಮಕ್ಕ ಸುಹಾಸ ಎಲ್ಲರೂ ನನ್ನ ಸುತ್ತಲಿರೋ ವ್ಯಕ್ತಿಗಳಷ್ಟು ಆಪ್ತರಾಗಿಬಿಟ್ಟರು.

ಆ ನಂತರ "ನಿಗೂಢ" ಖೋ ಕಾದಂಬರಿ ಅನ್ನೋದನ್ನು ಗಮನಿಸಿದೆ.

ಆಗ ನಾನು ಬದಲಾದ ಮನಸ್ಥಿತಿಯಲ್ಲಿ ಈ ಪುಸ್ತಕವನ್ನು ಕೈಗೆತ್ತಿಕೊಂಡೆ.

ಖೋ ಕಾದಂಬರಿ ಬಗ್ಗೆ ನನ್ನಲ್ಲಿ ಬಂದ ಆಲೋಚನೆಗಳ ಜೊತೆಜೊತೆಯಲ್ಲೇ ಈ ಪ್ರಯೋಗದ ಬಗ್ಗೆ ಕುತೂಹಲ ಹುಟ್ಟಿಕೊಂಡಿತು.

ಮೊದಲ ಅಧ್ಯಾಯ ಓದ್ತಾ ಇರುವಾಗಲೇ, ಎರಡನೇ ಮೂರನೇ ಅಧ್ಯಾಯಕ್ಕೆ ಬರಹಗಾರರು ಬದಲಾಗಿರ್ತಾರೆ.. ಈ ಪಾತ್ರಗಳ ಸ್ಥಿತಿಯನ್ನ ಗತಿಯನ್ನ ಕಾಪಾಡಿರ್ತಾರಾ? ಅನ್ನೋ ಪ್ರಶ್ನೆ ಕುತೂಹಲ ಎಲ್ಲವೂ ನನ್ನನ್ನು ಕಾಡತೊಡಗಿತು.

ಅರ್ಥಾತ್.. ನನಗೆ ಪಾತ್ರಗಳ ಬಗ್ಗೆ ಒಂದು ಪ್ರೀತಿ ಸೃಷ್ಟಿಯಾಗಿಬಿಟ್ಟಿತ್ತು. ನನ್ನೊಂದಿಗೆ ಕನೆಕ್ಟ್ ಆಗಿಬಿಟ್ಟಿದ್ದವು ಪಾತ್ರಗಳು. ಅಧ್ಯಾಯದಿಂದ ಅಧ್ಯಾಯಕ್ಕೆ ದಾಟುತ್ತಾ ಹೋದೆ. ಎಲ್ಲಿಯೂ ಬರಹಗಾರರು ಬದಲಾಗಿದ್ದಾರೆ ಅಂತ ಅನಿಸಲೇ ಇಲ್ಲ. ಅಷ್ಟು ಪರಿಪಕ್ವವಾಗಿ ಮುಂದುವರಿಸ್ಕೊಂಡ್ ಹೋಗ್ತಾರೆ.

ಅಚ್ಚರಿ ಏನಂದ್ರೆ ಇಲ್ಲಿ ನನಗೆ ತಿಳಿದಂತೆ ಶ್ರೀ ಪ್ರಕಾಶ್ ಮತ್ತು ದಿವ್ಯಾ ಶ್ರೀಧರ್ ರಾವ್ ಹೊರತುಪಡಿಸಿ ಮಿಕ್ಕವರೆಲ್ಲರೂ ಹವ್ಯಾಸಿ ಬರಹಗಾರರು. ಎಲ್ಲರೂ ಬೇರೆ ಬೇರೆ ಕ್ಷೇತ್ರಗಳ ಸಾಧಕರು, ಪರಿಣತಿ ಪಡೆದವರು. ಕೇವಲ ಆಸಕ್ತಿಯಿಂದ ಹವ್ಯಾಸವೆಂಬಂತೆ ಬರವಣಿಗೆಗೆ ಒಡ್ಡಿಕೊಂಡವರು. ಅವರಿಂದ ಇಷ್ಟು ಚೆಂದದ ಬರವಣಿಗೆ ನಿಜಕ್ಕೂ ನನ್ನಲ್ಲಿ ಅಚ್ಚರಿ ಮೂಡಿಸಿಬಿಟ್ಟಿತು. ಈ ಖೋ ಕಾದಂಬರಿಯಲ್ಲಿ ಬರೆದ ಪ್ರತಿಯೊಬ್ಬರೂ ಒಂದು ಸ್ವತಂತ್ರ ಕಾದಂಬರಿ ರಚಿಸಬಲ್ಲರು, ಒಂದು ಮೆಗಾಸೀರಿಯಲ್ಲಿಗೆ ಬರೆಯಬಲ್ಲರು. ಇದು ಉತ್ಪ್ರೇಕ್ಷೆ ಅಥವಾ ಮುಖಸ್ತುತಿ ಅಲ್ಲ. ಬರಹಗಾರರಿಗೆ ಕಲ್ಪನಾಶಕ್ತಿ ಮತ್ತು ಪಾತ್ರಗಳನ್ನು ಜೀವಿಸುವಿಕೆ ಗೊತ್ತಾಗಿದೆಯಲ್ಲ ಅಷ್ಟೇ ಮುಖ್ಯ.

ಈ ಖೋ ಕಾದಂಬರಿ, ಅಧ್ಯಾಯದಿಂದ ಅಧ್ಯಾಯಕ್ಕೆ ಓದುಗನನ್ನು ತನ್ನೊಳಗೆ ಎಳೆದುಕೊಳ್ಳುತ್ತದೆ. ಪರಿಸರದ ತೆಕ್ಕೆಯೊಳಗೆ ತೆಗೆದುಕೊಳ್ಳುತ್ತದೆ. ಪಾತ್ರಗಳ ನಡುವೆ ಕೂತು ವೀಕ್ಷಕರಾಗ್ತೀವಿ ಓದುಗರು. ಕೆಲವೊಮ್ಮೆ ನಾವೇ ಪಾತ್ರವಾಗಿ ರಿಯಾಕ್ಟ್ ಮಾಡಿಬಿಡುವಷ್ಟು ಗಾಢತೆ ಕೂಡ ಇದೆ ನಿರೂಪಣೆಯಲ್ಲಿ.

ಈ ಕಾದಂಬರಿ ಮತ್ತು ಪರಿಕಲ್ಪನೆ ಶ್ರೀ ಪ್ರಕಾಶ್ ಅವರದ್ದೇ ಆಗಿದ್ದರೆ, ಅವರ ಒಂದು ಜಾಣ್ಮೆಯನ್ನು ನಾನು ಮೆಚ್ಚುತ್ತೇನೆ. ಇಲ್ಲಿ ವಿವಿಧ ಕ್ಷೇತ್ರಗಳ ವ್ಯಕ್ತಿಗಳು ಒಂದೊಂದು ಅಧ್ಯಾಯ ಬರೆದಿದ್ದಾರೆ. ಅವರವರ ಕ್ಷೇತ್ರಕ್ಕೆ ಕನೆಕ್ಟ್ ಆಗುವಂಥ ಅಧ್ಯಾಯಗಳನ್ನೇ ಅವರಿಗೆ ಒದಗಿಸಲಾಗಿದೆ. ಅದೃಷ್ಟವಶಾತ್ ಅಂಥ ಅಧ್ಯಾಯಗಳು ಕಾದಂಬರಿಯಲ್ಲಿ ಸಹಜವಾಗಿಯೇ ಇವೆ. ಉದಾಹರಣೆಗೆ ಡಾಕ್ಟರ್ ಚೇತನ್ ಸದಾನಂದ್ ಬರೆದ ಅಧ್ಯಾಯ. ಅವರು ವೃತ್ತಿಯಲ್ಲಿ ವೈದ್ಯರು. ಚೇತನ್ ಬರೆದ ಅಧ್ಯಾಯದಲ್ಲಿ ವೈದ್ಯಲೋಕಕ್ಕೆ ಸಂಬಂಧಪಟ್ಟ ಘಟನಾವಳಿಗಳು ಜರುಗುತ್ತವೆ.

ಇದು ಸೂತ್ರಧಾರರ ಜಾಣ್ಮೆಗೆ ಸಾಕ್ಷಿ.

ಸಿನಿಮಾಗಳಲ್ಲಿ ಕ್ಯಾಮಿಯೋ ಅಪಿಯರೆನ್ಸ್ ಅಂತ ಇರುತ್ತಲ್ವಾ, ಆ ರೀತಿ ಚೇತನ್ ಸದಾನಂದ್ ಅವರು ಬರೆದ ಅಧ್ಯಾಯ ಈ ಕಾದಂಬರಿಯಲ್ಲಿ ಹೊಸ ಹೊಳಹು ಕೊಡುತ್ತದೆ. ಮೊದಲಿಂದ ಕೊನೆಯ ತನಕ ನಿಗೂಢತೆಯನ್ನು ಕಾಯ್ದುಕೊಳ್ಳುತ್ತಾ ಸಾಗುವ ಕಾದಂಬರಿ ಬಹುತೇಕ ಕ್ಲೈಮ್ಯಾಕ್ಸ್ ವರೆಗೂ ತನ್ನ ಶೀರ್ಷಿಕೆಗೆ ನ್ಯಾಯ ಒದಗಿಸುತ್ತದೆ. ಆದರೆ ಅಂತ್ಯ ಟಿಪಿಕಲ್ ಸಿನಿಮಾಗಳಂತೆ ಸಿದ್ಧಸೂತ್ರದ ಮೊರೆಹೋಗುತ್ತದೆ.

ಪರ್ಸನಲೀ ನನಗೆ ಓದು ಅಂತ ಬಂದಾಗ ಡೆಸ್ಟಿನೇಷನ್ ಗಿಂತ ನಡೆಯೋ ಹಾದಿಯೇ ಹೆಚ್ಚು ಮುಖ್ಯವಾಗೋದ್ರಿಂದ ಅಂತ್ಯದ ಬಗ್ಗೆ ನನಗೆ ತಕರಾರುಗಳಿಲ್ಲ.

ಆದರೆ ಈ ಕಾದಂಬರಿಗೆ ನಿಗೂಢ ಅನ್ನೋ ಶೀರ್ಷಿಕೆ ನೀಡಿದ ಬಗ್ಗೆ ನನ್ನ ತಕರಾರಿದೆ. ಸುಬ್ಬಜ್ಜಿಯ ಸ್ವಗತ ಅಂತಲೋ, ಅಕ್ಕನ ಡೈರಿಯ ಮಿಸ್ಸಿಂಗ್ ಪುಟಗಳು ಅಂತಾನೋ, ಇನ್ನಷ್ಟು ಚೆಂದದ ಶೀರ್ಷಿಕೆಗಳು ಈ ಕಾದಂಬರಿಗೆ ಸಲೀಸಾಗಿ ಒಗ್ಗುತ್ತಿದ್ದವು. ಈ ಕಾದಂಬರಿಯಲ್ಲಿ ನಮ್ಮನ್ನು ನಿಗೂಢತೆಗಿಂತ ಹೆಚ್ಚಾಗಿ ಪಾತ್ರಗಳ ಎಮೋಷನ್‌ಗಳೇ ಕಾಡುತ್ತವೆ. ಹೀಗಾಗಿ ಇದನ್ನು ಸಸ್ಪೆನ್ಸ್ ಥ್ರಿಲ್ಲರ್ ವಿಭಾಗಕ್ಕೆ ಸೇರಿಸೋದಕ್ಕಿಂತ ಒಂದು ಭಾವುಕ ಕೌಟುಂಬಿಕ ಕಾದಂಬರಿ ವಿಭಾಗಕ್ಕೆ ಸೇರಿಸೋದು ಹೆಚ್ಚು ಸೂಕ್ತ ಅಂದುಕೊಳ್ಳುತ್ತೇನೆ.

ವಿಮರ್ಶಾತ್ಮಕವಾಗಿ ಹೇಳೋದಾದ್ರೆ ಖೋ ಕಾದಂಬರಿಯಲ್ಲಿ ಆಗಬಹುದಾದ ಚಿಕ್ಕಪುಟ್ಟ ಕಂಟಿನ್ಯೂಟಿಗಳು ಗೊತ್ತಾಗಿಯೂ ಗೊತ್ತಾಗದಂತೆ ಮಿಸ್ ಹೊಡೆದಿವೆ. ಆದರೆ ಅದ್ಯಾವುದೂ ಕಥೆಯ ಓಘಕ್ಕೆ ಪೆಟ್ಟು ಕೊಡುವುದಿಲ್ಲ. ಎರಡು ಟ್ರ್ಯಾಕ್‌ಗಳ ನಿರೂಪಣೆ ತಂತ್ರ, ಫ್ಲಾಶ್ ಬ್ಯಾಕ್, ಇಂಟರ್ ಕಟ್ ತಂತ್ರ ಇವೆಲ್ಲವನ್ನೂ ನೋಡಿದಾಗ ಮನಸ್ಸು ಮಾಡಿದರೆ ಈ ಕಾದಂಬರಿಯನ್ನು ತೆರೆಗೆ ತರೋ ಯೋಚನೆ ಕೂಡ ಮಾಡಬಹುದು ಅನಿಸುತ್ತದೆ.

ಶ್ರೀಪ್ರಕಾಶ್ ಅವರ ಈ ಪ್ರಯತ್ನ ನಿಜವಾಗಿಯೂ ಶ್ಲಾಘನೀಯ. ಇದರಲ್ಲಿರೋ ಪ್ರತಿ ಬರಹಗಾರರಿಗೂ ಫುಲ್ ಟೈಮ್ ಬರವಣಿಗೆ ಅಪ್ಪಿಕೊಳ್ಳುವ ಸಾಮರ್ಥ್ಯವಿದೆ.

ವೈವಿಧ್ಯಮಯ ವಿಚಾರಗಳನ್ನು ಇಟ್ಟುಕೊಂಡು ಇಂಥ ಇನ್ನಷ್ಟು ಕಥೆಗಳು ಕಾದಂಬರಿಗಳು ಈ ತಂಡದಿಂದ ಸೃಷ್ಟಿಯಾಗಲಿ ಎಂಬುದು ನನ್ನ ಹಾರೈಕೆ.

ನನ್ನಿಂದ ಮುನ್ನುಡಿ ಬರೆಸುವ ಮನಸ್ಸು ಮಾಡಿದ್ದು ಶ್ರೀ ಪ್ರಕಾಶ್ ಅವರ ದೊಡ್ಡತನ. ಯಾಕಂದ್ರೆ ನಾನು ಖುದ್ದು ಬೃಹತ್ ಪುಸ್ತಕ ಬರೆದವನಲ್ಲ. ಪತ್ರಕರ್ತನಾಗಿ, ಸ್ಕ್ರೀನ್ ರೈಟರ್ ಆಗಿ, ಕಂಟೆಂಟ್ ರೈಟರ್ ಆಗಿ, ಅಂಕಣಕಾರನಾಗಿ, ಫೇಸ್ ಬುಕ್ ಬರಹಗಾರನಾಗಿ ನಾನು ಹೆಚ್ಚು ಬರೆದವನು. ಓದಿನ ವಿಷಯಕ್ಕೆ ಬಂದರೂ ಕಾದಂಬರಿಗಿಂತ ಸಣ್ಣ ಕಥೆ ನನ್ನ ನೆಚ್ಚಿನ ವಿಭಾಗ. ಆದರೆ ನಿಗೂಢ ಖೋ ಕಾದಂಬರಿ ಸಣ್ಣ ಕಥೆಯಂತೆಯೇ ನನ್ನಿಂದ ಓದಿಸಿಕೊಂಡಿತು. ನೀಳ್ಗತೆ ಓದಿದ ಆಹ್ಲಾದತೆ ನೀಡಿತು. ಆದ್ದರಿಂದಲೇ ನನ್ನಿಂದ ಮುನ್ನುಡಿ ತಾನಾಗಿ ಬರೆಸಿಕೊಂಡಿತು.

ಎಲ್ಲ ಬರಹಗಾರರಿಗೂ ಶುಭಹಾರೈಸುತ್ತಾ ಈ ಕಾದಂಬರಿ ಹೆಚ್ಚು ಜನರನ್ನು ತಲುಪಲೆಂದು ಆಶಿಸುತ್ತೇನೆ. ಇನ್ನಷ್ಟು ಪ್ರಯೋಗಗಳು ಈ ತಂಡದಿಂದ ಆಗಲೆಂದು ನಿರೀಕ್ಷಿಸುತ್ತೇನೆ.

ನವೀನ್ ಸಾಗರ್

ಸಂಪಾದಕರ ನುಡಿ

ಆತ್ಮೀಯರೇ.

ನಮಸ್ಕಾರ.

ಖೋ ಕಾದಂಬರಿ ಯನ್ನು ರಚಿಸುವ ಹೊಸ ಪ್ರಯತ್ನ ವನ್ನು ಮಲೆನಾಡ ಬಂಧುಗಳು ವಾಟ್ಸಪ್ ವೇದಿಕೆಯಲ್ಲಿ ಮಾಡಬೇಕೆಂಬ ಆಶಯ ವ್ಯಕ್ತಪಡಿಸಿ ಬರೆಯಲು ಸಿದ್ಧವಿರುವವರು ಹೆಸರು ಕೊಡಿ ಅಂದಾಗ ಮೊದಲಿಗೆ ಕೆಲವೇ ಹೆಸರುಗಳು ಬಂದವು. ಖೋ ಕಾದಂಬರಿ ವೇದಿಕೆಯಲ್ಲಿ ಆರಂಭವಾಗಿ ಮುಂದುವರಿದಂತೆ, ಕೆಲವರು ಬರೆಯಲು ಮುಂದೆ ಬಂದರು. ಕನಿಷ್ಟ ಐದು ಪುಟಗಳಷ್ಟಾದರೂ ಬರೆದು ಕತೆಯನ್ನು ಮುಂದುವರೆಸಲು ಕೋರಲಾಗಿತ್ತು. ಕತೆಯನ್ನು ಬೆಳೆಸಲು ಲೇಖಕರಿಗೆ ಪೂರ್ಣ ಸ್ವಾತಂತ್ರ್ಯ ನೀಡಲಾಗಿತ್ತು.

ವೇದಿಕೆಯಲ್ಲಿ ಜನವರಿ 2022ರಲ್ಲಿ ಆರಂಭವಾದ ಕತೆ ನಡುನಡುವೆ ಮುಂದುವರೆಯಲು ಬಹಳ ಸಮಯ ತೆಗೆದುಕೊಂಡ ಕಾರಣ ಒಂದು ವರ್ಷಕ್ಕೂ ಹೆಚ್ಚು ಸಮಯ ತೆಗೆದುಕೊಂಡು ಜುಲೈ 2023ರಲ್ಲಿ ಮುಗಿಯಿತು.

ಮೊದಲ ಅಧ್ಯಾಯ ಬರೆದವರೇ ಕಾದಂಬರಿಯ ಕೊನೆಯ ಅಧ್ಯಾಯ ಬರೆದಿದ್ದಾರೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಖೋ ಕಾದಂಬರಿಗಳು ಈಗಾಗಲೇ ಬಂದಿವೆ. ಖೋ ನಾಟಕಗಳ ಪ್ರಯೋಗವೂ ಆಗಿದೆ ಎಂದು ತಿಳಿದಿದೆ.

ಇತ್ತೀಚೆಗೆ ಸಮನ್ವಯ ಸಮಿತಿ ಕನ್ನಡವೇ ಸತ್ಯ ಎಂಬ ವೇದಿಕೆಯಿಂದ ಪಲ್ಲಟ ಎಂಬ ಖೋ ಕಾದಂಬರಿ ಹೊರತಂದಿದ್ದು ಅದರಲ್ಲಿ ನಾನೂ ಭಾಗವಹಿಸಿದ್ದೆ. ಮಲೆನಾಡ ಬಂಧುಗಳು ಗುಂಪಿನಲಿ ಖೋ ಕಾದಂಬರಿ ತರಲು ಇದು

ಪ್ರೇರಣೆಯಾಯ್ತು. ಮೊದಲ ಅಧ್ಯಾಯವೇ ಮುಂದೆ ಬೆಳೆಸಲು ಸವಾಲಿನ ದಾಗಿತ್ತು. ಇದು ಒಂದು ಪತ್ತೇದಾರಿಯಾಗುವುದೋ, ಭೂತಪ್ರೇತದ ಕತೆ ಯಾಗುವುದೋ ಎಂಬ ಅನುಮಾನ ಬಂದಿತ್ತು. ಆದರೆ ಮುಂದುವರೆಸುವವರು ಹಲವು ಪಾತ್ರ ಸೃಷ್ಟಿಸಿ ಒಂದು ಸಾಮಾಜಿಕ ಕಾದಂಬರಿಯ ರೂಪು ತಳೆದಿದೆ. ಕತೆಯಲ್ಲಿರುವ ವಿಚಾರಗಳು ಆಯಾ ಲೇಖಕರ ಅಭಿಪ್ರಾಯವಾಗಿದೆ.

ಲೇಖಕರು ಕತೆಗಳನ್ನು ಮುಂದುವರೆಸುವಾಗ ಎಲ್ಲಿಯೂ ಕೊಂಡಿ ತಪ್ಪದಂತೆ ಎಚ್ಚರವಹಿಸಿದ್ದಾರೆ. ಕಾದಂಬರಿಯಲ್ಲಿ ಸಣ್ಣ ಪುಟ್ಟ ತಪ್ಪುಗಳು ಕಾಣಿಸಿರಬಹುದು. ಹೊಸ ಲೇಖಕರ ವಿನೂತನ ಪ್ರಯತ್ನವನ್ನು ಸಹೃದಯತೆಯಿಂದ ಓದಿ ಪ್ರೋತ್ಸಾಹಿಸುವಿರೆಂದು ನಂಬಿರುವೆವು.

ಪುಸ್ತಕಕ್ಕೆ ಸುಂದರ ಮುಖಚಿತ್ರ ರಚಿಸಿಕೊಟ್ಟ ಶ್ರೀ ನಿತಿನ್ ಶೇಖರ್ ರವರಿಗೆ ಮತ್ತು ನಮ್ಮ ಕೋರಿಕೆ ಮನ್ನಿಸಿ ಮುನ್ನುಡಿ ಬರೆದುಕೊಟ್ಟ ಶ್ರೀ ನವೀನ್ ಸಾಗರ್ ರವರಿಗೆ ಹಾಗೂ ಪುಸ್ತಕವನ್ನು ವಿನ್ಯಾಸಗೊಳಿಸಿದ ಶ್ರೀ ಹರೀಶ್ ಕೆ.ಆರ್.ರವರಿಗೆ ಮತ್ತು ಈ ಕಾದಂಬರಿಯನ್ನು ಸುಂದರವಾಗಿ ಮುದ್ರಿಸಿ ಪ್ರಕಟಿಸಿರುವ ಸ್ನೇಹಾ ಬುಕ್ ಹೌಸ್‌ನ ಮಾಲೀಕರಾದ ಶ್ರೀ ಪರಶಿವಪ್ಪರವರಿಗೆ ವಿಶೇಷ ವಂದನೆಗಳನ್ನು ಅರ್ಪಿಸುತ್ತೇವೆ.

ಹು. ವಾ. ಶ್ರೀ ಪ್ರಕಾಶ್
ಸಂಪಾದಕರು

ಅಧ್ಯಾಯ 1

ದಿವ್ಯಾ ಶ್ರೀಧರರಾವ್

'ಒಲೆ ಬೆಂಕಿ ಆರಿಸ್ತಿಯಾ?'

ಮನೆಯಂಗಳ ಗುಡಿಸುತ್ತಿದ್ದ ಸುಬ್ಬಜ್ಜಿ ಕೂಗುತ್ತಲೇ ಇದ್ದಳು. ಮೊಮ್ಮಗಳು ತನ್ನ ಹುಡುಗನ ಜೊತೆ ಫೋನಿನಲ್ಲಿ ಮಾತನಾಡುತ್ತಿದ್ದ ಕಾರಣದಿಂದ ಅಜ್ಜಿಯ ಮಾತು ಅವಳಿಗೆ ಕೇಳಿಸಿರಲೇ ಇಲ್ಲ. ಅಜ್ಜಿ ಪದೇ ಪದೇ ಕೂಗುತ್ತಿದ್ದದ್ದನ್ನು ನೋಡಿ ಪಕ್ಕದ ಮನೆ ಪದ್ಮಕ್ಕ ತನ್ನ ಕೆಲಸವನ್ನು ಬಿಟ್ಟು ಅವರ ಮನೆಯ ಗೇಟಿಗೊರಗಿ ಫೋನಿನಲ್ಲಿ ಕಿಸಿ ಕಿಸಿ ನಗುತ್ತಿದ್ದ ನವ್ಯನನ್ನು ಮೈಮುಟ್ಟಿ ಎಚ್ಚರಿಸಿದಳು.

'ತೂತು ಒಲೆ ಕೆಡಿಸ್ತು, ಮಾತು ಮನೆ ಕೆಡಿಸ್ತಂತೆ.'

ಗೊಣಗುತ್ತಾ ಪದ್ಮಕ್ಕ ಮುಖ ಸಿಂಡರಿಸಿದಳು. ಇದರಿಂದ ಸಿಡಿಮಿಡಿಗೊಂಡ ನವ್ಯ ತನ್ನ ಮಾತನ್ನು ನಿಲ್ಲಿಸಿ,

'ಅದ್ಯಾಕ್ ಹಂಗ್ ಬಡ್ಕೋತಾ ಇದಿರಾ ಪದ್ಮಕ್ಕಾ? ಸುಬ್ಬಜ್ಜಿಗೇನೋ ಹುಚ್ಚು. ಇತ್ತೀಚೆಗೆ ಅವರ ಸಹವಾಸದಿಂದ ನಿಮಗೂ ಹುಚ್ಚು ಹಿಡೀತೇನೋ?' ಎಂದಾಗ ಪದ್ಮಕ್ಕ ಮಾತನಾಡಲಿಲ್ಲ.

'ಮನೆಯ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದ ಸುಬ್ಬಜ್ಜಿಗೆ ಹುಚ್ಚೇ ಬಿಡು. ನೀನೊಬ್ಬಳು ನೆಟ್ಟಗಿದ್ದಿಯಲ್ಲಾ ಅಷ್ಟು ಸಾಕು'

ಮನಸ್ಸಿನಲ್ಲಿಯೇ ಮಾತನಾಡಿದ ಪದ್ಮಕ್ಕನಿಗೆ ಇದನ್ನೆಲ್ಲ ನವ್ಯನಲ್ಲಿ ಬಾಯಿಬಿಟ್ಟು ಮಾತನಾಡಬೇಕು ಎಂದೆನಿಸಲಿಲ್ಲ. ಮಾತನಾಡಿದರೂ ಅದು ಪ್ರಯೋಜನಕ್ಕೆ ಬಾರದೆ ಇರುವಂತದ್ದು.

'ಸುಬ್ಬಜ್ಜಿಗೆ ಹುಚ್ಚು'

ಊರಿನವರೆಲ್ಲ ಮಾತನಾಡುತ್ತಾರೆ ಹೀಗಂತ. ಊರಿನವರ್ಯಾಕೆ

ಮನೆಯವರೂ ಹಾಗೆಯೇ ಹೇಳುತ್ತಾರೆ. ಆದರೆ ಸುಬ್ಬಜ್ಜಿ ಮನೆಯ ಎಲ್ಲಾ ಕೆಲಸಗಳನ್ನು ಚಾಚೂ ತಪ್ಪದೆ ಮಾಡಿ ಮುಗಿಸುತ್ತಾಳೆ. ಬೆಳಗ್ಗೆ ಎದ್ದಾಗಿನಿಂದ ಅವಳು ಕುಳಿತು ಸುಧಾರಿಸುವುದನ್ನು ಯಾರೂ ನೋಡಿಲ್ಲ. ಸುಬ್ಬಜ್ಜಿಗೆ ಕೆಲಸ ಮಾಡಿ ಮಾಡಿ ಅಭ್ಯಾಸವಾಗಿದೆ. ಕೆಲಸ ಮಾಡುತ್ತಿರುವಾಗಲೆ ಅವಳು ಸಂತೋಷ ಕಾಣುವವಳು.

ಒಂದಷ್ಟು ಜಾಸ್ತಿ ಮಾತನಾಡುತ್ತಾಳೆ ಎಂಬುದನ್ನು ಬಿಟ್ಟರೆ ಸುಬ್ಬಜ್ಜಿಯನ್ನು ಹುಚ್ಚಿ ಎನ್ನಲು ಬೇರೆ ಕಾರಣವಿರಲಿಲ್ಲ. ಆದರೆ ಮಾತು ಮನುಷ್ಯರಲ್ಲಿ ಅಲ್ಲ ಮರು ಮಾತನಾಡದ ಮರಗಿಡ, ಕಲ್ಲುಗಳಲ್ಲಿ. ಹಾಗಾದರೆ ಜಾಸ್ತಿ ಮಾತನಾಡುವುದು ಒಂದು ಮನೋರೋಗವೇ? ಇದು ಮನೋರೋಗವಾದರೆ ಸುಬ್ಬಜ್ಜಿಯನ್ನು ಒಮ್ಮೆ ಡಾಕ್ಟರ್ ಅಲ್ಲಿ ಕರೆದುಕೊಂಡು ಹೋಗಬೇಕಾಗುತ್ತದೆ. ಆದರೆ ಸುಬ್ಬಜ್ಜಿ ಎಂಬುವವಳು ತನ್ನ ಮಕ್ಕಳಿಗೂ ಬೇಡವಾದವಳು. ಎಂದು ಯಾರೂ ಹೇಳಿಲ್ಲ. ಅದು ಹೇಳದೆ ಗೊತ್ತಾಗುವಂತಹದ್ದು.

'ಮಗಾ ಸುಹಾಸ. ಏಳೋ ಮಗನೇ. ಪೋಲೀಸರು ಬಂದಿದಾರೆ'

ಒಂದಿನ ಹೀಗಂತ ಸುಬ್ಬಜ್ಜಿ ಮಧ್ಯರಾತ್ರಿ ಎದ್ದು ಸೀರೆ ಸರಿ ಮಾಡಿಕೊಳ್ಳುತ್ತಾ ಮಗನನ್ನು ಕೂಗಿದ್ದರು. ಪೋಲೀಸರು ಇಷ್ಟೊತ್ತಲ್ಲಿ ಯಾಕೆ ಬಂದಿರಬಹುದು ಎಂದು ತಡಮಾಡದೆ ಎದ್ದು ಮನೆ ಬಾಗಿಲು ತೆಗೆದು ನೋಡಿದ ಸುಹಾಸನಿಗೆ ಯಾರೂ ಕಾಣಿಸಿರಲಿಲ್ಲ.

'ಅಮ್ಮಾ. ಯಾವ ಪೋಲೀಸರೂ ಇಲ್ಲ. ಅಷ್ಟಕ್ಕೂ ಇಷ್ಟು ರಾತ್ರಿಯಲ್ಲಿ ಪೋಲೀಸರು ಯಾಕಮ್ಮಾ ಬರ್ತಾರೆ?'

ಅಸಮಾಧಾನದಿಂದ ಮಾತನಾಡಿದ ಮಗನೆಡೆಗೆ ನೋಡಿದ ಸುಬ್ಬಜ್ಜಿ,

'ಇಲ್ಲಾ ಮಗಾ. ಪೋಲೀಸರು ಬಂದದ್ದನ್ನು ನಾನೇ ನೋಡಿದ್ದೇನೆ'

ಆದರೆ ಸುಬ್ಬಜ್ಜಿಯ ಮಾತು ಸುಹಾಸ ಹಾಗೂ ಅವನ ಪತ್ನಿ ಸುಜಾತಳಿಗೆ ನಗು ತರಿಸಿತ್ತು. ಈ ಘಟನೆ ನಡೆದು ಸುಮಾರು ವರುಷಗಳು ಕಳೆದಿತ್ತು. ಆದರೆ ಸುಬ್ಬಜ್ಜಿ ಮತ್ತೆಂದೂ ಈ ರೀತಿ ಮಾತನಾಡಿರಲೇ ಇಲ್ಲ. ಈ ವಿಷಯದ ಬಗೆಗೆ ಮನೆಯವರೂ ಮರೆತು ಸುಮ್ಮನಾಗಿಬಿಟ್ಟರು.

ಸುಬ್ಬಜ್ಜಿ ತಾನಾಯಿತು ತನ್ನ ಕೆಲಸವಾಯಿತು ಎಂದು ತನ್ನಷ್ಟಕ್ಕೆ ತಾನಾದರು. ಮಗ ಸುಹಾಸನಿಗೆ ಒಂದು ಹೆಣ್ಣು ಮಗು ಹುಟ್ಟಿತ್ತು. ಅವಳೇ ನವ್ಯ. ಆಕೆಗೆ ಆಗ ಸುಮಾರು ಆರು ವರ್ಷ. ಸುಹಾಸ ಹಾಗೂ ಸುಜಾತ ಕೆಲಸಕ್ಕೆಂದು ಹೋದ ಸಮಯದಲ್ಲಿ ಸುಬ್ಬಜ್ಜಿ ನವ್ಯನನ್ನು ಸಿಂಗರಿಸಿ,

'ಮಗಾ ಈಗ ಪೋಲೀಸರು ಬರ್ತಾರೆ. ಬಂದ ಪೋಲೀಸರಲ್ಲಿ ಒಬ್ಬ ನಿನ್ನನ್ನು ಮದುವೆಯಾಗುತ್ತಾನೆ'

ಎನ್ನುತ್ತಿರುವಾಗ ಸುಜಾತ ಮನೆಯೊಳಗೆ ಬಂದಿದ್ದಳು. ರೇಷ್ಮೆ ಸೀರೆಯುಟ್ಟು ತಯಾರಾದ ತನ್ನತ್ತೆಯ ಈ ಹುಚ್ಚಾಟದ ಮಾತು ಕೇಳಿದ ಸುಜಾತ.

'ಅತ್ತೇ. ಈ ಪುಟ್ಟ ಮಗುವಿಗೆ ಮದುವೆನಾ? ಅದೂ ಪೋಲೀಸರ ಜೊತೆನಾ? ನಿಮಗೇನಾಗಿದೆ ಅತ್ತೆ?'

ಕೇಳಿದಾಗ ಸುಬ್ಬಜ್ಜಿ ಮಾತನಾಡದೆ ನಪ್ಪಳಲ್ಲಿ ಏನೋ ಹೇಳಿದ್ದಳು ಕೈ ಸನ್ನೆಯಲ್ಲಿ.

'ಏನಜ್ಜಿ ಅದು.. ಈಗ ನಾನು ಈ ಬಟ್ಟೆ ಬಿಚ್ಚಿ ಮನೆಯಲ್ಲಿ ಹಾಕುವ ಬಟ್ಟೆ ಹಾಕಬೇಕಾ?'

ಎಂದ ಮೊಮ್ಮಗಳ ಮಾತಿಗೆ ಅಜ್ಜಿ ಮಾತನಾಡದಾದಳು. ಸುಬ್ಬಜ್ಜಿ ಅಂದು ಯಾಕೆ ಈ ರೀತಿ ಮಾತನಾಡಿದ್ದಳೋ ದೇವರೇ ಬಲ್ಲ. ಆದರೆ ಈ ಘಟನೆ ನಡೆದಾಗಿನಿಂದ ಎಲ್ಲರೂ ಸುಬ್ಬಜ್ಜಿಯನ್ನು 'ಹುಚ್ಚಿ' ಎಂದೇ ಕರೆಯಲಾರಂಭಿಸಿದ್ದರು.

ಹುಚ್ಚೆಂದರೂ ಸುಬ್ಬಜ್ಜಿ ಪ್ರತಿಕ್ರಿಯಿಸಿರಲಿಲ್ಲ. ಬೆಳಿಗ್ಗೆ ಎದ್ದಾಗಿನಿಂದ ಮನೆಯ ಎಲ್ಲಾ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿದ್ದಳು. ಮರುಮಾತನಾಡು ತ್ತಿರಲಿಲ್ಲವೆಂದಲ್ಲ, ಅವಳು ಸಿಕ್ಕಾಪಟ್ಟೆ ಮಾತನಾಡುತ್ತಿದ್ದಳು. ಆದರೆ ಹುಚ್ಚಿಯ ಪಟ್ಟ ಬಂದಾಗಿನಿಂದ ಸುಬ್ಬಜ್ಜಿ ಮಾತನಾಡಿದ್ದಕ್ಕಿಂತ ಮೌನವಾಗಿದ್ದದ್ದೇ ಹೆಚ್ಚು ಆದರೆ ಸುಬ್ಬಜ್ಜಿ ಒಬ್ಬಳೇ ಕುಳಿತು ಮಾತನಾಡಲಾರಂಭಿಸಿದ್ದಳು ಎಂದು ಆಚೀಚೆ ಮನೆಯವರು ಮಾತನಾಡಿಕೊಳ್ಳುತ್ತಿದ್ದದ್ದು ಸುಹಾಸನ ಗಮನಕ್ಕೆ ಬಂದಿತ್ತು.

ಅಂತಹ ವಿಚಾರವೊಂದು ಸುಹಾಸನ ಗಮನಕ್ಕೆ ಬರುತ್ತಿದ್ದಂತೆ ಸುಹಾಸ ಸುಬ್ಬಜ್ಜಿಯನ್ನು ಒಂದಷ್ಟು ಅನುಮಾನದಿಂದ ನೋಡಲಾರಂಭಿಸಿದ.

ಒಂದು ದಿನ ಸುಬ್ಬಜ್ಜಿ ತರಕಾರಿ ತರಲಿಕ್ಕೆಂದು ಪೇಟೆಗೆ ಹೋದವಳು ಬರುವಾಗ ತಡವಾಗಿತ್ತು.

'ಈ ಅಮ್ಮ ಅದೆಲ್ಲಿ ಹೋದಳೋ? ಇರು ಹುಡುಕಿಕೊಂಡು ಬರುತ್ತೇನೆ'

ಎಂದು ಸುಹಾಸ ತನ್ನ ಹೆಂಡತಿಯಲ್ಲಿ ಹೇಳಿ ಹೊರಟಿದ್ದ. ಅದಾಗ ಸುಮಾರು ಸಂಜೆ ಆರೂವರೆ. ಎಲ್ಲಿ ಹುಡುಕಿದರೂ ಸುಬ್ಬಜ್ಜಿ ಕಾಣಿಸದೇ ಇದ್ದಾಗ ತರಕಾರಿ ಮಾರ್ಕೆಟ್ಟಿಗೆ ಹೋಗಿ ವಿಚಾರಿಸಿದರೂ ಸುಬ್ಬಜ್ಜಿ ಈಗಷ್ಟೇ ಬಂದು ಹೋದದ್ದಷ್ಟೇ ಗಮನಕ್ಕೆ ಬಂದಿತ್ತು. ಹುಡುಕುತ್ತಾ ಹುಡುಕುತ್ತಾ ಹೊರಟ ಸುಹಾಸನಿಗೆ ಸುಬ್ಬಜ್ಜಿ ದೇವಸ್ಥಾನದ ಕಡೆ ಹೋಗಿರಬಹುದಾ ಎಂಬ ಅನುಮಾನವೊಂದು ಕಾಡಿದ ಮರುಕ್ಷಣವೇ ದೇವಸ್ಥಾನದ ಕಡೆ ಹೋಗಿದ್ದ.

ದೇವಸ್ಥಾನದ ಬಾಗಿಲು ತೆಗೆದಿತ್ತು. ಮನಸ್ಸಿನಲ್ಲಿಯೇ ದೇವರಿಗೆ ಕೈ ಮುಗಿದು ದೇವಸ್ಥಾನದ ಒಳಗೆಲ್ಲಾ ಹುಡುಕಿದರೂ ಸುಬ್ಬಜ್ಜಿ ಮಾತ್ರ ಸಿಗಲಿಲ್ಲ.

'ದೇವರೇ ನೀನೇ ಕಾಪಾಡಬೇಕು'

ಎನ್ನುತ್ತಾ ದೇವಸ್ಥಾನದ ಹೊರಾಂಗಣದ ಕಲ್ಲು ಬೆಂಚಿನ ಮೇಲೆ ತಲೆ ಮೇಲೆ ಕೈ ಹೊತ್ತು ಕುಳಿತ ಸುಹಾಸನಿಗೆ ಅವನ ಅಮ್ಮನ ಸ್ವರ ಕೇಳಿಸಿದಂತಾಯಿತು. ಸ್ವರ ಕೇಳಿದ ಕಡೆಗೆ ಗಡಿಬಿಡಿಯಿಂದ ಹೆಜ್ಜೆ ಹಾಕಿದ ಸುಹಾಸನಿಗೆ ಅಮ್ಮ ಕಾಣಿಸಿದ್ದಳು.

'ನಾನು ಹೇಳಿದ್ದನ್ನು ಯಾರಲ್ಲೂ ಹೇಳ್ಬೇಡ ಆಯಿತಾ? ಅಲ್ಲ ನೀನು ಹೇಳಲ್ಲ ಬಿಡು. ಆದರೂ ಜಾಗ್ರತೆಯಾಗಿರು, ಹುಷಾರು ಕಾಲ ಸರಿಯಿಲ್ಲ'

ಎನ್ನುತ್ತಾ ಕೈ ಸನ್ನೆಯಲ್ಲಿ ಜಾಗ್ರತೆ ಹೇಳುತ್ತಾ ಮಾತನಾಡುತ್ತಿದ್ದ ಸುಬ್ಬಜ್ಜಿಯಲ್ಲಿಗೆ ಹೋಗಿ ಚೆನ್ನಾಗಿ ಬೈದು ಅವಳನ್ನು ಕರೆದುಕೊಂಡು ಮನೆಗೆ ಹೋಗಬೇಕು ಎಂದು ಒಂದು ಹೆಜ್ಜೆ ಮುಂದಿಡುತ್ತಿದ್ದಂತೆ ಸುಬ್ಬಜ್ಜಿ ಮಾತನಾಡುತ್ತಿರುವುದು ಮನುಷ್ಯರಲ್ಲಿ ಅಲ್ಲ, ಒಂದು ಕಲ್ಲಿನೊಂದಿಗೆ ಎಂಬ ಸತ್ಯ ಕಣ್ಣಾರೆ ನೋಡಿ ದಂಗಾಗಿ ನಿಂತನು.

'ಆ ಪೋಲೀಸತ್ರ ಬೇಕಾದ್ರೆ ಮಾತಾಡಿ ನೋಡು. ಆದ್ರೆ ಅವನು ಸರಿಯಿಲ್ಲ. ಯಾವುದಕ್ಕೂ ಅವನು ಸರಿಯಿಲ್ಲ ಅನ್ನೋ ಸತ್ಯ ಒಂದು ನಿನ್ನ ತಲೇಲಿ ಇರಲಿ. ಸರಿ ನಾನು ಬರ್ಲಾ? ಮನೇಲಿ ಕಾಯ್ತಾ ಇರ್ತಾರೆ' ಎನ್ನುತ್ತಾ ಸುಬ್ಬಜ್ಜಿ ಆ ಕಲ್ಲಿಗೆ ಟಾಟಾ ಮಾಡಿ ಹೊರಟಳು. ಸುಹಾಸ ಸುಬ್ಬಜ್ಜಿಗೆ ಕಾಣಿಸದಂತೆ ಮರದ ಅಡ್ಡ ನಿಂತು ಸುಬ್ಬಜ್ಜಿ ಹೋದ ಮೇಲೆ ತಾನೂ ಮನೆ ಕಡೆಗೆ ಹೊರಟಿದ್ದ. ಊರಿನರೆಲ್ಲರೂ ಸುಬ್ಬಜ್ಜಿ ಮರಗಿಡ, ಕಲ್ಲಿನೊಂದಿಗೆ ಮಾತನಾಡುತ್ತಾಳೆ ಎಂದಾಗೆಲ್ಲ ಸುಹಾಸ ನಂಬುತ್ತಿರಲಿಲ್ಲ. ಆದರೆ ಅವರ ಮಾತುಗಳನ್ನು ವಿರೋಧಿಸುತ್ತಲೂ ಇರಲಿಲ್ಲ. ಹೆಂಡತಿ ಸುಜಾತ ಆಗಾಗ ಬಂದು,

'ರೀ. ಈ ಅತ್ತೆಗೇನಾಗಿದೆ ಅಂತ ಅದೇನೋ ಒಬ್ಬೊಬ್ಬರೇ ಮಾತನಾಡುವುದನ್ನು ರೂಢಿ ಮಾಡಿಕೊಂಡಿದ್ದಾರೆ. ಇವತ್ತು ರಾಮಣ್ಣ ಹೇಳ್ತಾ ಇದ್ರು ಅದೇನೋ ಮರಗಳಲ್ಲಿ ಸುಬ್ಬಜ್ಜಿ ಮಾತಾಡ್ತಾ ಇದ್ರಂತೆ' ಎಂದಾಗಲೂ ಸುಹಾಸ ಮರುಮಾತ ನಾಡದೇ ತಾನಿದನ್ನು ನಂಬುವುದಿಲ್ಲವೆಂಬುದನ್ನು ಸುತ್ತಿ ಬಳಸಿ ಹೇಳುತ್ತಿದ್ದ.

ಏನೇ ಆದರೂ ಅಮ್ಮನಲ್ವಾ? ಅಮ್ಮನಿಗೆ ಈ ರೀತಿ ಮನೋರೋಗವಿದೆ ಎಂಬುದನ್ನು ಅವನು ಹೇಗೆ ತಾನೇ ಸ್ವೀಕರಿಸಿಯಾನು? ಅಲ್ಲದೆ ಇಲ್ಲಿಯವರೆಗೆ ನಂಬದಿದ್ದರೂ ಇಂದು ನಂಬುವಂತಹ ಪರಿಸ್ಥಿತಿ ಬಂದಿತಲ್ಲಾ?

ಯೋಚಿಸುತ್ತಾ ನಿಧಾನವಾಗಿ ನಡೆದುಬಂದವನು ಮನೆ ಸೇರಿದರೂ ಮಾತನಾಡಿರಲಿಲ್ಲ. ಮನೆಯಲ್ಲಿ ಸುಬ್ಬಜ್ಜಿ ಅವಳಷ್ಟಕ್ಕೆ ಅವಳು ಅಡುಗೆ ಮನೆ ಸೇರಿ ರಾತ್ರಿಯ ಅಡುಗೆಗೆ ತಯಾರು ಮಾಡಿ,

'ಮಕ್ಕಳೇ, ಅಡುಗೆ ತಯಾರಾಗಿದೆ. ಬನ್ನಿ ಊಟಕ್ಕೆ'

ಎಂದು ಕರೆದು ಎಲ್ಲರಿಗೂ ತಟ್ಟೆ ಇಟ್ಟು ಬಡಿಸಿದಳು. ಈ ನಾಲ್ಕಾರು ವರ್ಷಗಳಲ್ಲಿ, ಆ ಪೋಲೀಸರು ಬರುವ ಘಟನೆ ನಡೆದಾಗಿನಿಂದ ಸುಬ್ಬಜ್ಜಿ ಮಾತನಾಡುವುದು ಸ್ವಲ್ಪ ಕಡಿಮೆಯೇ.

'ಊಟಕ್ಕೆ ಬನ್ನಿ. ಅಡುಗೆ ತಯಾರಿದೆ. ಹೋಗಿ ಬರ್ತಿನಿ'

ಈ ತರಹದ ಚಿಕ್ಕ ಚಿಕ್ಕ ಮಾತುಗಳನ್ನು ಬಿಟ್ಟರೆ ಸುಬ್ಬಜ್ಜಿ ಜಾಸ್ತಿ ಮಾತನಾಡುತ್ತಿರಲಿಲ್ಲ. ಯಾರೂ ನನ್ನನ್ನು ನಂಬುವುದಿಲ್ಲ ಎಂತಾದ ಮೇಲೆ ನಾನ್ಯಾಕೆ ಮಾತನಾಡಲಿ ಎಂಬುದು ಸುಬ್ಬಜ್ಜಿಯ ಮನಸ್ಸಿನಲ್ಲಿರುವ ಪ್ರಶ್ನೆ. ಅವಳದ್ದು ಮೌನ ಮುಷ್ಕರ.

ಆ ಮೌನದ ಹಿಂದಿರುವ ಕಾರಣ ಹಾಗೂ ನೋವು ಯಾರಿಗೂ ಅರ್ಥವಾಗಿಲ್ಲವಲ್ಲ ಎಂಬ ನೋವು ಅವಳಲ್ಲಿ ಸದಾ ಕಾಡುತ್ತಲೇ ಇತ್ತು.

ಇಂತಹ ಯೋಚನೆಗಳಲ್ಲಿ ಮುಳುಗಿದ ಸುಹಾಸನನ್ನು ಆತನ ಹೆಂಡತಿ ಎಚ್ಚರಿಸಿದ್ದಳು.

'ಅತ್ತೆ ಊಟಕ್ಕೆ ಕರೀತಾ ಇದಾರೆ. ಬರಬಾರದಾ? ಅದಿರ್ಲಿ ಅತ್ತೆ ಎಲ್ಲಿದ್ರು?'

'ಅಮ್ಮ ದೇವಸ್ಥಾನದಲ್ಲಿದ್ರು ಕಣೆ. ಬಾ ಊಟ ಮಾಡಿ ಬಂದ ಮೇಲೆ ಮಾತನಾಡುವ' ಎಂದು ಕೆಳಗಿಳಿದು ಹೋಗಿ ಅಮ್ಮ ಬಡಿಸಿದ ಊಟದ ತಟ್ಟೆಯ ಮುಂದೆ ಕುಳಿತುಕೊಂಡನು. ಮಾತು ಬೇಡವೆನಿಸಿದ್ದಕ್ಕಾಗಿ ಸುಹಾಸ ಒಂದೂ ಮಾತನಾಡದೆ ಊಟ ಮಾಡಿ ತನ್ನ ಕೋಣೆ ಸೇರಿಕೊಂಡಿದ್ದ.

ದಿನದಂತೆ ಮಾತನಾಡದೆ ಏನನ್ನೋ ಯೊಚನೆ ಮಾಡುತ್ತಾ ಕುಳಿತಿದ್ದ ಸುಹಾಸನನ್ನು ಗಮನಿಸಿದ ಸುಜಾತ ಮಲಗುವ ಕೋಣೆಯೊಳಗೆ ಬಂದ ನಂತರ,

'ರೀ, ಏನಾದರೂ ಸಮಸ್ಯೆನಾ? ಯಾಕೋ ತುಂಬಾ ಡಲ್ ಅನ್ನಿಸ್ತಾ ಇದೀರ'

ಪ್ರಶ್ನೆ ಕೇಳಿದ ಹೆಂಡತಿಯನ್ನೇ ನೋಡುತ್ತಾ ಸುಹಾಸ ನಿಟ್ಟುಸಿರು ಬಿಟ್ಟು,

'ಅಮ್ಮನಿಗೇ ಏನೋ ಆಗಿದೆ ಕಣೆ. ದೇವಸ್ಥಾನದಲ್ಲಿ ಕಲ್ಲಿನ ಜೊತೆ ಮಾತಾಡ್ತಾ ಇದ್ರು. ಪೊಲೀಸು ಜಾಗ್ರತೆ ಹೀಗೆ ಏನೇನೋ ಮಾತಾಡ್ತಾ ಕೈ ಸನ್ನೆ ಮಾಡ್ತಾ ಇದ್ರು'

ಸುಹಾಸ ಹೇಳಿ ಮುಗಿಸುವುದರಲ್ಲಿ ಸುಜಾತ ಮಾತು ಪ್ರಾರಂಭಿಸಿದ್ದಳು.

'ನಂಗೊತ್ತಿತ್ತು ಅವರಿಗೆ ಹುಚ್ಚು ಹಿಡಿದಿದೆ ಅನ್ನೋದು ನಂಗೆ ಗೊತ್ತಿತ್ತು. ಊರವರೆಲ್ಲ ಸುಮ್ಮನೆ ಹೇಳ್ತಾರಾ? ನಾನು ಏನು ಹೇಳಿದ್ರೂ ನೀವು ಮಾತಾಡ್ತಾ ಇರ್ಲಿಲ್ಲ ಮತ್ತೆ. ಈಗ ನಿಮಗೇ ಗೊತ್ತಾಯ್ತಾ. ಅಬ್ಬಾ! ದೇವರು ದೊಡ್ಡವ. ಕೊನೆಗೂ ಗೊತ್ತಾಯ್ತಲ್ಲ'

ಒಂದೇ ಗುಂಗಿನಲ್ಲಿ ಮಾತನಾಡುತ್ತಾ ಹೋದ ಸುಜಾತಳ ಮಾತು ನಿಂತಿದ್ದು ಮಗಳು ನವ್ಯ ಮಾತಾಡಿದಾಗ...

'ಅಮ್ಮಾ, ಸುಬ್ಬಜ್ಜಿಗೆ ಹುಚ್ಚಾ?'

ಪ್ರಶ್ನೆಯೊಂದೇ. ಆದರೆ ಅದು ಸುಹಾಸನನ್ನು ಬಹಳ ನೋಯಿಸಿತು. ಹೆತ್ತ ತಾಯಿ ಹುಚ್ಚಿ ಅಂತ ಹೇಳಿದ್ರೆ ಬೇಸರವಾಗದೇ ಇರುತ್ತದೆಯೇ? ಆದರೆ ಮಗಳಿಗೆ ಏನೂ ಹೇಳುವಂತಿಲ್ಲ. ಏನಾದರೂ ಹೇಳಿದರೆ ಸುಜಾತ ಮಗಳ ಪರವಹಿಸಿ ಬರುತ್ತಾಳೆ. ಆದರೂ ಮನಸ್ಸು ತಡೆಯದ ಸುಹಾಸ,

'ಮಗೂ ನವ್ಯ, ಸುಬ್ಬಜ್ಜಿ ನಿನಗೆ ಅಜ್ಜಿಯಾಗಬೇಕು ಮಗಳೇ. ಅವಳಿಗೆ ನಮ್ಮನ್ನು ಬಿಟ್ರೆ ಇನ್ಯಾರೂ ಇಲ್ಲ. ಅವಳನ್ನು ಹುಚ್ಚಿ ಅಂತೆಲ್ಲಾ ಕರೀಬಾರ್ದು ಪುಟ್ಟಾ'

ಮಗಳಿಗೆ ನೋವಾಗದಂತೆ ನಿಧಾನವಾಗಿ ಹೇಳಿದ. ಅಷ್ಟಕ್ಕೆ ಸುಜಾತ,

'ಹುಚ್ಚಿನ ಹುಚ್ಚಿ ಅಂದ್ರೆ ಏನು ತಪ್ಪು? ಅತ್ತೆಗೆ ಹುಚ್ಚು ಹಿಡಿದಿದೆ. ಆ ಸತ್ಯ ನಾವು ಒಪ್ಪಿಕೊಳ್ಳಬೇಕು ಬಿಟ್ರೆ ಬೇರೆ ಏನೂ ದಾರಿಯಿಲ್ಲ. ಮಗು ಕೇಳಿದ್ರಲ್ಲಿ ತಪ್ಪೇನೂ ಇಲ್ಲ'

ಎನ್ನುತ್ತಿದ್ದರೆ ಸುಹಾಸ ಮಾತನಾಡದೆ ಉಳಿದುಬಿಟ್ಟ. ಅವನು ಯಾವಾಗಲೂ ಹಾಗೆ. ಎಷ್ಟೇ ಮಾತನಾಡುತ್ತಲಿದ್ದರೂ ಹೆಂಡತಿ ತಡೆ ಹಾಕಿದಳೆಂದರೆ ಮತ್ತೆ ಮಾತು ನಿಲ್ಲಿಸುವುದೇ. ಹೆಂಡತಿಗೆ ಹೆದರುವುದೆಂದಲ್ಲ, ಯಾಕೆ ಸುಮ್ಮನೆ ಮಾತನಾಡಬೇಕು ಅಂತ ಅಷ್ಟೇ ಎಂದು ತಾನು ಹೆಂಡತಿಯ ಮುಂದೆ ಬಾಯಿ ಮುಚ್ಚುವುದಕ್ಕೆ ಕಾರಣ ಹೇಳಿಕೊಳ್ಳುತ್ತಿದ್ದ.

ಅಂದಿನಿಂದ ಸುಬ್ಬಜ್ಜಿ ಹೊರಗಡೆ ಹೋಗುವುದನ್ನು ಸುಹಾಸ ತಡೆಯಲಾರಂಭಿಸಿದ. ದಾರಿಯಲ್ಲಿ ಮರಗಿಡಗಳ ಜೊತೆ ಮಾತನಾಡುವುದನ್ನು ಊರವರು ನೋಡಿ ಸುಬ್ಬಜ್ಜಿಯನ್ನು ಆಡಿಕೊಳ್ಳುವಂತಾಗಬಾರದು ಎಂಬ ಕಾಳಜಿ ಅವನನ್ನು ಜಾಗ್ರತನನ್ನಾಗಿಸಿತ್ತು. ಆದರೆ ಸುಬ್ಬಜ್ಜಿಗೆ ಈ ರೀತಿಯ ಗೃಹಬಂಧನ ಮತ್ತಷ್ಟು ವ್ಯಥೆ ಪಡುವಂತೆ ಮಾಡಿತ್ತು. ಯಾರಲ್ಲಿಯೂ ಮಾತನಾಡದೇ ಇರುವಂತಹ ಪರಿಸ್ಥಿತಿ ಸೃಷ್ಟಿಯಾದ ನಂತರ ಸುಬ್ಬಜ್ಜಿ ಮಾನಸಿಕವಾಗಿ ಮತ್ತಷ್ಟು ಕುಸಿದು ಹೋದಳು.

ಮಾತನಾಡಿ ಕೆಟ್ಟವಳು ಎನ್ನಿಸಿಕೊಳ್ಳುವುದಕ್ಕಿಂತ ಮಾತನಾಡದೇ ಒಳ್ಳೆಯವಳಾಗಿ ರುವುದು ಒಳಿತು ಎಂದೆನಿಸಿದರೂ ಮಾತನಾಡದೇ ಉಳಿಯುವುದು ಸ್ವಲ್ಪ ಕಷ್ಟವೆನಿಸಿ ಸಾಕು ಪ್ರಾಣಿಗಳೊಂದಿಗೆ ಮಾತನಾಡಲಾರಂಭಿಸಿದ್ದಳು. ಹಾಲು ಕರೆಯಲಿಕ್ಕೆ ಹೋದಾಗೆಲ್ಲ ದನದ ಕರುವಿನ ಜೊತೆ ಜಿದ್ದಿಗೆ ಬಿದ್ದವಳಂತೆ ಮಾತನಾಡಿದರೆ, ಅಡುಗೆ ಮನೆಯಲ್ಲಿ ಬೆಕ್ಕಿನ ಜೊತೆ ಮಾತನಾಡುವುದನ್ನು ಅಭ್ಯಾಸ ಮಾಡಿಕೊಂಡಿದ್ದಳು. ಆದರೂ ಅವರುಗಳೊಂದಿಗೆ ಮಾತನಾಡು ವಾಗಲೆಲ್ಲ ಆಚೆ-ಈಚೆ ನೋಡಿಕೊಳ್ಳುತ್ತಾ ಮಾತನಾಡುವುದನ್ನು ಮಾತ್ರ ಮರೆಯುತ್ತಿರಲಿಲ್ಲ. ಮನೆಯಲ್ಲಿ ಎಲ್ಲರೂ ಹೊರಗಡೆ ಹೋಗಿದ್ದನ್ನು ನೋಡಿ ಕಾಲಡಿಯಲ್ಲಿ ಕುಳಿತು 'ಮಿಯಾವ್' ಎನ್ನುತ್ತಿದ್ದ ಬೆಕ್ಕಿನ ಬಳಿ,

'ಎಲ್ಲಿ ಹೋದ್ರು ಈ ಮನೆಯವರೆಲ್ಲ ಅಂತ ಏನಾದ್ರೂ ಗೊತ್ತಾ ನಿಂಗೆ? ನಿಂಗೆ ಹೇಗೆ ಗೊತ್ತಿರಬೇಕು ಹೇಳು? ಅವರು ಮಾತನಾಡುವ ನನ್ನತ್ರನೇ ಹೇಳಿ ಹೋಗಲ್ಲ. ಇನ್ನು ನಿನ್ನತ್ರ ಹೇಳಿ ಹೋಗ್ತಾರಾ?'

ಎನ್ನುತ್ತಾ ಮನೆಯವರು ತನ್ನನ್ನು ನಿರ್ಲಕ್ಷ್ಯದಿಂದ ನೋಡುವುದನ್ನು ಮಾರ್ಮಿಕವಾಗಿ ಹೇಳಿಕೊಂಡು ಮನಸ್ಸು ಹಗುರಾಗಿಸಿಕೊಳ್ಳುತ್ತಿದ್ದಳು.

ಅಜ್ಜಿಗೊಬ್ಬಳು ಮಗಳು ಇದ್ದಳು ಅನ್ನೋದು ಕೆಲವರಿಗೆ ಮಾತ್ರ ಗೊತ್ತಿದ್ದ ಸತ್ಯ. ಹಿಂದೆಲ್ಲ ಬೇಗ ಮದುವೆ ಮಾಡ್ತಾ ಇದ್ದರಂತೆ. ಆ ಹೆಣ್ಣು ಮಗುವಿಗೆ ಸುಮಾರು ಹದಿನೈದು ವರ್ಷವಿದ್ದಾಗ ದೂರದ ಊರಿನ ಪೊಲೀಸು ಪೇದೆಯವನೊಬ್ಬನ ಜೊತೆ ಮದುವೆ ನಿರ್ಣಯವಾಗಿದ್ದು ಊರಿನವರಿಗೆಲ್ಲ ತಿಳಿದಿತ್ತು.

ಇನ್ನೇನು ಮದುವೆ ಹತ್ತಿರ ಬರುತ್ತಿತ್ತು. ಇದ್ದಕ್ಕಿದ್ದಂತೆ ಮದುವೆ ಹುಡುಗಿ, ಮನೆಯ ಮುಂದಿರುವ ಬಾವಿಯಲ್ಲಿ ಹೆಣವಾಗಿ ಸಿಕ್ಕಿದ್ದಳು. ಅದೇನಾಯಿತೋ ದೇವರೇ ಬಲ್ಲ. ಊರಿನ ಕೆಲವರೆಲ್ಲ ಅದನ್ನು ಕೊಲೆ ಅಂತ ಗುಸು ಗುಸು ಮಾತಾಡ್ತಾ ಇದ್ರು. ಆದರೆ ಸುಬ್ಬಜ್ಜಿಯ ಮುಂದೆ ಯಾರೂ ಮಾತನಾಡುತ್ತಿರಲಿಲ್ಲ.

'ಅವಳ ಆಯುಷ್ಯವೇ ಇಷ್ಟು ಬಿಡು'

ಎಂದು ಸುಬ್ಬಜ್ಜಿಗೆ ಊರಿನವರೆಲ್ಲ ಸಮಾಧಾನದ ಮಾತುಗಳನ್ನಾಡುತ್ತಿದ್ದರು. ಸುಬ್ಬಜ್ಜಿ ಕಳೆದುಕೊಂಡ ಮಗಳನ್ನು ನೆನೆದು ಯಾರೂ ಕಾಣದಂತೆ ಕಣ್ಣೀರು ಹಾಕಿದಳೇ ಹೊರತು ನಾಲ್ಕು ಜನರ ಮುಂದೆ ಗಟ್ಟಿಯಾಗಿರುವಂತೆ ತೋರಿಸುತ್ತಿದ್ದಳು.

'ಗಂಡ ತೀರಿಕೊಂಡ, ಮಗಳೂ ಬಿಟ್ಟು ಹೋದಳು. ಇನ್ನು ನನಗೆ ನನ್ನ ಮಗ ಸುಹಾಸನೇ ದಿಕ್ಕು. ನಾನು ಅವನಿಗೋಸ್ಕರವಾದರೂ ಬದುಕಬೇಕು. ಅವನನ್ನು ಚೆನ್ನಾಗಿ ಓದಿಸಬೇಕು'

ಹೀಗೆ ಅದೇನೋ ಕನಸು ಹೊತ್ತು ದಿನದೂಡಿದ್ದಳು ಸುಬ್ಬಜ್ಜಿ. ಈ ಘಟನೆ ಸುಹಾಸನಿಗೂ ನೆನಪಿರಲಿಕ್ಕಿಲ್ಲ. ಯಾಕೆಂದರೆ ಅಕ್ಕ ಸಾಯುವಾಗ ಅವನಿಗಿನ್ನೂ ನಾಲ್ಕೇ ವರುಷ.

ಮಗಳ ಸಾವಿನ ಹಿಂದಿರುವ ಘಟನೆಯಿಂದ ಸುಬ್ಬಜ್ಜಿ ಯಾಕೆ ಪೊಲೀಸರ ಹೆಸರಿನಲ್ಲಿ ಹುಚ್ಚಾಟ ಮಾಡುತ್ತಾರೆ ಎಂಬುದಕ್ಕೆ ಕಾರಣ ತಿಳಿಯಬಹುದೆಂದು ಪದ್ಮಕ್ಕನಿಗೆ ಅನ್ನಿಸಿತ್ತು ಹಾಗೂ ಈ ವಿಷಯವನ್ನು ಯಾರೂ ಇಲ್ಲದಾಗ ಸುಹಾಸನಲ್ಲಿ ಮಾತನಾಡಬೇಕೆಂದು ನಿರ್ಧಾರ ಮಾಡಿದ್ದಳು.

ಅಧ್ಯಾಯ 2

ಪಲ್ಲವಿ ರವೀಂದ್ರ

ಪದ್ಮಕ್ಕನಿಗೆ ಸುಬ್ಬಜ್ಜಿಯ ಬಗ್ಗೆ ಸ್ವಲ್ಪ ಜಾಸ್ತಿನೇ ಪ್ರೀತಿ, ಅನುಕಂಪ. ತಾಯಿ ಇಲ್ಲದೇ ಬೆಳೆದ ಪದ್ಮಕ್ಕ ಸುಬ್ಬಜ್ಜಿಯಲ್ಲಿ ತನ್ನ ಅಮ್ಮನನ್ನು ಕಾಣುತ್ತಿದ್ದಳು.

ಗಂಡನ ಬೇಜವಬ್ದಾರಿ ಮತ್ತು ನಿರ್ಲಕ್ಷ್ಯತನದಿಂದ ಮಾನಸಿಕವಾಗಿ ಒಂಟಿಯಾಗಿದ್ದಳು ಪದ್ಮಕ್ಕ.

ತನ್ನ ನೋವು ದುಃಖವನ್ನು ಸುಬ್ಬಜ್ಜಿಯಲ್ಲಿ ತೋಡಿಕೊಂಡು ಮನಸ್ಸು ಹಗುರ ಮಾಡಿಕೊಳ್ಳುತ್ತಿದ್ದಳು ಸುಬ್ಬಜ್ಜಿ ಅಂತಹ ಸಮಾಧಾನ ಆಗುವಂತ ಮಾತನ್ನು ಆಡದೇ ಹೋದರೂ ಪದ್ಮಕ್ಕನಿಗೆ ಏನೋ ಮನಸ್ಸಿನಲ್ಲಿದ್ದದ್ದನ್ನು ಹೊರ ಹಾಕಿ ಹಗುರಾದ ಅನುಭವ ಆಗುತ್ತಿತ್ತು.

ಸುಜಾತ ಮನೆಯಲ್ಲಿ ಇಲ್ಲದ ಸಮಯದಲ್ಲಿ ಪದ್ಮಕ್ಕ ಸುಬ್ಬಜ್ಜಿಯ ಮನೆಗೆ ಬಂದು ಹರಟುತ್ತಿದ್ದಳು.

ಹಬ್ಬಹರಿದಿನಗಳಲ್ಲಿ ಮಾಡಿದ ಚಕ್ಕುಲಿ ಉಂಡೆ ಎಲ್ಲ ಕೊಡುತ್ತಾ ಇದ್ದಳು. ಸುಬ್ಬಜ್ಜಿ ಅದನ್ನು ಖುಷಿಯಲ್ಲಿ ತಿನ್ನುತ್ತಿದ್ದಳು. ಪದ್ಮಕ್ಕನ ತಲೆ ನೇವರಿಸಿ ಚೆನ್ನಾಗಿರು ಮಗಾ ಎಂದು ಹರಸುತ್ತಿದ್ದಳು.

ಹೀಗೆ ಪದ್ಮಕ್ಕನಿಗೂ ಸುಬ್ಬಜ್ಜಿಗೂ ಒಂದು ಬಾಂಧವ್ಯ ಬೆಳೆಯುತ್ತಲೇ ಇತ್ತು. ಹಾಗಾಗಿಯೇ ಸುಹಾಸನ ಬಳಿ ಮಾತಾಡಬೇಕು ಎಂದು ಯೋಚಿಸಿದರು ಪದ್ಮಕ್ಕ.

❖ ❖ ❖

ಹೀಗೆ ಒಂದು ದಿನ ಸುಜಾತ ದೇವಸ್ಥಾನಕ್ಕೆ ಹೋಗಿದ್ದಾಗ ಪದ್ಮಕ್ಕ ಸುಹಾಸನ ಮನೆಗೆ ಬಂದಳು. ಮನೆಯಲ್ಲೇ ಇದ್ದ ಸುಹಾಸನನ್ನು ಕಂಡು

'ಕೆಲಸಕ್ಕೆ ಹೋಗಿಲ್ವೇನೋ ಸುಹಾಸ?' ಎಂದಳು.

'ಇಲ್ಲ ಪದ್ಮಕ್ಕ ಯಾಕೊ ಸ್ವಲ್ಪ ತಲೆನೋವು ಅದಕೆ ಮಲಗಿ ಇದ್ದೆ'

ಸುಬ್ಬಜ್ಜಿ ಎಲ್ಲಿದ್ದಾರೆ ಎಂದು ಕೇಳುತ್ತಾ ಸುತ್ತಮುತ್ತಾ ಕಣ್ಣಾಡಿಸಿದಳು ಪದ್ಮಕ್ಕ. ಆಗ ಸುಹಾಸನೇ ಹೇಳಿದ

'ಅವಳು ಎಲ್ಲಿ ಕೋಟೆಕಲ್ಲು ಹತ್ತಿರಿಗೋ ಹೋಗಿದ್ದಾಳೆ ಪದ್ಮಕ್ಕಾ ಅಲ್ಲಿ ಯಾವ ಮರದ ಜೊತೆ ಮಾತಾಡ್ತ ನಿಂತಿದ್ದಾಳೋ ಏನು ಕತೆನೋ' ಎಂದ ವ್ಯಥೆಯಲ್ಲಿ.

ತಕ್ಷಣವೇ ಪದ್ಮಕ್ಕ ಸುಹಾಸನೊಂದಿಗೆ ಮಾತನಾಡಲು ಇದೇ ಒಳ್ಳೆಯ ಸಮಯವೆಂದು ಪೀಠಿಕೆ ಶುರುವಿಟ್ಟಳು .

'ನೋಡು ಸುಹಾಸ... ನಾನು ಅದೇ ವಿಚಾರವಾಗಿ ನಿನ್ನ ಹತ್ರ ಮಾತಾಡಬೇಕೂಂತಿದ್ದೆ, ನಿನಗೆ ನೆನಪಿದೆಯೋ ಇಲ್ವೊ ಗೊತ್ತಿಲ್ಲ ನಿನಗೊಬ್ಬಳು ಅಕ್ಕ ಇದ್ದಳು ಅವಳನ್ನು ಒಬ್ಬ ಪೋಲಿಸಿಗೆ ಮದುವೆ ಮಾಡಿ ಕೊಡುವುದೆಂದು ನಿಶ್ಚಯವಾಗಿತ್ತು, ಆದರೆ ಕೊನೆ ಗಳಿಗೆಯಲ್ಲಿ ನಿನ್ನ ಅಕ್ಕ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಳು. ಇದಕ್ಕೆ ಕಾರಣ ಯಾರಿಗೂ ಸರಿಯಾಗಿ ತಿಳಿದಿಲ್ಲ ಇದಾದ ನಂತರವೇ ಸುಬ್ಬಜ್ಜಿ ಈ ತರ ವರ್ತಿಸಲು ಶುರು ಮಾಡಿದ್ದು .ಮುದ್ದಾಗಿ ಸಾಕಿದ್ದ ಮಗಳು ಕಣ್ಣ ಮುಂದೆಯೇ ಹೆಣವಾಗಿದ್ದನ್ನು ಕಂಡ ಸುಬ್ಬಜ್ಜಿಗೆ ಮಾನಸಿಕವಾಗಿ ಶಾಕ್ ಆದಂತೆ ಆಗಿದೆ ಎಂದು ನನಗನಿಸುತ್ತಾ ಇದೆ. ಮಗಳ ಮದುವೆಯ ವಿಷಯವನ್ನು ನನ್ನ ಬಳಿ ಖುಷಿಯಿಂದ ಹೇಳುತ್ತಿದ್ದಳು ಸುಬ್ಬಜ್ಜಿ ಅವಳಿಗೆ ತಂದ ಒಡವೆ, ಸೀರೆ ಎಲ್ಲವನ್ನೂ ನನಗೂ ತೋರಿಸಿ ಖುಷಿಪಟ್ಟಿದ್ದಳು. ಅಳಿಯನಾಗುವವನು ಪೊಲೀಸ್ ಪೇದೆ, ಒಬ್ಬನೇ ಮಗ. ನೋಡಲು ಲಕ್ಷಣವಾಗಿದ್ದಾನೆ. ಯಾವ ಕೆಟ್ಟ ಅಭ್ಯಾಸ ಇಲ್ಲವಂತೆ. ಅಪ್ಪ ಅಮ್ಮನೂ ಜೊತೆಯಲ್ಲಿ ಇರಲ್ಲ ಊರಲ್ಲಿ ಇದ್ದಾರೆ. ನನ್ನ ಮಗಳ ಪುಣ್ಯ ಕಣೆ. ಇಂತಹ ಸಂಬಂಧ ಸಿಕ್ಕಿದ್ದು ಎಂದು ಸಂತೋಷದಿಂದ ನನ್ನ ಬಳಿ ಹೇಳುತ್ತಾ ಇರುತ್ತಿದ್ದಳು ಸುಬ್ಬಜ್ಜಿ.

ಕೊನೆಗೆ ಮದುವೆಗೆ ಒಂದು ವಾರ ಇದ್ದಾಗ ನಾನು ದಿನಸಿ ಸಾಮಾನು ಕ್ಲೀನ್ ಮಾಡಲು, ಮದುವೆಗೆ ಬೇಕಾಗುವ ಬತ್ತಿ ಗೆಜ್ಜೆವಸ್ತ್ರ ಮಾಡಿಕೊಡಲು ಮನೆಗೆ ಬಂದೆ ಆಗ ನಿನ್ನ ಅಕ್ಕ ಸುಮ ಮನೆಯಲ್ಲಿ ಇರಲಿಲ್ಲ

ಸುಬ್ಬಜ್ಜಿಯಲ್ಲಿ ಕೇಳಿದೆ ಆಗ ಅವಳೆಂದಳು

'ನಮ್ಮ ಅಳಿಯ ಅವಳಿಗೆ ಅಂಗಡಿಗೆ ಹೋಗಣಾ ಬರ್ತೀಯಾ ಅಂದ್ರಂತೆ ಕಣೆ ಇವಳಿಗೆ ಹೋಗಲು ಮುಜುಗರವಾದರೂ ಅವರಿಗೆ ಬೇಜಾರಾಗುತ್ತೆ ಹೋಗ್ಲಾ ಅಮ್ಮಾ ಅಂತ ಕೇಳಿದ್ಲು ಕಣೆ ಅದಕ್ಕೆ ಹೋಗಲಿ ಪಾಪ ಈಗಿನ ಕಾಲದ ಮಕ್ಕಳು ಸುತ್ತಾಡಿ ಬರಲಿ' ಎಂದು ಕಳಿಸಿದ್ದೇನೆ ಎಂದಿದ್ದಳು.

'ಅವತ್ತೆ ಕಣೋ ಸುಹಾಸ ಅವಳು ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡದ್ದು'

ಏನು ನಡೆಯಿತು ಅವರಿಬ್ಬರ ಮಧ್ಯೆ ಎಂದು ಯಾರಿಗೂ ಗೊತ್ತಾಗಲೇ ಇಲ್ಲ

ಮಗಳ ಸಾವಿನ ನಂತರವೇ ಸುಬ್ಬಜ್ಜಿ ಹೀಗೆ ಮಂಕಾಗಿದ್ದು ಕಣೋ... ಎಂದು ಹೇಳಿ ನಿಟ್ಟುಸಿರು ಬಿಟ್ಟಳು ಪದ್ಮಕ್ಕ.

ಸುಹಾಸ ಎಲ್ಲವನ್ನೂ ಕೇಳಿಸಿಕೊಳ್ಳುತ್ತಾ ತನಗೆ ಅಲ್ಪಸ್ವಲ್ಪ ನೆನಪಾದ ಸಂಗತಿಯನ್ನು ಮೆಲುಕು ಹಾಕಿ ಕೊಳ್ಳುತ್ತಾ ಕೂತಿದ್ದ..

ಆಗ ಪದ್ಮಕ್ಕನೇ ಶುರು ಮಾಡಿದಳು..

'ಸುಹಾಸ.. ನನ್ನ ಅಣ್ಣನ ಮಗ ಬೆಂಗಳೂರಿನಲ್ಲಿ ಡಾಕ್ಟರ್ ಕಣೋ ಅವನಿಗೆ ಹತ್ತಾರು ಡಾಕ್ಟರ್ ಗಳ ಪರಿಚಯವಿರುತ್ತದೆ ಒಂದು ಸಲ ನೀನು ಸುಬ್ಬಜ್ಜಿನ ಅವನ ಹತ್ರ ಕರ್ಕೊಂಡು ಹೋಗಿ ಬಾ'

ನನ್ನ ದೂರದ ಸಂಬಂಧಿ ಒಬ್ಬಳಿಗೆ ಹೀಗೆ ಆಗಿತ್ತು. ಏನೋ ಮನಸ್ಸಿಗೆ ಹಚ್ಚಿಕೊಂಡು ವಿಪರೀತ ಮಾತಾಡ್ತಾ ಇದ್ದಳಂತೆ ಅವಳ ಗಂಡನ ಮನೆಯವರು ತವರಿಗೆ ತಂದು ಬಿಟ್ಟಿದ್ದರು

ಆಗ ನನ್ನ ಅಣ್ಣನ ಮಗ ಭರತನೇ ಮನೋವೈದ್ಯರ ನಂಬರ್ ಕೊಟ್ಟು ಪರಿಚಯ ಮಾಡಿಸಿ ಕೊಟ್ಟಿದ್ದ. ಈಗ ಅವಳು ತಕ್ಕಮಟ್ಟಿಗೆ ಹುಷಾರಾಗಿ ಗಂಡನ ಮನೆಯಲ್ಲಿ ಇದ್ದಾಳಂತೆ

ಈಗ ಎಲ್ಲದಕ್ಕೂ ಔಷಧಿ ಕಂಡುಹಿಡಿದಿದ್ದಾರೆ. ಸುಬ್ಬಜ್ಜಿ ಕೆಲವೊಮ್ಮೆ ಅವರಷ್ಟಕ್ಕೆ ಅವರೇ ಏನೋ ಗೊಣಗ್ತಾರೆ ಅನ್ನೋದು ಬಿಟ್ಟರೆ ಬೇರೆ ಎಲ್ಲಾ ಮನೆಕೆಲಸ ಚೆನ್ನಾಗೇ ಮಾಡ್ತಾರೆ. ಅದೇನು ಯೋಚನೆ ಮಾಡಿಕೊಂಡು ಕೊರಗ್ತಾರೋ. ಒಮ್ಮೆ ತೋರಿಸಿದರೆ ಸರಿಯಾಗಬಹುದು ಅನಿಸುತ್ತೆ. ಒಂದು ಸಲ ತೋರಿಸಿಕೊಂಡು ಬಾರೊ' ಎಂದಳು.

ಇಷ್ಟೆಲ್ಲ ಕೇಳಿದ ಸುಹಾಸನಿಗೆ ಪದ್ಮಕ್ಕನ ಮಾತಿನಲ್ಲಿ ಸತ್ಯವೂ ಇರಬಹುದು ಎನ್ನಿಸಿ 'ಆಯ್ತು ಪದ್ಮಕ್ಕ ಖಂಡಿತಾ ಒಂದು ಪ್ರಯತ್ನ ಮಾಡುತ್ತೇನೆ.ಒಟ್ಟಿನಲ್ಲಿ ನನ್ನಮ್ಮ ಹುಷಾರಾದ್ರೆ ಸಾಕು ಎಂದ'

ಅವನ ನಿರ್ಧಾರ ಕೇಳಿದ ಪದ್ಮಕ್ಕನಿಗೆ ಸ್ವಲ್ಪ ಸಮಾಧಾನವಾಯಿತು

ಹೇಗಾದ್ರೂ ಸರಿ ಸುಬ್ಬಜ್ಜಿ ಮಾಮೂಲಿನಂತಾದರೆ ಸಾಕು ಎಂದು ಯೋಚಿಸುತ್ತಾ ಸುಹಾಸನಿಗೆ ಸರಿ ನಾನಿನ್ನು ಹೊರಡುತ್ತೇನೆ ಎಂದಳು.

'ಇರು ಪದ್ಮಕ್ಕ ಸುಜಾತ ಬರುವ ಹೊತ್ತಾಯಿತು ಕಾಫಿ ಕುಡ್ಕೊಂಡು ಹೋಗುವಿಯಂತೆ' ಎಂದ ಸುಹಾಸ.

'ಇಲ್ಲ ಕಣೊ ಹೊರಡುತ್ತೇನೆ' ಅಂದಳು

ಪದ್ಮಕ್ಕಳಿಗೆ ಸುಜಾತಳ ಬಗ್ಗೆ ಪ್ರೀತಿ ಇದ್ದರೂ ತಾನು ಆಗಾಗ ಮನೆಗೆ ಬಂದು ಸುಬ್ಬಜ್ಜಿಯೊಂದಿಗೆ ಜಾಸ್ತಿ ಮಾತಾಡುವುದು ಸುಜಾತಳಿಗೆ ಇಷ್ಟವಾಗಲಿಕ್ಕಿಲ್ಲ ಎಂದು ಭಾವಿಸಿದ್ದಳು.

'ನಾನು ಹೇಳಿದ ವಿಷ್ಯ ಮರಿಬೇಡ ಕೂತು ಯೋಚಿಸಿ ನಿರ್ಧಾರಕ್ಕೆ ಬಾ.

ಮುಂದಿನ ವಾರ ಭರತ ನಮ್ಮ ಮನೆಗೆ ಬರುತ್ತಿದ್ದಾನೆ ಅವನಿಗೆ ಒಂದು ಹುಡುಗಿ ನೋಡುವಾ ಎಂದು ಯೋಚಿಸಿದ್ದೇವೆ. ಈಗ ಮದುವೆ ಬೇಡ ಅನ್ನುತ್ತಿದ್ದವನು ನಮ್ಮ ಮೇಲಿನ ಗೌರವಕ್ಕೆ ಒಪ್ಪಿಕೊಂಡಿದ್ದಾನೆ

ಅವನು ಬಂದಾಗ ಅವನಲ್ಲಿ ನಾನು ಸುಬ್ಬಜ್ಜಿಯ ವಿಷಯ ತಿಳಿಸುತ್ತೇನೆ. ಯಾವುದಕ್ಕೂ ಮೊದಲು ನೀನು ನಿನ್ನ ನಿರ್ಧಾರ ತಿಳಿಸು ಸರೀನಾ?

ಎನ್ನುತ್ತಾ ಹೊರಟೇ ಬಿಟ್ಟಳು ಪದ್ಮಕ್ಕಾ..

❖ ❖ ❖

ಇತ್ತ ಸುಜಾತ ದೇವಸ್ಥಾನದಲ್ಲಿ ಪುರೋಹಿತರ ಬಳಿ ತನ್ನ ಅತ್ತೆಯ ಕತೆ ಎಲ್ಲವನ್ನೂ ಹೇಳಿ ಯಾವುದಾದರೂ ಹೋಮ ಮಾಡಿಸಿದರೆ ಅತ್ತೆ ಸರಿಯಾಗುತ್ತಾರಾ ಅಂತ ವಿಚಾರಿಸುತ್ತಾ ಇದ್ದಳು.

ಆಗ ಪುರೋಹಿತರು

'ಇದು ಪ್ರೇತಾತ್ಮದ ಕಾಟ ಇರಬಹುದು.ನಿಮ್ಮ ಅತ್ತೆ ಮೈಯಲ್ಲಿ ಅವಳ ಮಗಳೇ ಬಂದಿರಬಹುದು ಕಣಮ್ಮಾ' ಎಂದರು

ಸುಜಾತ ಆಶ್ಚರ್ಯದಿಂದ ' ಅತ್ತೆಗೆ ಮಗಳೇ' ಎಂದು ಉದ್ಗಾರ ತೆಗೆದಳು

'ಹೂ ಕಣಮ್ಮಾ.

'ನಿನಗೆ ಹಿಂದಿನ ಕತೆ ಗೊತ್ತಿಲ್ಲ, ಸುಹಾಸನಿಗೆ ಒಬ್ಬ ಅಕ್ಕ ಇದ್ದಳು ಅವಳು ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಳು. ಅಪರ ಕಾರ್ಯಗಳೆಲ್ಲ ಸರಿಯಾಗಿ ನಡೆಯದೇ ಸಂಸ್ಕಾರ ಸರಿಯಾಗಿ ಆಗದೇ ಇದ್ದರೆ ಇಂತಹ ತೊಂದರೆಗಳು ಬರುತ್ತವೆ. ಅವಳದ್ದೇ ಉಪದ್ರ ಇರಬಹುದು' ಅಂದರು

ಸುಜಾತ ಕೂತುಹಲದಿಂದ 'ಸರಿಯಾಗಿ ಬಿಡಿಸಿ ಹೇಳಿ ನನಗೆ ಇದ್ಯಾವ ವಿಷಯನೂ ಗೊತ್ತಿಲ್ಲ ನಮ್ಮ ಯಜಮಾನ್ರು ಯಾವತ್ತೂ ಇದರ ಬಗ್ಗೆ ಹೇಳಿಲ್ಲ' ಎಂದಳು.

'ಆಗ ಸುಹಾಸನಿಗೆ ನಾಲ್ಕೋ ಐದೋ ವಯಸ್ಸು ಕಣಮ್ಮಾ, ಸುಹಾಸನ ಅಕ್ಕ ಸುಮಳಿಗೆ ಒಬ್ಬ ಪೋಲೀಸ್ ಪೇದೆಯೊಂದಿಗೆ ಮದುವೆ ನಿಶ್ಚಯವಾಗಿತ್ತು, ಹುಡುಗ ಲಕ್ಷಣವಾಗಿದ್ದ. ಸ್ವಲ್ಪ ಅನುಕೂಲನೂ ಇದ್ರಂತೆ.

ಮದುವೆಗೆ ಒಂದು ವಾರ ಇದ್ದಾಗ ಆ ಹುಡುಗನ ಜೊತೆ ಈ ಸುಮ ಪೇಟೆಗೆ ಹೋಗಿದ್ದಳು. ಅಲ್ಲಿ ಅದೇನೂ ನಡೆಯಿತೊ ಗೊತ್ತಿಲ್ಲ. ಅದೇನು ಕಾರಣವೋ. ಸುಮ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಳು. ಆಮೇಲೆ

ಊರವರೆಲ್ಲ ಏನೇನೋ ಕತೆಗಳು ಹೇಳ್ತಾ ಇದ್ರು . ಅವನಿಗೆ ಯಾರ ಜೊತೆನೊ ಸಂಬಂಧ ಇತ್ತಂತೆ ಅಂತ ಕೆಲವರು, ಹುಡುಗಿನೇ ಯಾರನ್ನೋ ಪ್ರೀತಿ

ಮಾಡ್ತಿದ್ಧಳಂತೆ ಅಂತ ಕೆಲವರು. ಯಾವುದು ಸತ್ಯವೋ ಯಾವುದು ಸುಳ್ಳೋ. ಯಾರಿಗೂ ಗೊತ್ತಾಗಲಿಲ್ಲ.

ಈ ಘಟನೆಯ ನಂತರವೇ ನಿನ್ನ ಅತ್ತೆ ಈ ತರಹ ಆಗಿರೋದು. ತುಂಬಾ ಮಂಕಾಗಿಬಿಟ್ಟಳು.

ಇದನ್ನೆಲ್ಲಾ ಕೇಳ್ತಾ ಇದ್ದ ಸುಜಾತಳಿಗೆ ಬಹಳ ವ್ಯಥೆ ಆಯ್ತು. ಛೇ! ಅತ್ತೆ ಇಷ್ಟೊಂದು ನೋವು ಅನುಭವಿಸಿದ್ದಾರಾ . ನನಗೆ ಯಾಕೆ ಈ ವಿಷಯ ಎಲ್ಲಾ ಹೇಳಲೇ ಇಲ್ಲ ಎಷ್ಟೆಲ್ಲ ನೋವು ನುಂಗಿಕೊಂಡಿದ್ದಾರೆ ಎಂದು ನೊಂದುಕೊಂಡಳು

ಆಗ ಪುರೋಹಿತರು 'ನೋಡಮ್ಮಾ ಸುಜಾತ. ಅವಳ ಮಗಳ ಕ್ರಿಯಾಕರ್ಮ ಯಾವುದೂ ಸರಿಯಾಗಿ ಮಾಡಿಲ್ಲ. ನಿನ್ನ ಮಾವ ಇಲ್ಲ ಹಾಗೆಯೇ ಸುಹಾಸ ಚಿಕ್ಕವನಿದ್ದ. ಅಪಮೃತ್ಯುವಾದಾಗ ಮಾಡಬೇಕಾದ ಕ್ರಿಯೆಗಳನ್ನು ಶಾಸ್ತ್ರೋಕ್ತವಾಗಿ ಮಾಡಬೇಕು. ಇಲ್ಲದೇ ಇದ್ರೆ ಇಂತಹ ತೊಂದ್ರೆಗಳು ಯಾವಾಗಲೋ ಕಾಣಿಸಿಕೊಳ್ತವೆ.'

'ಇದಕ್ಕೇನೂ ಪರಿಹಾರ ಇಲ್ವಾ ಪುರೋಹಿತರೆ' ಎಂದು ದುಃಖದಿಂದ ಕೇಳಿದಳು ಸುಜಾತ.

ತಕ್ಷಣವೇ ಪುರೋಹಿತರು 'ಯಾಕಿಲ್ಲ ತಾಯಿ ಖಂಡಿತಾ ಇದೆ. ಕೇರಳದಲ್ಲಿ ನನ್ನ ಪರಿಚಯಸ್ಥರು ಒಬ್ಬರು ಇದ್ದಾರೆ.'

ಜ್ಯೋತಿಷ್ಯ ತಜ್ಞರು, ಮಹಾ ಮೇಧಾವಿಗಳು ಅವರಿಗೆ ಈ ವಿಚಾರ ತಿಳಿಸಿದರೆ ಖಂಡಿತಾ ಅವರು ಸೂಕ್ತ ಪರಿಹಾರ ತಿಳಿಸುತ್ತಾರೆ. ನೀನು ನಿನ್ನ ಗಂಡನ ಜೊತೆ ಬಾ ಏನು ಮಾಡಬೇಕು ಎಂದು ನಾನು ವಿವರವಾಗಿ ತಿಳಿಸುತ್ತೇನೆ ನಾನು ಹೇಳಿದಷ್ಟನ್ನು ಮಾಡಿದರೆ ಖಂಡಿತಾ ನಿನ್ನ ಅತ್ತೆ ಮೊದಲಿನಂತಾಗುತ್ತಾರೆ' ಎಂದರು

'ಸರಿ ಪುರೋಹಿತರೇ ನಾನು ನನ್ನ ಯಜಮಾನರಲ್ಲಿ ಖಂಡಿತಾ ಈ ವಿಷಯ ತಿಳಿಸಿ ಅವರನ್ನು ಒಪ್ಪಿಸಿ ಇಲ್ಲಿಗೆ ಕರೆದುಕೊಂಡು ಬರುತ್ತೇನೆ.

ಎಷ್ಟೇ ಖರ್ಚಾದರೂ ಪರ್ವಾಗಿಲ್ಲ ನೀವು ಹೇಳಿದ ಎಲ್ಲವನ್ನೂ ಮಾಡುತ್ತೇವೆ. ಅತ್ತೆ ಮೊದಲಿನಂತಾದರೆ ಸಾಕು' ಎಂದಳು

'ಸರಿ ಕಣಮ್ಮಾ...' ಎಂದರು ಪುರೋಹಿತರು.

ನಾನಿನ್ನು ಹೊರಡುತ್ತೇನೆ ಎನ್ನುತ್ತಾ ಭಾರವಾದ ಮನಸ್ಸಿನಿಂದ ಸುಜಾತ ಅಲ್ಲಿಂದ ಹೊರಟಳು.

ದಾರಿಯುದ್ದಕ್ಕೂ ಸುಹಾಸನನ್ನು ಯಾವ ರೀತಿ ಒಪ್ಪಿಸುವುದು ಎಂದು ಯೋಚಿಸುತ್ತಾ ಹೆಜ್ಜೆ ಹಾಕುತ್ತಿದ್ದಳು.

ಅಧ್ಯಾಯ 3

ವತ್ಸಲಾಶ್ರೀಧರ್

ಪುರೋಹಿತರು ಹೇಳಿದ ಪರಿಹಾರದ ವಿಷಯದ ಬಗ್ಗೆಯೇ ಸುಜಾತ ಯೋಚಿಸುತ್ತಿದ್ದಳು.

ಅತ್ತೆಗೊಬ್ಬಳು ಮಗಳಿದ್ದ ವಿಷಯ ಇಂದೇ ಗೊತ್ತಾಗಿದ್ದು ನನಗೆ. ಆಗಿನ್ನೂ ಸುಹಾಸ್‌ಗೆ ನಾಲ್ಕು ವರ್ಷವಂತೆ. ಅವರಿಗೂ ಅಕ್ಕನ ನೆನಪು ಮಸುಕಾಗಿರಬಹುದು ಅಷ್ಟೆ.

'ಸುಮಾಳ ಆತ್ಮ ನಿಮ್ಮ ಅತ್ತೆಯ ದೇಹದೊಳಗೆ ಸೇರಿ ಹೀಗೆ ಆಡಿಸುತ್ತಿರಬಹುದು...' ಎಂಬ ಮಾತಿನ ಬಗ್ಗೆಯೇ ಯೋಚಿಸುತ್ತಿದ್ದ ಸುಜಾತಳಿಗೆ ಅದೊಂದು ಘಟನೆ ನೆನಪಾಯ್ತು..

ಆ ದಿನ ಸುಬ್ಬಜ್ಜಿ ಅರ್ಧ ರಾತ್ರಿಯಲ್ಲಿ ಸುಹಾಸ್ ಮತ್ತು ಸುಜಾತಳನ್ನು' ಮನೆಯ ಹೊರಗಡೆ ಪೋಲೀಸರು ಬಂದಿದ್ದಾರೆ...' ಎಂದು ಹೇಳಿ ಎಬ್ಬಿಸಿದ್ದರು.ಹೊರಗೆ ನೋಡಿದಾಗ ಯಾರೂ ಇರಲಿಲ್ಲ.

ಅಂದಿನ ದಿನ ಸುಮಾಳ ಆತ್ಮ ಅತ್ತೆಯ ದೇಹದಲ್ಲಿ ಸೇರಿತ್ತೇ.. ನೆನೆಸಿಕೊಂಡಾಗ ಸ್ವಲ್ಪ ಭಯವಾದರೂ ಹಾಗಿರಲಿಕ್ಕಿಲ್ಲ ಇದ್ದರೂ ಕೇರಳದ ಜ್ಯೋತಿಷ್ಯ ತಜ್ಞರ ಪರಿಚಯ ಮಾಡಿಸಿಕೊಡುವುದಾಗಿ ಹೇಳಿದ್ದಾರಲ್ಲ ಪುರೋಹಿತರು!

ಸುಹಾಸ್‌ಗೆ ಅದರಲ್ಲೆಲ್ಲ ನಂಬಿಕೆ ಇಲ್ಲವಾದರೂ ಅತ್ತೆಯ ಮಾನಸಿಕ ಆರೋಗ್ಯಕ್ಕಾಗಿ ಖಂಡಿತಾ ಒಪ್ಪಿಕೊಳ್ಳಬಹುದು ಎಂದು ತನಗೆ ಸಮಾಧಾನ ಮಾಡಿಕೊಳ್ಳುತ್ತಾ ಮನೆ ಸೇರಿದ್ದಳು ಸುಜಾತ.

ಅದೇ ಸಮಯದಲ್ಲಿ ಪದ್ಮಕ್ಕ ಹೇಳಿದ ಡಾಕ್ಟರ್ ವಿಷಯ ಸುಹಾಸ್ ನ ತಲೆಯಲ್ಲಿ ಗುಯ್ ಗುಟ್ಟುತ್ತಿತ್ತು.

ಅಮ್ಮ ಸರಿಯಾದರೆ ಸಾಕು. ಸಮಾಜದಲ್ಲಿ ದೇಹದ ಆರೋಗ್ಯದ ಬಗ್ಗೆ ತೋರಿದಷ್ಟು ಕಾಳಜಿ ಚಿತ್ತಸ್ಥಿತಿಯ ಅಸ್ವಸ್ಥತೆಯ ಬಗ್ಗೆ ತೋರುವುದಿಲ್ಲ. ಒಂದು ಲೇಖನ ಓದಿದ್ದು ನೆನಪಾಗುತ್ತಿದೆ. ಹೌದು ಅದಕ್ಕೂ ಥೆರಪಿ ಲಭ್ಯವಿದೆಯಂತೆ. ಖಿನ್ನತೆಗೆ ಬಿಹೇವಿಯರ್ ಥೆರಪಿ, ಮೈಟೊಕಾಂಡ್ರಿಯಾದ ಸಮಸ್ಯೆ ಬೈಪೋಲಾರ್ ಡಿಸಾರ್ಡರ್ ಗೆ 'ಬೆಕ್ ಡಿಪ್ರೆಷನ್ ಇನ್ವೆಂಟರಿ' ಮಾಪಕದ ಮೂಲಕ ಖಿನ್ನತೆಯ ಮಾಪನ, ಥೆರಪಿ ಮತ್ತು ಚಿಕಿತ್ಸೆಯ ಬಗ್ಗೆ ಓದಿದ ನೆನಪು.

ಡಾಕ್ಟರ್ ಭರತ್ ರವರು ಪದ್ಮಕ್ಕ ನ ಮನೆಗೆ ಬರುವ ಮೊದಲೇ ಪಾಪು ಸುಜಾತಳ ಬಳಿ ಮಾತಾಡಬೇಕು. ಅಮ್ಮ ಸದಾ ಸಂತೋಷವಾಗಿ ಇದ್ದರೆ ಸಾಕು. ಸುಬ್ಬಜ್ಜಿಗೆ ಹುಚ್ಚು ಎನ್ನುವ ಮಾತು ಅವಳ ಕಿವಿಗೆ ಬಿದ್ದಿರದೇ ಇರುತ್ತದೆಯೇ.. ಮನುಷ್ಯರ ಹತ್ತಿರ ಮಾತೇ ಬೇಡವೆಂದು ಮರಗಿಡ, ಕಲ್ಲು, ಪ್ರಾಣಿಗಳ ಜೊತೆ ಅಷ್ಟು ಆಪ್ತವಾಗಿ ಮಾತಾಡಿ ಮನಸ್ಸು ಹಗುರ ಮಾಡಿಕೊಳ್ಳುತ್ತಾಳೇನೋ..

ಸುಬ್ಬಜ್ಜಿ ಮನೆಗೆ ಬಂದಾಗ ಮುಖದಲ್ಲಿ ನಿರ್ಲಿಪ್ತತೆ. ಅನ್ಯಮನಸ್ಕಳಾಗಿ ಮೌನವಾಗಿ ಒಳಗೆ ಬಂದ ಅಮ್ಮನನ್ನು ನೋಡಿ ಸುಹಾಸ್ ಮನಸ್ಸು ಚುರುಕ್ಕೆಂದಿತ್ತು. ಈ ಮೌನದ ಹಿಂದೆ ಅದೆಷ್ಟು ನೋವಿದೆಯೋ. ಒಬ್ಬಂಟಿಯಾಗಿ ಎಷ್ಟು ನೋವು ತಿಂದಿದ್ದಾಳೋ. ಮನಸ್ಸು ಬಿಚ್ಚಿ ಮಾತಾಡಿದ ನೆನಪಿಲ್ಲ, ಅಸಂಬದ್ಧ ಮಾತುಗಳಿಂದ ವಿಚಿತ್ರ ನಡವಳಿಕೆಯಿಂದ ರೋಸಿಹೋಗಿ ನನಗೂ ತಾಳ್ಮೆಯೇ ಇಲ್ಲವಾಗಿದೆ ಎಂದುಕೊಂಡನು ಸುಹಾಸ.

ರಾತ್ರಿ ಊಟದ ನಂತರ ಸುಜಾತ ಮತ್ತು ಸುಹಾಸ ತಮ್ಮ ತಮ್ಮ ಮನದ ಮಾತುಗಳನ್ನು ಹೇಳಿಕೊಂಡರು.

ಸುಜಾತಳ ಮಾತಿಗೆ ಸುಹಾಸ ಸುತಾರಾಂ ಒಪ್ಪಲಿಲ್ಲ. ಪೂಜೆ, ಪರಿಹಾರಕ್ಕೂ ಮೊದಲು ಡಾಕ್ಟರ್ ಬಳಿ ತೋರಿಸುವುದೇ ಒಳಿತೆಂಬ ತೀರ್ಮಾನಕ್ಕೆ ಸುಜಾತಳೂ ಒಪ್ಪಿದಳು. ಆದರೆ ಅತ್ತೆಯನ್ನು ಒಪ್ಪಿಸಬೇಕಲ್ಲ..

❖ ❖ ❖

ನಾಳೆ ethnic dayಗೆ ಎಲ್ಲರೂ ಸೀರೆ ಉಟ್ಟುಕೊಳ್ಳೋಣ ಅಂತ ಮಾತಾಡಿದ್ದೇನೋ ಹೌದು. ಸೀರೆ ಉಡೋದು ಬಹಳ ಕಷ್ಟ. ಅಮ್ಮ ಆಫೀಸಿಗೆ ಹೊರಡುವ ಮೊದಲು ನಾನು ಸ್ನಾನ ಮಾಡಿ ರೆಡಿಯಾದರೆ ಅಮ್ಮ ಉಡಿಸುತ್ತಾಳೆ. ಅದೇ ಸರಿ! ನವ್ಯಳ ಚಿಂತನಾಲಹರಿ ಸಾಗಿತ್ತು.

'ಎಲ್ಲಿ ಕಳೆದು ಹೋಗಿದ್ದೀಯ ನವ್ಯ. ಪಾಠದ ಮೇಲೆ ಗಮನನೇ ಇಲ್ಲ ನಿಂಗೆ' ರಮ್ಯ ಮೆಲುದನಿಯಲ್ಲಿ ಗದರಿದಾಗ ವಾಸ್ತವಕ್ಕೆ ಬಂದಳು ನವ್ಯ.

ಅದೊಂದು ಪ್ರತಿಷ್ಠಿತ PU ಕಾಲೇಜ್. ಅದರಲ್ಲಿ ಓದುತ್ತಿರುವ ನವ್ಯ ಜಾಣ ವಿದ್ಯಾರ್ಥಿನಿ. ನೋಡಲೂ ಅಷ್ಟೇ ಸುಂದರ. ಹಾಲು ಬಿಳುಪಿನ ಬಣ್ಣ, ಉದ್ದ ಜಡೆ,

ಸುಸಂಸ್ಕೃತ ಮನೆಯ ಹುಡುಗಿ ಎಂದು ನೋಡಿದಾಕ್ಷಣ ತಿಳಿಯುವಂತೆ ನಡವಳಿಕೆ. ಕ್ಲಾಸಿನಲ್ಲಿ ಎಲ್ಲರ ಅಚ್ಚುಮೆಚ್ಚಿನ ವಿದ್ಯಾರ್ಥಿನಿ.

ಮನೆಯಲ್ಲಿ ಸುಬ್ಬಜ್ಜಿಯ ನಡವಳಿಕೆ ನವ್ಯಳಿಗೂ ಕಿರಿಕಿರಿ ತರುತ್ತಿತ್ತು. ಒಮ್ಮೊಮ್ಮೆ ವಿಪರೀತ ಮಾತು, ಒಮ್ಮೊಮ್ಮೆ ಪೂರ್ತಿ ಮೌನ. 'ಅಜ್ಜಿಗೆ ಏನಾಗಿದೆಯೋ.. ವಿಚಿತ್ರವಾಗಿ ಆಡ್ತಾರೆ' ಅಂದುಕೊಳ್ಳುತ್ತಿದ್ದಳು ನವ್ಯ. ಊರವರೆಲ್ಲ 'ಸುಬ್ಬಜ್ಜಿಗೆ ಹುಚ್ಚು' ಎಂದು ಆಡಿಕೊಳ್ಳುವ ಮಾತು ಕಿವಿಗೆ ಬಿದ್ದಾಗ ಅಜ್ಜಿಯ ವಿಷಯದಲ್ಲಿ ತನಗರಿವಿಲ್ಲದಂತೆ ಅಸಡ್ಡೆ ತೋರಲು ಪ್ರಾರಂಭಿಸಿದ್ದಳು.

ನವ್ಯಳಿಗೆ ಚೆನ್ನಾಗಿ ಓದಿ ವೈದ್ಯಳಾಗಬೇಕು ಎಂಬ ಗುರಿ. ಅದರಲ್ಲೂ ಮನೋವೈದ್ಯೆ ಆಗಬೇಕೆನ್ನುವ ಆಸೆ ಮತ್ತು ಆಸಕ್ತಿಗೆ ಅವಳಿಗೆ ಸ್ಫೂರ್ತಿ ಅನ್ನಿಸುವುದು ಗೆಳೆಯ ಜೀವನ್.

ನವ್ಯಳಷ್ಟೇ ವಯಸ್ಸು, ಆದರೆ ಅವನ ತಿಳುವಳಿಕೆಯ ಮಟ್ಟ ಮತ್ತು ಪ್ರಬುದ್ಧತೆ ಬಹಳ ಜಾಸ್ತಿ. ವೃದ್ಧರನ್ನು ಅವನು ಆಪ್ತತೆಯಿಂದ ಮಾತಾಡಿಸುವ ರೀತಿ, ಅನಾಥಾಶ್ರಮಕ್ಕೆ ಆಗಾಗ ಭೇಟಿ ನೀಡಿ ಆ ಮಕ್ಕಳನ್ನು ಅಕ್ಕರೆಯಿಂದ ಮಾತಾಡಿಸಿ, ಚಾಕೊಲೇಟ್, ಕೇಕ್ ನೀಡಿ ಅವರ ಮೊಗದಲ್ಲಿ ಅರಳುವ ನಗುವಿನಿಂದ ತಾನೂ ಸಂಭ್ರಮ ಪಡುವ ರೀತಿ ನೋಡುವುದೇ ಚಂದ.

ಶ್ರೀಮಂತ ಕುಟುಂಬದ ಕುಡಿಯಾದರೂ ಒಂಚೂರು ಜಂಭ ಇಲ್ಲ. ವೈದ್ಯಳಾಗುವ ಆಸೆಗೆ ಆಸರೆಯಾಗಿ ಅಗತ್ಯ ಸಲಹೆಗಳನ್ನು ನೀಡುತ್ತಾ ಹುರಿದುಂಬಿಸುತ್ತಿರುವ ಸಹಪಾಠಿಯನ್ನು ಗೆಳೆಯನಾಗಿ ಪಡೆದ ತಾನೇ ಧನ್ಯಳು ಎಂದು ಹಲವು ಬಾರಿ ಅನಿಸಿದ್ದಿದೆ ನವ್ಯಗೆ.

'ಜೀವನ್. ನಾಳೆ ಸೀರೆ ಉಡಬೇಕಿದೆ ಕಣೋ.. ನಡೆದುಕೊಂಡು ಕಾಲೇಜಿಗೆ ಬರಕ್ಕೆ ಕಷ್ಟ, ಬಸ್ಸು ಹತ್ತೋದೂ ಕಷ್ಟ, ನೀನು ಕಾಲೇಜಿಗೆ ಹೋಗುವ ದಾರಿಯಲ್ಲೇ ಅಲ್ವಾ ನಮ್ಮ ಮನೆ. ನಿನ್ನ ಜೊತೆ ಗಾಡಿಯಲ್ಲೇ ಬರ್ತೀನಿ ಆಯ್ತಾ?' ನವ್ಯಳ ಮಾತಿಗೆ ಜೀವನ್ ' ಸರಿ ಹಾಗಿದ್ರೆ, ರೆಡಿಯಾಗಿರು. ಬರ್ತೀನಿ' ಎಂದು ತಲೆಯಾಡಿಸಿದ.

❖ ❖ ❖

ಮೊದಲ ಬಾರಿ ಕಾಲೇಜಿಗೆ ಸೀರೆ ಉಟ್ಟುಕೊಂಡು ಹೋಗುತ್ತಿರುವುದರಿಂದ ಸ್ವಲ್ಪ ಮಟ್ಟಿನ ಆತಂಕ ಇದ್ದರೂ ಎದ್ದಲ್ಲಿಂದಲೂ ಏನೋ ಸಡಗರ, ಸಂಭ್ರಮ ನವ್ಯಳಿಗೆ.

ಗೆಳತಿಯರೆಲ್ಲ ಸೇರಿ ಒಂದು ಫೋಟೋ ತೆಗೆಸಿಕೊಳ್ಳಬೇಕು. ಮತ್ತೆ ಮತ್ತೆ ದೊರಕುವುದಿಲ್ಲ ಇಂತಾ ಸಂದರ್ಭ.

'ಸರಿಯಾಗಿ ಪಿನ್ ಹಾಕಮ್ಮ, ಸ್ವಲ್ಪ ಉದ್ದ ಉಡಿಸು, ಹೀಲ್ಡ್ ಸ್ಲಿಪ್ಪರ್ ಹಾಕ್ಕೋತೀನಿ.' ಸೀರೆ ಉಡಿಸುತ್ತಿದ್ದ ಸುಜಾತ ಮಗಳ ಮಾತಿಗೆ ನಗುತ್ತಾ ' ಎಷ್ಟು

ಮುದ್ದಾಗಿ ಕಾಣ್ತಾ ಇದೀಯ ಮಗಳೇ..ನಂದೇ ದೃಷ್ಟಿ ತಾಗುತ್ತೆ ನಿಂಗೆ' ನೆಟ್ಟಿ ತೆಗೆದು ಅಭಿಮಾನದಿಂದ ನೋಡಿದಳು ಮಗಳನ್ನು.

'ಅಪ್ಪಾ ಆಫೀಸಿಗೆ ಹೋಗ್ತಾ ಬಿಟ್ಟು ಹೋಗ್ತಾರೆ ಅಯ್ತು?'

'ಬೇಡ ಅಮ್ಮ..ಅಪ್ಪ ಬೇಗ ಹೋದ್ರೆ ಯಾರೂ ಫ್ರೆಂಡ್ಸ್ ಬಂದಿರಲ್ಲ. ಜೀವನ್ ಗೆ ಹೇಳಿದ್ದೀನಿ. ಹೇಗೂ ಹೀಗೇ ಹೋಗೋದು ಅವನು.'

'ಸರಿ ಬಿಡು.' ನುಡಿದಳು ಸುಜಾತ.

'ಜೀವನ್ ನಮಗೆಲ್ಲ ಗೊತ್ತಿರುವ ಹುಡುಗನೇ. ಒಳ್ಳೆಯವನು. ಹಿರಿಯರೆಂದರೆ ಅಪಾರ ಗೌರವ. ನಮ್ಮಿಬ್ಬರನ್ನು ಕಂಡಾಗಲೆಲ್ಲ ಬಾಯ್ತುಂಬ ಅಂಕಲ್, ಆಂಟಿ ಅಂತ ಪ್ರೀತಿಯಿಂದ ಮಾತಾಡಿಸುತ್ತಾನೆ. ಸರಿ ನವ್ಯ, ಹುಷಾರು' ಎಂದು ಆಫೀಸಿಗೆ ಹೊರಟಳು ಸುಜಾತ.

ಗಂಟೆ ಬೆಳಗ್ಗೆ 09:30. ಮಹಡಿಯಲ್ಲಿ ಕನ್ನಡಿ ಮುಂದೆ ನಿಂತು ಕೂದಲು ಸರಿ ಮಾಡಿಕೊಳ್ಳುತ್ತಾ ಕಿಟಕಿಯಲ್ಲಿ ರಸ್ತೆ ಕಡೆಗೊಮ್ಮೆ ಕಣ್ಣು ಹಾಯಿಸುತ್ತಿದ್ದಾಳೆ ನವ್ಯ. ಈಗ ಜೀವನ್ ಬರುತ್ತಾನೆ. ಇವತ್ತು ಬ್ಯಾಗು, ಕ್ಯಾರಿಯರ್ ಯಾವುದೂ ಇಟ್ಟುಕೊಳ್ಳಲ್ಲ. ಎರಡು ಪುಸ್ತಕ, ಪರ್ಸ್ ಸಾಕು..

ದೂರದಲ್ಲಿ ಜೀವನ್ ಗಾಡಿ ಕಾಣಿಸಿತು. ಸುಬ್ಬಜ್ಜಿ ಕೆಳಗೆ ಏನು ಮಾಡುತ್ತಿದ್ದಾರೋ... ಹೇಳಿ ಹೊರಡುತ್ತೇನೆ ಎಂದುಕೊಳ್ಳುತ್ತಾ ನವ್ಯ ಕೆಳಗಿಳಿದಳು.

ಗೇಟಿನ ಹತ್ತಿರ ಬೈಕ್ ನಿಲ್ಲಿಸಿಕೊಂಡು ಜೀವನ್ 'ನವ್ಯಾ' ಎಂದು ಕರೆಯುತ್ತಿದ್ದಂತೆ ಹಿತ್ತಿಲಲ್ಲಿ ಗಿಡಗಳ ಆರೈಕೆ ಮಾಡುತ್ತಿದ್ದ ಸುಬ್ಬಜ್ಜಿ ಎದುರಾಗಿದ್ದರು.

'ಚೆನ್ನಾಗಿದ್ದೀರ ಅಜ್ಜಿ' ಎಂಬ ಮಾತಿಗೆ ಯಾವ ಉತ್ತರವನ್ನೂ ಕೊಡದೆ ದುರುದುರನೆ ನೋಡುತ್ತಿದ್ದ ಸುಬ್ಬಜ್ಜಿಯ ಮುಖ ಕ್ಷಣಮಾತ್ರದಲ್ಲಿ ಭಯದಿಂದ ಬಿಳಿಚಿಕೊಂಡಂತೆ ಆಗಿದ್ದನ್ನು ಕಂಡು ಜೀವನ್‌ಗೆ ಆಶ್ಚರ್ಯ ಆಯ್ತು. ಗಾಡಿ ಇಳಿದು ಗೇಟ್ ಹತ್ತಿರ ಬಂದ ಜೀವನ್ ನನ್ನು ಒಳಗೆ ಬರದಂತೆ ಗೇಟಿಗೆ ಅಡ್ಡವಾಗಿ ನಿಂತ ಸುಬ್ಬಜ್ಜಿಯ ಕಣ್ಣುಗಳು ಕೆಂಪಾಗಿದ್ದವು, ಮೈ ಥರಥರನೆ ನಡುಗುತ್ತಿತ್ತು.

ಇದನ್ನು ಗಮನಿಸಿದ ಎದುರುಮನೆಯ ಪದ್ಮಕ್ಕ ಗೇಟ್ ಬಳಿ ಬರುವ ಮೊದಲೇ ಏನೂ ಮಾತಾಡದೇ ಜೀವನ್ ಹೊರಟುಬಿಟ್ಟನು. ಅವನಿಗೆ ಅರಿವಾಗಿದ್ದು ಒಂದೇ ಅಜ್ಜಿಗೆ ನವ್ಯ ನನ್ನ ಜೊತೆ ಗಾಡಿಯಲ್ಲಿ ಬರುವುದು ಇಷ್ಟವಿಲ್ಲ ಎಂಬುದು.

ಲಗುಬಗೆಯಿಂದ ಕೆಳಗೆ ಬಂದ ನವ್ಯಳಿಗೆ ಸುಬ್ಬಜ್ಜಿಯನ್ನು ನೋಡಿ ದೊಡನೆಯೇ ತಿಳಿಯಿತು ಏನೋ ನಡೆದಿದೆ ಎಂದು. 'ಜೀವನ್ ಹೊರಟುಹೋದ ಕಣೆ ನವ್ಯ. ಫೋನ್ ಮಾಡು' ಎಂದರು ಪದ್ಮಕ್ಕ.

ನವ್ಯಳಿಗೆ ಸಿಟ್ಟು, ದುಃಖ ಎಲ್ಲಾ ಒತ್ತರಿಸಿಕೊಂಡು ಬಂತು.

ಅಧ್ಯಾಯ 4

ಡಿ.ಎಸ್. ಪುಷ್ಪ

ಅಷ್ಟೊಂದು ಆಸ್ಥೆಯಿಂದ ಮಾಡಿದ ಕೇಶಾಲಂಕಾರ,ತೀಡಿದ ಹುಬ್ಬು,ತುಟಿಯ ಬಣ್ಣ, ತನ್ನ ಚಿಮ್ಮುನೆರಿಗೆಯ ಹೊಸ ಸೀರೆ ಇವುಗಳನ್ನೆಲ್ಲಾ ನೋಡಿ ಜೀವನ್ ಹೊಗಳಬೇಕು. ಅವನೊಂದಿಗೆ ಜುಂ... ಅಂತ ಬೈಕಿನಲ್ಲಿ ಹೋಗಿ ತನ್ನ ಗೆಳತಿಯರ ಹುಬ್ಬೇರುವಂತೆ ಮಾಡಬೇಕು ಎಂದಂದುಕೊಂಡಿದ್ದ ನವ್ಯಳಿಗೆ ನಿರಾಶೆಯಾಯ್ತು. ಕಾಲೇಜಿನ ಎಥ್ನಿಕ್ ಡೇ ಬೇರೆ! ಎಲ್ಲರೂ ಎಷ್ಟೊಂದು ಚೆನ್ನಾಗಿ ಡ್ರೆಸ್ ಮಾಡಿಕೊಂಡು ಬಂದಿರ್ತಾರೆ! ನಾನು ಜೀವನ್ ಜೊತೆ ಬೈಕಿನಲ್ಲಿ ಹೋಗಿದ್ರೆ ಬೇಗ ಹೋಗಿ ಕಾಲೇಜಿಗೆಲ್ಲಾ ಒಂದು ರೌಂಡ್ ಹೊಡಕೊಂಡು ಬರಬಹುದಿತ್ತು. ತನ್ನೆಲ್ಲಾ ಆಸೆಗೆ ತಣ್ಣೀರು ಎರಚಿದ ಸುಬ್ಬಜ್ಜಿಯ ಬಗ್ಗೆ ಕೋಪ ತಾತ್ಸಾರ ಅಸಹನೆಯ ನಾನಾ ಭಾವನೆ ಹೊರಹೊಮ್ಮಿತು.

ಅಷ್ಟಕ್ಕೂ ಸುಬ್ಬಜ್ಜಿ ಜೀವನ್‌ಗೆ ಏನು ಹೇಳಿರಬಹುದು. ಅವನು ಕ್ಷಣಮಾತ್ರವೂ ಕಾಯದೆ ಸೀದಾ ಹೋಗಿದ್ದಾನೆಂದರೆ? ಕೋಪ ಅಳುವಿನ ರೂಪ ತಾಳುತ್ತಿತ್ತು. ಕಾಲೇಜಿಗೆ ಬೇರೆ ಲೇಟ್ ಆಯಿತು. ಎಲ್ಲಾ ಈ ಮುದಿ ಸುಬ್ಬಜ್ಜಿಯಿಂದಲೇ ಆಗಿದ್ದು. ಕೋಪ ತಾಪ ಹೆಚ್ಚಾದಷ್ಟೂ ಮೇಕಪ್ ಎಲ್ಲಾ ಹಾಳಾಗುತ್ತದೆ ಅಂತ ಗೊತ್ತಿತ್ತು ನವ್ಯಾಳಿಗೆ. ಇನ್ನು ಗೆಳತಿ ಸರಿತಾಳಾದರೂ ಇದ್ದಾಳೋ ಇಲ್ಲವೋ. ಈಗಾಗಲೇ ಕಾಲೇಜ್ ಬಸ್ ಹತ್ತಿ ಹೋಗಿರಬಹುದು ಈಗೇನು ಮಾಡಲಿ ಎಂದು ಅರ್ಥವಾಗದೇ ನಿಂತಿದ್ದಾಗ ಅಮ್ಮನ ದರ್ಶನ ವಾಯಿತು.

"ಏನೇ ನವ್ಯಾ, ನಿನ್ನಪ್ಪ ಕಾಲೇಜಿಗೆ ಕರ್ಕೊಂಡು ಹೋಗ್ತೀನಿ ಬಾರಮ್ಮ ಅಂದರೆ ಬೇಡಾಂದೆ.ಈಗ ನೋಡು, ಹೇಗೆ ಪೇಚಾಡ್ತಿದೀಯಾ ಅಂತ. ಒಂದು ಆಟೋ ಮಾಡ್ಕೊಂಡು ಹೋಗೆ. ನಿನ್ನಪ್ಪನೂ ಆಗಲೇ ಮೀಟಿಂಗ್ ಇದೆ ಅಂತ ಬೆಳಿಗ್ಗೇನೇ

ಹೊರಟುಬಿಟ್ರು. ನಿನ್ ಫ್ರೆಂಡ್ ಸರಿತಾಳಾದ್ರೂ ಇದಾಳೇನೋಂತ ನೋಡ್ಬಿಟ್ ಬರ್ತೀನಿ, ಇರು.ಅವಳ ಜೊತೆ ನೀನು ಹೋಗಬಹುದಲ್ವೇ..?" ಸುಜಾತ ಹೀಗೆ ಹೇಳಿದವಳೇ ಚಪ್ಪಲಿ ಮೆಟ್ಟಿಕೊಂಡು ಹೊರಟೇ ಬಿಟ್ಟಳು.

ಸರಿತಾ ನವ್ಯಳ ಬಾಲ್ಯ ಗೆಳತಿಯೇನಲ್ಲ. ವಿದ್ಯಾಭ್ಯಾಸಕ್ಕೆಂದು ಸರಿತಾ ಅವಳ ಅತ್ತೆಯ ಮನೆಯಲ್ಲಿದ್ದುಕೊಂಡು ಓದುತ್ತಿದ್ದಳು. ಓದು ಬರಹದಲ್ಲೂ ಜಾಣೆ. ಹಾಗೆಯೇ ಸಂಗೀತ,ವೀಣಾವಾದನದಲ್ಲೂ ಎತ್ತಿದ ಕೈ. ನವ್ಯ ತನ್ನ ಸೌಂದರ್ಯಕ್ಕೆ ಹೆಸರಾದರೆ ಸರಿತಾ ಸಾಕ್ಷಾತ್ ಸರಸ್ವತಿ ಪುತ್ರಿಯಾಗಿದ್ದಳು. ಕಾಲೇಜಿನಲ್ಲಿ ಎಲ್ಲರೂ ಸರಿತಾಳ ಪ್ರತಿಭೆಯನ್ನು ಹೊಗಳಿದರೆ ನವ್ಯಳಿಗೆ ಹೊಟ್ಟೆ ಕಿಚ್ಚಾಗುತ್ತಿತ್ತು. ಈಗ ಈ ಅಮ್ಮ ಬೇರೆ ಅವಳನ್ನು ಹುಡುಕಿಕೊಂಡು ಹೋಗಿದ್ದಾಳೆ. ಕೈ ಕೈ ಹಿಸುಕಿಕೊಂಡಳು ನವ್ಯ. ಸರಿತಾಳ ಜೊತೆ ಕಾಲೇಜಿಗೆ ಹೋಗಲು ನವ್ಯಳಿಗೆ ಯಾವ ಅಭ್ಯಂತರವೂ ಇಲ್ಲ ಆದರೆ ತಾವಿಬ್ಬರೇ ಇದ್ದಾಗ ಒಳ್ಳೆಯ ಗೆಳತಿಯರಂತೆ ಇದ್ರೂ ನವ್ಯ ಸರಿತಾಳ ಬಗ್ಗೆ ಒಂದು ಅಂತರ ಇಟ್ಟುಕೊಂಡೇ ಇದ್ದಳು. ಇದಕ್ಕೆ ಕಾರಣ ತಿಳಿಯದ್ದೇನೂ ಅಲ್ಲ. ಜೀವನ್ ಮತ್ತು ಸರಿತಾ ಅಕ್ಕಪಕ್ಕದ ಊರಿನವರು. ನವ್ಯಳನ್ನು ಭೇಟಿಯಾದಾಗ ಅವಳ ಜೊತೆ ಸರಿತಾ ಇದ್ದರೆ ಜೀವನ್ ಅವಳತ್ತ ಕುಡಿನೋಟ ಬೀರುವುದನ್ನು ತಪ್ಪಿಸುತ್ತಿರಲಿಲ್ಲ. ಹಾಲು ಬಿಳುಪಿನ, ನೀಳ ಜಡೆ, ಮುಂಗುರುಳಿನ ಸರಿತಾ ತನ್ನ ಸುಂದರ ದಂತಪಕ್ತಿಯನ್ನು ಸ್ವಲ್ಪವೇ ತೆರೆದು ನಸು ನಗುತ್ತಿದ್ದಳು. ಇಷ್ಟೇ ಸಾಕಿತ್ತು ನವ್ಯಗೆ. ತನ್ನೆದುರು ಜೀವನ್ ಯಾರನ್ನಾದರೂ ನೋಡುವುದು ನಗುವುದು ಮಾತನಾಡಿಸುವುದು ತನಗೆ ಇಷ್ಟವಿಲ್ಲವೆಂದು ಮುಖ ಊದಿಸಿ ಕೊಂಡು ಅಸಹನೆ ವ್ಯಕ್ತಪಡಿಸುತ್ತಿದ್ದಳು. ಇದ್ಯಾವುದರ ಪರಿವೆ ಸರಿತಾಗೆ ಇರಲಿಲ್ಲ. ತನ್ನ ಓದಾಯಿತು, ವೀಣೆ ಸಂಗೀತವಾಯಿತು ಎಂದು ತನ್ನ ಪಾಡಿಗೆ ತಾನು ಇರುತ್ತಿದ್ದಳು. ಅವಾಗಾವಾಗ ತನ್ನ ಗುರು ಶ್ರೀಮತಿ ವಸುಂದರಾ ದೇವಿಯೊಡನೆ ಸಂಗೀತ ಕಛೇರಿಗೆ ಸಾಥ್ ನೀಡಲು ಹೋಗುತ್ತಿದ್ದಳು.

ಸುಜಾತ, ಸರಿತಳ ಮನೆಯ ಗೇಟ್ ತೆಗೆದು ಒಳಗೆ ಹೋಗುವುದಕ್ಕೂ, ಸರಿತಾಳ ಸೋದರತ್ತೆ ಕಲ್ಯಾಣಮ್ಮ ಗಿಡಗಳಿಗೆ ನೀರು ಹಾಕಲು ಉದ್ದನೆ ಪೈಪು ಹಾಗೂ ಬಕೆಟ್ ನೊಂದಿಗೆ ಹೊರಗೆ ಬರುವುದಕ್ಕೂ ಸರಿ ಹೋಯ್ತು.

"ಬಾರೇ ಸುಜಾತ... ಏನೇ ಬಾರೀ ಅಪರೂಪಕ್ಕೆ ನಮ್ಮ ಮನೆ ಕಡೆ ಬರ್ತಾ ಇದ್ಯಾ..ಅದೂ ಬೆಳ್ ಬೆಳಗ್ಗೆ" ಎಂದರು ಕುತೂಹಲದಿಂದ. ಕಲ್ಯಾಣಮ್ಮನ ಪ್ರಶ್ನೆಗೆ ಉತ್ತರಿಸದೆ ಸುಜಾತ "ಸರಿತಾ ಇದಾಳೇನು? ಕಾಲೇಜಿಗೆ ಈಗಾಗಲೇ ಹೊರಟೇ ಬಿಟ್ಟಳಾ?" ಎಂದು ಪ್ರಶ್ನೆ ಮಾಡುತ್ತಲೇ ನೇರ ಮನೆಯೊಳಗೇ ಹೋದಳು. ಉಪ್ಪರಿಗೆಯ ಮೆಟ್ಟಿಲನ್ನು ನಿಧಾನವಾಗಿ ಇಳಿದು ಬರುತ್ತಿದ್ದ ಸರಿತಾ ತನ್ನ ಉದ್ದ ಕೂದಲನ್ನು ಜಡೆ ಹೆಣೆದು ಮಲ್ಲಿಗೆ ಮಾಲೆಯನ್ನು ಇಳಿಬಿಟ್ಟಿದ್ದಳು.ತನ್ನ

ನಯವಾದ ತಿಳಿಗುಲಾಬಿ ಬಣ್ಣದ ರೇಷ್ಮೆ ಸೀರೆಯನ್ನು ಬಲಗೈಲಿ ಎತ್ತಿ ಹಿಡಿದು ತನ್ನ ಎಡಗೈಯಲ್ಲಿ ಪುಟಾಣಿ ಪರ್ಸನ್ನು ಎದೆಗವಚಿಕೊಂಡ ಸರಿತಾ ಲಕ್ಷಣವಾಗಿ ಕಾಣುತ್ತಿದ್ದಳು.

ತನ್ನನ್ನೇ ಎವೆಯಿಕ್ಕದೇ ನೋಡುತ್ತಿದ್ದ ಸುಜಾತಾಳನ್ನು "ಏನು ಸಮಾಚಾರ ಆಂಟಿ" ಅನ್ನುತ್ತಾ ಸರಿತಾ ಪ್ರಶ್ನಾರ್ಥಕವಾಗಿ ನೋಡಿದಳು.

"ಸಧ್ಯ! ಸರಿತಾ.. ನೀನಿನ್ನೂ ಮನೆಯಲ್ಲೇ ಇದ್ಯಲ್ಲೇ..ನವ್ಯಳ ಜೊತೆಗಾಯ್ತು ಬಿಡು. ಅವಳಿನ್ನೂ ಹೊರಡುತ್ತಿದ್ದಾಳೆ. ಒಟ್ಟಿಗೇ ಕಾಲೇಜಿಗೆ ಹೋಗ್ತೀರೇನಮ್ಮಾ" ಎಂದು ಸುಜಾತ ಸರಿತಾಳ ಉತ್ತರಕ್ಕೂ ಕಾಯದೇ ಬಂದ ದಾರಿಯಲ್ಲೇ ವಾಪಾಸು ಮನೆ ಕಡೆ ಧಾವಿಸಿದಳು. ಹೀಗೆ ಹಿಂದೆ ಹಲವು ಬಾರಿ ನಡೆದಿದ್ದರಿಂದ ಸರಿತಾಳಿಗೆ ಇದೇನೂ ಹೊಸದಾಗಿರಲಿಲ್ಲ.

"ಅಯ್ಯೋ... ಇದೇನಿದು... ಒಂದು ತೊಟ್ಟು ಕಾಫಿನಾದ್ರೂ ಕುಡ್ಕೊಂಡು ಹೋಗೋದಲ್ವೇನೇ ಸುಜೀ... ಇವಳದ್ದೇನು ಅವತಾರ..ಮನೆಯ ಹಿರಿಯಳಾಗಿ ನಾನು ಎದುರಿಗಿದ್ರೂ ಕಿವಿಗೆ ಹಾಕ್ಕೊಳ್ಳದೇ ಒಂದೂ ಮಾತಾಡದೇ ನೇರ ಬಿಟ್ಟ ಬಾಣದಂತೆ ಹೊರಟೇ ಬಿಟ್ಲಲ್ಲಾ... ಛೇ! ಸುಬ್ಬಜ್ಜಿ ಬಗ್ಗೆ ಕೇಳಬೇಕಾಗಿತ್ತು. ಹ್ಯಾಗಿದ್ದಾರೋ ಏನೋ... ಆ ಹಿರಿತಲೆ ಬಗ್ಗೆ ಇವರ್ಯಾರಿಗೂ ಕಾಳಜಿ ಇದ್ದ ಹಾಗೆ ಇಲ್ಲ. ಊರಿಡೀ ಸುಬ್ಬಜ್ಜಿಯ ಹುಚ್ಚಿನ ಬಗ್ಗೆ ಮಾತಾಡುತ್ತಿದ್ದರೆ ಇವಳಿಗೆ ತನ್ನ ಸುಂದರಾಂಗಿ ಮಗಳದ್ದೇ ಚಿಂತೆ! ಎತ್ತಾದ್ರೂ ಹೋಗ್ಲಿ. ಪುರುಸೊತ್ತಾದಾಗ ನಾನೇ ಆ ಕಡೆ ಹೋಗಿ ಸುಬ್ಬಜ್ಜೀನ ವಿಚಾರಿಸಿಕೊಳ್ತೀನಿ ಎಂದುಕೊಂಡಳು ಕಲ್ಯಾಣಮ್ಮ.

ಪಾಪ... ಸುಬ್ಬಜ್ಜಿ... ಕೈಲಾಗದ ಮುದುಕಿ... ಆದರೂ ಗಟ್ಟಿ ಶರೀರ... ಬಾವಿಯಿಂದ ಬಿಂದಿಗೇಲಿ ನೀರು ಸೇದೋದು ನೋಡಿದ್ರೆ ಗೊತ್ತಾಗುತ್ತೆ.ಹೆಂಗೆ ನೀರು ಎಳೆದೆಳೆದು ಹಂಡೆ ತುಂಬಿಸ್ತಾರೇಂತ...

ಇವತ್ತು ಸಾಯಂಕಾಲವೇ ಬೆಳಗಿನ ದೋಸೆಗೆ ಅರೆದಿಟ್ಟು ಒಂದು ಘಳಿಗೆ ಹೋಗಿ ಸುಬ್ಬಜ್ಜೀನ ನೋಡಿಕೊಂಡು ಬರುವುದೆಂದು ನಿರ್ಧರಿಸಿದಳು. ಎಷ್ಟೆಂದರೂ ಸುಬ್ಬಜ್ಜಿ ನನ್ ಭಾವನ ಕಡೆ ಸಂಬಂಧಿಯೇ ತಾನೇ. ಹೇಗಿದ್ರೂ ಮನೇಲೇ ಮಾಡಿದ ನಾಲ್ಕು ಅಥ್ರಸ ಕೋಡುಬಳೆ ಇದೆ ಕೊಟ್ರಾಯ್ತು. ಪಾಪ ಸುಬ್ಬಜ್ಜೀಗೆ ಮಾತ್ರಾ ಇನ್ನೂ ಅಡುಗೆ ಮನೆಯಿಂದ ಬಿಡುಗಡೆ ಸಿಕ್ಕಿಲ್ಲ. ಸುಜಾತ ಆಗಲಿ ಅವಳ ಮಗಳಾಗಲೀ ಅಡಿಗೆ ತಿಂಡಿ ಊಟ ಅಂತ ಆಕಡೆ ತಲೆ ಹಾಕುವವರೇ ಅಲ್ಲ. ಹೀಗೆ ಹೋಗಿ ಹಾಗೆ ಊರೆಲ್ಲಾ ಸುತ್ತು ಹಾಕಿಕೊಂಡು ಬನ್ರೇ ಅಂದ್ರೆ ಸಾಕು ಕುಣ್ಕೊಂಡು ಹೋಗಿ ಹೇಳಿದ್ದನ್ನು ಮಾಡಿ ಪೂರೈಸುವವರೇ.ತನ್ನ ಆಲೋಚನೆ ಬಗ್ಗೆ ತನಗೇ ನಗು ಬಂತು ಕಲ್ಯಾಣಮ್ಮಗೆ.

ಸುಹಾಸನಂತೂ ತೀರಾ ಸಾಧು. ಕೊಟ್ಟಿಗೆಯ ಹಸುವಾದರೂ ಅಂಬಾ ಅಂತ

ಕೂಗೀತು. ಸುಹಾಸ ಗಟ್ಟಿಯಾಗಿ ಮಾತಾಡಿದ್ದು ಯಾರೂ ನೋಡಿಲ್ಲ. ಹೋಗ್ಲಿ, ನನಗ್ಯಾಕೆ ಅವರ ಉಸಾಬರಿ. ಧಂಡಿಯಾಗಿ ಅವನಿಗೆ ಸಂಬಳ ಬರುತ್ತೆ. ಇನ್ನೇನು ಕಡಿಮೆಯಾಗಿದೆ ಅವರಿಗೆ. ಹೀಗೆ ಯೋಚನೆ ಮಾಡುತ್ತಲೇ ಕಲ್ಯಾಣಮ್ಮ ಗಿಡಗಳಿಗ ನೀರುಣಿಸಿ ಪೈಪು ಬಕೆಟ್ ಎತ್ತಿಕೊಂಡು ಮನೆಯೊಳಗೆ ನಡೆದರು.

ಇವತ್ತು ಶನಿವಾರ ಅರ್ಧ ದಿನಕ್ಕೆ ಶಾಲೆ ಮುಗಿಯುತ್ತೆ.ಹೇಗೂ ಸುಗುಣ ಮಧ್ಯಾಹ್ನ ಮೇಲೆ ಮನೆಯಲ್ಲೇ ಇರ್ತಾಳೆ, ಸುಬ್ಬಜ್ಜಿಯನ್ನು ನೋಡ್ಕೊಂಡು ಬರಕ್ಕೆ ಅನುಕೂಲ ಅಗುತ್ತೆ ಅಂತ ಲೆಕ್ಕ ಹಾಕಿದ ಕಲ್ಯಾಣಮ್ಮ ಸೀದಾ ಅಡುಗೆಮನೆ ಹೊಕ್ಕಳು. ಬೆಳಗಿನ ಉಪ್ಪಿಟ್ಟು ಅಲ್ಪ ಸ್ವಲ್ಪ ಅಲ್ಲೇ ಕೂತಿತ್ತು. ಸುಗುಣಳ ಡಬ್ಬಿ ತುಂಬುವ ಕೆಲಸ ಇವತ್ತಿಲ್ಲ. ನಾಳೆ ಭಾನುವಾರ ಬೇರೆ ರಜಾ ಇದೆ.ಆದ್ರೂ ಬರೆಯೋದು ಓದೋದು ಮಕ್ಕಳಿಗೆ ಪಾಠ ಪ್ರವಚನಕ್ಕೆ ತಯಾರಿ ಮಾಡೋದು ಅವಳಿಗೆ ಇದ್ದೇ ಇರುತ್ತಿತ್ತು. ಮಗ ಕಿಶೋರ ಕೆಲಸದ ಮೇಲೆ ಬೆಂಗಳೂರಿಗೆ ಹೋಗಿದ್ದಾನೆ. ಇನ್ನು ಬರುವುದು ಯಾವಾಗಲೋ. ಇಂಥ ದಿನ ಅಂತ ಇಲ್ಲ.. ನಿಗದಿತ ಕೆಲಸ ಇಲ್ಲದ ಕಿಶೋರ ಇತ್ತೀಚೆಗೆ ಹೋಲ್ ಸೇಲ್ ಅಕ್ಕಿ ವ್ಯಾಪಾರ ಶುರುಮಾಡಿದ ಮೇಲೆ ಇನ್ನಿಲ್ಲದ ತಿರುಗಾಟ ಶುರುಮಾಡ್ಕೊಂಡಿದ್ದ. ಪಾಪ ಅನಿಸ್ತಾ ಇತ್ತು ಮಗನ ಬಗ್ಗೆ. ಹೊತ್ತೊತ್ತಿಗೆ ಏನು ತಿನ್ನುತ್ತೋ ಬಿಡುತ್ತೋ.. ತಲೇಗೆ ಎಣ್ಣೇನೂ ಇಲ್ದೆ ಈ ಬಿಸಿಲಲ್ಲಿ ತಿರುಗಾಡಿ ಖಾಯಿಲೆಬಿದ್ರೆ ಏನುಗತಿ ಎಂಬ ಭಯ ಕಲ್ಯಾಣಮ್ಮನನ್ನು ಕಾಡುತ್ತಿತ್ತು.

ಶಾಲಾ ಶಿಕ್ಷಕಿಯಾಗಿದ್ದ ಸುಗುಣ ಈಗ ಇದೇ ಊರಿಗೆ ವರ್ಗವಾಗಿ ಬಂದ ಮೇಲೆ ನನಗೊಂದಿಷ್ಟು ನೆಮ್ಮದಿ. ಇಲ್ಲಾಂದ್ರೆ ನಾನು... ಆ ಮಗು ಸರಿತಾ... ಇಬ್ರೇ ಇರಬೇಕಿತ್ತು. ಸುಗುಣ ಮಾತ್ರಾ ಗಂಡ ಯಾವಾಗ ಬರುವನೋ ಎಂದು ಕಾಯುತ್ತಿದ್ದರೂ. ನಂಗೆ ಫೋನ್ ಮಾಡಿಕೊಡುತ್ತಾ "ನೋಡಿ ನಿಮ್ಮ ಮಗ ಮಾತಾಡ್ತಿದಾರೆ ಫೋನ್ ತಗೊಳ್ಳಿ ಅತ್ತೆ" ಅಂತ ಮೊಬೈಲನ್ನು ನನ್ನ ಕೈಗಿರಿಸಿ ತನ್ನ ಕೆಲಸ ಮಾಡಲು ತೊಡಗುವಳು.

ಸೋದರ ಸೊಸೆ ಸರಿತಾಳ ಬಗ್ಗೆ ಸುಗುಣಳಿಗೂ ಅಕ್ಕರೆ. ಇಬ್ಬರೂ ಒಂದೇ ರೂಮಿನಲ್ಲಿ ಕೂತುಕೊಂಡು ತಮ್ಮ ತಮ್ಮ ಪಾಠ ಪ್ರವಚನ ಬರವಣಿಗೆಯಲ್ಲಿ ತೊಡಗಿಸಿಕೊಳ್ಳುವರು. ಮಧ್ಯೆ ಮಧ್ಯೆ ಇಬ್ಬರೂ ತಮ್ಮ ತಮ್ಮ ದಿನಚರಿಯನ್ನು ಉತ್ಸಾಹದಿಂದ ಹೇಳಿಕೊಳ್ಳುವರು. ಮದುವೆಯಾಗಿ ಮೂರುವರ್ಷವಾದರೂ ಮಕ್ಕಳಾಗದ ಸುಗುಣಳಿಗೆ ಶಾಲೆ ಕೆಲಸದಿಂದಾಗಿ ತನ್ನ ಬಗ್ಗೆ ಚಿಂತಿಸಲು ಸಮಯವೇ ಇರಲಿಲ್ಲ. ಗಂಡನ ಬಳಿ ಮಾತನಾಡಲೂ ಮನಸ್ಸಾಗುತ್ತಿರಲಿಲ್ಲ. ಪಾಪ ವಾರವಿಡೀ ಹೊರಗೆ ದುಡಿದು ಹಣ್ಣಾಗಿ ಬರುತ್ತಿದ್ದ ಕಿಶೋರನ ಬಳಿ ಇವನ್ನೆಲ್ಲಾ ಹೇಳಲಾಗುತ್ತಿರಲಿಲ್ಲ. ಆದ್ರೆ ಕಲ್ಯಾಣಮ್ಮ ಮಾತ್ರಾ ಒಳಗೊಳಗೇ ಕೊರಗುತ್ತಿದ್ದರು.

ಒಂದು ಮಗು ಅಂತ ಆದ್ರೆ ರಾಮಾ ಕೃಷ್ಣಾ ಅಂತ ಹಾಯಾಗಿ ಮಗು ನೋಡ್ಕೊತ ಇರಬಹುದಿತ್ತು ಎನ್ನುವ ಆಸೆ ಆವಾಗಾವಾಗ ಚಿಗುರುತ್ತಿತ್ತು. ಮೂಲೆ ಮನೆ ಶೇಷಮ್ಮ ಹೇಳಿದಳೂಂತ ಶಕಟಮರದ ಸಂತಾನ ಗೋಪಾಲಕೃಷ್ಣನಿಗೆ ಹರಕೆ ಹೊತ್ತಿದ್ದೂ ಆಗಿತ್ತು. ನಂಬುವ ದೇವರು ಎಂದೂ ಕೈ ಬಿಡಲಾರ ಎಂಬ ಬಲವಾದ ನಂಬಿಕೆಯಿಂದ ಕಲ್ಯಾಣಮ್ಮ ನಿತ್ಯವೂ ಸಾಯಂಕಾಲ ದೇವರ ದೀಪ ಹಚ್ಚಿ ಕೃಷ್ಣನ ಫೋಟೋವನ್ನು ಮುಟ್ಟಿ ಕಣ್ಣಿಗೊತ್ತಿಕೊಳ್ಳುವುದನ್ನು ಬಿಡುತ್ತಿರಲಿಲ್ಲ.

ಇತ್ತ ಗೋಪಾಲ ಭಟ್ಟರು ಪೌರೋಹಿತ್ಯಕ್ಕೆಂದು ಹೊರಟರೆ 2–3 ದಿನ ಬರುತ್ತಿರಲಿಲ್ಲ. ಈ ವಯಸ್ಸಿನಲ್ಲಿ ಎಂಥಾ ತಿರುಗಾಟ. ಮನೇಲೇ ಜಪ ತಪ ಅಂತ ಕೂರಬಾರದೇ ಎಂಬ ಕಲ್ಯಾಣಿಯ ಮಾತನ್ನು ನಯವಾಗಿ ತಳ್ಳುತ್ತಲೇ ಜಕ್ಕಾರು ಕುಡಿಗೆಯ ರಾಮಕೃಷ್ಣ ಭಟ್ಟರ ಕಾರು ಹೊರಡುವಲ್ಲಿಗೆ ತಾವೂ ಕಾರು ಹತ್ತಿ ಕೂತೇ ಬಿಡುತ್ತಿದ್ದರು. ಮೊದಲಿನ ಹಾಗೆ ಈಗ ಬೆಟ್ಟ ಗುಡ್ಡ ಕಾಡು ಮೇಡು ಹಳ್ಳ ಹೊಳೆ ದಾಟಿ ಪೌರೋಹಿತ್ಯಕ್ಕೆ ಹೋಗೋ ಕಷ್ಟ ಇಲ್ಲ.ಆದರೆ ಹೊತ್ತು ಹೊತ್ತಿಗೆ ಊಟ ಇಲ್ಲ. ಹೋಮದ ಹೊಗೆ ಬೇರೆ.ಮೊದಲೇ ದಮ್ಮು ಬೇರೆ. ಈ ವಯಸ್ಸಿನಲ್ಲಿ ಯಾಕಿದೆಲ್ಲಾ... ಅಂತ ಕಲ್ಯಾಣಮ್ಮ ಹೇಳ್ತಿದ್ರೂ ರಾಮಕೃಷ್ಣ ಭಟ್ಟರು ಗೋಪಾಲ ಭಟ್ಟರನ್ನು ಜೊತೆ ಮಾಡಿಕೊಂಡು ಹೊರಟೇ ಬಿಡುತ್ತಿದ್ದರು. 'ಕೈ ಕೆಲಸಕ್ಕೆ ಬೇಕು ಕಲ್ಯಾಣಮ್ಮ. ನಿಮ್ಮೆಜಮಾನ್ರನ್ನ ಜಾಗ್ರತೆಯಾಗಿ ಕರೆತಂದು ಬಿಡುವ ಕೆಲಸ ಮಾತ್ರಾ ನಂದೇ' ಎಂದು ವೀಳೆಯದೆಲೆಯ ರಸವನ್ನು ಪಿಚಕ್ಕನೆ ತೆಂಗಿನಮರದ ಬುಡಕ್ಕೆ ಉಗಿಯುತ್ತಾ 'ಕಾಫಿ ತರುತ್ತೇನೆ' ಎಂದು ಹೇಳಿದರೂ ಕೇಳದೇ ರೊಂಯ್ಯನೆ ಹೊರಟು ಬಿಡುತ್ತಿದ್ದರು. ಪೀಚು ಶರೀರದ ಗೋಪಾಲ ಭಟ್ಟರ ಸ್ವಲ್ಪ ಬಾಗಿದ ಬೆನ್ನನ್ನೇ ನೋಡುತ್ತಾ ಕಲ್ಯಾಣಮ್ಮ ಕಣ್ಣಲ್ಲೇ ಬೀಳ್ಕೊಡುತ್ತಾ ತಾವು ರಾಮಾ ಕೃಷ್ಣಾ ಅಂತ ಜಪ ಶುರು ಮಾಡೇ ಬಿಡುವರು.

ಆವಾಗಾವಾಗ ಸುಬ್ಬಜ್ಜಿಯ ಬಗ್ಗೆ ರಸವತ್ತಾದ ಕತೆ ತಂದು ಒಪ್ಪಿಸುವ ಗೋಪಾಲ ಭಟ್ಟರು ದೂರದ ಸಂಬಂಧಿ ಸುಬ್ಬಜ್ಜಿಯ ಬಗ್ಗೆ ಕನಿಕರವನ್ನೇನೋ ಹೊಂದಿದ್ದರು.ಆದರೆ ತಾನೇನೂ ಮಾಡಲಾಗದೆ ಹೊಟ್ಟೆಯಲ್ಲಿ ಹುಟ್ಟಿದ ಮಗ ಸುಹಾಸನೇ ಜವಾಬ್ದಾರಿ ಹೊರಬೇಕಾಗಿರುವುದರಿಂದ ಸುಮ್ಮನೆ ಮಾತಾಡಿ ಉಸಿರು ಯಾಕೆ ಹಾಳುಮಾಡಿಕೊಳ್ಳೇಕೂಂತ ಬಾಯಿ ಮುಚ್ಚಿಕೊಂಡಿರುತ್ತಿದ್ದರು. ಕಲ್ಯಾಣಿಯುನ್ನು ಮದುವೆಯಾಗುವುದಕ್ಕಿಂತ ಮೊದಲು ಸುಬ್ಬಜ್ಜಿಯ ಮಗಳು ರೂಪವತಿಯಾದ ಸುಮಳನ್ನು ಮದುವೆಯಾಗಬೇಕೆಂಬ ಆಸೆಯನ್ನು ಹೊಂದಿದ್ದ ಗೋಪಾಲರಾಯರು, ಪುರೋಹಿತನೆಂಬ ಒಂದೇ ಕಾರಣಕ್ಕೆ... ಹೆಣ್ಣು ಕೊಡದೆ ತಿರಸ್ಕರಿಸಿದ ಸುಬ್ಬಜ್ಜಿಗೆ ಹೀಗೇ ಆಗಬೇಕೆಂದು ಅಂಗೈಗೆ ಹೊಗೆಸೊಪ್ಪು ಸುಣ್ಣ ಹಾಕಿ ತಿಕ್ಕುತ್ತಿದ್ದರು. ಬಾಯಲ್ಲಿದ್ದ ಅಡಿಕೆ ಕಟಕಟ ಎಂದು ಆ ಕಡೆ ಈ ಕಡೆ

ಹೊಯ್ದಾಡಿತೆಂದರೆ ಗೋಪಾಲರಾಯರು ಬಹಳ ಆಳವಾಗಿ ಆಲೋಚನೆ ಮಾಡುತ್ತಿದ್ದಾರೆ ಎಂದೇ ಉಳಿದವರು ಅಂದುಕೊಳ್ಳುತ್ತಿದ್ದರು. ಹೆಂಡತಿನ ಸಾಕುವಷ್ಟು ತಾಕತ್ತು ತನಗೆ ಇರಲಿಲ್ಲವೇ... ಪೌರೋಹಿತ್ಯದಿಂದ ಅಕ್ಕಿ ತೆಂಗಿನಕಾಯಿ ದಕ್ಷಿಣೆ ಬಟ್ಟೆ ಬರೆ... ಇನ್ನೇನು ಬೇಕಿತ್ತು ಇವ್ರಿಗೆ..ಆಗಿದ್ದೆಲ್ಲಒಳ್ಳೇದಕ್ಕೆ. ನಾನು ಅವಳನ್ನು ಮದುವೆಯಾಗದೇ ಉಳಿದದ್ದು ಒಳ್ಳೆದಾಯ್ತು.ನನ್ನ ಗ್ರಹಚಾರ ಕೆಟ್ಟು ಮತ್ತೆ... ಹೀಗೆ ಏನೇನೋ ಯೋಚಿಸುತ್ತಾ ಇದ್ರೂ ಇವತ್ತಿನವರೆಗೆ ಕಲ್ಯಾಣಿಗೆ ಅವರ ಮನಸ್ಸಿನ ವಿಚಾರ ಹೇಳಿರಲಿಲ್ಲ. ಹೇಳಕ್ಕೇನು ಉಳಿದಿದೆ. ಸುಬ್ಬಜ್ಜಿಗೂ ಈಗ ಪಶ್ಚಾತ್ತಾಪ ಆಗಿರಬಹುದು. ಅವರ ಕಣ್ಣೆದುರೇ ನಾನು ರಾಜನ ಹಾಂಗೆ ತಿರುಗಾಡುತ್ತಿರೋದು ನೋಡಿ ತಲೆ ಕೆಟ್ಟು ಹೋಗದೇ ಇರುತ್ಯೇ. ನನಗೂ ಒಳ್ಳೆ ಹೆಂಡತಿ ಮಕ್ಕಳು ಮರಿಮಕ್ಕಳು ಎಲ್ಲಾ ಆಗಿದ್ದು ನೋಡಿ ಸುಬ್ಬಜ್ಜಿಗೆ ಹುಚ್ಚು ಹಿಡಿದಿರಬೇಕು..ಒಳಗೊಳಗೇ ನಕ್ಕರು ಗೋಪಾಲ ಭಟ್ಟರು.

ಒಳಗಿಂದ ಕಲ್ಯಾಣಮ್ಮ ಒಂದೇಸಮನೆ "ಇವ್ರೇ ಇವ್ರೇ ಊಟಕ್ಕೆ ಬನ್ನಿ ತಟ್ಟೆ ಹಾಕಿಯಾಗಿದೆ" ಎಂದು ಕರೆದಾಗಲೇ ವಾಸ್ತವ ಪ್ರಪಂಚಕ್ಕೆ ಬಂದ ಗೋಪಾಲ ಭಟ್ಟರು, ಮೊಸರನ್ನ ಜೀರಿಗೆ ಮಾವಿನಮಿಡಿ ಉಪ್ಪಿನಕಾಯಿಯ ರುಚಿ ನೆನೆದೇ ತಟ್ಟೆ ಮುಂದೆ ಕೂತರು.

ಆ ಸಂಜೆ ಕಲ್ಯಾಣಮ್ಮ ಸುಬ್ಬಜ್ಜಿಯನ್ನು ನೋಡಲು ಬಂದೇಬಿಟ್ಟರು. ಕೈಯಲ್ಲಿದ್ದ ನಾಲ್ಕು ಕೋಡುಬಳೆ ಅಥ್ರಸ ಸುಬ್ಬಜ್ಜಿಗೆ ಕೊಟ್ಟಾಗಲೇ ಕಲ್ಯಾಣಮ್ಮಗೆ ಸಮಾಧಾನ. ಎಷ್ಟೆಂದರೂ ಹಿರಿತಲೆ. ಅವರ ಕಾಲಿಗೆ ನಮಸ್ಕಾರ ಮಾಡುತ್ತಲೇ ಉಸ್ಸಪ್ಪ ಅಂತ ಸುಬ್ಬಜ್ಜಿ ಕೊಟ್ಟ ಮಣೆ ಮೇಲೆ ಕೂತೇ ಬಿಟ್ರು ಕಲ್ಯಾಣಮ್ಮ. ಸ್ವಲ್ಪ ಧಡೂತಿ ದೇಹವಾದರೂ ಲಕ್ಷಣವಾದ ಹೆಂಗಸು. ಕಲ್ಯಾಣಿ ಬಂದು ಬಿಟ್ರೆ ಸುಬ್ಬಜ್ಜಿಗೆ ಉಲ್ಲಾಸವೆನಿಸುತ್ತಿತ್ತು.

ನೀರು ಕೊಡಲೇನೆ ಕಲ್ಯಾಣಿ.. ಕಾಫಿ ಬೆರೆಸಿ ಕೊಡ್ಲಾ ಅಂತ ತಾವು ಕುಳಿತ ಮಣೆಯಿಂದ ಏಳಲು ಅನುವಾದರು. ಅವರ ಕೈಹಿಡಿದು ಮತ್ತೆ ಕೂರಿಸಿದ ಕಲ್ಯಾಣಮ್ಮ "ದಿನವಿಡೀ ಕಾಫಿ ಕಷಾಯ ಬಿಸಿನೀರು ಬಾಯಾರಿಕೆ ಕುಡಿಯುವುದು ಇದ್ದೇ ಇದೆ. ಹಾಗಾಗಿ ನಿಮ್ಮ ಜೊತೆ ನಾಲ್ಕು ಮಾತಾಡಿ ಹೋಗೋಣಾಂತ ಬಂದೆ ಸುಬ್ಬಜ್ಜಿ. ನಮ್ಮ ಮನೆಯಲ್ಲಿ ಇವತ್ತು ಸುಗುಣ ಬೇರೆ ಇದ್ದಾಳೆ ಹಾಗಾಗಿ ಒಂದರ್ಧ ಗಂಟೆ ಹೆಚ್ಚುಕಡಿಮೆಯಾದರೂ ಪರವಾಗಿಲ್ಲ. ಬನ್ನಿ ಕೂತ್ಕೊಂಡು ಒಂದಷ್ಟು ಮಾತಾಡೋಣ" ಎಂದ್ರು ಕಲ್ಯಾಣಮ್ಮ "ನೀವು ಹೇಗಿದ್ರಿ ಸುಬ್ಬಜ್ಜಿ.ಊಟ ಗೀಟ ಆಯ್ತಾ ಆರಾಮ ಇದೀರಾ ತಾನೇ.. ಕೊಟ್ಟಿಗೇಲಿ ದನಕರುಗಳು ಚೆನ್ನಾಗಿದಾವಾ..." ಪ್ರಶ್ನಿಸಿದರು ಕಲ್ಯಾಣಮ್ಮ. "ಹೂಂ ಕಣೆ ಕಲ್ಯಾಣಿ... ಎಲ್ರೂ ಆರಾಮಾನೆ. ಕೊಟ್ಟಿಗೇಲಿ ಗಬ್ಬದ ದನ ಇವತ್ತೋ ನಾಳೆನೋ ಕರು ಹಾಕೋ ಹಂಗಿದೆ ಅಷ್ಟೇ..

ಕೆಲಸದ ನಿಂಗಿಗೆ ದಿನಕ್ಕೆ ಎರಡು ಮೂರು ಸರ್ತಿ ಕೊಟ್ಟಿಗೆ ನೋಡ್ಕೊಂಡು ಬರಕ್ಕೆ ಹೇಳ್ತಾನೆ ಇರ್ತೀನಿ. ಏನು ಮಾಡುತ್ತೋ ಹೆಂಗಸು... ಇತ್ತೀಚೆಗೆ ಕಾಲು ಗಂಟುಗಳು ನೋವು ಶುರುವಾಗಿದೆ... ನನಗೆ ಏನು ಮಾಡ್ತೀನೋ.. ಬಿಡ್ತೀನೋ ಒಂದೂ ಗೊತ್ತಾಗಲ್ಲ... ಹೂಂ ಅಷ್ಟಕ್ಕೂ ನಂಗೂ ಬೇರೆ ಕೆಲಸವಾದ್ರೂ ಏನಿದೆ? ಅಡುಗೆ ಊಟ ದನಕರು ಬೆಕ್ಕು ನಾಯಿ ಇಷ್ಟೇ ತಾನೇ ನನ್ ಪ್ರಪಂಚ" ಎಂದ ಸುಬ್ಬಜ್ಜಿಯನ್ನು ಕಲ್ಯಾಣಮ್ಮ ಅಚ್ಚರಿಯಿಂದ ನೋಡಿದ್ರು. ಸಣ್ಣ ಸಣ್ಣ ಕೆಲಸ ಮಾಡೋಕೇ ನಾವು ಎಷ್ಟು ಒದ್ದಾಡ್ತೀವಿ. ಇದನ್ನೆಲ್ಲಾ ಮಾಡಿಕೊಂಡು ಹೋಗೋ ಸುಬ್ಬಜ್ಜಿ ನಿಜವಾಗಲೂ ಗಟ್ಟಿಗಿತ್ತಿಯಪ್ಪ ಅಂತ ಅಂದುಕೊಂಡರು ಕಲ್ಯಾಣಮ್ಮ. ಇಬ್ಬರ ಮಾತುಕತೆ ನಡೆಯುತ್ತಿರುವಾಗಲೇ ಬಿಸಿಲು ಮಚ್ಚಿನಲ್ಲಿ ಮಲಗಿದ್ದ ಬೆಕ್ಕು ಮಿಯಾಂ ಮಿಯಾಂ ಅಂತ ಕೆಳಗೆ ಬಂದು ಸೀದಾ ತನ್ನ ಖಾಯಂ ಊಟ ಹಾಕುವ ಜಾಗಕ್ಕೆ ಹೋಗಿ ತಟ್ಟೆ ಮೂಸಿ ನೋಡಿತು. ಊಹೂಂ... ಏನೂ ಇರಲಿಲ್ಲ. ಖಾಲಿ ಬಟ್ಟಲು ನೋಡಿದ್ದೇ ಬೆಕ್ಕು ಸುಬ್ಬಜ್ಜಿಯ ಕಾಲಿಗೆ ತನ್ನ ಮೈಯನ್ನು ತಿಕ್ಕಲು ಶುರುಮಾಡಿತು. "ಒಂದು ಘಳಿಗೆ ಸುಮ್ನೆ ಕೂರಕ್ಕೆ ಬಿಡ್ತಾವ ಇವುಗಳು.. ಇಡೀ ದಿನ ಇವುಗಳ ಸೇವೆ ಮಾಡೋದೇ ಸರಿಯಾಗುತ್ತೆ" ಎಂದು ನಿಧಾನವಾಗಿ ಕೂತಲ್ಲಿಂದ ಎದ್ದು ಬೆಕ್ಕಿಗಷ್ಟು ಹಾಲನ್ನು ಹಾಕಿ ಹಾಗೆಯೇ ಕಲ್ಯಾಣಮ್ಮಗೂ ತನಗೂ ಒಂದಷ್ಟು ಕಾಫಿ ಬೆರೆಸಿ ಬಿಸಿಬಿಸಿಯಾಗಿ ಕಲ್ಯಾಣಮ್ಮಗೂ ಕೊಟ್ಟು ತಾವೂ ಕುಡಿತಾ ಕೂತ್ರು. ಬೇಕಾದಷ್ಟು ಹಾಲು ತುಪ್ಪ ಮೊಸರು ಬೆಣ್ಣೆ ಇರೋ ಮನೆ. ಯಾವುದಕ್ಕೂ ಕಮ್ಮಿ ಇಲ್ಲ. ನನಗೂ ಒಂದೆರಡು ಸರ್ತಿ ಪೂಜೆ-ಪುನಸ್ಕಾರಕ್ಕೆ ಅಂತ ಒಂದೆರಡು ಸೊಲಿಗೆ ತುಪ್ಪ ಕೊಟ್ಟಿದ್ರಲ್ಲ ಸುಬ್ಬಜ್ಜಿ. ನೈವೇದ್ಯಕ್ಕೆ ಅಂತ ಎಷ್ಟು ಸರ್ತಿ ದನದ ಹಾಲು ತಗೊಂಡು ಬಂದಿದ್ದಾಳೆ ಸರಿತಾ ಹೋಗಿ. ಆಗೆಲ್ಲಾ ಸರಿತಾ ದುಡ್ಡು ಕೊಡಲು ಹೋಗಿ ಅಜ್ಜಿಯಿಂದ ಬೈಸಿಕೊಂಡಿದ್ದಾಗಿತ್ತು.

"ನಿಮಗಂತೂ ಒಂದು ಘಳಿಗೆ ಪುರುಸೊತ್ತು ಇಲ್ಲ ಅಲ್ವಾ ಸುಬ್ಬಜ್ಜಿ?" ಎಂದು ಅಭಿಮಾನದಿಂದ ಅವರೆಡೆಗೆ ನೋಡಿದರು ಕಲ್ಯಾಣಮ್ಮ. "ಯಾವ ಕೆಲಸ ಮಾಡದಿದ್ರೂ ನಡೆಯುತ್ತೆ ಆದರೆ ಇವುಗಳ ಕೆಲಸ ಮಾತ್ರ ಹೊತ್ತೊತ್ತಿಗೆ ಮಾಡ್ಸಿಕೊಳ್ತವೆ. ಕೂಗಿಯೋ ಕಿರುಚಿಯೋ ಏನೋ ಒಂದು ಗಲಾಟೆ ಮಾಡೇ ಹೊಟ್ಟೆ ತುಂಬಿಸಿಕೊಳ್ತಾವೆ. ಸುಬ್ಬಜ್ಜಿ ಹೇಳ್ತಾನೇ ಇದ್ರು. ಬೆಕ್ಕಿನ ಬಟ್ಟಲಿಗೆ ಹಾಲು ಸುರಿಯುವಾಗಲೂ ನಂಜೊತೆ ಮಾತಾಡಿದಂತೆ ಏನೋ ಮಾತಾಡ್ತಾನೆ ಇದ್ರು. ಹಾಗೇ ಮಾತಾಡ್ತಾ ಮಾತಾಡ್ತಾನೇ ನಿಧಾನವಾಗಿ ಕೊಟ್ಟಿಗೆ ಕಡೆ ಹಣಿಕಿ ಬಂದೇ ಬಿಟ್ರು. ಒಟ್ನಾರೆ ಈ ಸುಬ್ಬಜ್ಜಿ ಒಂದು ಘಳಿಗೆ ಕೂತಲ್ಲಿ ಕೂರುವವರಲ್ಲ. ಕೊಟ್ಟಿಗೆಗೆ ಹೋಗಿ ಹಾಗೇ ಬಂದ್ರೇನು? ಊಹೂಂ... ಅಲ್ಲೂ ಗಂಗೆ-ಗೌರಿ ರಾಮನ ಮಾತಾಡ್ಸಿ ಒಳಗೆ ಬಂದಿದ್ದು ಅದೇನು ಪ್ರೀತಿನೋ ಮರುಳೋ ಒಂದೂ

ಅರ್ಥವಾಗಲ್ಲ ಅಂತ ಕಲ್ಯಾಣಮ್ಮ ಸುಬ್ಬಜ್ಜಿ ಹೋದೆಡೆಯೆಲ್ಲಾ ಹಿಂದೆ ಮುಂದೆ ಓಡಾಡ್ತಾ ಮಾತಾಡುತ್ತಲೇ ಇದ್ದರು. 'ಇಷ್ಟು ಪೇಟೆ ಮನೇಲೂ ಈ ತರ ದನಕರು ಅಂತ ಕಟ್ಟಿಕೊಂಡಿರೋದು ನಿಮ್ಮನೇಲಿ ಮಾತ್ರ ಸುಬ್ಬಜ್ಜಿ. ನೀವ್ ಆಗಿದ್ದಕ್ಕೆ ಇದೆಲ್ಲಾ ಮಾಡ್ತಿದೀರಿ. ಬೇರೆ ಯಾರ ಕೈಯಲ್ಲಿ ಆಗದ ಮಾತು ಬಿಡಿ' ಅಂತ ಕಲ್ಯಾಣಮ್ಮ ಸುಬ್ಬಜ್ಜಿಯ ಸಾಹಸವನ್ನು ಮೆಚ್ಚಿಕೊಳ್ತಿದ್ರು.

ಈ ನಡುವೆ ಸುಹಾಸ ಸುಬ್ಬಜ್ಜಿಯನ್ನು ಮನೋವೈದ್ಯರ ಬಳಿ ಕರೆದುಕೊಂಡು ಹೋಗುವ ವಿಚಾರ ಹೇಗೋ ಕಲ್ಯಾಣಮ್ಮನ ಕಿವಿಗೆ ಬಿದ್ದಿತ್ತು. ಇಷ್ಟು ವೈನಾಗಿ ಕೆಲಸಕಾರ್ಯ ಮಾಡಿಕೊಂಡು ಗಟ್ಟಿಮುಟ್ಟಾಗಿರುವ ಹೆಂಗ್ಸಿಗೆ ಎಂಥಾ ಕಾಯಿಲೆ! ಯಾರೂ ನಂಬಲಿಕ್ಕಿಲ್ಲ... ಆದರೆ ಸುಬ್ಬಜ್ಜಿ ಮನೇಲಿ ಒಂಥರಾ ಇದ್ದರೆ ಹೊರಗೆ ಹೋದಲ್ಲಿ ಮತ್ತೊಂಥರಾ ಇರ್ತಾಳೆ ಅಂತ ನೋಡಿದವರೆಲ್ಲ ಪುಕಾರು ಮಾಡಿಕೊಂಡು ತಿರುಗುತ್ತಿದ್ರು. ಅದೇನಾಗುತ್ತೋ ನಾಕಾಣೆ. ದೇವಸ್ಥಾನಕ್ಕೆ ಹೋಗಿ ನಾಗರ ಕಲ್ಲಿಗೆ ಸುತ್ತಿ ಬರಲಿ, ಅಶ್ವತ್ಥಮರ ಇರಲಿ, ಮೂರು ಸುತ್ತು ಹಾಕಿ ಸುಮ್ಮನೆ ಬರುವುದು ಬಿಟ್ಟು ಅಲ್ಲೆಲ್ಲಾ ಏನೇನೋ ಮಾತಾಡ್ತಾ ನಿಂತಿರುತ್ತಾರೆ ಅಂತ ಊರೆಲ್ಲಾ ಸುದ್ದಿಯಾಗಿತ್ತು ಇವರಿಗೇನಾಗಿದೆ? ಘಳಿಗೆಗೆ ಒಂದೊಂದು ರೂಪ ಯಾಕೆ ತಾಳ್ತಾರೆ, ಈ ಸುಬ್ಬಜ್ಜಿ? ಮರ ಕಲ್ಲು ಬಾವಿ ಗೋಡೆ ಹತ್ರ ಎಲ್ಲಾ ಮಾತಾಡಕ್ಕೆ ಏನು ಇರುತ್ತೆ.. ಆಶ್ಚರ್ಯವಾಗುತ್ತಿತ್ತು ಕಲ್ಯಾಣಮ್ಮಂಗೆ.. ಆದರೆ ಯೌವನದಲ್ಲಿದ್ದ ಒಬ್ಬಳೇ ಮಗಳ ದುರಂತ ಸಾವು ಇಷ್ಟೊಂದು ಕಂಗೆಡಿಸಿ ಮನೋರೋಗವಾಗಿ ಕಾಡುತ್ತಿದ್ಯೇ? ಇಷ್ಟು ವರ್ಷಗಳಾದರೂ ಆ ಘಟನೇನ ಮರೀದೆ ಅದನ್ನೇ ಮನಸ್ಸಲ್ಲಿ ಸಾಕ್ತಾ ಇದಾರಾ? ಅಷ್ಟಕ್ಕೂ ಎಷ್ಟು ಮನೇಲಿ ಹುಟ್ಟು ಸಾವು ನೋವು ಇರಲ್ಲ? ಹೀಗೆ ಯಾರ ಮನೇಲೂ ಸಾವೊಂದು ಈ ಹುಚ್ಚಿನ ಮಟ್ಟಕ್ಕೆ ಹೋಗಿರೋದು ನಾನಂತೂ ನೋಡಿಲ್ಲ..ಅಷ್ಟಕ್ಕೂ ಸುಬ್ಬಜ್ಜಿ ಊರಿಗೇ ಉಪಕಾರಿ.ದನಕರುಗಳಿಗೆ, ಚಿಕ್ಕಮಕ್ಕಳಿಗೆ, ಕಫ ಶೀತ ಬಾಲಗ್ರಹಕ್ಕೆಲ್ಲಾ ಮದ್ದು ಕೊಡೋದ್ರಲ್ಲಿ ಎತ್ತಿದ ಕೈ.ಸುಬ್ಬಜ್ಜಿ ಕೊಟ್ಟ ದಪ್ಪ ಹಾಲಿನ ಡಿಕಾಕ್ಷನ್ ಹಾಕಿದ ರುಚಿಕಟ್ಟಾದಕಾಫಿ ಹೀರುತ್ತಾ ಕಲ್ಯಾಣಮ್ಮ ಯೋಚಿಸುತ್ತಿದ್ದರು..

"ಒಂದು ಗಳಿಗೆ ಕೂರಬಾರದೇ ಸುಬ್ಬಜ್ಜಿ. ಇಡೀ ದಿನ ಕೆಲಸ ಕೆಲಸ ಅಂತ ಒದ್ದಾಡ್ತಾ ಇರ್ತೀರಿ . ನಮ್ಮ ಮನೆಗೆ ಒಂದು ಘಳಿಗೆ ಬನ್ನಿ. ಒಂದು ಹೊತ್ತು ಊಟ ಮಾಡಿಕೊಂಡು ಹೋಗುವಿರಂತೆ" ಕಲ್ಯಾಣಮ್ಮ ಸುಬ್ಬಜ್ಜಿಯನ್ನು ಪ್ರೀತಿಯಿಂದ ಆಹ್ವಾನಿಸಿದಳು. "ಹೂಂ ಕಣೆ ಬರ್ತೀನಿ. ನನ್ ಗಬ್ಬದ ದನ ಒಂದು ಸುಖವಾಗಿ ಕರು ಹಾಕಿಬಿಟ್ಟರೆ ಸಾಕು. ಅದರ ಬಾಣಂತನ ಮಾಡಿ ಬರ್ತೀನಿ ಕಣೆ" ಅಂದರು ಸುಬ್ಬಜ್ಜಿ. ಕೆಲಸದ ಮೇಲೆ ಕೆಲಸ ಪೇರಿಸಿಕೊಂಡು ಮಾಡೋಕೆ ಸುಬ್ಬಜ್ಜಿಗೆ ಸುಬ್ಬಜ್ಜಿನೇ ಸಾಟಿ! ಬೇರೆ ಯಾರ್ ಕೈಲೂ ಆಗದ ಮಾತು. ಅದೂ ಈ ಕಾಲದಲ್ಲಿ

ಎಲ್ರೂ ಮನೆ ಜಮೀನು ದನ ಕರು ತೋಟ ಗದ್ದೆ ಅಂತ ಒದ್ದಾಡ್ದೇ ಎಲ್ಲಾ ಮಾರಿ ಬಿಟ್ಟು ಪೇಟೆ ಸೇರಿಕೊಂಡು ಸುಖವಾಗಿ ಬಾಳುತ್ತಿರುವಾಗ ಸುಬ್ಬಜ್ಜಿ ಮಾತ್ರ ಒಂದಿಷ್ಟು ಹಿತ್ತಲು, ತರಕಾರಿ, ದನಕರು ಅಂತ ಇದ್ದಾರೆ. ಸುಹಾಸ ಆಗಿದ್ದಕ್ಕೆ ಅಮ್ಮನ ಆಸೆಗೆ ಅಡ್ಡ ಬರದೆ ಇದ್ದಾನೆ. ಬೇರೆ ಯಾರ ಕೈಯಲ್ಲಿ ಇದೆಲ್ಲಾ ನಿಭಾಯಿಸೋಕಾಗುತ್ತೆ. ನಿಂಗಿ ಕೊಟ್ಟಿಗೆ ಕೆಲಸಕ್ಕೆ ಬಂದಿದ್ದು ನೋಡಿ "ಕಲಗಚ್ಚು ಬೆಚ್ಚಗೆ ಮಾಡಿ ಉಪ್ಪು ಸರಿಯಾಗಿ ಹಾಕಿ ಕೊಡೆ. ಗಬ್ಬದ ದನಕ್ಕೆ ಕುಡಿಯೋ ಅಷ್ಟು ನೀರು ಕೊಡು.. ಮತ್ತೆ ನೀನೇ ಸಾಕು ಅಂತ ಅಂದಾಜು ಮಾಡಬೇಡ ಕೇಳ್ತಾ.." ಅಂತ ಸುಬ್ಬಜ್ಜಿ ಕಲ್ಯಾಣಮ್ಮನ ಕಡೆ ನೋಡಿ ನಸು ನಕ್ಕರು. ಸುಬ್ಬಜ್ಜಿ ಹೀಗೆ ಅಂತರ್ಮುಖಿ ಆಗದೆ ನಗ್ತಾ ಇದ್ದರೆ ಎಷ್ಟು ಚೆನ್ನಾಗಿರುತ್ತೆ ಅಂದುಕೊಂಡಳು ಕಲ್ಯಾಣಮ್ಮ. "ಹೊತ್ತಾಯ್ತು ಸುಬ್ಬಜ್ಜಿ, ನಾನು ಹೊರಡುತ್ತೇನೆ ಇನ್ನು ನೀವು ಆರಾಮಾಗಿರಿ. ದಿನಾ ಮಧ್ಯಾಹ್ನ ಒಂದ್ಹೊತ್ತು ಮಲಗಿ ನಿದ್ರೆ ಮಾಡಿ ಸುಬ್ಬಜ್ಜಿ" ಎಂದು ಅಕ್ಕರೆಯಲ್ಲಿ ಹೇಳ್ತಾ ಹೊರಡಲು ಅನುವಾದಳು ಕಲ್ಯಾಣಮ್ಮ.

ಹೊರ ಬಾಗಿಲು ತೆರೆದೇ ಇದ್ದಿದ್ದು ನೋಡಿ ಎದುರುಮನೆ ಪದ್ಮಕ್ಕನ ಸವಾರಿ ಸುಬ್ಬಜ್ಜಿ ಮನೆಕಡೆ ಬಂತು. ಕಲ್ಯಾಣಮ್ಮನ್ನ ನೋಡಿದವಳೇ "ನೀವಾ.. ಕಲ್ಯಾಣಮ್ಮ.. ನಾನು ಯಾರು ಬಂದಿದ್ದಾರೆ ಅಂತ ನೋಡೋಕೆ ಬಂದೆ. ತಲೆಬಾಗಿಲು ಬೇರೆ ತೆಗದೇ ಇತ್ತಲ್ಲ ಅಂತ ನೋಡ್ದೆ. ಸುಜಾತ ಇಲ್ವಾ ಮನೇಲಿ, ಸುಹಾಸ ಆಫೀಸಿಂದ ಇನ್ನೂ ಬಂದಿಲ್ಲ ಅಂತ ಕಾಣುತ್ತೆ ಅಲ್ವಾ ಸುಬ್ಬಜ್ಜಿ" ಎಂದು ರಾಗ ಎಳೆಯುತ್ತಲೇ ಸೀದಾ ಊಟದ ವಂಕಕ್ಕೆ (ಕೋಣೆಗೆ) ಬಂದು ಕಲ್ಯಾಣಮ್ಮನ ಪಕ್ಕ ತಾನೂ ಒಂದು ಮಣೆ ಇಟ್ಟುಕೊಂಡು ಕೂತೇಬಿಟ್ಲು. ದಿನಾ ಬರೋರಿಗೆ ಎಂಥಾ ಉಪಚಾರ...

ಸುಬ್ಬಜ್ಜಿಯ ಕಾಫಿಯ ಪರಿಮಳ ಹಾಲ್ ನಲ್ಲೆಲ್ಲಾ ತುಂಬಿದ್ದು ಪದ್ದಕ್ಕನ ಮೂಗು ಅರಳಿಸಿತು. ಪದ್ದಕ್ಕ, ಕಲ್ಯಾಣಮ್ಮ ಬದಿಗಿರಿಸಿದ ಲೋಟಕ್ಕೆ ಕಣ್ಣು ಹಾಯಿಸಿದ್ದನ್ನು ನೋಡಿದ.

ಸುಬ್ಬಜ್ಜಿ, ಪದ್ಮಳಿಗೆ ಕಾಫಿ ಮಾಡಲು ಕೂತಲ್ಲಿಂದ ಏಳುವಷ್ಟರಲ್ಲಿ ಪದ್ಮಳೇ ಎದ್ದು ಅಡುಗೆ ಮನೆಗೆ ಹೋಗಿ ಆಗ ತಾನೆ ನಿಂಗಿ ಕರೆದಿಟ್ಟ ಹಾಲಿಗೆ ಡಿಕಾಕ್ಷನ್ ಸಕ್ಕರೆ ಹಾಕಿ ಮತ್ತೊಂದು ಸುತ್ತು ಕಾಫಿ ಸಮಾರಾಧನೆ ಮಾಡಿದಳು.ಇವಳೇನು ಹೀಗೆ ಸುಬ್ಬಜ್ಜಿ ಮನೆಗೆ ದಿಡೀರ್ ಅಂತ ನುಗ್ಗಿ ಬಿಟ್ಟು ತನ್ನದೇ ಮನೆ ಥರ ಆಡ್ತಾ ಇದ್ದಾಳೆ ಅಂತ ಕಲ್ಯಾಣಮ್ಮನಿಗೆ ಅನಿಸಿದ್ರೂ ಸುಜಾತನ ಫ್ರೆಂಡು ಅಂತ ಇಷ್ಟೊಂದು ಸಲುಗೆ ಎಂದುಕೊಂಡಳು.

ಸುಹಾಸ, ಪದ್ಮಕ್ಕನ ಬಗ್ಗೆ ಗೌರವಾದರಗಳನ್ನು ಇಟ್ಟುಕೊಂಡಿದ್ದು ಕಲ್ಯಾಣಮ್ಮಗೆ ಗೊತ್ತಿತ್ತು. ಪದ್ಮಕ್ಕ ಕೂತಲ್ಲಿಂದ ಎಳ್ತಾ "ಸುಬ್ಬಜ್ಜಿ ಬಿಸಿಲು ಮಚ್ಚಲ್ಲಿ ಒಣಗಕ್ಕೆ ಹಾಕಿರೋ ಸಂಡಿಗೆ ಎರಡೇ ದಿನಕ್ಕೆ ತೆಗೆದುಬಿಟ್ರಾ? ನಾನೂ ಒಂದಿಷ್ಟು ಅವಲಕ್ಕಿ

ಸಂಡಿಗೆ, ಮೆಂತ್ಯ ಹಾಕಿದ ಮಸಾಲೆ ಮಜ್ಜಿಗೆ ಮೆಣಸನ್ನ ಮಾಡಿ ಮಹಡಿ ಮೇಲೆ ಬಿಸಿಲು ಮಚ್ಚಲ್ಲಿ ಹಾಕಿದ್ದೀನಿ ಅಜ್ಜಿ ..ಎರಡೇ ಬಿಸಿಲು ಸಾಕಾಗುತ್ತಲ್ವಾ?"

"ಹೂಂ ಕಣೆ ಬಿಸಿಲು ತುಂಬಾ ಸೂಟಿಯಾಗಿದೆ. ಸಾಕಾಗುತ್ತೆ ಇಲ್ಲಾಂದ್ರೆ ಇನ್ನೊಂದೆರಡು ದಿನ ಬಿಡು ಏನೀಗ" ಉತ್ತರಿಸಿದರು ಸುಬ್ಬಜ್ಜಿ.

ಬಿಸಿಲು ಬೇರೆ ಇಳಿತಾ ಇದೆ ಬರಲಾ ಸುಬ್ಬಜ್ಜಿ ಬರಲಾ ಕಲ್ಯಾಣಮ್ಮ ಅಂತ ಹೇಳ್ತಾನೆ ಸುಬ್ಬಜ್ಜಿ ಕಲ್ಯಾಣಮ್ಮ ಕುಡಿದಿದ್ದ ಕಾಫಿ ಲೋಟಗಳನ್ನು ಸಿಂಕಿನಲ್ಲಿ ಹಾಕಿ ಇಬ್ಬರಿಗೂ ನಮಸ್ಕರಿಸಿ ಪದ್ಮಕ್ಕ ಹೊರಟೇಬಿಟ್ಟಳು.

"ಸುಬ್ಬಜ್ಜಿ.. ನಾನೂ ಹೊರಡ್ತೀನಿ ಹೋಗ್ ಬರ್ತೀನಿ ಕಂಡ್ರಿ" ಅಂತ ಹೇಳ್ತಾನೇ ಕಾಲಿಗೆ ನಮಸ್ಕರಿಸಿದರು ಕಲ್ಯಾಣಮ್ಮ. ದೇವರಮನೆ ಹೊರಗೆ ಟೀಪಾಯ ಮೇಲಿಟ್ಟಿದ್ದ ಅರಿಶಿನ ಕುಂಕುಮ ಬಟ್ಟಲು ತೆಗೆದುಕೊಂಡು ಸುಬ್ಬಜ್ಜಿ ಕಾಲಿಗೆ ನಮಸ್ಕರಿಸಿ ಹೊರಡಲು ಅನುವಾದರು .

"ಒಂದ್ನಾಲ್ಕು ಹಪ್ಪಳ ಸಂಡಿಗೆ ಕೊಡ್ಲೇನೇ..ಬೇಳೆ ಸಾರಿಗೆ ನಂಚಿಕೊಳ್ಳೋಕೆ ಚೆನ್ನಾಗಿರುತ್ತೆ" ಅಂತ ಸುಬ್ಬಜ್ಜಿ ಉಪಚರಿಸಿದರು "ಅಯ್ಯೋ ಬೇಡ ಸುಬ್ಬಜ್ಜಿ ನಮ್ಮನೇಲಿ ದಂಡಿಯಾಗಿ ಹಲಸಿನ ಹಪ್ಪಳ, ಹೆಸರು ಬೇಳೆ ಹಪ್ಪಳ ಗೆಣಸಿನ ಹಪ್ಪಳ, ಸಂಡಿಗೆ ಅಂತ ಒಂದಷ್ಟು ಹೊತ್ಕೊಂಡು ಬಂದಿದೆ ನಮ್ಮ ಸರಿತಾ.ಬೇಡಾಂದ್ರ ಕೇಳೊಲ್ಲ. ಆ ಗಿರಿಜಾಲಕ್ಷ್ಮಿಗೆ ಬೇರೆ ಕೈಗೊಂದು ಕಾಲಿಗೊಂದು ಆಳು ಕಾಳೂಂತ ಇದ್ದಾರೆ. ಎಲ್ಲಾ ದಂಡಿಯಾಗಿ ಕಾಳು ಕಡ್ಡಿ ಮನೆ ತುಂಬಿರುತ್ತೆ. ನಮ್ಮ ಶ್ರೀಹರಿಗೆ ಏನೂ ಕೊರತೆ ಇಲ್ಲ. ಅಕ್ಕನ ಬಗ್ಗೇನೂ ಅಷ್ಟೇ ಪ್ರೀತಿ ಇಟ್ಟುಕೊಂಡಿದಾನೆ.ಅದೇ ಪ್ರೀತೀಲೇ ತನ್ನ ಮಗಳು ಸರಿತಾನ ನಮ್ಮ ಮನೇಲಿ ಓದಕ್ಕೆ ಬಿಟ್ಟಿರೋದು. ಅಪ್ಪ-ಅಮ್ಮನ್ನ ನೋಡಕ್ಕೆ ಹೋದಾಗೆಲ್ಲ ಬರಿಕೈಯಲ್ಲಿ ಬಂದಿದ್ದೇ ಇಲ್ಲ ಹುಡುಗಿ..ಇರಿ ಇನ್ನೊಂದ್ಸಲ ನಿಮ್ಮನೇಗೆ ಬರೋವಾಗ ಹಾಗೇ ಒಂದಿಷ್ಟು ತಗೊಂಡು ಬರ್ತೀನಿ" ಎಂದ ಕಲ್ಯಾಣಮ್ಮಗೆ "ನೀನೂ ಅಷ್ಟೇ ಕಣೆ ಕಲ್ಯಾಣಿ.. ನಮ್ಮನೇಗೆ ಯಾವತ್ತಾದರೂ ಬರಿಕೈಲಿ ಬಂದಿದ್ಯೇನೇ.. ಏನಾದ್ರೂ ಒಂಚೂರು ತರದಿದ್ರೆ ನಿನಗೆ ಸಮಾಧಾನನೇ ಇಲ್ಲ ಬಿಡು..ಅಲ್ವೇನೇ ಕಲ್ಯಾಣಿ" ನಗ್ತಾ ಸುಬ್ಬಜ್ಜಿ ಹಾಲ್‌ಗೆ ಬಂದ್ರು. "ಇರಲಿ ಸುಬ್ಬಜ್ಜಿ ಹಿರೀರು ಅಂತ ನಂಗಿನ್ಯಾರಿದ್ದಾರೆ? ನಿಮ್ಮ ಬಗ್ಗೆ ನನಗೆ ಪ್ರೀತಿ ಅಭಿಮಾನ ಇದೆ ಅದು ಯಾವತ್ತೂ ಹಾಗೆ ಇರುತ್ತೆ ನೀವು ಆರೋಗ್ಯ ಚೆನ್ನಾಗಿ ನೋಡಿಕೊಳ್ಳಿ" ಅಂತ ಹೇಳಿ ತಮ್ಮ ಮನೆ ದಾರಿ ಹಿಡಿದರು ಕಲ್ಯಾಣಮ್ಮ.

ಕಲ್ಯಾಣಮ್ಮ ತಿರುವಿನಲ್ಲಿ ಕಣ್ಮರೆಯಾಗುವರೆಗೂ ಸುಬ್ಬಜ್ಜಿ ನೋಡ್ತಾ ನಿಂತಿದ್ದನ್ನು ಕಲ್ಯಾಣಮ್ಮ ಗಮನಿಸಿದರು.

ಸುಬ್ಬಜ್ಜಿ... ನಿಮ್ಮನ್ನು ಮನೋರೋಗಿ ಆಸ್ಪತ್ರೆಗೆ ಕರೆದುಕೊಂಡು ಹೋಗುವುದು ಹೌದಾ... ಯಾವತ್ತು ಹೋಗದಂತೆ.. ಯಾವ ಡಾಕ್ಟರ್... ದಿನಾ ಹೋಗ್ಬೇಕಾ

ಅಥವಾ ಪದ್ಮಳ ಸಂಬಂಧಿ ಡಾಕ್ಟು ಯಾರೋ ಇದಾನಂತಲ್ಲ. ಅವನು ಔಷಧಿ ಕೊಡ್ತಾನಂತಾ?.. ಹೀಗೆ ಹತ್ತಾರು ಪ್ರಶ್ನೆಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಬಂದಿದ್ದ ಕಲ್ಯಾಣಮ್ಮಗೆ ಸುಬ್ಬಜ್ಜಿಯ ಆತ್ಮೀಯತೆ ವಾತ್ಸಲ್ಯದ ನುಡಿಗಳನ್ನು ಕೇಳಿ ಬಾಯಿಂದ ಮಾತೇ ಹೊರಡಲಿಲ್ಲ. ಏನಾದರಾಗಲಿ ನಾನು ಅವನ್ನೆಲ್ಲ ಕೇಳದೇ ಉಳಿದದ್ದು ಒಳ್ಳೆದೇ ಆಯ್ತು ದಿನವೂ ಅದೇ ರಾಗ ಅದೇ ತಾಳ ಹಾಕಿಕೊಂಡು ತಿರುತಿರುಗಿ ಪ್ರಶ್ನೆ ಮೇಲೆ ಪ್ರಶ್ನೆ ಕೇಳ್ತಾನೇ ಇದ್ರೆ ಮನಸ್ಸಿಗೆ ಘಾಸಿಯಾಗಿ ಮತ್ತೆ ಹುಚ್ಚು ಜಾಸ್ತಿ ಆಗದೆ ಇರುತ್ಯೇ?.. ಆಲೋಚಿಸುತ್ತಾ ನಡೆಯುತ್ತಿದ್ದ ಕಲ್ಯಾಣಮ್ಮ ಮನೆ ಗೇಟು ತೆರೆದು ಕಾಂಪೌಂಡ್ ಒಳಗೆ ಬರೋದಕ್ಕೂ ಸೊಸೆ ಸುಗುಣ ತುಳಸಿಗೆ ದೀಪ ಹಿಡಿದು ಹೊರಬರುವುದಕ್ಕೂ ಸರಿಹೋಯಿತು. "ಇಷ್ಟು ಹೊತ್ತು ಆಗೋಯ್ತೇನೆ ಗೊತ್ತೇ ಆಗ್ಲಿಲ್ಲ ನೋಡು.. ಅದು ಇದು ಅಂತ ಸುಬ್ಬಜ್ಜಿ ಕೈಲಿ ಮಾತಾಡ್ತಾ ಹೊತ್ತು ಹೋಗಿದ್ದೇ ತಿಳೀಲಿಲ್ಲ ನೋಡು" ಮಾತಾಡ್ತಾನೆ ಕೈಕಾಲು ತೊಳೆಯಲು ಬಚ್ಚಲು ಮನೆಗೆ ಹೋದರು. ಹಿಂದೆಯೇ ಬಂದ ಸುಗುಣ "ಅತ್ತೆ ದೇವರ ಮನೆಯಲ್ಲಿ ದೀಪ ಇಡ್ತೀರೋ.. ಇಲ್ಲ ನಾನೇ ಇಡಲೋ" ಎಂದಳು "ಇರು ನಾನು ಬಂದಾಯಿತಲ್ಲ ನಾನೇ ಹಚ್ಚುತ್ತೇನೆ ಬಿಡು ದೇವರಿಗೆ ಕೈಮುಗಿದು ಒಂದೆರಡು ದೇವರನಾಮ ಗುನುಗದಿದ್ರೆ ನಂಗೆ ದಿನವೇ ಪರಿಪೂರ್ಣ ಆಗಲ್ಲ ಕಣೆ. ರಾಮಾ ಕೃಷ್ಣಾ ಅಂತ ಅವನೆದುರು ಒಂದು ಘಳಿಗೆ ಜಪ ಮಾಡಿದ್ರೇ ನನಗೆ ಸಮಾಧಾನ."

'ಉಸ್ಸಪ್ಪ'... ಅನ್ನುತ್ತ ಕಲ್ಯಾಣಮ್ಮ ದೇವರ ಮನೆ ಹೊಕ್ಕರು. ದಡೂತಿ ದೇಹದ ಕಲ್ಯಾಣಮ್ಮ ಕಾಲ್ಮಣೇಲಿ ಕೂರಕ್ಕೆ ಒದ್ದಾಡ್ತಾರೆ. ಆದರೆ ಛಲಗಾರ್ತಿ. ಉಬ್ಬಸ ಬಿಡುತ್ತಲೇ ಹರಿ ನಾರಾಯಣ ಹರಿ ನಾರಾಯಣಾ ಅಂತ ರಾಗ ಎಳೆಯೋಕೆ ಶುರುಮಾಡಿದರು. ಸದ್ಯ ದೇವರ ಮನೇಲಿ ನೈವೇದ್ಯಕ್ಕೆ ಇಟ್ಟ ಹಾಲು ಸಕ್ಕರೇನ ಬೆಕ್ಕು ಮುಟ್ಟಿರಲಿಲ್ಲ. ಒಂದೊಂದು ದಿನ ಅದಕ್ಕೇನಾಗುತ್ತೋ. ದೇವರ ಪೀಠದ ಮೇಲೆ ಹಾರಿ ಹಾಲಿನ ಲೋಟ ಕವುಚಿ ಹಾಕಿ, ಇಟ್ಟ ಹಾಲನ್ನೆಲ್ಲಾ ನೆಕ್ಕಿ ರಂಪ ಮಾಡಿ ಬಿಡುತ್ತಿತ್ತು. ಮುಂದೇದು... ಥೂ ಈಗ್ಯಾಕೆ ಅದರ ಧ್ಯಾನ ಇವರಿನ್ನು ಯಾವಾಗ ಬರ್ತಾರೋ... ಮಗ ಕಿಶೋರ ಯಾವಾಗ ಬರ್ತಾನೋ.. ಅಂತ ರಾಮಾಕೃಷ್ಣಾ ಅಂತ ಶುರು ಮಾಡಿಕೊಂಡರು. ಸುಗುಣಳೂ ತನಗಿಷ್ಟವಾದ ದೇವರ ನಾಮ ಗುನುಗುತ್ತ ಮಹಡಿ ಮೆಟ್ಟಿಲು ಹತ್ತಿದಳು. ಸರಿತಾ ಕೈಕಾಲು ತೊಳೆದುಕೊಂಡು ದೇವರ ಮನೆ ಹೊರಗೇ ನಿಂತು ನಮಸ್ಕರಿಸಿ ತನ್ನ ಓದು ಬರಹಕ್ಕೆ ತೊಡಗಿಕೊಂಡಳು.

❖ ❖ ❖

ಯೂನಿವರ್ಸಿಟಿ ಲೆವೆಲ್ ಕ್ರಿಕೆಟ್ ಮ್ಯಾಚಲ್ಲಿ ನಮ್ಮ ಕಾಲೇಜು ಗೋಲ್ಡನ್ ಟ್ರೋಫಿ ಗೆದ್ದಿದೆಯಂತೆ ಎನ್ನುವ ಮಿಂಚಿನ ಸುದ್ದಿ ಕಾಲೇಜಿನ ತುಂಬಾ ಖುಷಿಗೆ

ಕಾರಣವಾಗಿತ್ತು. ಕಾಲೇಜು ಕ್ರಿಕೆಟ್ ಟೀಮನ್ನು ಸ್ವಾಗತಿಸಲು, ಚಾಂಪಿಯನ್ ಆದ ಗೆಲುವನ್ನು ಸಂಭ್ರಮಿಸಲು ವಿದ್ಯಾರ್ಥಿ ಯೂನಿಯನ್‌ನವರೆಲ್ಲ ಸೇರಿ ನಾನಾ ತಯಾರಿ ಮಾಡಬೇಕೆಂದು ಮಾತುಕತೆ ನಡೆಯುತ್ತಿತ್ತು. ಎಲ್ಲಾ ಅಧ್ಯಾಪಕರನ್ನೂ ಕಾಲೇಜು ಆಡಳಿತ ಮಂಡಳಿಯವರನ್ನೂ ಕರೆಯಬೇಕೆಂದೂ ಅಲ್ಲದೆ ಒಬ್ಬ ರಾಜ್ಯ ಅಥವಾ ರಾಷ್ಟ್ರಮಟ್ಟದ ಕ್ರೀಡಾಪಟುವನ್ನು ಪ್ರೋಗ್ರಾಂಗೆ ಗೆಸ್ಟ್ ಆಗಿ ಕರೆಯಬೇಕೆಂದೂ ಇದರಿಂದ ನಮ್ಮ ಯೂನಿಯನ್ನಿಗೂ ಒಳ್ಳೆಯ ರೆಕಗ್ನಿಷನ್ ಸಿಗುವುದೆಂದು ತೀರ್ಮಾನವಾಯಿತು. ಜೊತೆಗೆ ಫಂಕ್ಷನ್ ಬರೀ ಕ್ರಿಕೆಟ್ ಪ್ಲೇಯರ್ಸ್‌ನ ಮೆರವಣಿಗೆ, ಭಾಷಣ ಅಷ್ಟಕ್ಕೇ ಸೀಮಿತವಾಗದೇ ಎಂಟರ್ಟೈನ್ಮೆಂಟ್ ಕೂಡ ಇದ್ರೆ ಇನ್ನೂ ಸಖತ್ತಾಗಿರುತ್ತೆ ಎಂಬುದು ವಿದ್ಯಾರ್ಥಿಗಳ ಯೋಜನೆಯಾಗಿತ್ತು. ಇಷ್ಟೆಲ್ಲಾ ಇದ್ದ ಮೇಲೆ ಹೊಟ್ಟೆಗೆ ಏನಾದರೂ ಬೀಳಲೇ ಬೇಕಲ್ಲವೇ. ಎಲ್ಲಾ ವಿದ್ಯಾರ್ಥಿಗಳಿಗೂ ಸ್ವೀಟು ಖಾರ ಜ್ಯೂಸ್ ಕೊಡುವುದೆಂದು ನಿರ್ಧಾರವಾಯಿತು. ಕಾಲೇಜು ಸ್ಟೂಡೆಂಟ್ಸ್ ಯೂನಿಯನ್ ಪ್ರೆಸಿಡೆಂಟ್ ಧೀರಜ್ ಕುಮಾರ್ ಮತ್ತು ಟೀಮ್‌ನವರು ಈ ಎಲ್ಲಾ ಕೆಲಸಗಳನ್ನು ಮಾಡಬೇಕೆಂಬುದು ಎಲ್ಲರ ಆಶಯವಾಗಿತ್ತು. ಆದರೆ ಇದಕ್ಕೆಲ್ಲ ಕಾಲೇಜು ಪ್ರಿನ್ಸಿಪಾಲರನ್ನು ಒಪ್ಪಿಸಬೇಕು ಜೊತೆಗೆ ಖರ್ಚಿನ ಬಾಬ್ತನ್ನು ಹೊಂದಿಸುವುದು ಹೇಗೆ. ಎಂಬುದೇ ಎಲ್ಲರ ತಲೆಬಿಸಿಗೆ ಕಾರಣವಾಗಿತ್ತು. ಸ್ಟೂಡೆಂಟ್ ಯೂನಿಯನ್ ಪ್ರೆಸಿಡೆಂಟ್ ದೀರಜ್ ಕುಮಾರ್ ಗ್ರಾನೈಟ್ ಬಿಜಿನೆಸ್ ಹೊಂದಿದ ಮಾರ್ವಾಡಿಗಳ ಮಗ ಎಂದು ಎಲ್ಲರಿಗೂ ಗೊತ್ತಿರೋದರಿಂದ ದುಡ್ಡಿಗೆ ಏನಾದರೂ ದಾರಿ ಹುಡುಕುತ್ತಾನೆ..ಎಲ್ಲಾ ಅಂಗಡಿ-ಮುಂಗಟ್ಟುಗಳಿಂದ ಕಾಲೇಜಿನ ಹಿರಿಮೆ ಬಗ್ಗೆ ಹೇಳಿ ವಂತಿಗೆ ಎತ್ತುವುದೆಂದೂ ಪ್ರಿನ್ಸಿಪಾಲರಿಗೆ ಇದರ ಬಗ್ಗೆ ಹೇಳುವುದು ಬೇಡವೆಂದೂ ನಿರ್ಧಾರವಾಯಿತು.

ಕ್ಲಾಸ್ ರೂಮ್‌ನಲ್ಲಿ ನಡೀತಿದ್ದ ಈ ಸಭೆಯಲ್ಲಿ ಬರೀ ಹುಡುಗರೇ ತುಂಬಿದ್ದು ಹುಡುಗಿಯರು ಯಾರೂ ಅತ್ತ ತಲೆ ಕೂಡ ಹಾಕಲಿಲ್ಲ. ಎಲ್ಲಾ ಹುಡುಗರಿಗೆ ಟೀಸ್ ಮಾಡಲು ಇದೊಂದು ಒಳ್ಳೆಯ ವಿಷಯವಾಯಿತು. "ನಾಳೆ ನೋಡಿ... ಹುಡ್ಗೀರು ಚೆನ್ನಾಗಿ ಡ್ರೆಸ್ ಮಾಡಿಕೊಂಡು ಜುಂ.. ಅಂತ ಬಂದು ಸ್ನ್ಯಾಕ್ಸ್ ಜ್ಯೂಸ್ ಹೆಂಗೆ ತಿಂತಾರೆ ಅಂತ.. ಕಷ್ಟ ಪಡೋಕೆ ನಾವು. ಮಜಾ ಮಾಡೋಕೆ ಅವ್ರು" ಅಂತ ಕಾಲೇಜು ಯೂನಿಯನ್ ಸೆಕ್ರೆಟರಿ ಸುಮಂತ್ ಎಲ್ಲರನ್ನೂ ಎತ್ತಿ ಕಟ್ಟುತ್ತಿದ್ದ. "ಹೂಂ ಕಣ್ರೋ ನಮ್ಮ ಹಣೆಬರಹಾನೇ ಇಷ್ಟು.. ಜೀವನದಲ್ಲಿ ಕಷ್ಟ ಪಟ್ಟು ದುಡ್ಡು ಸಂಪಾದನೆ ಮಾಡೋರು ನಾವು, ಮಜಾ ಮಾಡೋದು ಅವರುಗಳೇ ಕಣೋ" ಅಂತ ಕೋಶಾಧಿಕಾರಿ ಶ್ರೇಯಸ್ ಒಗ್ಗರಣೆ ಹಾಕಿದ. "ಲೋ ಬಿಡ್ರಲೋ..ಅವರು ಚೆನ್ನಾಗಿ ಡ್ರೆಸ್ ಮಾಡಿಕೊಂಡು ಕಾಲೇಜ್ ಕ್ಯಾಂಪಸ್‌ನಲ್ಲಿ ಓಡಾಡಿದ್ರೆ ಸಾಕು ನಮ್ಮ

ಕಣ್ಣಿಗೆ ಅದೇ ಹಬ್ಬ ಕಣ್ರೋ..." ಮಣಿಕಂಠ ನುಡಿದ. ಈ ಮಾತಿಗೆ ಇಡೀ ಯುವಸಮೂಹ ನಗೆಗಡಲಲ್ಲಿ ತೇಲಿತು. ಹೀಗೆ ಮಾತುಕತೆ ನಡೆಯುತ್ತಿರುವಾಗಲೇ ಪ್ರಾಕ್ಟಿಕಲ್ ಎಕ್ಸಾಮ್ ಮುಗಿಸಿ ನವ್ಯ ಮತ್ತವಳ ಕ್ಲಾಸ್ಮೇಟ್ ಇವರ ಮೀಟಿಂಗ್ ರೂಮನ್ನು ದಾಟಿಕೊಂಡು ಹೋದರು. ದೂರದಿಂದಲೇ ಇವರ ಬರುವಿಕೆಯನ್ನು ಗಮನಿಸುತ್ತಿದ್ದ ಸೀನಿಯರ್ ಮನಿಶ್ ಅವರನ್ನು ತಡೆದು ನಿಲ್ಲಿಸಿ "ಹೇ ಎಲ್ರೇ ಒಬ್ಬರೂ ಕಾಣಿಸ್ಲಿಲ್ಲ. ನಾಳೆ ಗ್ರಾಂಡ್ ಫಂಕ್ಷನ್ ಇದೆ ಕಣ್ರೇ... ಗೊತ್ತಿದೆ ತಾನೇ.. ನಿಮ್ಮ ಕಡೆಯಿಂದ ಕಲ್ಚರಲ್ ಪ್ರೋಗ್ರಾಮ್ ನಡೆಸಿಕೊಡ್ರೇ.. ಸರಿತಾಳದ್ದು ಒಂದು ಹಾಡು ಒಂದು ವೀಣೆ ಪ್ರೋಗ್ರಾಂ ಕೊಡಿಸುವ ಜವಾಬ್ದಾರಿ ನಿಂದೇ ಕಣೆ ನವ್ಯ" ಎಂದು ಒಂದೇ ಉಸಿರಿಗೆ ಹೇಳಿದ. ಉಳಿದವರು ಒಂದೆರಡು ಗ್ರೂಪ್ ಡ್ಯಾನ್ಸ್ ಮಾಡುವುದೆಂದು ತೀರ್ಮಾನಿಸಿ ಅಲ್ಲೇ ಒಪ್ಪಿಗೆ ಕೊಟ್ಟರು. ಇನ್ನು ಅದಕ್ಕೆ ತಕ್ಕನಾದ ಕಾಸ್ಟೂಮ್ಸ್ ಮತ್ತು ಮೇಕಪ್ ತಯಾರಿ ನಡೆಸಲು ವಿದ್ಯಾರ್ಥಿನಿಯರು ಹೊರಟರು. ಇದೆಲ್ಲದರ ಮಧ್ಯೆ ಸರಿತಾಳನ್ನು ತಾನು ಇವತ್ತು ನೋಡೇ ಇಲ್ಲ.ಲ್ಯಾಬ್ ಪಾರ್ಟನರ್ ಜೀವನ್ ಬೇರೆ ಕ್ರಿಕೆಟ್ ಮ್ಯಾಚ್‌ಗೆ ಹೋಗಿದ್ದಾನೆ. ಇವತ್ತು ಲ್ಯಾಬ್ ಟೆಸ್ಟ್ ಇರೋದರಿಂದ ಅಪ್ಪನೇ ಕಾಲೇಜಿಗೆ ಬೇಗ ಬಿಟ್ಟುಹೋಗಿದ್ದು ನೆನಪಾಯಿತು. ಅರೆ ಸರಿತಾ ಎಲ್ಲಿ ಹೋಗಿದ್ದಾಳೆ... ಕಾಲೇಜು ಕ್ಯಾಂಪಸ್‌ನಲ್ಲಿ ಕಾಣ್ಲಿಲ್ವಲ್ಲಾ.. ಅಂತ ನವ್ಯ ಯೋಚಿಸುತ್ತಿದ್ದಳು. ಸುಪ್ರೀತ ಮತ್ತು ಸಂಗೀತ ಇಬ್ಬರೂ ಕ್ರಿಕೆಟ್ ಮ್ಯಾಚ್ ಕ್ಲೋಸಿಂಗ್ ಫಂಕ್ಷನ್ನಿಗೆ ಸರಿತ ಪ್ರೋಗ್ರಾಮ್ ಕೊಡಲಿಕ್ಕೆ ಕಾಲೇಜ್ ಗ್ರೂಪ್ ಜೊತೆ ಹೋಗಿದ್ದರ ಬಗ್ಗೆ ಹೇಳ್ತಾ ಇದ್ರು.

ಆಹಾ ಎಂತಹ ಅದೃಷ್ಟ ಸರಿತಾಳದ್ದು! ತನಗೂ ಅಂತಹ ಅವಕಾಶ ದೊರೆತಿದ್ದರೆ ಜೀವನ್ ಜೊತೆ ಒಂದಷ್ಟು ಸಮಯ ಕಳೆಯಲಿಕ್ಕೆ ಆಗುತ್ತಿತ್ತು. ಒಳಗೊಳಗೆ ತನ್ನ ಬಗ್ಗೆ ನವ್ಯಳಿಗೆ ಬೇಸರ ಮೂಡಿತು. ತಾನೆಷ್ಟು ಸೌಂದರ್ಯವತಿ ಯಾಗಿದ್ದರೂ ಇಂತಹ ಅವಕಾಶಗಳಿಲ್ಲ. ತಾನು ಸಂಗೀತ ನೃತ್ಯ ಯಾವುದನ್ನೂ ಕಲಿತಿಲ್ಲ. ಎಂತಹ ಗೋಲ್ಡನ್ ಆಪರ್ಚುನಿಟೀ ಸಿಕ್ಕಿದೆ ಸರಿತಾಳಿಗೆ. ಮತ್ತೆ ಹೊಟ್ಟೆ ಉರಿಸಿಕೊಳ್ಳಲು ಶುರುವಿಟ್ಟುಕೊಂಡಳು ನವ್ಯ. ಎಲ್ರೂ ಹೊರಡೋಣ್ವಾ... ನಾಳೆ ಪ್ರೋಗ್ರಾಂ ಸಖತ್ತಾಗಿ ಇರಬೇಕು ಅಂತ ಮಾತಾಡ್ತಾ ಎಲ್ರೂ ಚದುರಿದರು.

❖ ❖ ❖

ಸುಬ್ಬಜ್ಜಿಯನ್ನು ಪುರೋಹಿತರ ಆದೇಶದಂತೆ ಗೋಕರ್ಣಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಅವರ ಮಗಳ ಆತ್ಮಕ್ಕೆ ಸದ್ಗತಿ ಮಾಡಿಸಿ ಬರುವುದೆಂದು ಒಮ್ಮೆ ತೀರ್ಮಾನಿಸಿದ್ರೂ ಮಲಯಾಳಿ ಮಾಂತ್ರಿಕ ಊರಲ್ಲಿರೋ ವಿಚಾರ ಫ್ರೆಂಡ್ಸ್ ನಿಂದ ತಿಳಿದ ಸುಜಾತ ಅವರನ್ನೇ ಮನೆಗೆ ಕರೆದುಕೊಂಡು ಬರುವುದೆಂದು ಆಲೋಚಿಸು ತ್ತಿದ್ದಳು. ಆದರೆ ಸುಹಾಸ ಮಾತ್ರ ಅದಕ್ಕೆಲ್ಲಾ ಒಪ್ಪದೇ ಮನೋವೈದ್ಯರ ಬಳಿ

ಹೋಗುವುದೇ ಸರಿ ಎಂಬ ತೀರ್ಮಾನಕ್ಕೆ ಬಂದುಬಿಟ್ಟಿದ್ದ. ಇದಕ್ಕೆ ಪೂರಕವಾಗಿ ತನ್ನ ಪರಮಮಿತ್ರ ರವಿಕುಮಾರನ ಆಲೋಚನೆಯೂ ಇಂಬು ಕೊಟ್ಟಿತ್ತು. ರವಿ ಬಾಲ್ಯದ ಗೆಳೆಯ. ಚಡ್ಡಿದೋಸ್ತ್. ಇಬ್ಬರೂ ಒಟ್ಟಿಗೇ ಕಾಡುಮೇಡು ಅಲೆಯುವುದು, ಪಕ್ಕದೂರಿನ ಟೆಂಟ್ ಸಿನಿಮಾಗಳಿಗೆ ಜೊತೆಯಾಗಿ ಹೋಗುವುದು, ಕಂಪನಿ ನಾಟಕದ ಹುಚ್ಚು ಇಲ್ಲದಿದ್ದರೂ ಸುಮ್ಮನೆ ಅಲ್ಲೆಲ್ಲಾ ಸುತ್ತು ಹೊಡೆದುಕೊಂಡು ಬರಲು ಒಟ್ಟಿಗೆ ಹೋಗುವುದು ನಡೆಯುತ್ತಿತ್ತು. ದೊಡ್ಡವರಾಗಿ ಬ್ಯಾಂಕಿನ ಪರೀಕ್ಷೆ ಪಾಸು ಮಾಡಿ ಕೆಲಸ ಹಿಡಿದಿದ್ದೇ ಒಂದು ಸಾಹಸವಾಗಿತ್ತು ಸಾಮಾನ್ಯ ವಿದ್ಯಾರ್ಥಿಯಾಗಿದ್ದ ರವಿ ಒಳ್ಳೆಯ ಕವಿಹೃದಯಿ. ಬೇರೆಯವರ ಕಷ್ಟ-ಸುಖಕ್ಕೆ ಸದಾ ಸ್ಪಂದಿಸುವ ಹೃದಯವಂತ. ಈಗ ಆರು ತಿಂಗಳಿಂದ ಈಚೆಗೆ ತನ್ನೂರಿಗೆ ವರ್ಗವಾಗಿ ಬಂದ ಮೇಲೆ ಸುಹಾಸನಿಗೆ ಆನೆಬಲ ಬಂದಂತಾಗಿತ್ತು ತಾವು ಓಡಾಡುವ ದಾರಿಯಲ್ಲಿ ದಿನಕ್ಕೊಂದು ಬಾರಿ ಭೇಟಿಯಾಗುತ್ತಿದ್ದ ಇಬ್ಬರೂ ಒಬ್ಬರಿಗೊಬ್ಬರು ಕಷ್ಟ-ಸುಖ ಮಾತನಾಡಿಕೊಳ್ಳುತ್ತಿದ್ದರು. ಆಗಾಗ ತನ್ನ ತಾಯಿಯನ್ನು ವಿಚಾರಿಸುತ್ತಿದ್ದ ರವಿಕುಮಾರನಿಗೆ ಸುಹಾಸ ಎಲ್ಲ ವಿಚಾರವನ್ನು ವಿವರಿಸಿದ್ದ. ಆಗಾಗ್ಗೆ ತಾವು ಕಳೆದ ಬಾಲ್ಯದ ದಿನಗಳನ್ನು ಮೆಲುಕು ಹಾಕುತ್ತಿದ್ದರು. ಕೆಲವೊಂದು ಬಾರಿ ಕೃಷ್ಣಭಟ್ಟರ ಹೋಟೆಲ್ ಮಸಾಲೆ ದೋಸೆಯನ್ನು ಸವಿಯುತ್ತ ಬಿಸಿಬಿಸಿ ಕಾಫಿ ಕುಡಿಯುತ್ತಾ ಸಂಸಾರ ಸಾಗರದಲ್ಲಿ ತಾವು ಈಜಾಡುತ್ತಿರುವ ಪರಿಯನ್ನು ಹಂಚಿಕೊಳ್ಳುತ್ತಿದ್ದರು. ಇಬ್ಬರ ಕುಟುಂಬಗಳೂ ಆರ್ಥಿಕವಾಗಿ ಸದೃಢವಾಗಿದ್ದರೂ ಕೌಟುಂಬಿಕವಾಗಿ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದರು. ಸುಹಾಸನಿಗೆ ತನ್ನ ತಾಯಿ ಚಿಂತೆಯಾದರೆ ರವಿಕುಮಾರನಿಗೆ ತನ್ನ ಮಗ ವಿಜೇತನದೇ ಚಿಂತೆಯಾಗಿತ್ತು. ಎರಡನೇ ಪಿಯುಸಿಯಲ್ಲಿ ಒಳ್ಳೆಯ ಅಂಕ ಪಡೆಯದೇ ಓದಿನಲ್ಲಿ ಹಿಂದೆ ಬಿದ್ದಿದ್ದ ವಿಜೇತನಿಗೆ ಕ್ರಿಕೆಟ್ ಹುಚ್ಚಿನಿಂದಾಗಿ ಪರೀಕ್ಷೆ ಬರೆಯಲು ಸಾಕಷ್ಟು ಹಾಜರಿಯ ಕೊರತೆಯಾಗಿತ್ತು. ಸುತ್ತಮುತ್ತ ಯಾವ ಊರಲ್ಲಿ ಕ್ರಿಕೆಟ್ ಮ್ಯಾಚ್ ನಡೆದರೂ ವಿಜೇತ ಅಲ್ಲಿಗೆ ಬ್ಯಾಟು ಬಾಲ್ ತಗೊಂಡು ಹೊರಡುತ್ತಿದ್ದ. ಕಾಲೇಜಿನ ಪಾಠ ಪ್ರವಚನದ ಬಗ್ಗೆ ದಿವ್ಯ ಅಸಡ್ಡೆ ಅವನದಾಗಿತ್ತು. ಕ್ರಿಕೆಟ್ ಏನು ಅನ್ನ ಹಾಕುತ್ಯೇ? ಎಷ್ಟೋ ಪಂಟರುಗಳಿಗೇ ಏಗಲು ಸಾಧ್ಯವಾಗದ ಕ್ರಿಕೆಟ್ ಮಂಡಳಿಯ ಸುಳಿಯಲ್ಲಿ ಇವನಿಗೆ ಆಟವಾಡಲು ಎಲ್ಲಿ ಅವಕಾಶ ಸಿಗುತ್ತದೆ? ಹಗಲುಗನಸು ಬಿಟ್ಟು ಓದಿನಲ್ಲಿ ಗಮನ ಕೊಡು ಎಂದು ಸಾಕಷ್ಟು ಬಾರಿ ಹೇಳಿದರೂ ಕೇಳದ ಮಗನಿಂದಾಗಿ ತಾನು ಆ ಊರು ಬಿಡಬೇಕಾಯ್ತು ಎಂದಿದ್ದ ರವಿಕುಮಾರ. ಇಲ್ಲಾದರೂ ಒಳ್ಳೆಯ ಕಾಲೇಜಿನಲ್ಲಿ ಓದಿ ಸೆಕೆಂಡ್ ಪಿಯುಸಿ ಪೂರೈಸಿ ಸಿಇಟಿಗೆ ಟ್ರೈನಿಂಗ್ ಕೊಡಿಸಲು ಅನುಕೂಲವಾಗುವುದೆಂದು ವರ್ಗಾಯಿಸಿ ಕೊಂಡಿದ್ದ. ಮಗನ ಉತ್ತಮ ಭವಿಷ್ಯವೇ ತಮ್ಮ ವೃದ್ಧಾಪ್ಯದ ಊರುಗೋಲು

ಎಂಬ ಮಾತನಾಡಿದ್ದ ರವಿಯನ್ನು ಸುಹಾಸ ಸಂತೈಸಿದ್ದ. ತನಗೆ ಪರಿಚಯವಿರುವ ಒಬ್ಬರು ರಿಟೈರ್ಡ್ ಪ್ರೊಫೆಸರ್ ಟ್ಯೂಷನ್ ಮಾಡುತ್ತಿರುವ ಬಗ್ಗೆ ರವಿಕುಮಾರನಿಗೆ ತಿಳಿಸಿ ವಿಜೇತ ನನ್ನು ಕರೆದು ಪ್ರೀತಿಯಿಂದ ಒಂದೆರಡು ಮಾತಾಡಿ ಅಲ್ಲಿಗೆ ಸೇರಿಸಲು ಸಹಕರಿಸಿದ್ದ.

ಸುಹಾಸ ತನ್ನಮ್ಮನನ್ನು ಮನೋವೈದ್ಯರ ಬಳಿಗೆ ಕರೆದುಕೊಂಡು ಹೋಗುವುದೆಂದು ನಿರ್ಧರಿಸಿದ ನಂತರ ಆಸ್ಪತ್ರೆಗಳ ಹುಡುಕಾಟ ಪ್ರಾರಂಭ ವಾಯಿತು. ಡಾಕ್ಟರ್ ಬಗ್ಗೆ ಸ್ವಲ್ಪವಾದರೂ ಪರಿಚಯವಿದ್ದರೆ ಒಳ್ಳೆಯದಿತ್ತು ರೋಗಿಯನ್ನು ಚೆನ್ನಾಗಿ ನೋಡಿಕೊಳ್ಳಲು ಅನುಕೂಲವಾಗುತ್ತಿತ್ತು ಎಂದು ಸುಜಾತ ಸುಹಾಸ ಮಾತನಾಡಿಕೊಳ್ಳುತ್ತಿದ್ದರು. ಈ ಮಾತುಗಳು ನವ್ಯಳ ಕಿವಿಗೆ ಬೀಳದ್ದೇನೂ ಅಲ್ಲ... ವಾರವಿಡೀ ಚರ್ಚೆಯಾದರೂ ಯಾವುದೂ ಕೊನೆ ಮುಟ್ಟಲಿಲ್ಲ. ಈ ಬಗ್ಗೆ ನವ್ಯ ಜೀವನ್‌ಗೆ ವಿಷಯ ಮುಟ್ಟಿಸಿದಳು. ಆ ದಿನ ಕಾಲೇಜು ಎಥ್ನಿಕ್ ಡೇಗೆ ಕರೆದುಕೊಂಡು ಹೋಗಲು ಬಂದಾಗ ನಡೆದ ಘಟನೆಯ ನಂತರ ಜೀವನ್ ಸಿಗುವುದು ಅಪರೂಪವಾಗಿತ್ತು. ಈ ಬಗ್ಗೆ ಯಾರನ್ನಾದರೂ ಕೇಳಬೇಕೆಂದು ಕೊಂಡ ನವ್ಯಳಿಗೆ ಯುನಿವರ್ಸಿಟಿ ಲೆವೆಲ್ ಸ್ಪೋರ್ಟ್ಸ್ ನಡೆಯುತ್ತಿರುವ ವಿಚಾರದೊಂದಿಗೆ ಕಾಲೇಜಿನ ಕ್ರಿಕೆಟ್ ಟೀಂ ನೊಂದಿಗೆ ಜೀವನ್ ಕೂಡಾ ಆಡಲು ಹೋಗಿರುವ ವಿಚಾರ ತಿಳಿಯಿತು. ಹೋ... ಇದೇ ಕಾರಣ ಇರಬೇಕು... ಜೀವನ್ ತನಗೆ ಸಿಗುವುದು ಅಪರೂಪವಾಗುತ್ತಿದೆ ಎಂದುಕೊಂಡಳು .

ನವ್ಯಳಿಗೆ ಈಗ ದಿನವೂ ಸರಿತಾಳ ಜೊತೆಗೆ ಕಾಲೇಜಿಗೆ ಹೋಗುವುದು ಅನಿವಾರ್ಯವಾಗಿತ್ತು. ಒಮ್ಮೊಮ್ಮೆ ತನ್ನಪ್ಪ ಕಾರಿನಲ್ಲಿ ತನ್ನನ್ನೂ ಸರಿತಾಳನ್ನೂ ಒಟ್ಟಿಗೆ ಕಾಲೇಜು ಸರ್ಕಲ್ ವರೆಗೆ ಬಿಟ್ಟು ತಾವು ಆಫೀಸಿಗೆ ಹೊರಟು ಹೋಗುತ್ತಿದ್ದರು. ಪರೀಕ್ಷೆ ಬೇರೆ ಹತ್ತಿರ ಬರುತ್ತಿತ್ತು. ಓದುವುದು ಬಹಳ ಇತ್ತು. ಇನ್ನೂ ನೋಟ್ಸ್ ಕಂಪ್ಲೀಟ್ ಆಗಿಲ್ಲ.ಆಗಲೇ ಪಾಠ ಮುಗಿಸಿ ಅಧ್ಯಾಪಕರುಗಳು ಪ್ರಶ್ನೆಪತ್ರಿಕೆ ಮಾಡಿಸಲು ಶುರುಮಾಡಿದ್ರು, ಲ್ಯಾಬ್ ಎಕ್ಸಾಂಗೆ ಬೇರೆ ತಯಾರಾಗ ಬೇಕಿತ್ತು. ನವ್ಯಾ ಸರಿತಾ ಇಬ್ಬರೂ ಓದಿನಲ್ಲಿ ಜಾಣೆಯರಾದ್ದರಿಂದ ಅಂತಹ ಭಯವೇನೂ ಇರಲಿಲ್ಲ ಆದರೆ ಈ ವರ್ಷ ಹೆಚ್ಚು ಚೆನ್ನಾಗಿ ಓದಿ ಕಾಲೇಜ್ ಟಾಪರ್ ಆಗಬೇಕೆನ್ನುವ ಹಂಬಲದ ಜೊತೆ ಸಿಇಟಿಗೆ ತಯಾರಿ ನಡೆಸುವ ಜವಾಬ್ದಾರಿ ಬೇರೆ ಹೆಗಲಮೇಲಿತ್ತು. ಆದರೆ ನವ್ಯ ಸ್ವಲ್ಪ ಉದಾಸೀನವಾಗೇ ಇದ್ದಳು.. ಯಾವುದರಲ್ಲೂ ಆಸಕ್ತಿಯೇ ಬರುತ್ತಿಲ್ಲ ಎಂದು ಪೇಚಾಡುತ್ತಿದ್ದಳು. ನವಿಲಿನಂತೆ ಗರಿಗೆದರಿ ಕುಣಿಯುತ್ತಿದ್ದ ತನ್ನ ಮನಸ್ಸು ಏಕೆ ಹೀಗೆ ಮಂಕಾಗಿದೆ ಎಂದು ತನ್ನನ್ನು ತಾನೇ ಪ್ರಶ್ನಿಸಿಕೊಳ್ಳುತ್ತಿದ್ದಳು. ಜೀವನ್ ಬಗ್ಗೆ ಯೋಚಿಸಿದಳು.ಅವನು ತನ್ನ ಲ್ಯಾಬ್ ಪಾರ್ಟ್ನರ್ ಆಗಿರದಿದ್ದರೇ ಒಳ್ಳೇದಿತ್ತು... ನಾನು ಅವನನ್ನು ತುಂಬಾ ಹಚ್ಚಿಕೊಂಡು

ಬಿಟ್ಟಿದ್ದೇನೆ. ಅವನಿಗಾಗಿ ತಾನು ಕಾಯುವುದು... ಕ್ಯಾಂಪಸ್ಸಿನಲ್ಲೆಲ್ಲಾ ನನ್ನ ಕಂಗಳು ಅವನನ್ನು ಕಾಣಲು ತವಕಿಸುವುದೂ ನಿಲ್ಲುತ್ತಿತ್ತು ..ಎಂದು ಆಗಾಗ ಯೋಚಿಸುತ್ತಿದ್ದಳು. ಜೀವನ್ ಕಾಣದ ದಿನ ನವ್ಯಳ ಮನಸ್ಸು ಅಶಾಂತಿಯಿಂದ ಕೂಡಿರುತ್ತಿತ್ತು. ದಿನವೂ ಈ ರೀತಿ ಆಗುತ್ತಿರುವುದನ್ನು ನವ್ಯಾ ಗಮನಿಸುತ್ತಿದ್ದಳು. ಹೀಗೆಲ್ಲ ಯೋಚಿಸುವುದು ತಪ್ಪು, ಇದರಿಂದ ತೊಂದರೆಯಾಗುತ್ತದೆ ಎನ್ನುವ ಆತಂಕ ಅವಳ ಮನಸ್ಸಿನಲ್ಲಿ ಮನೆಮಾಡಿತ್ತು. ಈ ಆತಂಕ ಕೆಲವೊಮ್ಮೆ ಕೋಪ, ಅಸಹನೆ, ಅಳುವಿನ ರೂಪತಾಳಿ ಮನೆಯಲ್ಲಿದ್ದ ಸುಬ್ಬಜ್ಜಿಯ ಮೇಲೆ ರೇಗಾಡುವಂತೆ ಮಾಡುತ್ತಿತ್ತು .ನವ್ಯಳಲ್ಲಿ ಆದ ಈ ಬದಲಾವಣೆಯನ್ನು ಸುಜಾತ ಗಮನಿಸಿದ್ದರೂ ಪರೀಕ್ಷೆಯ ಒತ್ತಡ ಇರಬೇಕೆಂದು ಸುಮ್ಮನಾಗುತ್ತಿದ್ದಳು. ಅಪ್ಪ ಸುಹಾಸ ಮಗಳ ತಲೆಯನ್ನು ಪ್ರೀತಿಯಿಂದ ನೇವರಿಸಿದಾಗ ಸಂತೋಷದಿಂದ ಉಬ್ಬುತ್ತಿದ್ದ ನವ್ಯ, ಎಲ್ಲ ಒತ್ತಡ ನಿವಾರಣೆಯಾದಂತೆ ಅಪ್ಪನ ಹೊಟ್ಟೆ ಸುತ್ತ ಕೈ ಹಾಕಿ ತಬ್ಬಿಕೊಳ್ಳುತ್ತಿದ್ದಳು. "ಏನು ಮಗಳೇ.." ಎಂದು ಪ್ರೀತಿ ಅಭಿಮಾನದಿಂದ ಬೆನ್ನು ತಟ್ಟುತ್ತಿದ್ದ ಸುಹಾಸ! ಹೊತ್ತುಹೊತ್ತಿಗೆ ಸರಿಯಾಗಿ ಸುಬ್ಬಜ್ಜಿ ಊಟ–ತಿಂಡಿ, ಡಿಕಾಕ್ಷನ್ ಹಾಕಿದ ಬಿಸಿಬಿಸಿ ಕಾಫಿ, ಆಗ ತಾನೇ ಕರೆದ ಸೀಮೆ ಹಸುವಿನ ಹಾಲನ್ನು ಸಕ್ಕರೆ ಸೇರಿಸಿ ಬೇರೆಬೇರೆ ಫ್ಲಾಸ್ಕ್‌ಗೆ ಹಾಕಿ ಊಟದ ಟೇಬಲ್ ಮೇಲೆ ಇಟ್ಟಿರುತ್ತಿದ್ರು. ಸುಜಾತಳಿಗೆ ಆಫೀಸಿಂದ ಬಂದ ಮೇಲೆ ಮನೆಯಲ್ಲಿ ಹೇಳುವಂತಹ ಕೆಲಸವೇನೂ ಇರಲಿಲ್ಲ. ಸಾಯಂಕಾಲ ಮನೆ ಹತ್ತಿರದ ಪಾರ್ಕಿನಲ್ಲಿ ಎಲ್ಲ ಗೆಳತಿಯರೊಡನೆ ವಾಕ್ ಮಾಡುತ್ತಾ ಗಾಸಿಪ್ ಮಾಡುತ್ತಾಇರುವ ಗೆಳತಿಯರ ಜೊತೆ ಮಾತಿಗೆ ಸೇರಿಕೊಳ್ಳುತ್ತಾ ಇದ್ದ ಸುಜಾತ ಉಳಿದವರು ಸುಬ್ಬಜ್ಜಿಯ ಕುರಿತು ಆಡಿಕೊಂಡರೆ ತಲೇನೇ ಕೆಡಿಸಿಕೊಳ್ಳುತ್ತಿರಲಿಲ್ಲ. "ಅಯ್ಯೋ ಬಿಡ್ರಿ ಅವರಿಗೂ ವಯಸ್ಸಾಯಿತು ಇನ್ನೆಷ್ಟು ದಿನ ಇದ್ದಾರು.. ಯಾಕ್ರೀ ಆಸ್ಪತ್ರೆ ಗೀಸ್ಪತ್ರೆ ಅಂತ ದುಡ್ಡು ಸುರೀತೀರಾ." ಅಂತ ಶೈಲಾ ಅಂದ್ರೆ" ಅಯ್ಯೋ ವಯಸ್ಸಾದೋರು ಅಂದರೆ ಹಂಗೇ ಬಿಡೋದಾ. ನಿಮ್ಮ ಅಮ್ಮಂಗಾದ್ರೆ ನೀವು ಹಿಂಗೇ ಹೇಳ್ತಿದ್ರೇನ್ರಿ?" ಎಂದು ಆಶಾ ಜಗಳಕ್ಕೇ ಶುರುಮಾಡುವುದು ನಡೆದೇ ಇತ್ತು. ಸುಜಾತ ಸುಮ್ಮನೆ ಇದ್ಯಾವುದಕ್ಕೂ ತಲೆ ಕೊಡದೆ ವಾಕ್ ಮಾಡಿ ನಂತರ ಮನೆ ಸೇರಿಕೊಳ್ಳುತ್ತಿದ್ದಳು.

ಅಧ್ಯಾಯ 5

ಡಾ.ಮೇಘಾ ಕೆ ಎಸ್

ಕಲ್ಯಾಣಮ್ಮ ಹಾಗೂ ಪದ್ಮ ಹೊರಟು ಹೋದ ನಂತರ ಸುಬ್ಬಜ್ಜಿಗೆ ಮನೆಯಲ್ಲಿ ಒಂದು ತರಹದ ನೀರವತೆ ಆವರಿಸಿತು. ಸುಹಾಸ ಇನ್ನೂ ಆಫೀಸಿನಿಂದ ಬಂದಿರಲಿಲ್ಲ. ಸುಜಾತಾ ವಾಕ್ ಹೋದವಳು ಕತ್ತಲಾಗುತ್ತಿದ್ದರೂ ಇನ್ನು ಪತ್ತೆ ಇಲ್ಲ.. ಇನ್ನು ನವ್ಯ ಮನೆಯಲ್ಲಿ ಇದ್ದಾಳೋ, ಅಥ್ವಾ ಹೊರಗಡೆ ಹೋಗಿದ್ದಾಳೊ ಅನ್ನೋದೂ ಗೊತ್ತಿಲ್ಲ.

ರಾತ್ರಿಗೆ ಅಡುಗೆ ತಲೆಬಿಸಿ ಇಲ್ಲ. ಮಧ್ಯಾಹ್ನದ ಬೆಂಡೆಕಾಯಿ ಕಾಯಿರಸ ಇನ್ನೂ ಇದೆ. ಮುಂದೇನು ಕೆಲಸ ಮಾಡುವುದು ಎಂದು ಯೋಚಿಸುತ್ತ ಇರುವಾಗಲೇ ಪದ್ಮ ತಂದಿಟ್ಟ ಚಕ್ಕುಲಿ ಕಾಣಿಸಿತು.

ಈ ನಡುವೆ ಪದ್ಮ ಮನೆಗೆ ಬರುವುದು ಜಾಸ್ತಿಯಾಗಿದೆ ಅಲ್ವಾ? ಪದ್ಮ ಪಕ್ಕದ ಮನೆಯವಳು, ಆಗಾಗ ಬರುವುದು, ಕಾಫಿ ಕುಡಿದು ಒಂದಷ್ಟು ಹರಟೆ ಹೊಡೆದು ಹಿಂತಿರುಗುವುದು ಹೊಸತೇನಲ್ಲ. ಯಾರಾದ್ರೂ ಮನೆಗೆ ಬಂದು ಹೋಗ್ತಾ ಇದ್ರೆ ನನಗೂ ಸಮಯ ಹೋಗತ್ತೆ.ಆದರೆ ಈ ವಾರ ಅಂತೂ ಹೆಚ್ಚು ಕಮ್ಮಿ ದಿನಾ ಬಂದಿದ್ದಾಳೆ. ಕಲ್ಯಾಣಿನೂ ಎಷ್ಟೋ ದಿನಗಳ ನಂತರ ಇವತ್ತು ಬಂದಿದ್ದಾಳೆ. ಏನಿರಬಹುದು ಎಂದು ಸುಬ್ಬಜ್ಜಿ ಯೋಚಿಸತೊಡಗಿದರು.

ಎಲ್ಲರೂ ತನ್ನನ್ನು ಹುಚ್ಚಿ ಎಂದು ಕರೆಯುವುದು ಸುಬ್ಬಜ್ಜಿಗೂ ಗೊತ್ತಿರುವುದೇ. ಆದರೆ ಎದುರಿಗೆ ಸಿಕ್ಕಾಗ ಎಲ್ಲರೂ ತನ್ನನ್ನು ಚೆನ್ನಾಗಿಯೇ ಮಾತಾಡಿಸುತ್ತಿದ್ದರು. ಇಷ್ಟು ದಿನ ಈ ವಿಷಯ ಸುಬ್ಬಜ್ಜಿಗೆ ಕಾಡಿರಲಿಲ್ಲ. ಆದ್ರೆ ನಿನ್ನೆ ರಾತ್ರಿ ಮಗ ಸೊಸೆ ಊಟವಾದ ನಂತರ ಮಾತಾಡುತ್ತ ಇದ್ದಿದ್ದು ತನ್ನ ಕಿವಿಗೂ ಬಿದ್ದಿತ್ತು. ಏನೋ ಮನೋವೈದ್ಯರು ಅಂತೆ, ಬೆಂಗಳೂರು ಅಂತೆ, ಕೇರಳ ಅಂತೆ, ಜ್ಯೋತಿಷಿ ಅಂತೆ,

ಇನ್ನೂ ಏನೇನೋ.. ಯಾಕೆ ನನ್ನ ಬಗ್ಗೆ ತಲೆ ಕೆಡಿಸಿಕೊಳ್ತಾರೋ. ಇವರಿಗೇನಾದ್ರೂ ತೊಂದರೆ ಆಯ್ತಾ. ನಾನು ಸರಿಯಾಗೇ ಇದ್ದೀನಲ್ಲ.

ಹಾಗಾದರೆ ಈಗ ನನ್ನ ಮಗನೂ ನನ್ನನ್ನು ಹುಚ್ಚಿ ಅಂತ ತೀರ್ಮಾನಿಸಿದ್ದಾನಾ ಅದಕ್ಕೆ ಪದ್ಮಳಿಗೆ ನನ್ನ ನಿಗಾ ಇಡೋಕೆ ಹೇಳಿದ್ದಾನಾ ಅಂತ..

ಇಂತಹ ಏನೇನೋ ಆಲೋಚನೆಗಳು ತಲೆಗೆ ಬಂದು ಸುಬ್ಬಜ್ಜಿಗೆ ಏಕಾಂಗಿತ ಕಾಡಿತು. ಹೊರಗಿನವರು ಏನೇ ಅಂದರೂ, ಅದಕ್ಕೆ ಬೇಸರ ಪಡದವರು ಮಗನೂ ತನ್ನ ಬಗ್ಗೆ ಹೀಗೆ ಯೋಚಿಸುತ್ತಾನೆ ಎಂದು ಅನಿಸಿ ಸುಬ್ಬಜ್ಜಿಗೆ ದುಃಖ ಒತ್ತರಿಸಿಕೊಂಡು ಬಂತು. ನಾನೇ ಇವರಿಗೆ ಸಮಸ್ಯೆಯಾಗಿ ಬಿಟ್ಟಿದ್ದೀನಲ್ಲಾ ಅಂತ ಅನ್ನಿಸಿ ಒಂದು ನಿಟ್ಟುಸಿರು ಬಿಟ್ಟು ಮೌನವಾಗಿ ಕುಳಿತರು.

ಅಲ್ಲೇ ಹಾಲು ಕುಡಿಯುತ್ತಾ ಇದ್ದ ಬೆಕ್ಕಿಗೆ ಏನನ್ನಿಸಿತೋ ಏನೋ, ಬಂದು ಸುಬ್ಬಜ್ಜಿಯ ಕಾಲಿಗೆ ಮೈ ನೇವರಿಸತ್ತಾ ಕುಳಿತಿತು. ಅದನ್ನು ನೋಡಿ ತನಗರಿ ವಿಲ್ಲದೇನೆ ಸುಬ್ಬಜ್ಜಿಗೆ ತನ್ನ ಮನಸಲ್ಲಿರೋದೆಲ್ಲ ಹೊರ ಹಾಕಬೇಕು ಎನಿಸಿತು.

"ನೋಡಿದ್ಯಾ ಚಿಕ್ಕಿ, ಇಷ್ಟು ದೊಡ್ಡ ಮನೇಲಿ ಈಗ ನಾನೊಬ್ಬಳೇ. ಇಷ್ಟು ಹೊತ್ತಾದರೂ ಯಾರದ್ದೂ ಪತ್ತೆ ಇಲ್ಲ. ನಾನು ಮಾತಾಡುವುದಾದ್ರೂ ಯಾರ ಹತ್ರ ಹೇಳು? ನಾನೊಬ್ಬಳು ಮನೆಯಲ್ಲಿ ಇದೀನಿ ಅನ್ನೋ ಪರಿವೆಯೇ ಯಾರಿಗೂ ಇಲ್ವೇನೋ ಅನ್ಸತ್ತೆ. ಏನಿದ್ರೂ ಅವರವರೇ ಮಾತಾಡಿಕೊಳ್ತಾರೆ.ನನಗ್ಯಾವ ಬೆಲೆಯೂ ಇಲ್ಲ.

ಒಂದು ದಿನ ಆದ್ರೂ ಈ ಸುಹಾಸ, ಅಮ್ಮಾ ಅಂತ ಹತ್ರ ಬಂದು ಕೂತು ಎರಡು ಮಾತಾಡಿಲ್ಲ. ಯಾಕಮ್ಮ ನೀನು ಕಲ್ಲು, ಮರ, ಗಿಡಗಳ ಹತ್ರ ಮಾತಾಡುತ್ತಾ ಇರುತ್ತಿಯ ಅಂತ ನೇರವಾಗಿ ಕೇಳಿಲ್ಲ.

ಇನ್ನು ಸುಜಾತಾನೋ ಬರೀ ಅವಳ ಕೆಲಸ ಮತ್ತು ಅದೇನೋ ಕಿಟ್ಟಿನೋ, ಪಟ್ಟಿನೋ ಅಂತ ತಿರುಗಾಡುತ್ತಾಳೆ. ನವ್ಯಂಗಂತೂ ಮೊದಲಿಂದಲೂ ನನ್ನ ಕಂಡರೆ ಅಸಡ್ಡೆ. ಮೊಮ್ಮಗಳು ಅಂತ ಪ್ರೀತಿಯಿಂದ ಮಾತಾಡಿಸಿದ್ರೆ ಚುಟುಕಾಗಿ ಉತ್ತರ ಕೊಟ್ಟು ಹೋಗಿಬಿಡ್ತಾಳೆ. ಅಜ್ಜಿ ಅನ್ನುವ ಮಮಕಾರ ಇಲ್ಲ.

ಈಗ ನೀವೇ ಎಲ್ಲರೂ ನಂಗೆ ಜೊತೆ. ನಿಮ್ಮ ಹತ್ರಾನೂ ಮಾತಾಡಬಾರದು ಅಂದರೆ ನಾನೇನು ಮಾಡಲಿ ಹೇಳು..

ಅಲ್ಲಾ ಕಣೆ ಚಿಕ್ಕಿ, ಅದೇನೋ ಹುಚ್ಚಾಸ್ಪತ್ರೆಗೆ ಕರ್ಕೊಂಡು ಹೋಗ್ತಾರಂತೆ ನನ್ನ.. ಅಲ್ಲೇನಾದ್ರು ಕೂಡಿ ಹಾಕಿಬಿಟ್ಟರೆ ನಾನೇನು ಮಾಡ್ಲಿ? ನಿಮಗೆಲ್ಲ ಊಟಾ ಹಾಕೋರು ಯಾರು? ಮತ್ತೆ ಆ ಟಿವಿಲಿ ತೋರಿಸಿದ ಹಾಗೆ ತಲೆಗೆ ಕರೆಂಟ್ ಕೊಟ್ಟರೆ? ಯಾಕೋ ಭಯವಾಗುತ್ತದೆ ಕಣೆ. ನಾಳೆ ಆ ಪದ್ಮನ ಹಿಡ್ಕೊಂಡು

ಕೇಳಬೇಕು. ಇವೆಲ್ಲ ಬೇಡ ಅಂತ ನೀನೇ ಸುಹಾಸಂಗೆ ಹೇಳು ಅಂತ ಹೇಳ್ತೀನಿ, ಏನಂತಿಯ? ನಾನು ಇನ್ನೂ ಏನೇನು ಅನುಭವಿಸಬೇಕಾಗಿದೆಯೋ?

ಆ ಮನೆಹಾಳ ಪೊಲೀಸು ದಿನಕರ ಮತ್ತೆ ಬಂದಿದ್ದ ಕಣೆ ಬೈಕ್ ಮೇಲೆ. ಈ ನವ್ಯನೂ ಅವನ ಜೊತೆ ಹೊರಟಿದ್ದಳು. ನಾನು ಬಿಡ್ತೀನಾ? ಹೆದರಿಸಿ ಕಳ್ಸೆ ಬಿಟ್ಟೆ ಗೊತ್ತಾ?"

ಇವಳಿಗೆ ಬುದ್ಧಿ ಬೇಡ್ವಾಮತ್ತೆ ಚಿಕ್ಕಿ, ಆ ಕಲ್ಯಾಣಿಯ ತಮ್ಮನ ಮಗಳು ಸರಿತನ ನೋಡಿದ್ಯಾ? ಏನ್ ಚೆನ್ನಾಗಿದ್ದಾಳೆ ಅಲಾ?

"ಸುಮಾನ ಕಳ್ಕೊಂಡಾಗ ನಾನು ಎಷ್ಟು ಒಬ್ಬಂಟಿ ಆಗಿದ್ದೆ.. ಇವರು ಇರಲಿಲ್ಲ.. ಸುಹಾಸ ಇನ್ನು ಚಿಕ್ಕವನು.. ಆಗ ನಾನು ಪಟ್ಟ ದುಃಖ, ಅನುಭವಿಸಿದ ಕಷ್ಟಗಳು ಲೆಕ್ಕವಿಲ್ಲ.. ಆ ನೋವು ನನಗೊಬ್ಬಳಿಗೇ ಗೊತ್ತು.."

ಹೀಗೆ ಏನೋ ಮಾತಾಡುತ್ತ ಇರುವಾಗಲೇ ಗೇಟ್ ಶಬ್ದ ಕೇಳಿ ಬಾಗಿಲು ತೆರೆಯಲು ಎದ್ದರು ಸುಬ್ಬಜ್ಜಿ.

ಇತ್ತ ಸುಜಾತಾ ಪಾರ್ಕಿನಲ್ಲಿ ತನ್ನ ಖಾಸಾ ಗೆಳತಿ ಆಶಾ ಜೊತೆ ವಾಕ್ ಮಾಡುತ್ತಾ ತನ್ನ ಮನೆ ಪುರಾಣ ಬಿಚ್ಚಿಡುತ್ತಾ ಇದ್ದಳು. ಎಷ್ಟೋ ಜನ ಸ್ನೇಹಿತೆಯರ ಮಧ್ಯೆ ಆಶಾ ಒಬ್ಬಳು ಇವಳಿಗೆ ಆಪ್ತೆ.

"ನಿಮಗೆ ಗೊತ್ತೇನ್ರಿ ಆಶಾ, ನಮ್ಮ ಯಜಮಾನರಿಗೆ ಒಬ್ಬರು ಅಕ್ಕ ಇದ್ರಂತೆ. ಅವರು ಸುಸೈಡ್ ಮಾಡ್ಕೊಂಡು ಹೋಗ್ಬಿಟ್ರಂತೆ.."

"ಹೂ ಗೊತ್ತೂರಿ, ನಮ್ಮತ್ತೆ ಏನೇನೋ ಕಥೆ ಹೇಳ್ತಾ ಇರ್ತಾರೆ" ಎನ್ನುವಾಗಲೇ ಸುಜಾತಾಳ ಕುತೂಹಲ ಗರಿಗೆದರಿತು.

"ಹೌದಾ, ಏನು ಕಥೆ?"

"ಅದೇ, ನಿಮ್ಮ ಮನೆಯವರ ಅಕ್ಕ, ಸುಮಾ ಅಂತ.. ಅವರ ಮದ್ವೆ ನಿಶ್ಚಯ ಆಗಿತ್ತು.. ಪೊಲೀಸ್ ಪೇದೆ ದಿನಕರ ಅಂತ.. ಒಂದು ದಿನ ಅವರಿಬ್ರು ಅಂಗಡಿಗೆ ಹೋದರಂತೆ. ಅಲ್ಲೇನಾಯ್ತು ಅಂತ ಸರ್ಯಾಗಿ ಗೊತ್ತಿಲ್ಲ.. ಆದ್ರೆ ಅವತ್ತೋ ಅಥವಾ ಮಾರನೇ ದಿನಾನೋ ಸುಮಾ ಬಾವಿಗೆ ಹಾರಿದ್ರಂತೆ.

ಕೆಲವರು ಹೇಳ್ತಾರೆ, ಆ ದಿನಕರಂಗೆ ಮೊದ್ಲೇ ಮದ್ವೆ ಆಗಿತ್ತಂತೆ. ಇನ್ನು ಕೆಲವರು ಹೇಳ್ತಾರೆ ಅವ್ನು ಏನೋ ಕೆಟ್ಟದಾಗಿ ವರ್ತಿಸಿದನಂತೆ ಅಂತ.. ಏನೋ ಗೊತ್ತಿಲ್ಲಾರಿ

"ಈಗ ದಿನಕರ ಎಲ್ಲಿದ್ದಾರೆ ಗೊತ್ತಾ?"

"ನಮ್ ತೀರ್ಥಹಳ್ಳಿ ಸ್ಟೇಷನಲ್ಲಿ ಅವ್ರೆ ತಾನೇ ಇನ್ಸ್‌ಪೆಕ್ಟರ್ ಈಗ..." ಎಂದು ಹೇಳುತ್ತಲೇ ಸುಜಾತಾ "ಹೋ ಹೌದಾ" ಎಂದು ಅಚ್ಚರಿ ವ್ಯಕ್ತಪಡಿಸಿ ಗಹನವಾದ ಆಲೋಚನೆಯಲ್ಲಿ ಮುಳುಗಿದ್ದನ್ನು ನೋಡಿ, "ಸರಿ, ನಾನು ಬರ್ತೀನ್ರಿ" ಎಂದು ಹೇಳಿ ಹೊರಟ್ಲು ಆಶಾ.

ತಾನು ಕೇಳಿದ ವಿಷಯಗಳನ್ನು ಜೀರ್ಣಿಸಿಕೊಳ್ಳುತ್ತಾ, ಈ ದಿನಕರನನ್ನು ಒಂದ್ಸಲ ಭೇಟಿ ಮಾಡಿದರೆ ಹೇಗೆ? ಅತ್ತೆಯ ಮನಸ್ಥಿತಿಯ ಹಿಂದಿನ ಕಾರಣ ತಿಳೀಬಹುದಾ? ಅಥ್ವಾ ಹಾವಿನ ಹುತ್ತಕ್ಕೆ ಯಾಕೆ ಕೈ ಹಾಕೋದು ಅಂತ ಸುಮ್ಮನಿದ್ದರೆ ಒಳಿತಾ ಎಂದು ಚಿಂತಿಸುತ್ತಾ ಮನೆ ಕಡೆ ಹೆಜ್ಜೆ ಹಾಕಿದಳು ಸುಜಾತಾ.

❖ ❖ ❖

ಮನೆ ಎದುರಿನ ಗೇಟನ್ನು ಕೀರ್ ಅಂತ ಮುಚ್ಚುತ್ತಾ ಒಳಗೆ ಬಂದ ಗೋಪಾಲ ಭಟ್ಟರು ಸೀದಾ ಬಚ್ಚಲು ಮನೆಗೆ ಹೋಗಿ ಕೈಕಾಲು ತೊಳೆದು ತಮ್ಮ ಅಂಗವಸ್ತ್ರದಲ್ಲಿ ಮುಖ, ಕುತ್ತಿಗೆ ವರೆಸುತ್ತಾ ಬಂದು ಹೆಂಡತಿ ಪಕ್ಕದಲ್ಲಿ ಕುಳಿತರು.

"ಅರೇ, ನೀವ್ಯಾವಾಗ ಬಂದ್ರಿ?" ಅಂತ ಕಲ್ಯಾಣಮ್ಮನ ಪ್ರಶ್ನೆಗೆ,

"ಈಗ ಅರ್ಧ ಗಂಟೆ ಆಯಿತು ಕಣೇ.. ನಿನ್ನ ಸವಾರಿ ಸುಬ್ಬಜ್ಜೀ ಮನೆಗೆ ಹೋಗಿತ್ತಂತೆ.. ಹೇಗಿದ್ದಾರೆ ಸುಬ್ಬಜ್ಜೀ?" ಅಂತ ವಾರೆಗಣ್ಣಿನಲ್ಲಿ ಹೆಂಡತಿಯನ್ನ ನೋಡಿದರು.

"ತುಂಬಾ ದಿನ ಆಗಿತ್ತು. ಅದಕ್ಕೆ ಹೋಗಿ ಬಂದೆ. ಸುಬ್ಬಜ್ಜಿ ಚೆನ್ನಾಗಿದ್ದಾರೆ. ಮೇಲ್ನೋಟಕ್ಕೆ ನಂಗೆ ಏನು ಗೊತ್ತಾಗಿಲ್ಲ.. ನನ್ ಜೊತೆ ಚೆನ್ನಾಗೇ ಮಾತಾಡಿದ್ರು. ಇನ್ನು ಆ ದೇವ್ರಿಗೇ ಗೊತ್ತು.."

"ಆದ್ರೂ ಆ ಸುಮಾ ಹೋದ ಮೇಲೆ ಸುಬ್ಬಜ್ಜೀ ಒಂಥರನೇ.. ಸುಮ್ನೆ ಅವಳನ್ನು ನನಗೆ ಕೊಟ್ಟಿದ್ದರೆ, ಈ ತಾಪತ್ರಯ ಇರಲಿಲ್ಲ ನೋಡು.." ಅಂತ ಭಟ್ಟರು ಹೇಳುತ್ತಲೇ ಒಳಗಿಂದ ಕಿಸಕ್ ಅಂತ ನಕ್ಕ ಶಬ್ದ ಕೇಳಿ ಕಲ್ಯಾಣಮ್ಮನ ಮುಖ ಕೆಂಪಾಯಿತು.

"ಸುಗುಣಾ, ರಾತ್ರಿ ಅಡುಗೆ ಮಾಡೋ ಯೋಚನೆ ಇದಿಯೋ ಇಲ್ವೋ ಇವತ್ತು..." ಎನ್ನುತ್ತಾ ಎದ್ದು ಒಳ ಹೋದರು ಕಲ್ಯಾಣಮ್ಮ.

ಗೋಪಾಲ ಭಟ್ಟರಿಗೆ ಸುಮಾ ಮೇಲೆ ಮನಸಿದ್ದಿದ್ದು ಅವರಿಗೂ ಗೊತ್ತಿತ್ತು. ಆದ್ರೆ, ಹದಿನೈದು ವರ್ಷದ ಸುಂದರ ಹುಡುಗಿಗೆ ಕೆಲಸವಿಲ್ಲದ ಗೋಪಾಲ ಭಟ್ಟರನ್ನು ಕೊಡೋದು ಸುಬ್ಬಜ್ಜಿಗೆ ಯಾಕೆ ಒಪ್ಪಿಗೆ ಇರಲಿಲ್ಲ ಅನ್ನೋದು ತಿಳಿದಿತ್ತು. ಎಲ್ಲ ಆ ರಾಮಕೃಷ್ಣನ ಇಚ್ಛೆ ಎಂದು ಒಂದು ದೀರ್ಘ ಉಸಿರು ಹೊರಹಾಕಿದರು.

ಇದೆಲ್ಲದರ ಪರಿವೇ ಇಲ್ಲದೇ ತನ್ನದೇ ಪ್ರಪಂಚದಲ್ಲಿ ಮುಳುಗಿದ್ದಳು ಸರಿತಾ. ಮೇಲೆ ತನ್ನ ಕೋಣೆಯಲ್ಲಿ ಹೆಸರಿಗೆ ಒಂದು ಪುಸ್ತಕ ಹಿಡಿದು ಕೂತಿದ್ದರೂ, ಮನಸ್ಸು ಮಾತ್ರ ಹಕ್ಕಿಯಂತೆ ಹಾರಾಡುತಿತ್ತು.

ಇವತ್ತಿನ ದಿನ ಮೆಲುಕು ಹಾಕುತ್ತಾ ಬೇಡವೆಂದರೂ ಜೀವನ್ ಮುಖ ಕಣ್ಣೆದುರಲ್ಲಿ ಬರುತ್ತಿತ್ತು. ತಾನಾಯಿತು ತನ್ನ ಓದು, ಸಂಗೀತವಾಯಿತು ಎಂದು ಇದ್ದ ಸರಿತಳಿಗೆ ಜೀವನ್ ಏಕೋ ಕೊಂಚ ಕಾಡಲಾರಂಬಿಸಿದ್ದ. ಜೀವನ್ ಕೂಡ ತನ್ನೆಡೆಗೆ ಮೆಚ್ಚುಗೆಯ ಕಳ್ಳ ನೋಟ ಬೀರುತ್ತಿರುವುದು ಅವಳಿಗೂ ಗೊತ್ತಿತ್ತು.

ಜೀವನ್ ತನ್ನ ಬೈಕನ್ನು ನಿಲ್ಲಿಸಿ ಹೆಲ್ಮೆಟ್ ತೆಗೆದು ತನ್ನ ದಟ್ಟ ಕೂದಲಿನಲ್ಲಿ ಬೆರಳಾಡಿಸುತ್ತಾ ಬರುವ ನೋಟ ಅವಳನ್ನು ಹುಚ್ಚು ಹಿಡಿಸಿತ್ತು.

ಗೆಳತಿ ನವ್ಯಾ ಕೂಡ ಇವನನ್ನು ಇಷ್ಟ ಪಡುತ್ತಾಳೆ ಎಂದು ಗೊತ್ತಿತ್ತು. ಅದು ಇವಳ ಕಳವಳ ಹೆಚ್ಚಿಸಿತ್ತು.

ಅಧ್ಯಾಯ 6

ಪೂರ್ಣಿಮಾ ಕೊಪ್ಪ

ಬಾಗಿಲು ತೆಗೆದು ಬಂದು ಮಲಗಿದ ಸುಬ್ಬಜ್ಜಿಗೆ ಒಂದೇ ಯೋಚನೆ, 'ನನ್ನನ್ನು ಹುಚ್ಚಿ ಮಾಡಿ ನಾಲ್ಕು ಗೋಡೆಯ ಮಧ್ಯೆ ಹಾಕಿದರೆ ನಾನೇನು ಮಾಡಲಿ. ಸುಜಾತ ಆದರೆ ಹೋಗಲಿ, ಅವಳಿಗೆ ನಾನು ಪಟ್ಟ ಕಷ್ಟಗಳು ಗೊತ್ತಿಲ್ಲ. ಅವಳನ್ನು ನಾನು ಹೊರಲಿಲ್ಲ, ಹೆರಲಿಲ್ಲ, ನಾನೇನು ಅವಳಿಗೆ ತಾಯಿಯೇ, ನಾನು ಪಟ್ಟ ಕಷ್ಟಗಳು ಅವಳಿಗೇನೂ ಗೊತ್ತಿಲ್ಲ...'

"ಅತ್ತೆ ಊಟ ಮಾಡೋಣ ಬನ್ನಿ" ಅಂತ ಸುಜಾತ ಕರೆದಳು.

"ನನಗೆ ಊಟ ಬೇಡ ಹಸಿವಿಲ್ಲ ನೀವೆಲ್ಲಾ ಊಟ ಮಾಡಿ" ಅಂತ ಮಲಗಿದ ಸುಬ್ಬಜ್ಜಿಗೆ ನಿದ್ದೆ ಕಣ್ಣು ಹತ್ತಲಿಲ್ಲ. ಹಿಂದಿನ ನೆನಪುಗಳು ಸುರುಳಿ-ಸುರುಳಿಯಾಗಿ ನೆನಪಿಗೆ ಬಂದವು.

ಸುಬ್ಬಲಕ್ಷ್ಮಿ ಹುಟ್ಟಿದ್ದು ಮಲೆನಾಡಿನ ಸುಂದರವಾದ ದಟ್ಟಕಾನನದ ನಡುವೆ ಪುಟ್ಟದೊಂದು ಹಳ್ಳಿ. ಮನೆಯಲ್ಲಿ ಎಲ್ಲರೂ ಪ್ರೀತಿಯಿಂದ ಸುಬ್ಬಿ ಸುಬ್ಬಿ ಎಂದು ಕರೆಯುತ್ತಿದ್ದರು.

ಮನೆಯಲ್ಲಿ ಅಜ್ಜ, ಅಪ್ಪ, ಅಮ್ಮ, ದೊಡ್ಡಪ್ಪ, ದೊಡ್ಡಮ್ಮ ಎಲ್ಲಾ ಇದ್ದ ತುಂಬು ಕುಟುಂಬದ ನಡುವೆ ಸಂತೋಷವಾಗಿ ಇದ್ದಳು. ಸುಬ್ಬಿ ಚಿಕ್ಕವಳಿರುವಾಗ ತುಂಬಾ ಮಾತನಾಡುವ ಸ್ವಭಾವದವಳು. ಮನೆಯಲ್ಲಿ ಎಲ್ಲರೂ ಅವಳಿಗೆ ಬೈಯುತ್ತಿದ್ದರು. 'ಎಷ್ಟು ಹೊತ್ತಿಗೂ ವಟವಟ ಅಂತ ಇರ್ತಿಯಲ್ಲ, ನಿನಗೆ ಬಾಯಿ ನೋವಾಗುವುದಿಲ್ಲವೇ' ಅಂತ. ಹಾಲು ಕರೆಯಲು ಕೊಟ್ಟಿಗೆಗೆ ಹೋದರೂ ಅಲ್ಲಿ ದನಕರುಗಳ ಜೊತೆಯಲ್ಲಿ ಮಾತನಾಡುತ್ತಿದ್ದಳು. 'ಅಮ್ಮನಂತೂ' ನಿನಗೆ ಜಾಸ್ತಿ ಮಾತನಾಡದೆ ಇರುವ ಗಂಡ ಸಿಕ್ಕಿದರೆ ಏನು ಮಾಡ್ತೀಯ' ಅಂತ ಕೇಳಿದರೆ 'ನಾನೇ

ಮಾತನಾಡಿಸುತ್ತೇನೆ 'ಅಂತ ಹೇಳುತ್ತಿದ್ದಳು.

ಮನೆ ಕೆಲಸಗಳನ್ನೆಲ್ಲ ಅಚ್ಚುಕಟ್ಟಾಗಿ ಮಾಡಿ ಮುಗಿಸುತ್ತಿದ್ದಳು ಸುಬ್ಬಿ.ವಯಸ್ಸಿಗೆ ಬಂದ ಸುಬ್ಬಿ ಸುಂದರವಾಗಿದ್ದಳು. ತಂದೆ ಶಾಮಯ್ಯ ಧಿಡೀರನೆ ಒಂದು ದಿನ ಸೀತಾರಾಮನ ತಂದೆ ಗಣೇಶಯ್ಯನ ಮನೆಗೆ ಹೋಗಿಬಂದು ಮದುವೆ ನಿಶ್ಚಯಿಸಿಬಿಟ್ಟಿದ್ದರು.

ಗಂಡ ಸೀತಾರಾಮನದು ಮಾತು ಕಡಿಮೆ, ಕೆಲಸ ಜಾಸ್ತಿ. ಕೆಲವು ಕಾಲ ಇದ್ದ ಅತ್ತೆ ಮಾವನ ಜೊತೆಯೂ ಇವಳಿಗೆ ಬಹಳ ಸಲಿಗೆ ಇರಲಿಲ್ಲ. ಹಾಗಾಗಿ ಅವರ ಜೊತೆಯೂ ಇವಳು ಜಾಸ್ತಿ ಮಾತನಾಡುತ್ತಿರಲಿಲ್ಲ. ಜೊತೆಗೆ ತಾಯಿ ಮನೆಯಲ್ಲಿ ಇದ್ದಂತೆ ಇರಲು ಸಾಧ್ಯವಿರಲಿಲ್ಲ. ಮನೆ ಸಂಸಾರ ಎನ್ನುವ ಜವಾಬ್ದಾರಿ ಜಾಸ್ತಿ ಇತ್ತು.

ಮದುವೆಯಾಗಿ ಒಂದು ವರ್ಷಕ್ಕೆ ಸುಮಾ ಹುಟ್ಟಿದಳು. ಮನೆಯಲ್ಲಿ ಅತ್ತೆ, ಮಾವ, ಗಂಡನಿಗೆ ಬಹಳ ಸಂತೋಷವಾಗಿತ್ತು. ಅದರಲ್ಲಿಯೂ ಸುಬ್ಬಿಗಂತೂ ಬಹಳ ಸಂತೋಷವಾಗಿತ್ತು. ಗಂಡು ಮಕ್ಕಳಾದರೆ ಹೆಚ್ಚಿಗೆ ಮಾತನಾಡುವುದಿಲ್ಲ. ಹೆಣ್ಣುಮಕ್ಕಳಾದರೆ ನಮ್ಮ ನೋವು ನಲಿವು ಹಂಚಿಕೊಳ್ಳುತ್ತಾರೆ. ಹೆಣ್ಣೆ ಹುಟ್ಟಿತಲ್ಲ ಎಂದು ಬಹಳ ಸಂತೋಷವಾಗಿತ್ತು.

ಸುಮಳಿಗೆ ಐದು ವರ್ಷ ಹತ್ತು ತಿಂಗಳು ಆಗುತ್ತಿದ್ದಂತೆಯೇ ಶಾಲೆಗೆ ಸೇರಿಸಲಾಯಿತು.

ಸುಮಾ ಅವಳ ವಯಸ್ಸಿಗಿಂತ ಜಾಸ್ತಿ ಬೆಳವಣಿಗೆಯಾಗಿದ್ದಳು. ಸುಬ್ಬಿಗೆ ಅವಳನ್ನು ಒಬ್ಬಳೇ ಅಚೆ-ಈಚೆ ಕಳಿಸಲು ಬಹಳ ಭಯವಾಗುತ್ತಿತ್ತು. ಸುಮಾಳಿಗೂ ಸುಹಾಸನಿಗೂ ಬಹಳ ಅಂತರ. ಸುಮಾರು ಹನ್ನೊಂದು ವರ್ಷದ ನಂತರ ಸುಹಾಸ ಹುಟ್ಟಿದ. ಅದೇ ಸಮಯದಲ್ಲಿ ಸುಮಾಳನ್ನು ಶಾಲೆ ಬಿಡಿಸಲಾಯಿತು. ಸುಮಾ ಸುಹಾಸನನ್ನು ತುಂಬಾ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಳು. ಹಾಗೇ ತಾಯಿಗೂ ಮನೆ ಕೆಲಸದಲ್ಲಿ ನೆರವಾಗುತ್ತಿದ್ದಳು.

ಸುಹಾಸ್ ಹುಟ್ಟಿ ಇಪ್ಪತ್ತು ದಿನವೂ ಕಳೆದಿರಲಿಲ್ಲ. ಸುಬ್ಬಿಯ ಗಂಡ ಸೀತಾರಾಮ ತೋಟಕ್ಕೆ ಔಷಧಿ ಹಾಕಲು ಹೋಗಿದ್ದರು. ಮರ ಹತ್ತಿದಾಗ ಕಾಲು ಜಾರಿ ಕೆಳಗೆ ಬಿದ್ದಾಗ ತಲೆಗೆ ಪೆಟ್ಟು ಬಿದ್ದು ಸ್ಥಳದಲ್ಲಿಯೇ ಅಸುನೀಗಿದರು. ವಿಷಯ ತಿಳಿದ ಸುಬ್ಬಿ ಕಂಗಾಲಾಗಿದ್ದಳು. ಇನ್ನೂ ಹಸಿ ಮೈ ಬಾಣಂತಿ. ಸುಬ್ಬಿಯನ್ನು ಸಮಾಧಾನ ಮಾಡುವುದೇ ದೊಡ್ಡ ಸಂಗತಿಯಾಗಿತ್ತು. ಸುಬ್ಬಿ ತುಂಬಾ ಸಮಯ ಮಂಕಾಗಿದ್ದಳು. ಅವಳ ದೇಹ ಮನಸ್ಸು ಸುಧಾರಿಸಲು ತುಂಬಾ ಸಮಯವೇ ಹಿಡಿದಿತ್ತು. ಮುಂದಿನ ಭವಿಷ್ಯವೇ ಅವಳಿಗೆ ಕತ್ತಲಾಗಿತ್ತು.

ಮಕ್ಕಳನ್ನು ಕಟ್ಟಿಕೊಂಡು ನಾನು ಮುಂದೆ ಹೇಗೆ ಬದುಕು ಸವೆಸಲಿ ಎನ್ನುವುದೇ ಅವಳ ಚಿಂತೆಯಾಗಿತ್ತು.

[illegible]

[illegible]

[illegible]

[illegible]

ತೀರ್ಥಹಳ್ಳಿಯ ಪಿಯುಸಿ ಕಾಲೇಜಿಗೆ ಸೇರಿಸಿದರು. ಪಿಯುಸಿಯಲ್ಲಿಯೂ ಕೂಡ ಒಳ್ಳೆಯ ಅಂಕಗಳನ್ನು ತೆಗೆದುಕೊಂಡು ತೇರ್ಗಡೆಯಾಗಿದ್ದ. ನಂತರ ಬ್ಯಾಂಕ್ ಎಕ್ಸಾಮ್ ಅನ್ನು ಬರೆದು ಅದರಲ್ಲಿಯೂ ತೇರ್ಗಡೆಯಾಗಿ ಸಂದರ್ಶನದಲ್ಲಿ ಪಾಸಾಗಿ ತೀರ್ಥಹಳ್ಳಿಯ ಬ್ರಾಂಚಿನಲ್ಲೇ ಕೆಲಸಕ್ಕೆ ಸೇರಿದ್ದ.

ಒಂದು ತಿಂಗಳ ಸಂಬಳ ತೆಗೆದುಕೊಂಡ ನಂತರ "ಅಮ್ಮ, ನೀನಿನ್ನು ಹಾಲು ವ್ಯಾಪಾರ ಮಾಡುವುದು ಬೇಡ. ಮನೆ ಹಾಲಿಗಾಗಿ ಒಂದು ದನವನ್ನು ಇಟ್ಟು ಕೊಂಡರೆ ಸಾಕು. ಮನೆಗೆಲಸವನ್ನು ಮಾಡಿಕೊಂಡು ಸುಖವಾಗಿರು" ಎಂದು ಹೇಳಿದ್ದ. ಸುಹಾಸಗೆ ಕೆಲಸ ಸಿಕ್ಕಿ ಎರಡು ವರ್ಷಕ್ಕೆ ಅವನ ಮದುವೆಯನ್ನು ಮಾಡಿದ್ದಳು ಸುಬ್ಬಿ.

ನವ್ಯ ಹುಟ್ಟಿದ ನಂತರ ಮಗುವನ್ನು ಆಡಿಸುವುದರಲ್ಲಿ ನೆಮ್ಮದಿಯನ್ನು ಕಂಡು ಕೊಂಡಿದ್ದಳು. ಅಜ್ಜಿ ಮೊಮ್ಮಗಳು ತುಂಬಾ ಪ್ರೀತಿಯಿಂದ ಇದ್ದರು. ಮೊಮ್ಮಗಳಲ್ಲಿ ಸುಮನನ್ನು ಕಾಣುತ್ತಿದ್ದರು. ನವ್ಯ ಬೆಳೆದು ದೊಡ್ಡವಳಾಗುತ್ತಿದ್ದಂತೆ ಅವಳಿಗೆ ಅಜ್ಜಿ ಪ್ರೀತಿ ಬೇಡ ವಾಗಿತ್ತು.ಅಜ್ಜಿ ಅವಳಿಗೆ ಇಷ್ಟವಾಗುತ್ತಿರಲ್ಲಿಲ್ಲ. ಬೆಳೆಯುವ ವಯಸ್ಸಿನಲ್ಲಿ ಈ ರೀತಿಯ ವರ್ತನೆ ಸಹಜ ಅಂತ ಸುಬ್ಬಜ್ಜಿ ನವ್ಯ ಏನಾದರೂ ಹೇಳಿದರೆ ಮೊಮ್ಮಗಳ ಮೇಲಿನ ಪ್ರೀತಿಯಿಂದ ಸುಮ್ಮನಿರುತ್ತಿದ್ದಳು.

ಯೋಚಿಸುತ್ತಾ ಮಲಗಿದ್ದ ಸುಬ್ಬಜ್ಜಿಗೆ ಯಾವಾಗ ನಿದ್ದೆ ಬಂದಿತೋ.. ಗೊತ್ತಾಗಲಿಲ್ಲ.

❖ ❖ ❖

"ರೀ, ಏನ್ರೀ, ಇವತ್ತು ವಾಕಿಂಗ್ ಹೋಗ್ತಾ ನನ್ ಫ್ರೆಂಡ್ ಆಶಾ ಇದ್ದಾಳಲ್ಲ ಅವಳು ಹೇಳಿದಳು. ಅವಳಿಗೆ ನಿಮ್ಮ ಅಕ್ಕ ಸುಮನಿಗೆ ನೋಡಿದ ಹುಡುಗ ದಿನಕರ ಗೊತ್ತಂತೆ. ಅವರು ಇಲ್ಲೇ ತೀರ್ಥಹಳ್ಳಿಯಲ್ಲಿ ಸಬ್ ಇನ್ಸ್‌ಪೆಕ್ಟರ್ ಆಗಿದ್ದಾರಂತೆ. ಅವರಿಗೆ ಒಬ್ಬ ಮಗನೂ ಇದ್ದಾನಂತೆ. ನಮ್ಮ ನವ್ಯಾಳ ಕಾಲೇಜೇ ಅಂತೆ ರೀ... ನಾವು ಒಂದು ಸಲ ದಿನಕರನನ್ನು ಮಾತನಾಡಿಸಲೇ ಬೇಕು.ಸುಮನಾ ಆತ್ಮಹತ್ಯೆಗೆ ಕಾರಣವೇನೆಂದು ತಿಳಿದುಕೊಳ್ಳಲೇಬೇಕು" ಸುಜಾತ ಒಂದೇ ಉಸಿರಿನಲ್ಲಿ ಹೇಳಿದಾಗ ಸುಹಾಸ ತಾಳ್ಮೆಯಿಂದ ಉತ್ತರಿಸಿದ.

"ನೋಡು ಸುಜಾತಾ ಅವರು ಈ ಊರಿಗೇ ಸಬ್ ಇನ್ಸೆಕ್ಟರ್ ಆಗಿ ಬಂದಿದಾರೆ ಅಂದ ಮೇಲೆ ಅವರು ನಮ್ಮ ಬ್ಯಾಂಕಿನ ಗ್ರಾಹಕರೇ ಆಗಿರುತ್ತಾರೆ. ನಾನು ವಿಚಾರಿಸುತ್ತೇನೆ. ಪರಿಚಯ ಮಾಡಿಕೊಂಡು ನಾನೇ ನಿಧಾನಕ್ಕೆ ಅವರ ಹತ್ತಿರ ಮಾತನಾಡುತ್ತೇನೆ. ನೀನು ಆತುರ ಪಡಬೇಡ."

ಸುಜಾತಾಳಿಗೆ ಗಂಡನ ಪ್ರತಿಕ್ರಿಯೆ ನೀರಸವೆನಿಸಿತು. ಅತ್ತೆ ಬೇಗ ಸುಧಾರಿಸಿಕೊಂಡರೆ ಒಳ್ಳೆಯದು ಅನ್ನುತ್ತಾ ಒಳನಡೆದಳು.

❖ ❖ ❖

ಜೀವನ್ ಬಗ್ಗೆ ಯೋಚಿಸುತ್ತಾ ಕುಳಿತುಕೊಂಡಿದ್ದ ಸರಿತಾಳಿಗೆ ಹೊತ್ತು ಹೋಗಿದ್ದೇ ಗೊತ್ತಾಗಲಿಲ್ಲ. ಗಡಿಯಾರ ನೋಡಿ ಇಷ್ಟು ಹೊತ್ತೂ ನಾನು ಬೇಡದ ಯೋಚನೆಯಲ್ಲಿ ಮುಳುಗಿ ವ್ಯರ್ಥ ಸಮಯ ಹಾಳು ಮಾಡಿದೆನಲ್ಲಾ ಎನಿಸಿತು, ತನಗೆ ತಾನೇ ಬೈದುಕೊಂಡು, ನನ್ನ ಜೀವನದ ಗುರಿಯೇನಿದ್ದರೂ ಎಂಬಿಬಿಎಸ್ ಮಾಡಿ ವೈದ್ಯಳಾಗುವುದು. ಅದರಲ್ಲಿಯೂ ನೀಟ್‌ನಲ್ಲಿ ಒಳ್ಳೆಯ ಅಂಕ ಪಡೆದು ಬೆಂಗಳೂರಿನ ಬಿಎಂಸಿಯಲ್ಲಿ ಸೀಟು ಪಡೆದುಕೊಳ್ಳುವುದು. ಪ್ರೀತಿ–ಪ್ರೇಮ ಅಂತ ಯೋಚಿಸುತ್ತಿದ್ದರೆ ಓದಲು ಮನಸ್ಸು ಬರುವುದಿಲ್ಲ ಎಂದು ಕೊಂಡು ಓದಲು ಕುಳಿತಳು.

ಅಧ್ಯಾಯ 7

ಎನ್ ವಿಶ್ವನಾಥ್

ತಡರಾತ್ರಿ ಸುಮಾರು 10 ಗಂಟೆಗೆ ಸುಹಾಸ ಮನೆಗೆ ಬಂದು, ಊಟ ಮಾಡಿ ಮಲಗಲು ರೆಡಿಯಾದ. ಆಫೀಸಿನದ್ದೋ ಕೆಲಸ ಬಿಗು. ಸಂಬಳಕ್ಕೆ ತೊಂದರೆ ಇಲ್ಲ. ಇಂದು ಕೆಲಸ ಮುಗಿದ ಮೇಲೆ ಸ್ನೇಹಿತ ರವಿಯನ್ನು ಕಂಡುಬಂದಿದ್ದ.

ರವಿಗೆ ಸರಿ ಸುಮಾರಿಗೆ ಸುಹಾಸನ ಕಷ್ಟಗಳ ಬಗ್ಗೆ ಗೊತ್ತಿತ್ತು. ಹಾಗೆಯೇ ಸುಬ್ಬಜ್ಜಿಯ ಈಗಿನ ಪರಿಸ್ಥಿತಿಯೂ ತಿಳಿದಿತ್ತು. ಏನನ್ನಾದರೂ ಹೇಳಲು ಮಾಡಲು ಇದು ಸರಿಯಾದ ಸಮಯ ಅಲ್ಲ, ಬದಲಾಗಿ ಈ ವಿಷಯದ ಬಗ್ಗೆ ತನ್ನ ಗೆಳೆಯರ ಬಳಗದಲ್ಲಿ ಸುಹಾಸನಿಗೆ ಸಂಬಂಧಿಸಿದ್ದಲ್ಲ ಎಂಬಂತೆ ವಿಚಾರ ವಿಮರ್ಶೆ ನಡೆಸಿದ್ದನು. ಹಾಗಾಗಿ ಸುಹಾಸ ಇಂದು ತಡವಾಗಿ ಮನೆ ಸೇರಿದ್ದ.

ರಾತ್ರಿ ಬಹಳ ಹೊತ್ತಾದರೂ ಅವನಿಗೆ ನಿದ್ರೆಯೇ ಬರಲಿಲ್ಲ. ಸುಜಾತ ಆಗಲೇ ಮಲಗಿದ್ದಳು. ಯಾರೂ ಎಚ್ಚರ ಇಲ್ಲದಿರುವುದನ್ನು ಮನಗಂಡು ಎದ್ದು ಹೊರ ನಡೆದ. ಮೊದಲೇ ತಯಾರಿ ನಡೆಸಿದ್ದ ಸುಹಾಸ ಎರಡು ಸಿಗರೇಟು ತಂದು ಒಂದಕ್ಕೆ ಬೆಂಕಿ ಹಚ್ಚಿ ಪೂರ್ತಿಯಾದ ದಂ ಎಳೆದು ಉಸಿರು ಬಿಟ್ಟ, ಸ್ವಲ್ಪ ನಿರಾಳ, ಆದರೂ ಏನೂ ಖಚಿತವಿಲ್ಲ.ಮನದೊಳಗೆ ಮುಂದೇನು ಮಾಡಬೇಕು ಎಂಬ ಚಿಂತೆ ಕಾಡುತ್ತಿತ್ತು.

ಬೆಳಗ್ಗೆ ನಡೆದ ವಿಮರ್ಶೆ ಬಗ್ಗೆ ಆಲೋಚಿಸತೊಡಗಿದ.

ಅಮ್ಮನಿಗೆ ಏನಾಗಿದೆ? ಹೇಗೆ ಸರಿ ಮಾಡೋದು? ಹಾಗೇ ಬಿಟ್ಟರೆ ಮುಂದೆ ತೊಂದರೆ ಜಾಸ್ತಿಯಾಗಬಹುದಾ?

ಸ್ನೇಹಿತರ ಪ್ರಕಾರ, ಅಮ್ಮನಿಗೆ ಸುಮಕ್ಕನ ನೆನಪು ಕಾಡ್ತಾ ಇದೆ ಹಾಗಾಗಿ ಹೀಗೆಲ್ಲ ಇರಬಹುದು ಅಂತಾರೆ. ಅಂದು ಆದ ಆಘಾತ ಸುಪ್ತವಾಗಿದ್ದು ಈಗ

ಕಾಣಿಸಿಕೊಳ್ಳುತ್ತಿದೆಯೇ? ಒಮ್ಮೊಮ್ಮೆ 'ಪೊಲೀಸ್ ಬಂದ' ಅಂತ ಎಲ್ಲಾ ಹೇಳ್ತಾಳೆ

ಪೊಲೀಸರು ಅಂದರೆ ಏನೋ ಒಂಥರಾ ಭಯ.

ಅಲ್ಲದೆ ಪೊಲೀಸರು ನಿಷ್ಪರಲ್ಲ, ರಾಜಕೀಯಕ್ಕೆ ಕಳ್ಳರಿಗೆ ಮಧ್ಯವರ್ತಿಗಳು, ಎಷ್ಟೋ ಬಡ ಜನರನ್ನು ಬಲಿಪಶು ಮಾಡಿದ್ದಾರೆ ಅಂತ ಕೆಲವರು ಹೇಳ್ತಾರೆ. ಆದ್ರೆ ಎಲ್ಲ ಪೊಲೀಸರು ಕೆಟ್ಟವರಿರೋದಿಲ್ಲವಲ್ಲ. ಕೆಟ್ಟವರು ಒಳ್ಳೆಯವರ ಮಧ್ಯೆ ಎಲ್ಲಾ ಕಡೇನೂ ಇರ್ತಾರೆ. ಯಾರು ಒಳ್ಳೆಯವರು ಯಾರು ಕೆಟ್ಟವರು ಅಂತ ಮೇಲ್ನೋಟಕ್ಕೆ ಗೊತ್ತಾಗೋದೇ ಇಲ್ಲ.

ಸುಹಾಸನಿಗೆ ಅವರಿವರ ಮಾತುಗಳೆಲ್ಲಾ ತಲೆಗೆ ಸುತ್ತಿಗೇಲಿ ಮೊಳೆ ಹೊಡೆದಂತೆ ಹೊಕ್ಕಿ ಕೂತಿತ್ತು.

ಈ ಆಲೋಚನೆ ನಡುವೆ ಸುಹಾಸನಿಗೆ ಕೈಸುಟ್ಟಾಗಲೇ ಎಚ್ಚರಾಗಿದ್ದು. ಒಂದು ಸಿಗರೇಟ್ ಮುಗಿಸಿದ್ದ!

ದಿನಕರನ ಬಗ್ಗೆ ಏನೋ ಒಂದು ರೀತಿಯ ಕೆಟ್ಟ ಅಭಿಪ್ರಾಯ ಬರತೊಡಗಿತ್ತು.

ಸುಹಾಸನಿಗೆ ಚಟ ಅಂತ ಒಂದಿದ್ದರೆ ಅದು ಸಿಗರೇಟ್ ಮಾತ್ರ. ಆದ್ರೂ ಆತ ತನ್ನ ಲಿಮಿಟ್ ದಾಟಿದವಲ್ಲ.

ಸಿಗರೇಟ್ ಮುಗಿಸಿದವ ಕೈ ತೊಳೆದು, ಇನ್ನೊಂದು ಸಿಗರೇಟ್ ಎತ್ತಿಟ್ಟು, ಬಾಯಿ ಮುಕ್ಕಳಿಸಿ ಮತ್ತೆ ಹೊರ ಜಗಲಿಗೆ ಬಂದು ಅಂದು ನಡೆದ ಚರ್ಚೆ ಬಗ್ಗೆ ಯೋಚಿಸುತ್ತಾ ಕುಳಿತ. ಅವನನ್ನು ಹಾಗೇ ನಿದ್ರೆ ಆವರಿಸಿತ್ತು

ಸ್ವಲ್ಪ ಹೊತ್ತಿಗೆ ಯಾರೋ ಬೈಕಿನಲ್ಲಿ ಗಸ್ತು ಹೊಡೀತಾ ಹೋದಂತಾಯಿತು.

ಇನ್ನು ಸ್ವಲ್ಪ ಹೊತ್ತಿಗೆ ಯಾರೋ ದೂರದಲ್ಲಿ ಮಬ್ಬು ಬೆಳಕಲ್ಲಿ ತನ್ನೆಡೆಗೆ ನಡೆದು ಬಂದಂತೆ ಅನಿಸಿತು. ಯಾರಿರಬಹುದು? ಎಂದು ಸುಹಾಸ ಆಲೋಚಿಸ ತೊಡಗಿದ. ಆವಾಗಲೇ ಒಂದು ಸ್ಥೂಲಕಾಯದ ಶರೀರ ಇವನ ಮುಂದೆ ಬಂದು ನಿಂತಿತು.

"ನಿಮ್ಮನ್ನ ಸಾಹೇಬ್ರು ಕರೀತಿದಾರೆ" ಎಂದ ಪೇದೆ.

ಸುಹಾಸನಿಗೆ ಎದೆ ಬಡಿತ ಜೋರಾಯಿತು.

ಏನಾಯ್ತು? ಯಾರಿವರು? ಏಕೆ ಬಂದಿದ್ದಾರೆ ಎಂದು ಗಾಬರಿ ಶುರುವಾಯ್ತು.

ತಡಬಡಿಸುತ್ತಾ ಸುಹಾಸ ಕೇಳಿದ "ಯಾರ ಸಾಹೇಬ್ರು? ಈ ರಾತ್ರಿ ನನ್ನನ್ನು ಯಾಕೆ ಕರೀತಾ ಇದಾರೆ?"

ಪೇದೆ : "ನೀವೇ ಕೇಳುವಿರಂತೆ ಎದ್ದೇಳೋ ಬಡವ ರ್‍ಯಾಸ್ಕಲ್" ಅಂದ.

ಸುಹಾಸನಿಗೆ ಒಳೊಳಗೇ ಭಯ ಹೆಚ್ಚಾಯ್ತು. ಆದರೂ ಹೋಗದೆ ಬೇರೆ ವಿಧಿಯಿಲ್ಲ ಎಂದು ಪೇದೆ ಜೊತೆ ನಡೆದ. ಅಲ್ಲಿ ಇನ್ನೊಬ್ಬ ಪೊಲೀಸ್ ಇದ್ದ. ಅವನ ಹತ್ರ ಹೋಗಿ. "ನಮಸ್ತೆ ಸರ್" ಎಂದ.

ಆ ಪೊಲೀಸ್ ಒಳ್ಳೆ ಗಟ್ಟಿ ಮುಟ್ಟಾದ ಆಳು. ಎಲ್ಲೋ ಸ್ವಲ್ಪ ಕುಡಿದಿದ್ದಾನೆ ಅಂತ ಅನ್ನಿಸಿತು ಸುಹಾಸನಿಗೆ.

"ಏನಯ್ಯ ಏನ್ ಮಾಡ್ತಾ ಇದ್ಯಾ" ಗಟ್ಟಿ ಧ್ವನೀಲಿ ಕೇಳಿದ ಪೊಲೀಸ್.

ಸುಹಾಸ "ಏನಿಲ್ಲ ಸಾ...ಹೀಂಗೇ.. ಏನೋ ವಿಚಾರ ಮಾಡ್ತಾ ಇದ್ದೆ" ಎಂದ.

ಪೊಲೀಸ್ "ಏನು ವಿಚಾರ" ಎಂದಾಗ ಸುಹಾಸ ತಡಬಡಿಸಿ "ಏನಿಲ್ಲ... ಏನಿಲ್ಲ" ಎಂದ.

ಅಷ್ಟು ಹೊತ್ತಿಗೆ ಮನೆಯ ಅಂಗಳದಿಂದ ಸುಜಾತ "ಏನಾಯ್ತು" ಅಂದಳು.

ಸುಹಾಸನಿಗೆ ಗೊತ್ತಿಲ್ಲದ ಹಾಗೆ ಅವಳ ಬಗೆಗಿನ ಕಾಳಜಿಯಿಂದ ಸಿಟ್ಟು ಬಂದು "ನೀನು ಮನೆಯೊಳಗೆ ಹೋಗು" ಅಂದ ಜೋರಾಗಿ. ಸುಹಾಸನ ಕೂಗು ಕೇಳಿ ಪೊಲೀಸು ಮುಖಕ್ಕೆ ಟಾರ್ಚು ಬಿಟ್ಟ. ಕಣ್ಣು ಕಾಣಿಸದಾಯಿತು.ಇನ್ನೊಮ್ಮೆ ಸುಜಾತ ಕೇಳಿದಳು "ರೀ ಏನಾಯ್ತು?"

ತಕ್ಷಣ ಸುಹಾಸ ಕಣ್ಣುಬಿಟ್ಟು ಎದ್ದು ನೋಡಿದರೆ ಎದುರುಗಡೆ ಸುಜಾತ ಮಾತ್ರ. ಬೇರೆ ಯಾರೂ ಇಲ್ಲ. ಮುಖವೆಲ್ಲಾ ಬೆವತಿತ್ತು. ಒಂದೆರಡು ಕ್ಷಣ ಮಂಕಾಗಿದ್ದ ಸುಹಾಸ ಇಷ್ಟು ಹೊತ್ತೂ ಕಂಡದ್ದು ಕನಸು ಅಂತ ಸಮಾಧಾನ ತಂದುಕೊಂಡ.

ಸುಜಾತಾ ನಿದ್ರೆಯಿಂದ ಎದ್ದು ನೀರು ಕುಡಿಯಲು ಬಂದಾಗ ಸುಹಾಸ ಜಗುಲಿಯಲ್ಲಿ ಮಲಗಿ "ಏನಿಲ್ಲ ಏನಿಲ್ಲ" ಎಂದು ಕನವರಿಸಿದ್ದು ಕಂಡು "ರೀ ಏನಾಯ್ತು" ಎಂದು ಎಚ್ಚರಿಸಿದ್ದಳು.

ಸುಜಾತಳ ಪ್ರಶ್ನಾತ್ಮಕ ಮುಖ ಕಂಡು 'ಏನಿಲ್ಲ' ಎಂದು ಸುಹಾಸ ಮೌನವಾಗಿ ಒಳನಡೆದ. ಪೊಲೀಸರ ಬಗೆಗಿನ ಭಯ ತಾತ್ಸಾರ ಅಸೂಯೆ ಎಲ್ಲವೂ ಅವನನ್ನು ಆವರಿಸಿತ್ತು. ಕನಸಾಗಿ ಕಾಡಿತ್ತು

ದಿನಕರ, ಸುಬ್ಬಿಯ ದೂರ ಸಂಬಂಧಿ ಹುಡುಗ. ಅವನ ತಂದೆ ತಾಯಿ ಬಹಳ ಕಷ್ಟದ ಜೀವನ ನಡೆಸುತ್ತಿದ್ದರು. ದಿನಕರ ದ್ವಿತೀಯ ಪಿಯುಸಿಯಲ್ಲಿ ಟಾಪರ್ ಆಗಿದ್ದರೂ ತಂದೆ-ತಾಯಿಗೆ ಹೆಚ್ಚು ಭಾರವಾಗಬಾರದು ಎಂದು ಆತ ವಿದ್ಯಾಭ್ಯಾಸ ಮುಂದುವರಿಸದೆ ಪೋಲಿಸ್ ಕೆಲಸಕ್ಕೆ ಸೇರಿಕೊಳ್ಳುವ ಯೋಚನೆ ಮಾಡಿದ್ದ. ಕಾಲೇಜಿನ ಆಟ-ಪಾಠದಲ್ಲಿ ಚುರುಕಾಗಿದ್ದ ಅವನು ಅನೇಕ ಪದಕಗಳನ್ನು ಗಳಿಸಿ ಕೊಂಡಿದ್ದ. ಶಿಸ್ತಿನ ಸಿಪಾಯಿ. ನಾಲ್ಕು ಹಂತಗಳಲ್ಲಿ ಉತ್ತೀರ್ಣನಾಗಿ ಪೇದೆ ಕೆಲಸ ಗಳಿಸಿದ್ದ. ಎಂತಹದ್ದೇ ಕೆಲಸವಿರಲಿ ಕೆಲಸ ಅಚ್ಚುಕಟ್ಟು.

ದಿನಕರನಿಗೆ ಸುಮಳನ್ನು ತಂದೆ ತಾಯಿ ತೋರಿಸಿದಾಗ ಇನ್ನೂ ಚಿಕ್ಕವಳು ಎಂದು ಬೇಡವೆನಿಸಿದ್ದರೂ ಹಿರಿಯರ ಮಾತಿಗೆ ಇಲ್ಲ ಎನ್ನಲಾಗದೇ ಒಪ್ಪಿಕೊಂಡಿದ್ದ. ಹುಡುಗಿಯನ್ನು ನೋಡಿದ ಮೇಲೆ ಆಗಬಹುದು ಅಂತಲೂ ಅನಿಸಿತ್ತು. ಅದೊಂದು ದಿನ ಅವಳನ್ನು ಪೇಟೆಗೂ ಕರೆದುಕೊಂಡುಹೋಗಿ ಮನೆಗೆ

ತಂದು ಬಿಟ್ಟಿದ್ದ.ಅದೇ ಕೊನೆ.ಸುಮಾ ಶವವಾಗಿಬಿಟ್ಟಿದ್ದಳು.ಏಕೆ ಹೇಗೆ ಅನ್ನುವುದು ನಿಗೂಢವಾಗೇ ಉಳಿದುಹೋಯ್ತು

ದಿನಕರ ಅವನ ಕೆಲಸ ಹಾಗೂ ಚಾಣಾಕ್ಷತನದಿಂದ ಇಲಾಖೆಯಲ್ಲಿ ಉತ್ತಮ ಹೆಸರು ಗಳಿಸಿದ್ದ ಮತ್ತು ಬೇಗ ಬಡ್ತಿ ಹೊಂದಿ ಸಬ್ ಇನ್ಸ್‌ಪೆಕ್ಟರ್ ಆಗಿದ್ದ.

ಮದುವೆಯಾಗಿ ಒಬ್ಬ ಗಂಡು ಮಗನನ್ನೂ ಪಡೆದಿದ್ದ. ಇದೀಗ ಸುಖವಾದ ಸಂಸಾರ ಅವನದಾಗಿತ್ತು

ಬೆಳಿಗ್ಗೆ ಸುಹಾಸ ಎದ್ದು ಚಾವಡಿಗೆ ಬಂದು ಕುಳಿತ. ರಾತ್ರಿ ನಿದ್ರೆ ಸರಿಯಾಗಿ ಆಗಿರಲಿಲ್ಲ.

ಎಷ್ಟೋ ಹೊತ್ತು ನಿದ್ದೆ ಬಾರದಿದ್ದದ್ದು.ಆಮೇಲೆ ಬಿದ್ದ ಕನಸು. ಅವನ ನಿದ್ದೆ ಹಾಳು ಮಾಡಿತ್ತು. ಇವತ್ತು ಆಫೀಸಿಗೆ ರಜೆ ಹಾಕಿ ದಿನಕರನನ್ನು ಏಕೆ ಕಾಣಬಾರದು. ತೀರ್ಥಹಳ್ಳಿ ಸ್ಟೇಶನ್‌ಗೆ ಹೋಗಿ ಭೇಟಿಯಾಗಿ ಬಂದುಬಿಡೋಣವೇ ಎಂದು ಯೋಚಿಸಿದ.

ಅಧ್ಯಾಯ 8

ರೇಖಾದೇವಿ ಕೆ.

ಕಾಲೇಜಿನಲ್ಲಿ ತರಗತಿಯಿಂದ ಹೊರಬರುತ್ತಿದ್ದ ಜೀವನ್ ನನ್ನು ಕಂಡೊಡನೆಯೇ ನವ್ಯಾಳ ಮುಖವರಳಿತು. ಆತನೂ ಹಸನ್ಮುಖದಿಂದ ನವ್ಯಾಳತ್ತ ಬರ ತೊಡಗಿದ.ಇಬ್ಬರೂ ಕಾಲೇಜಿನ ಮೈದಾನದಲ್ಲಿ ಮುಂದಿನ ಭವಿಷ್ಯದ ಬಗ್ಗೆ ಮಾತನಾಡುತ್ತಾ ಸಾಗಿದರು. ನವ್ಯಾಳು ತಾನು ಮುಂದೆ ಮನೋವೈದ್ಯೆ ಯಾಗಬೇಕೆಂಬ ಮನದಿಂಗಿತವನ್ನು ಜೀವನ್ ನೊಡನೆ ಹೇಳಿಕೊಂಡಳು. ಆತನಾದರೋ ಅದನ್ನು ಕೇಳಿ ಫಕ್ಕನೆ ನಕ್ಕು ಬಿಟ್ಟನು. ನಗುವಂತಹುದು ಏನಾಯ್ತೀಗ' ಮುಖ ಊದಿಸಿಕೊಂಡಳು ನವ್ಯಾ. 'ಅಲ್ವೇ ನವ್ಯಾ, ನೀನು ಮನೋ ವೈದ್ಯಳಾಗಬೇಕೆಂದು ಹೇಳಿದ್ದೇನೋ ಸರಿ. ಆದರೆ ಅದಕ್ಕೆ ತಕ್ಕ ಮನಃಸ್ಥಿತಿ ನಿನ್ನಲ್ಲೇ ಇಲ್ಲವಲ್ಲೇ? ನಿನ್ನ ಮನೆಯಲ್ಲೇ ಇರುವ ಹಿರಿಯ ಜೀವ ಅಜ್ಜಿಯ ಕಡೆಗೊಮ್ಮೆ ನೋಡು. ನೀನೇ ಆ ದಿನ ಹೇಳಿದ್ದೆಯಲ್ಲವೇ ಅವರು ತನ್ನ ಮಗಳನ್ನು ಕಳೆದುಕೊಂಡ ಬಳಿಕ ತೀರಾ ಮೌನಿಯಾಗಿ ಬಿಟ್ಟರೆಂದು. ಅವರಿಗೆ ಹುಚ್ಚು ಹಿಡಿದಿದೆ, ಹೊರಗೆ ಮರ, ಕಲ್ಲು, ಬಂಡೆಗಳ ಬಳಿಕ ಈಗ ಮನೆಯ ಬೆಕ್ಕಿನೊಡನೆ ಒಬ್ಬರೇ ಮಾತನಾಡುತ್ತಾರೆಂದು. ಹಾಗಿದ್ದ ಮೇಲೆ ನೀನು ಅವರ ಮನಸ್ಥಿತಿಯನ್ನು ಅರಿಯುವ ಪ್ರಯತ್ನ ಮಾಡಲಿಲ್ಲವೇಕೆ? ಅವರನ್ನು ಪ್ರೀತಿಯಿಂದ ಮಾತನಾಡಿಸಿ, ವಿಶ್ವಾಸ ಮೂಡಿಸಿ ಅವರ ಮನದಾಳದ ನೋವನ್ನು ಹೊರ ಹಾಕಲು ಪ್ರಯತ್ನಿಸಲಿಲ್ಲವೇಕೆ? ಮನೋವೈದ್ಯರಲ್ಲಿ ಇರಬೇಕಾದ ಮೊದಲ ಹೆಜ್ಜೆಯೇ ಪ್ರತಿಯೊಂದು ಜೀವಿಯನ್ನು ನೋಡುವ ನಮ್ಮ ದೃಷ್ಟಿಕೋನ ಬದಲಾಗಬೇಕು. ಇನ್ನೊಬ್ಬರನ್ನು ಆಡಿ ನಗುವ ಬದಲು ಅವರ ಜಾಗದಲ್ಲಿ ನಿಂತು ಅವರ ಮನಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ಸುರಿಯುತ್ತಿರುವ ಜಡಿ ಮಳೆಯನ್ನು

ಕಪಿಸುವ ಬದಲು ಸೋರುತ್ತಿರುವ ಮಾಳಿಗೆಯನ್ನು ಸರಿಪಡಿಸಬೇಕು.ಅವರು ಮೌನವಾಗಿದ್ದಾರೆಂದರೆ ನುಡಿಯಲು ಮಾತುಗಳಿಲ್ಲವೆಂದಲ್ಲ. ಮೌನದ ಹಿಂದೆ ಅಡಗಿರುವ ನೋವನ್ನು, ವೇದನೆಯನ್ನು ಗುರುತಿಸುವ ಜಾಣ್ಮೆಯಿರಬೇಕು. ನಮ್ಮೆದುರಿಗಿರುವವರ ಮಾತುಗಳನ್ನು ಸಹನೆಯಿಂದ ಕೇಳುವ, ಸೂಕ್ಷ್ಮವಾಗಿ ಗಮನಿಸುವ, ನೋವಿಗೆ ಸ್ಪಂದಿಸುವ ಮನಸ್ಥಿತಿ ಉಳ್ಳವರಾಗಿರಬೇಕು. ಸುಪ್ತ ಮನಸ್ಸಿನ ದ್ವಂದ್ವಗಳನ್ನು ನಿವಾರಿಸುವಲ್ಲಿ ಸೈಕೋ ಥೆರಪಿಯನ್ನು ಬಳಸಿಕೊಂಡು ಮಾನಸಿಕ ತೊಂದರೆಗಳನ್ನು ನಿವಾರಿಸಬಹುದು. ನಿನ್ನಲ್ಲಿ ಸಹನೆ, ತಾಳ್ಮೆ, ಪರರ ಬಗ್ಗೆ ಕಾಳಜಿ, ಅನುಕಂಪಗಳಿದ್ದರೆ ನೀನು ಖಂಡಿತಾ ಮನೋವೈದ್ಯೆಯಾಗ ಬಹುದು. ಡಿಗ್ರಿಯಲ್ಲಿ ಮನಃಶಾಸ್ತ್ರವನ್ನು ವಿಶೇಷ ಅಧ್ಯಯನವನ್ನಾಗಿ ತೆಗೆದು ಕೊಂಡು ಅದರಲ್ಲಿಯೇ ಮಾಸ್ಟರ್ಸ್ ಪದವಿಯನ್ನು ಪಡೆಯಬಹುದು, ಅಥವಾ MBBS ಮಾಡಿ MD ಅಥವಾ ಮನಃಶಾಸ್ತ್ರದಲ್ಲಿ ಡಿಪ್ಲೊಮಾ (DPM) ಮಾಡಬಹುದು. ಆಯ್ಕೆ ನಿನ್ನದು." ಜೀವನ್‌ನ ಮಾತು ನಿಲ್ಲುವುದಕ್ಕೂ ಮುಂದಿನ ತರಗತಿ ಆರಂಭವಾಗುವ ಗಂಟೆ ಬಾರಿಸುವುದಕ್ಕೂ ಸರಿಯಾಯ್ತು. ಲಗುಬಗೆಯಿಂದ ಜೀವನ್ ತರಗತಿಗೆ ತೆರಳಿದರೆ ನವ್ಯಾಳ ತಲೆಯಲ್ಲಿ ಆತನಾಡಿದ ಮಾತುಗಳೇ ಅನುರಣಿಸುತ್ತಿತ್ತು. ಆತನ ಒಂದೊಂದು ಮಾತುಗಳೂ ಅವಳ ಮನದಾಳಕ್ಕೆ ಇಳಿದಿತ್ತು. ತನಗೆ ತಿಳಿದಿರುವುದೆಷ್ಟು ಕೊಂಚ, ತಿಳಿಯಬೇಕಾದದ್ದು ಎಷ್ಟು ಅಗಾಧ ಎಂದು ಮನವರಿಕೆಯಾಯ್ತು. ನೆಲ ಬಿಟ್ಟು ಮೇಲೇರಿದಾಗ ಧರೆಗಿಳಿಸುವ, ಕುಗ್ಗಿದಾಗ ಮೇಲೆತ್ತುವವರೇ ನಿಜವಾದ ಸ್ನೇಹಿತರು ಎನ್ನುವುದಕ್ಕೆ ಜೀವನ್ ನಂತಹ ಗೆಳೆಯನೇ ಸಾಕ್ಷಿ. ಬದುಕಿನ ಅಭ್ಯುದಯಕ್ಕೆ, ಅನುಕ್ಷಣವೂ ಎಚ್ಚರ ತಪ್ಪದಂತೆ ಎಚ್ಚರಿಸುತ್ತಾ, ಅಡಿಗಡಿಗೂ ತಿದ್ದಿ ಹೇಳುವ ನಿಷ್ಠೂರವಾದಿ ಗೆಳೆಯರಿರಬೇಕು ಎನ್ನುವುದು ಎಷ್ಟು ಸತ್ಯವಾದ ಮಾತು.ನಿಜ.ಅಜ್ಜಿ ತನ್ನನ್ನು ಬಾಲ್ಯದಲ್ಲಿ ಮೊಗ್ಗಿನ ಜಡೆ ಹಾಕಿ ಸಿಂಗರಿಸುತ್ತಿದ್ದದ್ದು, ಜ್ವರ ಬಂದಾಗ ಅಮ್ಮನನ್ನು ಮಲಗಲು ಕಳುಹಿಸಿ ತಾನೇ ರಾತ್ರಿಯಿಡೀ ನಿದ್ದೆಗೆಟ್ಟು ಹಣೆಯ ಮೇಲೆ ಒದ್ದೆ ಬಟ್ಟೆಯಿಡುತ್ತಿದ್ದದ್ದು, ಹೊರಗೆ ಯಾರಾದರೂ ನನ್ನನ್ನು ಹೊಗಳಿದರೆ ನನ್ನ ಬಂಗಾರಕ್ಕೆ ದೃಷ್ಟಿಯಾಯಿತೆಂದು ಉಪ್ಪು ನಿವಾಳಿಸುತ್ತಿದ್ದದ್ದು, ಶಾಲೆಗೆ ಹೋಗುವಾಗ ಎರಡು ಜಡೆ ಹೆಣೆದು ತಾನೇ ಕಟ್ಟಿದ ಮಲ್ಲಿಗೆ ದಂಡೆಯನ್ನು ಮುಡಿಸುತ್ತಿದ್ದದ್ದು... ಹೀಗೆ ಒಂದೊಂದೇ ನೆನಪುಗಳು ಅಲೆಯಲೆಯಾಗಿ ಕಾಡಿ ನವ್ಯಾಳಲ್ಲಿ ತಪ್ಪಿತಸ್ಥ ಮನೋಭಾವನೆ ಮೂಡಿತು. ಅಜ್ಜಿಯ ಅತಿಯಾದ ಪ್ರೀತಿ ತಾನು ಬೆಳೆದಂತೆ ತನ್ನಲ್ಲಿ ಅಸಹನೆಯುಂಟು ಮಾಡುತ್ತಿದ್ದಿದ್ದು ಸುಳ್ಳಲ್ಲ. ಅವರ ಪ್ರೀತಿ, ಮಮತೆ, ಕಾಳಜಿಯನ್ನು ನಾನು ಅರ್ಥಮಾಡಿಕೊಂಡಿಲ್ಲ. ಆಕೆ ತೋರುತ್ತಿದ್ದ ಕಾಳಜಿ ನೆನಪಾದಂತೆಲ್ಲಾ ತಾನು ತೋರುತ್ತಿದ್ದ ಅಸಡ್ಡೆ, ನಿರ್ಲಕ್ಷ್ಯ, ತಿರಸ್ಕಾರಗಳನ್ನು

ನೆನೆದು ತನ್ನ ಬಗ್ಗೆಯೇ ಬೇಸರವುಂಟಾಯಿತು ನವ್ಯಾಳಿಗೆ. ಹೌದು. ಅಜ್ಜಿಯ ಮನದ ನೋವನ್ನು ಹೋಗಲಾಡಿಸುವಲ್ಲಿ ನಾನು ಅಪ್ಪನಿಗೆ ಹೆಗಲಾಗಬೇಕು. ಪದ್ಮಕ್ಕ ಹೇಳಿದಂತೆ ಮಾನಸಿಕ ತಜ್ಞರ ಮೂಲಕ ಅಜ್ಜಿಗೆ ಚಿಕಿತ್ಸೆ ಕೊಡಿಸಬೇಕು. ಅಜ್ಜಿ ತನ್ನೆಲ್ಲಾ ಮನದಾಳದ ನೋವನ್ನು ಹೊರ ಹಾಕಿ ನಿರಾಳರಾಗಬೇಕು. ಅಪ್ಪನೊಡನೆ ಕೂಡಲೇ ಈ ಬಗ್ಗೆ ಮಾತನಾಡಿ ಒಂದು ನಿರ್ಧಾರಕ್ಕೆ ಬರಬೇಕೆಂಬ ಯೋಚನೆಯಲ್ಲಿ ನವ್ಯಾಳು ಮನೆ ಸೇರಿದಳು.

❖ ❖ ❖

ರಾತ್ರಿಯಿಡೀ ಕನಸಿನಲ್ಲಿ ದಿನಕರನೊಡನೆ ಮಾತನಾಡಲು ಹೋಗಿದ್ದು, ನಿದ್ದೆ ಬಾರದೆ ಹೊರಳಾಡಿದ್ದು ಎಲ್ಲವೂ ಸೇರಿ ತುಸು ಬೇಗನೇ ಎದ್ದು ಬಂದ ಸುಹಾಸ ಎದುರಿನ ಚಾವಡಿಯ ಮೂಲೆಯಲ್ಲಿ ಆರಾಮ ಕುರ್ಚಿಗೆ ತಲೆಯಾನಿಸಿ ಕಾಲನ್ನು ಎದುರಿನ ದಂಡೆ ಮೇಲಿಟ್ಟು ಕತ್ತಲೆಯಲ್ಲಿ ಕಣ್ಣು ಮುಚ್ಚಿ ಒರಗಿದ್ದ. ಆತನ ಮನದಲ್ಲಿ ಏನೋ ತಳಮಳ, ಏನೋ ಆತಂಕ ಕಾಡುತ್ತಿತ್ತು. ಸುಜಾತ ಹೇಳಿದ ವಿಷಯ ಅಂದರೆ ದಿನಕರನ ಸುತ್ತವೇ ಮನ ಯೋಚಿಸುತ್ತಿತ್ತು. ಹೇಗೆ ಸುಮಾ ಅಕ್ಕನ ವಿಷಯವನ್ನು ಆತನೊಡನೆ ಮಾತನಾಡಲಿ? ಕಳೆದು ಹೋದ ದಿನಗಳಿಗೆ ಮತ್ತೆ ಹೇಗೆ ಜೀವ ತುಂಬಲಿ? ಆತನಾದರೋ ಈ ಬಗ್ಗೆ ಮುಕ್ತವಾಗಿ ಮಾತನಾಡುವನೇ, ಅಥವಾ ಸಿಟ್ಟಿಗೆದ್ದು ಹಾರಾಡುವನೇ? ಅದೂ ಇಷ್ಟು ವರುಷಗಳ ಬಳಿಕ ಹಿಂದಿನ ನೆನಪನ್ನು ಕೆದಕಿದರೆ ಏನೆಂದಾನು? ಈ ವಿಷಯವನ್ನು ಆತನಲ್ಲಿ ಎತ್ತುವುದೇ ಅಥವಾ ಸುಮ್ಮನಿದ್ದು ಬಿಡುವುದೇ ಎಂಬ ಯೋಚನೆಯಲ್ಲಿ ನೆಮ್ಮದಿಯೆಂಬುದು ಮರೀಚಿಕೆಯಾಗಿತ್ತು. ಆದರೆ ಅಮ್ಮನ ಮನದಲ್ಲಿ ಮಡುಗಟ್ಟಿದ ನೋವು, ಯಾರಲ್ಲೂ ಹೇಳಿಕೊಳ್ಳಲಾರದ ದುಃಖ ಅಮ್ಮನ ಮೇಲಣ ಪ್ರೀತಿಯನ್ನು ಹೆಚ್ಚಿಸಿತ್ತು. ಅದೆಂತಹ ಸಂದರ್ಭವನ್ನು ನನ್ನ ಅಮ್ಮ ಎದುರಿಸಿದ್ದಳು, ಬೆಟ್ಟದಷ್ಟು ನೋವನ್ನು ಹೊಟ್ಟೆಯಲ್ಲಿಟ್ಟುಕೊಂಡು ಹೊರ ಜಗತ್ತಿಗೆ ಕಾಣದಂತೆ ಇಂದು ನನ್ನನ್ನು ಈ ಮಟ್ಟಿಗೆ ಬೆಳೆಸಿದ್ದಾರೆ. ಈಗೀಗ ಕಾಡುವ ನೋವು, ಏಕಾಂಗಿತನ ಮರ, ಗಿಡ, ಕಲ್ಲುಗಳೊಡನೆ ಮಾತಾಡುವ ಮಟ್ಟಕ್ಕೆ ಇಳಿದಿದೆಯೆಂದರೆ, ನಿನ್ನ ನೋವಿಗೆ ನಾನಿದ್ದೇನಮ್ಮಾ ಎಂದು ಅಪ್ಪಿ ಹೇಳುವ ಮಗ ನಾನಾಗಬೇಕಿತ್ತು. ಆದರೆ ನಾನೋ ಕಂಡೂ ಕಾಣದಂತೆ ನಿರ್ಲಿಪ್ತನಾದೆನೇಕೆ? ದಿನಕರನೊಡನೆ ಮಾತನಾಡುವುದೇ ಅಥವಾ ಮನೋವೈದ್ಯರನ್ನು ಕಾಣುವುದೋ. ಯಾವುದೇ ನಿರ್ಧಾರಕ್ಕೂ ಬರದೇ ಯೋಚಿಸಿ ಹೈರಾಣಾದ ಸುಹಾಸ. ಅದೇನಿದ್ದರೂ ತಾನೀಗ ಒಂದು ನಿರ್ಧಾರಕ್ಕೆ ಬರಲೇಬೇಕಾಗಿದೆ. ಅಕ್ಕನ ಸಾವಿನ ನೋವು ಇನ್ನು ಮುಂದೆ ಅಮ್ಮನನ್ನು ಕಾಡದಂತೆ ಕಾಪಾಡಬೇಕು. ಆಕೆ ನೆಮ್ಮದಿಯಿಂದ ಮುಂದಿನ ದಿನಗಳನ್ನು ಕಳೆಯುವಂತೆ ಮಾಡಬೇಕಾದುದು ಮಗನಾದ ನನ್ನ ಕರ್ತವ್ಯವೂ ಹೌದು. ನಾಳೆ

ಎಲ್ಲವೂ ಸರಿ ಹೋದೀತು ಅನ್ನುವ ಭರವಸೆ ನಮ್ಮನ್ನು ಕೆಲ ಮಟ್ಟಿಗಾದರೂ ಸಹನೀಯವಾಗಿ ಬದುಕುವಂತೆ ಮಾಡಬಲ್ಲದು.ನನ್ನ ಅಮ್ಮ ಹುಚ್ಚಿಯಲ್ಲ....ನನ್ನ ಅಮ್ಮ ಹುಚ್ಚಿಯಲ್ಲ ಸುಹಾಸನ ಹೃದಯ ಕೂಗಿ ಕೂಗಿ ಹೇಳಿತು.

❖ ❖ ❖

ರಾತ್ರಿ ನಿಶ್ಚಿಂತೆಯಿಂದ ಮಲಗಿದ ನವ್ಯಾಳು ಬೆಳಗ್ಗೆ ಬೇಗನೆ ಎದ್ದು ಅಪ್ಪನನ್ನು ಹುಡುಕಿಕೊಂಡು ಬಂದಾಗ ಚಾವಡಿಯ ಮೂಲೆಯಲ್ಲಿ ಕತ್ತಲಿನಲ್ಲಿ ಕುರ್ಚಿಗೊರಗಿ ಕುಳಿತಿದ್ದ ಅಪ್ಪನನ್ನು ಕಂಡಳು. 'ಅಪ್ಪಾ, ಇನ್ನೂ ಆಫೀಸಿಗೆ ಹೊರಟಿಲ್ಲವೇ' ಎಂದಾಗ, 'ಇಲ್ಲ ಮಗಳೇ ಇಂದು ಆಫೀಸಿಗೆ ರಜಾ ಹಾಕಿದ್ದೇನೆ. ಸ್ವಲ್ಪ ಕೆಲಸವಿದೆ' ಎಂದನು ಸುಹಾಸ. ಆತನ ಮೊಗದಲ್ಲಿ ಏನೋ ಚಿಂತೆ ಮನೆ ಮಾಡಿದ್ದು, ನಿದ್ದೆ ಮಾಡದೆ ಕಣ್ಣುಗಳು ಕೆಂಪಡರಿದ್ದು ನವ್ಯಾಳಿಗೆ ಅರಿವಾಯಿತು. ತತ್‌ಕ್ಷಣವೇ ಅಡುಗೆ ಮನೆಗೆ ಹೋಗಿ ಅಜ್ಜಿಯ ಕೈಯಿಂದ ಕಾಫೀ ಕಪ್ಪುಗಳನ್ನು ಹಿಡಿದುಕೊಂಡು ಬಂದು ಒಂದನ್ನು ಅಪ್ಪನಿಗೆ ಕೊಟ್ಟು ಮತ್ತೊಂದು ಕಪ್ಪಿನ ಕಾಫಿಯನ್ನು ಹೀರುತ್ತಾ ಅಪ್ಪನಿಗೆದುರಾಗಿ ಕುಳಿತುಕೊಂಡಳು.

ಉಪ್ಪಿಟ್ಟಿಗೆ ಈರುಳ್ಳಿ ಹೆಚ್ಚುತ್ತಿದ್ದ ಸುಬ್ಬಜ್ಜಿ ಎಲ್ಲವನ್ನೂ ಮೌನವಾಗಿಯೇ ಗಮನಿಸುತ್ತಿದ್ದಳು. ತನ್ನನ್ನು ಕಂಡರೆ ಸಿಡಿಮಿಡಿಗೊಳ್ಳುತ್ತಿದ್ದ ಮೊಮ್ಮಗಳು ನವ್ಯಾ ನಿನ್ನೆ ರಾತ್ರಿಯಿಂದ ವಿಚಿತ್ರವಾಗಿ ನಡೆದುಕೊಳ್ಳುತ್ತಿದ್ದಾಳೆ. ನಿನ್ನೆ ರಾತ್ರಿ ತಾನು ಊಟದ ತಟ್ಟೆ ತೊಳೆಯುತ್ತಿದ್ದಾಗ ಹಿಂದಿನಿಂದ ಬಂದು ಕೊರಳಿಗೆ ಜೋತು ಬಿದ್ದು ಕೆನ್ನೆಗೆ ಮುತ್ತಿಟ್ಟು, ನನ್ನ sweet darling ಅಜ್ಜೀ ಎಂದು ಲಲ್ಲೆಗರೆದಿದ್ದಳು. ಇದ್ದಕ್ಕಿದ್ದಂತೆ ಏನಾಯ್ತು ಇವಳಿಗೆ? ಈಗ ನೋಡಿದರೆ ಬೇಗನೇ ಎದ್ದು ನನ್ನ ಕೈಯಿಂದ ಕಾಫೀ ತೆಗೆದುಕೊಂಡು ಹೋಗಿ ಅಪ್ಪನಿಗೂ ಕೊಟ್ಟು ಆತನೆದುರಿಗೆ ಕೂತಿದ್ದಾಳೆ. ಆಕೆ ಕೂತ ರೀತಿ ನೋಡಿದರೆ ಯಾವುದೋ ವಿಷಯಕ್ಕೆ ಪೀಠಿಕೆ ಹಾಕಲು ಕಾದಿರುವಂತಿದೆ. ಇತ್ತ ಸುಹಾಸನೂ ರೂಮಿನಲ್ಲಿ ಮಲಗದೆ ಜಗಲಿಯಲ್ಲಿ ಮಲಗಿ ಕನಸು ಕಂಡು ಬೆಚ್ಚಿ ಬಿದ್ದು ಏನಿಲ್ಲ, ಏನಿಲ್ಲ ಎಂದಿದ್ದು ನನಗೂ ಕೇಳಿಸಿತ್ತು. ಏನಾಯ್ತು ಇವರಿಗೆಲ್ಲಾ. ಮಗನನ್ನು ನೋಡಿದರೆ ರಾತ್ರಿ ನಿದ್ದೆಗೆಟ್ಟಿರುವನೆಂದು ಆತನ ಕಣ್ಣುಗಳೇ ಹೇಳುತ್ತಿವೆ. ಅಂತಹ ನಿದ್ದೆಗೆಡುವಂತಹ ವಿಷಯ ಏನಿದೆ? ನವ್ಯಾಳ ಮಾತಿನ ವರಸೆಯೂ ಬದಲಾಗಿದೆ. ನನ್ನಲ್ಲಿ ಸಿಡುಕದೆ, ಪ್ರೀತಿಯಿಂದ ಕಾಫೀ ಕೇಳಿ ಅಪ್ಪನಿಗೂ ಕೊಂಡು ಹೋದಳಲ್ಲಾ. ನವ್ಯಾ ಏನಾದರೂ ಪ್ರೀತಿ, ಪ್ರೇಮದ ಬಲೆಯಲ್ಲಿ ಸಿಲುಕಿರುವಳೇ, ಇತ್ತೀಚೆಗಂತೂ ಯಾವುದರಲ್ಲೂ ಆಸಕ್ತಿಯಿಲ್ಲದೆ ಸ್ವಲ್ಪ ಮಂಕಾಗಿದ್ದಳು. ಯೋಚಿಸುತ್ತಾ ಮಾಡಿಟ್ಟ ಉಪ್ಪಿಟ್ಟನ್ನು ಮುಚ್ಚಿಟ್ಟು ಹೊರಗೆ ದೃಷ್ಟಿ ಹಾಯಿಸಿದರೆ ಅಪ್ಪ, ಮಗಳು ಏನೋ ಗಹನವಾದ ವಿಚಾರದಲ್ಲಿ ಮುಳುಗಿರುವಂತೆ ಕಂಡಿತು. ಅಲ್ಲಿಂದ ಸದ್ದಾಗದಂತೆ ಅಡುಗೆ ಮನೆಯ ಬಾಗಿಲೆಳೆದುಕೊಂಡು ದೇವರಿಗೆ

[illegible]

[illegible]

[illegible]

[illegible]

ತನ್ನಿಂತಾನೇ ಬಿಗಿಯತೊಡಗಿತು. ಕಣ್ಣುಗಳು ಕಿಡಿ ಕಾರತೊಡಗಿತು. ಏದುಸಿರು ಬಿಡುತ್ತಾ ಕೋಪದ ಆವೇಶಕ್ಕೆ ಒಳಗಾಗಿ ತರತರನೇ ನಡುಗಿ ಸುಬ್ಬಜ್ಜಿ ಅಲ್ಲಿಯೇ ಕುಸಿದು ಕುಳಿತಳು.

❖ ❖ ❖

ಯೂನಿವರ್ಸಿಟಿ ಲೆವೆಲ್ ಕ್ರಿಕೆಟ್ ಮ್ಯಾಚ್ ನಲ್ಲಿ ಗೋಲ್ಡನ್ ಟ್ರೋಫಿ ಗೆದ್ದ ಕಾರಣಕ್ಕೆ ವಿದ್ಯಾರ್ಥಿ ಸಂಘಟನೆ ರಾಷ್ಟ್ರ ಮಟ್ಟದ ಕ್ರೀಡಾ ಪಟುವನ್ನು ಅತಿಥಿಯಾಗಿ ಕರೆಯಬೇಕೆಂಬ ವಿಚಾರವನ್ನು ಪ್ರಾಂಶುಪಾಲರ ಗಮನಕ್ಕೆ ತರಲಾಯಿತು. ಆದರೆ ಪರೀಕ್ಷೆ ಹತ್ತಿರ ಬರುತ್ತಿರುವ ಕಾರಣಕ್ಕೆ ಸದ್ಯಕ್ಕೆ ಅಂತಹ ಯೋಚನೆ ಬೇಡವೆಂದೂ ಸರಳವಾಗಿ ಆಚರಿಸಬೇಕೆಂದೂ ಅದಕ್ಕಾಗಿ ಲಭ್ಯವಿರುವ ಯಾರಾದರೂ ಗಣ್ಯ ವ್ಯಕ್ತಿಯನ್ನು ಕರೆದರೆ ಸಾಕೆಂದೂ ಪ್ರಾಂಶುಪಾಲರು ಸೂಚಿಸಿದರು. ಯಾರನ್ನು ಕರೆಯಬೇಕೆಂಬ ಬಗ್ಗೆ ಉಪನ್ಯಾಸಕ ಮತ್ತು ವಿದ್ಯಾರ್ಥಿಗಳ ನಡುವೆ ಚರ್ಚೆ ನಡೆದು ಕೊನೆಗೆ ತೀರ್ಥಹಳ್ಳಿಯಲ್ಲಿ ಸಬ್‌ಇನ್ಸ್‌ಪೆಕ್ಟರ್ ಆಗಿರುವ ಶ್ರೀ ದಿನಕರ್ ರವರನ್ನು ಮುಖ್ಯ ಅತಿಥಿಯಾಗಿ ಕರೆಯುವುದೆಂಬ ಒಮ್ಮತದ ನಿರ್ಧಾರಕ್ಕೆ ಬರಲಾಯಿತು. ಇದಕ್ಕೆ ಕಾರಣವೂ ಇತ್ತು. ಅವರ ಮಗ ಇದೇ ಕಾಲೇಜಿನಲ್ಲಿ ಓದುತ್ತಿದ್ದು ಅತ್ಯುತ್ತಮ ಕ್ರೀಡಾಪಟುವಾಗಿದ್ದನು. ಹಾಗೂ ಸ್ವತಃ ದಿನಕರ್‌ರವರು ಕಾಲೇಜು ದಿನಗಳಲ್ಲಿ ಕ್ರಿಕೆಟ್ ಟೀಮನ್ನು ಮುನ್ನಡೆಸಿ ಅನೇಕ ಪದಕಗಳನ್ನು ಪಡೆದಿದ್ದವರು. ಮುಖ್ಯ ಅತಿಥಿಯಾಗಿ ಅವರ ಆಯ್ಕೆ ನ್ಯಾಯೋಚಿತವಾಗಿತ್ತು. ಅವರನ್ನು ಕಾಲೇಜು ಫಂಕ್ಷನ್‌ಗೆ ಮುಖ್ಯ ಅತಿಥಿಯಾಗಿ ಕರೆಯಲು ವಿದ್ಯಾರ್ಥಿ ಯೂನಿಯನ್ ಸೆಕ್ರೆಟರಿ ಸುಮಂತ್ ಮತ್ತು ಜೀವನ್ ಹೋಗುವುದೆಂದು ನಿರ್ಧರಿಸಲಾಯಿತು. ಅಲ್ಲದೆ ಈ ಬಾರಿ ವಿದ್ಯಾರ್ಥಿಗಳ ಪಾಲಕರೂ ಭಾಗಿಯಾಗುವ ಅವಕಾಶವನ್ನು ನೀಡಬೇಕೆಂಬ ನಿರ್ಣಯವನ್ನು ಕೈಗೆತ್ತಿಕೊಳ್ಳಲಾಯಿತು. ಜೀವನ್ ಕಾಲೇಜಿನ ಫಂಕ್ಷನ್ ವಿಷಯವನ್ನು ತಿಳಿಸಲು ನವ್ಯಾಳಿಗೆ ಕರೆ ಮಾಡಿದಾಗ, ನೀವು ಕರೆ ಮಾಡಿದ ಚಂದಾದಾರರು ವ್ಯಾಪ್ತಿ ಪ್ರದೇಶದ ಹೊರಗಿದ್ದಾರೆ ಎಂದು ಕೇಳಿಬರುತ್ತಿತ್ತು.

ಅಧ್ಯಾಯ 9

ಸುಭಾಷಿಣಿ ಮೋಹನ್

ಕಾಲೇಜಿನ ಫಂಕ್ಷನ್‌ಗೆ ನವ್ಯಾಳನ್ನು ಬಿಟ್ಟು ಬಂದು ಮನೆಯ ಗಿಡಗಳಿಗೆ ನೀರು ಹಾಕುತ್ತಿದ್ದ ಸುಹಾಸನ ಮನಸ್ಸಿನಲ್ಲಿ ನೂರಾರು ಯೋಚನೆಗಳು ಕಾಡಲಾರಂಭಿಸಿತು. ನವ್ಯಾ ಫಂಕ್ಷನ್‌ನಲ್ಲಿ ಏನು ಮಾಡುತ್ತಿರುತ್ತಾಳೋ, ವಾಪಸ್ ಹೇಗೆ ಬರುವಳೋ ಅಂದುಕೊಂಡವನಿಗೆ ಸರಿತಾಳೂ ಜೊತೆ ಇರುವುದರಿಂದ ಅನಾವಶ್ಯಕವಾಗಿ ಭಯಪಡುವ ಅಗತ್ಯವಿಲ್ಲ, ಹೇಗೂ ಫೋನ್ ಮಾಡುತ್ತಾಳೆಂದು ಸಮಾಧಾನ ಮಾಡಿಕೊಂಡ. ನವ್ಯಾಳೇನೋ ಬರುತ್ತಾಳೆ ಆದರೆ ದೇವಸ್ಥಾನಕ್ಕೆಂದು ಹೋಗಿರುವ ತನ್ನ ತಾಯಿ ಇನ್ನೂ ಮನೆಗೆ ಹಿಂದಿರುಗಿಲ್ಲವಲ್ಲಾ ಆಕೆ ಎಲ್ಲಿ ಯಾವ ಗಿಡ ಮರಗಳ ಜೊತೆ ಮಾತಾಡುತ್ತಾ ನಿಂತುಬಿಟ್ಟಿರುವಳೋ ಏನೋ! ಇಷ್ಟಕ್ಕೂ ತನ್ನ ಅಮ್ಮನ ಮನಸ್ಥಿತಿ ಇಷ್ಟೊಂದು ಹದಗೆಡುವುದಕ್ಕೆ ಕಾರಣವಾದರೂ ಏನಿದ್ದೀತು? ಸುಮಾಳ ಬಗೆಗಿನ ಅಂದಿನ ಘಟನೆಯಾದರೂ ಏನಿರಬಹುದು? ತನ್ನ ಸ್ನೇಹಿತ ಖ್ಯಾತ ವಕೀಲನಾದ ಯಶಸ್ ತಿಳಿಸಿದಂತೆ ಅಂದಿನ ಘಟನೆ ಏನೇ ಆಗಿದ್ದರೂ ಅಂದರೆ ಅದು ಕಾಲು ಜಾರಿಯೇ ಬಿದ್ದಿದ್ದರೂ, ಆತ್ಮಹತ್ಯೆಯೇ ಆಗಿದ್ದರೂ ಅಥವಾ ಕೊಲೆಯೇ ಆಗಿದ್ದರೂ ಪೋಸ್ಟ್ ಮಾರ್ಟಂ ಮಾಡಿ ಎಫ್.ಐ.ಆರ್ ಆಗಿ ಕೇಸು ದಾಖಲಾಗಿರಲೇಬೇಕು ಹಾಗೂ ಅದರ ಬಗ್ಗೆ ತನಿಖೆ ನಡೆದಿರಲೇಬೇಕು.

ಆ ಕೇಸು ಏನಾಗಿರಬಹುದು? ಆ ಕೇಸಿನ ಡೀಟೇಲ್ಸ್ ಯಶಸ್‌ನ ಬಳಿ ತೆಗೆಸಲು ತಾನೆಷ್ಟು ಪ್ರಯತ್ನಪಟ್ಟಿರುವೆ. ತನಗೆ ಕನಿಷ್ಠ ಎಫ್.ಐ.ಆರ್. ನಂಬರ್ ಆದರೂ ಸಿಕ್ಕಿದ್ದರೆ ಹೇಗಾದರೂ ಹುಡುಕಿಸಬಹುದಿತ್ತು. ಆ ಕೇಸಿನ ಡೀಟೇಲ್ಸ್ ನ್ನು ಹುಡುಕಲು ಇಂದಿಗೂ ಯಶಸ್ ಪ್ರಯತ್ನ ಪಡುತ್ತಲೇ ಇದ್ದಾನೆ. ಆದರೆ ಯಶಸ್ವಿಯಾಗಲೇ ಇಲ್ಲ.

ಅಮ್ಮ ಅಂತೂ ಆ ಘಟನೆಯ ಬಗ್ಗೆ ಮಾತನಾಡುವುದೇ ಇಲ್ಲ.ನಾನು ಅದನ್ನು ಕೆದಕಲು ಹೋಗಿ ಆಕೆಯ ಮಾನಸಿಕ ಅಸ್ವಸ್ಥತೆ ಹೆಚ್ಚಾದರೆ ಅನ್ನೋ ಭಯದಿಂದ ನಾನೂ ಪ್ರಯತ್ನಪಟ್ಟಿಲ್ಲ. ಈಗ ಇದನ್ನೆಲ್ಲ ತಿಳಿಸಬಹುದಾದ ವ್ಯಕ್ತಿಯಾದರೂ ಇರುವುದು ನನಗೆ ತಿಳಿದ ಮಟ್ಟಿಗೆ ದಿನಕರ್ ಒಬ್ಬರೇ. ಅವರನ್ನು ಭೇಟಿ ಮಾಡಲು ಅದೇಕೋ ಸಾಧ್ಯವಾಗುತ್ತಲೇ ಇಲ್ಲ. ನೋಡೋಣ, ಮೊದಲಿಗೆ ಅಮ್ಮ ಸರಿಯಾಗುವುದು ಮುಖ್ಯ. ಏನಾದರೂ ಮಾಡಿ ಈ ಬಾರಿ ಈ ಹಿಂದೆ ಪದ್ಮಕ್ಕ ಹೇಳಿದ ಹಾಗೆ ಆಕೆಯ ಅಣ್ಣನ ಮಗ ಭರತ ಬಂದಾಗ ಅವನಿಗೆ ಗೊತ್ತಿರುವ ಯಾರಾದರೂ ಮನೋವೈದ್ಯರನ್ನು ಭೇಟಿ ಮಾಡುವುದೇ ಒಳ್ಳೆಯದೆಂದು ತನ್ನ ಮನಸ್ಸಿನಲ್ಲಿ ನಿರ್ಧಾರ ಮಾಡಿದ. ಈ ಬಗ್ಗೆ ಈಗಲೇ ಏಕೆ ಪದ್ಮಕ್ಕನ ಬಳಿ ಮಾತನಾಡಬಾರದು ಅಂದುಕೊಳ್ಳುತ್ತಾ ಪದ್ಮಕ್ಕನ ಮನೆಯೆಡೆ ಹೆಜ್ಜೆ ಹಾಕಿದ.

ಬೆಳಗಿನ ಪೂಜೆ ಮುಗಿಸಿ ಹಸುವಿಗೆ ಬಾಳೆಹಣ್ಣು ನೀಡಲೆಂದು ಹೊರಗೆ ಬಂದ ಪದ್ಮಕ್ಕ ಅಪರೂಪಕ್ಕೆ ಬಂದ ಸುಹಾಸನನ್ನು ಒಳಗೆ ಕರೆಯುತ್ತಾ, "ಸುಹಾಸ, ಏನು ನಿರ್ಧಾರ ಮಾಡಿದ್ಯೋ ಸುಬ್ಬಜ್ಜಿಯ ಬಗ್ಗೆ. ಇದನ್ನು ಕೇಳೋಣಾಂತ ಮೊನ್ನೆಯಿಂದ ಕಾಯುತ್ತಿದ್ದೆ. ನೀನು ಕೈಗೇ ಸಿಗೋದಿಲ್ಲ.ಇವತ್ತೇ ನಮ್ಮ ಭರತ ಅವನ ಸ್ನೇಹಿತನೊಬ್ಬನನ್ನು ಕರೆದುಕೊಂಡು ಇಲ್ಲಿಗೆ ಬರುತ್ತಿದ್ದಾನಂತೆ. ಅವನ ಜೊತೆ ನೀನು ಮಾತನಾಡಿದರೆ ಒಳ್ಳೇದಿತ್ತು ಅಂದುಕೊಳ್ಳುತ್ತಿದ್ದೆ. ಇದನ್ನು ನಿನಗೆ ಹೇಳೋದಕ್ಕೆ ನಾನೇ ನಿಮ್ಮ ಮನೆಗೆ ಬರಬೇಕು ಅಂತಿದ್ದೆ. ಅಷ್ಟರಲ್ಲಿ ನೀನೇ ಬಂದಿದ್ದು ಒಳ್ಳೇದಾಯ್ತು.ಇನ್ನೇನು ಭರತ ಬರೋ ಹೊತ್ತಾಯ್ತು" ಅನ್ನುತ್ತಿದ್ದ ಹಾಗೇ ಭರತ ಆತನ ಸ್ನೇಹಿತನ ಜೊತೆ ಪದ್ಮಕ್ಕನ ಮನೆಗೆ ಬಂದೇ ಬಿಟ್ಟ.

"ಹಾಯ್ ಅತ್ತೆ, ಹೇಗಿದ್ದೀರಿ? ಹೋ, ಇವರು ಸುಹಾಸ್ ಅಂಕಲ್ ಅಲ್ವಾ? ಹಲೋ ಅಂಕಲ್, ನೀವು ಹೇಗಿದ್ದೀರಿ? ನಿಮ್ಮನ್ನು ನೋಡಿ ಎಷ್ಟೋ ವರ್ಷಗಳಾಯಿತು" ಎಂದ ಭರತ.

"ಹೌದು ಕಣೋ ಭರತ, ನಾನೂ ನಿನ್ನನ್ನು ನೋಡಿ ಎಷ್ಟೋ ವರ್ಷಗಳಾಯ್ತು. ಹೇಗಿದ್ದೀಯಪ್ಪ? ನೀನು ಬರ್ತೀಯಾಂತ ಗೊತ್ತಿತ್ತು. ಆದರೆ ಇವತ್ತೇ ಬರೋದು ಗೊತ್ತಿರಲಿಲ್ಲ. ನಾನೂ ನಿನ್ನ ಜೊತೆ ಮಾತನಾಡಬೇಕೆಂದೇ ಕಾಯುತ್ತಿದ್ದೆ. ಅಂದಹಾಗೆ ಇವರು ನಿನ್ನ ಸ್ನೇಹಿತರೇನು?"

"ಹೌದು ಅಂಕಲ್. ಇವನು ಡಾ॥ ಅಭಿಲಾಷ್ ಅಂತ. ಬೆಂಗಳೂರಿನಲ್ಲಿ ಖ್ಯಾತ ಮನೋವೈದ್ಯರು. ನಮ್ಮ ಆಸ್ಪತ್ರೆಯಲ್ಲೇ ಕೆಲಸ ಮಾಡುತ್ತಿದ್ದಾರೆ"

"ಇಬ್ಬರೂ ಕುಳಿತುಕೊಳ್ಳಿ. ಕಾಫಿ ತರ್ತೀನಿ' ಅಂತ ಪದ್ಮಕ್ಕ ಒಳಗೆ ಹೋದರು.

ಸುಹಾಸ ಸದ್ಯ! ಆ ದೇವರೇ ಈ ಮನೋವೈದ್ಯರನ್ನು ಇವತ್ತು ಇಲ್ಲಿಗೆ ಕಳಿಸಿದ್ದಾನೆ. ಆದಷ್ಟು ಬೇಗ ಇವರ ಬಳಿ ಅಮ್ಮನ ಬಗ್ಗೆ ಮಾತಾಡಬೇಕು

ಅಂದುಕೊಳ್ಳುತ್ತಾ ಅವರಿಬ್ಬರನ್ನೂ ತನ್ನ ಮನೆಗೆ ಬರುವಂತೆ ಆಹ್ವಾನಿಸಿದ. ಅದಕ್ಕೆ ಭರತ "ಅದಕ್ಕೇನಂತೆ ಅಂಕಲ್ ನಾಳೆಯೇ ನಿಮ್ಮನೆಗೆ ಊಟಕ್ಕೇ ಬಂದು ಬಿಡ್ತೀವಿ. ಇಂದು ಹೇಗೂ ಅತ್ತೆಯ ಮನೆಯಲ್ಲಿ ಇರ್ತೀವಿ. ನಾಳೆ ರಾತ್ರಿಯೇ ನಾವು ವಾಪಸ್ ಹೊರಡಬೇಕಾಗಿರೋದ್ರಿಂದ ನಿಮ್ಮನೇ ಊಟ ಮಿಸ್ ಮಾಡಿಕೊಳ್ಳೋದಕ್ಕೆ ಇಷ್ಟ ಇಲ್ಲ" ಅಂತ ತುಂಟ ನಗೆಯಿಂದ ಹೇಳಿದ. ಹಾಗೆಯೇ ಸುಬ್ಬಜ್ಜಿ, ಸುಜಾತ, ನವ್ಯರನ್ನೆಲ್ಲ ವಿಚಾರಿಸಿಕೊಂಡ. ಸುಹಾಸ ರೋಗಿ ಬಯಸಿದ್ದೂ ಹಾಲು ಅನ್ನ ವೈದ್ಯ ಹೇಳಿದ್ದೂ ಹಾಲು ಅನ್ನ ಎಂಬಂತಾಯಿತು ಅಂತ ಮನಸ್ಸಿನಲ್ಲೇ ಅಂದುಕೊಳ್ಳುತ್ತಾ ಖಂಡಿತಾ ಊಟಕ್ಕೇ ಬರುವಂತೆ ಆಹ್ವಾನಿಸಿ ತನ್ನ ಮನೆಯತ್ತ ಹೆಜ್ಜೆ ಹಾಕಿದ.

❖ ❖ ❖

ಯೂನಿವರ್ಸಿಟಿ ಲೆವೆಲ್ ಕ್ರಿಕೆಟ್ ಮ್ಯಾಚ್‌ನಲ್ಲಿ ಗೆದ್ದ ಗೋಲ್ಡನ್ ಟ್ರೋಫಿಯನ್ನು ತಂದೆಯಿಂದಲೇ ಮಗ ಸ್ವೀಕರಿಸುತ್ತಿರುವುದು ಬಹಳ ಹೆಮ್ಮೆಯ ವಿಚಾರ ಎಂದು ಮೈಕ್‌ನಲ್ಲಿ ಘೋಷಣೆಯಾಗುತ್ತಿದ್ದಂತೆಯೇ ಅಲ್ಲಿ ನೆರೆದಿದ್ದ ಜನಸ್ತೋಮ ದಂಗು ಬಡಿದಂತಾದರು. ಕಾರಣ ಸಬ್ ಇನ್ಸ್‌ಪೆಕ್ಟರ್ ದಿನಕರ್‌ರವರ ಮಗ ಜೀವನ್ ಎಂಬುದು ಕಾಲೇಜಿನ ಪ್ರಾಂಶುಪಾಲರನ್ನು ಹೊರತುಪಡಿಸಿ ಅಲ್ಲಿದ್ದ ಯಾರಿಗೂ ತಿಳಿದಿರಲಿಲ್ಲ. ಇದನ್ನು ಕೇಳಿದ ನವ್ಯಾ ಸರಿತಾರಿಗಂತೂ ಒಂದು ರೀತಿಯಲ್ಲಿ ಅತ್ಯಾಶ್ಚರ್ಯವಾಯಿತು. ಇಬ್ಬರೂ ನಿನಗೆ ತಿಳಿದಿತ್ತೇ? ನಿನಗೆ ತಿಳಿದಿತ್ತೇ? ಎಂಬಂತೆ ಮುಖ ಮುಖ ನೋಡಿಕೊಂಡು ಜೀವನ್ ನೆಡೆ ಕಣ್ಣು ಹಾಯಿಸಿದಾಗ ಅವನು ಇವರೆಡೆ ತುಂಟ ನೋಟ ಬೀರಿ ಕಣ್ಣು ಮಿಟುಕಿಸಿದ. ನವ್ಯಾ ಹಾಗೂ ಸರಿತಾ ಇಬ್ಬರೂ ಛೇ! ಜೀವನ್ ಈ ವಿಷಯವನ್ನು ಇಷ್ಟೂ ದಿನ ನಮ್ಮಿಂದ ಮುಚ್ಚಿಟ್ಟಿದ್ದನಲ್ಲಾ. ನಾವು ಇಷ್ಟು ದಿನ ದಿನಕರ್‌ರವರ ಬಗ್ಗೆ ಮಾತನಾಡಿದಾಗಲೆಲ್ಲಾ ತನಗೆ ಅವರ ಬಗ್ಗೆ ಏನೂ ಗೊತ್ತಿಲ್ಲದಂತೆ ನಾಟಕವಾಡಿದನಲ್ಲಾ, ಅವನು ಸಿಕ್ಕಿದಾಗ ಈ ವಿಷಯದ ಬಗ್ಗೆ ಸರಿಯಾಗಿ ತರಾಟೆಗೆ ತೆಗೆದುಕೊಳ್ಳಬೇಕು ಎಂದು ಮನಸ್ಸಿನಲ್ಲೇ ನಿರ್ಧರಿಸಿದರು.

ಸಾಮಾನ್ಯವಾಗಿ ಯಾವುದೇ ಸಮಾರಂಭಗಳಿಗೂ ಹೋಗಲು ಇಷ್ಟಪಡದ ದಿನಕರ್‌ರವರನ್ನು ಒಪ್ಪಿಸಿ ಈ ಸಮಾರಂಭಕ್ಕೆ ಕರೆತರಲು ಜೀವನ್‌ನಿಂದ ಮಾತ್ರ ಸಾಧ್ಯ ಎಂಬ ವಿಷಯ ಕಾಲೇಜಿನ ಪ್ರಾಂಶುಪಾಲರಿಗೆ ತಿಳಿದಿದ್ದರಿಂದಲೇ ಅವರು ವಿದ್ಯಾರ್ಥಿ ಯೂನಿಯನ್ ಸೆಕ್ರೆಟರಿ ಸುಮಂತ್ ಜೊತೆಗೆ ಜೀವನ್‌ನನ್ನು ಜೊತೆ ಮಾಡಿ ದಿನಕರ್ ರವರನ್ನು ಸಮಾರಂಭಕ್ಕೆ ಆಹ್ವಾನಿಸಲು ಕಳುಹಿಸಿದ್ದರು.

ಟ್ರೋಫಿಯನ್ನು ವಿತರಿಸಿದ ದಿನಕರನಿಗೆ ತನ್ನ ಗತಕಾಲದ ನೆನಪುಗಳು ಕಾಡಿತು. ತಾನು ಇದೇ ಕಾಲೇಜಿನಲ್ಲಿ ಓದಿದ್ದು, ಹೀಗೇ ಟ್ರೋಫಿ ಗಳಿಸಿದ್ದು, ಎಲ್ಲರಿಗೂ ಮೆಚ್ಚಿನ ಶಿಷ್ಯನಾಗಿದ್ದು, ಎಲ್ಲವೂ ಅವನ ಮನಃಪಟಲದಲ್ಲಿ ಹಾದು

ಹೋದವು ಹಾಗೂ ಇವುಗಳನ್ನೇ ಸವಿಸ್ತಾರವಾಗಿ ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿದರು. ಇದರ ನಂತರ ಪ್ರಾರಂಭವಾದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸರಿತಾಳ ಸಂಗೀತ ಹಾಗೂ ವೀಣಾವಾದನ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಜೀವನ್ ಅಂತೂ ಕಣ್ಣು ಮಿಟುಕಿಸದೆ ಅವಳ ಕಾರ್ಯಕ್ರಮ ವೀಕ್ಷಿಸುತ್ತಿದ್ದವನು ಅದು ಮುಗಿದ ಕೂಡಲೇ ಜೋರಾಗಿ ಕರತಾಡನ ಮಾಡಿದ. ಇದನ್ನು ಗಮನಿಸುತ್ತಿದ್ದ ದಿನಕರ್‌ಗೆ ಜೀವನ್‌ನ ಈ ರೀತಿಯ ನಡವಳಿಕೆ ಸೋಜಿಗ ತಂದಿತ್ತು. ನವ್ಯಾಳಿಗಂತೂ ಇದರಿಂದ ಅತೀವ ಅಸೂಯೆಯುಂಟಾಯಿತು. ಆದರೆ ಅವಳು ಏನನ್ನೂ ಮಾಡುವ ಸ್ಥಿತಿಯಲ್ಲಿರಲಿಲ್ಲ. ಅಂದಿನ ಕಾರ್ಯಕ್ರಮ ಮುಗಿದ ಮೇಲೆ ತಾನು ಹೇಗಾದರೂ ಮಾಡಿ ಸರಿತಾಳ ಜೊತೆ ಮನೆಗೆ ಹೋಗದೆ ಜೀವನ್ ಹತ್ತಿರ ಡ್ರಾಪ್ ತೆಗೆದುಕೊಳ್ಳಲೇ ಬೇಕು ಎಂಬ ಧೃಢ ಸಂಕಲ್ಪ ಮಾಡಿದಳು.

ಕಾರ್ಯಕ್ರಮ ಮುಗಿದು ಎಲ್ಲರೂ ಹೊರಟರು. ತಡರಾತ್ರಿಯಾಗಿತ್ತು. ಸರಿತಾ ತನ್ನ ಅತ್ತೆಯ ಜೊತೆ ಬಂದಿದ್ದರಿಂದ ನವ್ಯಾಳನ್ನೂ ಕರೆದಳು. ಆದರೆ ತನ್ನನ್ನು ತನ್ನ ತಂದೆ ಬಂದು ಕರೆದೊಯ್ಯುವುದಾಗಿ ಹೇಳಿರುವುದರಿಂದ ಅವರ ಜೊತೆಗೇ ಬರುವುದಾಗಿ ನವ್ಯಾ ನುಡಿದಾಗ ಹಾಗೇ ಆಗಲಿ ಎಂದು ಸರಿತಾ ತನ್ನ ಅತ್ತೆಯ ಜೊತೆ ಹೆಜ್ಜೆ ಹಾಕಿದಳು.

ನವ್ಯಾ ಒಬ್ಬಳೇ ನಿಂತಿದ್ದಾಗ ಅಲ್ಲಿಗೆ ಬಂದ ಜೀವನ್ ಯಾಕೆ ಇನ್ನೂ ಮನೆಗೆ ಹೋಗಿಲ್ಲ ಎಂದು ವಿಚಾರಿಸಿದನು. ತನ್ನನ್ನು ಕರೆದುಕೊಂಡು ಹೋಗಲು ತನ್ನ ತಂದೆ ಬರುವುದಾಗಿಯೂ ಆದರೆ ಅವರಿಗೆ ಫೋನ್ ಕನೆಕ್ಟ್ ಆಗುತ್ತಿಲ್ಲವೆಂದೂ ನವ್ಯ ಸುಳ್ಳು ಹೇಳಿದಳು. ಅದಕ್ಕೇನಂತೆ ತಾನೇ ಬಿಟ್ಟು ಬರುವುದಾಗಿ ಜೀವನ್ ನುಡಿಯುತ್ತಿದ್ದಾಗ ಅಲ್ಲಿಗೆ ಬಂದ ದಿನಕರ್‌ಗೆ ನವ್ಯಾಳನ್ನು ಜೀವನ್ ಪರಿಚಯಿಸಿದ. ತಾನು ಅವಳನ್ನು ಮನೆಗೆ ಬಿಟ್ಟು ಬರುವುದಾಗಿ ತಿಳಿಸಿದ. ಆದರೆ ತಡರಾತ್ರಿಯಾಗಿ ದ್ದರಿಂದ ದಿನಕರ್ ಜೀವನ್ ನನ್ನು ಮನೆಗೆ ಹೋಗುವಂತೆ ತಿಳಿಸಿ ತಾನೇ ಅವಳನ್ನು ಅವಳ ಮನೆ ತಲುಪಿಸುವುದಾಗಿ ಹೇಳಿ ನವ್ಯಾಳನ್ನು ಕರೆದುಕೊಂಡು ಹೊರಟ.

ತಾನು ಜೀವನ್ ಜೊತೆ ಹೋಗಬೇಕೆಂದು ಇಷ್ಟು ಹೊತ್ತು ಪ್ರಯತ್ನ ಪಟ್ಟಿದ್ದೆಲ್ಲಾ ವ್ಯರ್ಥವಾಯಿತಲ್ಲಾ ಎಂದು ಬೇಸರ ಪಡುತ್ತಾ ನವ್ಯ ದಿನಕರನೊಡನೆ ಮನೆಗೆ ಹೊರಟಳು.

❖ ❖ ❖

ದಾರಿಯಲ್ಲಿ ಹೋಗುತ್ತಿರುವಾಗ ಈ ದಾರಿ ನನಗೆ ಪರಿಚಯವಿದ್ದಂತಿದೆಯಲ್ಲಾ ಎಂದು ಅಂದುಕೊಳ್ಳುತ್ತಿದ್ದಂತೆಯೇ ಹಲವಾರು ವರ್ಷಗಳ ಹಿಂದೆ ತಾನು ಸುಮಾಳನ್ನು ನೋಡಲು ಹೋಗಿದ್ದು, ಆಕೆಯನ್ನು ಪೇಟೆಗೆ ಕರೆದುಕೊಂಡು ಹೋಗಿದ್ದು ಎಲ್ಲವೂ ಇದೇ ದಾರಿ ಎಂಬುದು ನೆನಪಾಯಿತು. ಅಂದಿನ ಘಟನೆ

ಗಳೆಲ್ಲವೂ ಒಂದೊಂದಾಗಿ ಅವನ ಮನಃಪಟಲದಲ್ಲಿ ಹಾದು ಹೋಗತೊಡಗಿತು. "ಅಂಕಲ್ ಇಲ್ಲೇ. ಇದೇ ಮನೆ. ನಿಲ್ಲಿಸಿ" ಎಂದು ನವ್ಯಾ ಕೂಗುತ್ತಿದ್ದರೂ ಅದರ ಪರಿವೆಯೇ ಇಲ್ಲದೆ ಮುಂದೆ ಗಾಡಿ ಓಡಿಸುತ್ತಿದ್ದ. ನವ್ಯಾಳು ಜೋರಾಗಿ ಕೂಗಿ ಹೇಳಿದಾಗ ವಾಸ್ತವಕ್ಕೆ ಬಂದ ದಿನಕರ್ "ಇದೇ ನಿಮ್ಮ ಮನೆಯೇ?" ಎಂದು ಆಶ್ಚರ್ಯಚಕಿತನಾಗಿ ಕೇಳಿದ. ಅದಕ್ಕವಳು "ಹೌದು ಅಂಕಲ್, ಇದೇ ನಮ್ಮ ಮನೆ. ಮನೆಗೆ ಬಂದು ಹೋಗಿ" ಅನ್ನುತ್ತಿದ್ದಂತೆಯೇ ಒಳಗಿನಿಂದ ಗಾಡಿಯ ಶಬ್ದ ಕೇಳಿ ಹೊರಬಂದ ಸುಹಾಸ್ "ಯಾರದು? ದಯವಿಟ್ಟು ಒಳಗೆ ಬನ್ನಿ. ತಮ್ಮಿಂದ ತುಂಬಾ ಉಪಕಾರವಾಯಿತು. ನವ್ಯಾಳನ್ನು ನಾನೇ ವಾಪಸ್ ಕರೆದುಕೊಂಡು ಬರಬೇಕೆಂದುಕೊಂಡಿದ್ದು ಆಕೆಯ ಫೋನ್ ಕಾಲ್‌ಗಾಗಿ ಕಾಯುತ್ತಿದ್ದೆ. ಅಷ್ಟರಲ್ಲಿ ನೀವೇ ಕರೆದುಕೊಂಡು ಬಂದಿರಿ. ನಮ್ಮಿಂದ ನಿಮಗೆ ತೊಂದರೆಯಾಯಿತು. ಧನ್ಯವಾದಗಳು. ಅಂದ ಹಾಗೆ ತಾವು ಯಾರು ಅಂತ ಗೊತ್ತಾಗಲಿಲ್ಲ" ಅಂದನು. ನವ್ಯಾ "ಅಪ್ಪಾ, ಇವರು ಜೀವನ್ ನ ತಂದೆ ದಿನಕರ್ ಅಂತ" ಎಂದು ಪರಿಚಯಿಸಿದಾಗ ಆಶ್ಚರ್ಯಪಡುವ ಸರದಿ ಸುಹಾಸನದ್ದಾಯಿತು. ಆದರೂ ತೋರಗೊಡದೆ ದಿನಕರ್ ರನ್ನು ಆತ್ಮೀಯತೆಯಿಂದ ಒಳಗೆ ಆಹ್ವಾನಿಸಿದ. ಆಫೀಸಿಗೆ ರಜಾ ಹಾಕಿಯಾದರೂ ತೀರ್ಥಹಳ್ಳಿ ಸ್ಟೇಶನ್ಗೆ ಹೋಗಿ ದಿನಕರ್ ರವರನ್ನು ಭೇಟಿಯಾಗಬೇಕೆಂದುಕೊಂಡಿದ್ದ ಸುಹಾಸನಿಗೆ ಅವರೇ ಮನೆಗೆ ಬಂದಿದ್ದು ನೋಡಿ ನಿರಾಳವಾಯ್ತು. ಇನ್ನು ಹೇಗಾದರೂ ಸರಿ, ಹಿಂದೆ ನಡೆದ ಘಟನೆಯ ಬಗ್ಗೆ ತಿಳಿದುಕೊಳ್ಳುವುದು ಕಷ್ಟವಾಗಲಾರದು ಎಂದು ಸಮಾಧಾನ ಮಾಡಿಕೊಂಡ. ಅಷ್ಟರಲ್ಲಿ "ಯಾಕೇ ನವ್ಯಾ ಫೋನೇ ಮಾಡಲಿಲ್ಲ? ಹೇಗೆ ಬಂದೆ?" ಅನ್ನುತ್ತಾ ಒಳಗಿನಿಂದ ಬಂದ ಸುಜಾತ ಎದುರಿಗಿದ್ದ ದಿನಕರ್ ರವರನ್ನು ನೋಡಿ ನಮಸ್ಕರಿಸುತ್ತಾ ಪ್ರಶ್ನಾರ್ಥಕವಾಗಿ ನೋಡುತ್ತಿರುವಾಗಲೇ "ಇವರು ಇನ್ಸ್ ಪೆಕ್ಟರ್ ದಿನಕರ್ ಅಂತ ಕಣೇ. ಇವರಿಗೆ ಕುಡಿಯಲು ಹಾಲು ತೆಗೆದುಕೊಂಡು ಬಾ" ಎಂದು ಸುಹಾಸ್ ಹೇಳಿದ. ಮರು ಮಾತನಾಡದೆ ಸುಜಾತ ಮನೆಯ ಒಳ ಹೊಕ್ಕಳು. ಅಷ್ಟು ಹೊತ್ತೂ ದೇವರ ಮನೆಯಲ್ಲಿ ಜಪ ಮಾಡುತ್ತಿದ್ದ ಸುಬ್ಬಜ್ಜಿ ರಾಮ ರಾಮಾ ಅಂತ ಹೇಳುತ್ತಾ "ಬಂದ್ಯೇನೇ ನವ್ಯಾ, ಯಾಕಿಷ್ಟು ತಡವಾಯ್ತು?" ಅನ್ನುತ್ತಾ ಜಗಲಿಗೆ ಬಂದವಳೇ ದಿನಕರ್ ನನ್ನು ನೋಡಿ ಥರ ಥರ ನಡುಗುತ್ತಾ ಸಿಟ್ಟು ಭಯಗಳಿಂದ ಮೂಲೆಯಲ್ಲಿ ನಿಂತಳು.

ಅವಳನ್ನು ನೋಡಿದ ದಿನಕರ ಅವಳ ಹತ್ತಿರ ಹೋಗಿ ಆಕೆಯ ಕಾಲಿಗೆ ನಮಸ್ಕರಿಸುತ್ತಾ "ನನ್ನ ಗುರುತು ಸಿಕ್ಕಿತೇ, ಅಮ್ಮಾ? ಹೇಗಿದ್ದೀರಿ? ಎಷ್ಟೋ ವರ್ಷಗಳಾಯಿತು ನಿಮ್ಮನ್ನು ನೋಡಿ! ನಾನೂ ಈ ಕಡೆ ಬರಲೇ ಇಲ್ಲ. ಇತ್ತೀಚೆಗಷ್ಟೇ ತೀರ್ಥಹಳ್ಳಿಗೆ ಟ್ರಾನ್ಸ್ ಫರ್ ಆಗಿ ಬಂದಿದ್ದೇನೆ. ಬಂದಲ್ಲಿಂದಲೂ

ನಿಮ್ಮ ನೆನಪಾಗುತ್ತಿತ್ತು. ಕೆಲಸದ ಒತ್ತಡದಿಂದ ಬರಲಾಗಿರಲಿಲ್ಲ. ಇಂದು ನಮ್ಮ ಕಾರಣದಿಂದ ನಿಮ್ಮನ್ನು ನೋಡುವಂತಾಯ್ತು" ಎಂದು ನುಡಿದ. ಕೂಡಲೇ ಕೋಪಗೊಂಡ ಸುಬ್ಬಜ್ಜಿ "ನೀನು- ನೀನು- ದಿನಕರನಾ- ನೀ ಯಾ- ಕೆ ಯಾ- ಕೆ ಬಂದಿದ್ದೀಯಾ? ಹೊರಟು ಹೋಗು ಇಲ್ಲಿಂದ! ನೀನು- ನೀನು ಕೆಟ್ಟವ! ನನ್ನ ಮನೆ ಹಾಳು ಮಾಡಲೆಂದೇ ಬಂದವನು. ತೊಲಗಾಚೆ! ನನಗೇನೂ ಗೊತ್ತಿಲ್ಲ. ನನ್ನ ಹತ್ತಿರ- ಬರಬೇಡ. ಹೋಗು ಹೋಗು!" ಎಂದು ತೊದಲಲು ಶುರು ಮಾಡಿದಳು.

ಸುಬ್ಬಜ್ಜಿಯನ್ನು ಪಕ್ಕದ ಕೋಣೆಯ ಒಳಗೆ ಕರೆದುಕೊಂಡು ಹೋಗುತ್ತಾ ದಿನಕರ ತಾನು ಆಕೆಯನ್ನು ಸಮಾಧಾನ ಮಾಡುತ್ತೇನೆ ಎನ್ನುವಂತೆ ಸುಹಾಸನಿಗೆ ಸನ್ನೆ ಮಾಡುತ್ತಾ ಕೋಣೆಯೊಳಗೆ ಕರೆದೊಯ್ದು ಆಕೆಯನ್ನು ಕುಳ್ಳಿರಿಸಿದ. "ಅಮ್ಮಾ ನಾನಿಂದು ಅಕಸ್ಮಾತ್ ಆಗಿ ಇಲ್ಲಿಗೆ ಬಂದಿದ್ದೇನೆ. ನೀವೇನೂ ಹೆದರಬೇಡಿ. ಅಂದು ರಾತ್ರಿ ನಡೆದ ಘಟನೆಯ ಬಗ್ಗೆ ನಾನು ಯಾರ ಬಳಿಯೂ ಎಂದೂ ಚರ್ಚೆ ಮಾಡಿಲ್ಲ. ಮಾಡುವುದೂ ಇಲ್ಲ. ಅಂದಿನ ಘಟನೆ ನಿಮ್ಮ ಮನದಲ್ಲಿ ಆಳವಾಗಿ ಬೇರೂರಿದಂತಿದೆ. ನೀವು ಆ ಘಟನೆಯಿಂದ ನಿಮ್ಮ ಇಡೀ ಜೀವನ ಕೊರಗುವು ದರಲ್ಲಿ ಅರ್ಥವಿಲ್ಲ. ನೀವು ಆರಾಮಾಗಿರಿ. ಯಾವುದಕ್ಕೂ ಹೆದರುವುದು ಬೇಡ" ಎನ್ನುತ್ತಿದ್ದಂತೆಯೇ ಸುಬ್ಬಜ್ಜಿ ಇನ್ನೂ ರೋಷದಿಂದ "ಇದಕ್ಕೆಲ್ಲ ಕಾರಣ ನೀನೇ! ನಿನ್ನಿಂದಲೇ ಇಷ್ಟೆಲ್ಲ ನಡೆದದ್ದು! ಎಂದೆಲ್ಲ ಬಡಬಡಿಸಲು ಪ್ರಾರಂಭಿಸಿದಳು. ದಿನಕರ "ಅಯ್ಯೋ, ಅಮ್ಮಾ! ನೀವು ನನ್ನನ್ನು ತಪ್ಪು ತಿಳಿದುಕೊಂಡಿದ್ದೀರಿ. ಇದರಲ್ಲಿ ನನ್ನ ತಪ್ಪೇನೂ ಇಲ್ಲ" ಅನ್ನುತ್ತಿದ್ದಂತೆಯೇ ಮಧ್ಯ ಪ್ರವೇಶಿಸಿದ ಸುಹಾಸ ತನ್ನ ಅಮ್ಮನನ್ನು ಮಲಗಿಸಿ ಬರುವುದಾಗಿ ಹೇಳಿ ಆಕೆಯನ್ನು ಆಕೆಯ ಕೋಣೆಗೆ ಕರೆದುಕೊಂಡು ಹೋದ. ಆತ ಮತ್ತೆ ಹೊರಬಂದಾಗ ಸುಜಾತ ತಂದುಕೊಟ್ಟ ಹಾಲು ಕುಡಿದು ಮುಗಿಸಿದ್ದ ದಿನಕರ ಹೊರಡಲು ಅನುವಾದ. ಇಂದು ಬಿಟ್ಟರೆ ಇಂತಹ ಸಮಯ ಮುಂದೆಂದೂ ಬರಲಾರದೆಂದರಿತ ಸುಹಾಸ ತಾನು ದಿನಕರ ನೊಡನೆ ಪ್ರತ್ಯೇಕವಾಗಿ ಮಾತನಾಡಲೇಬೇಕೆಂದು ಕೇಳಿಕೊಳ್ಳುತ್ತಾ ಆತನನ್ನು ಬಾವಿಯ ಬಳಿ ಕರೆದೊಯ್ದು ಅಂದು ನಡೆದ ಘಟನೆಯ ಬಗ್ಗೆ ದಯವಿಟ್ಟು ತಿಳಿಸುವಂತೆ ಕೇಳಿಕೊಂಡ.

ದೀರ್ಘವಾಗಿ ನಿಟ್ಟುಸಿರು ಬಿಡುತ್ತಾ ದಿನಕರನು ಮಾತನಾಡತೊಡಗಿದ. "ಅಂದು ನಾನು ಪೇಟೆಯಿಂದ ಸುಮಾಳನ್ನು ಅವಳ ಮನೆಗೆ ಬಿಟ್ಟು ಅರ್ಧ ದಾರಿ ವಾಪಸ್ ಹೋಗಿದ್ದವನು ಸುಮಾಳಿಗೆಂದು ತೆಗೆದುಕೊಂಡಿದ್ದ ಸೀರೆ ನನ್ನ ಗಾಡಿಯಲ್ಲೇ ಇದ್ದದ್ದು ನೆನಪಾಗಿ ಅದನ್ನು ವಾಪಸ್ ಕೊಟ್ಟು ಹೋಗೋಣವೆಂದು ಹಿಂತಿರುಗಿಬಂದೆ. ಆಗ ನನಗೆ ದೂರದಲ್ಲೆಲ್ಲೋ ಹೆಜ್ಜೆ ಸಪ್ಪಳ ಕೇಳಿಸಿದಂತಾಯಿತು. ಸುತ್ತಮುತ್ತಲು ನೋಡಿದಾಗ ಸುಬ್ಬಜ್ಜಿ ಪ್ರಜ್ಞೆ ತಪ್ಪಿ ಬಿದ್ದಿದ್ದರು ಎಂಬುದಾ

ತಿಳಿಯಿತು. ಸುಬ್ಬಜ್ಜಿಯ ಮುಖಕ್ಕೆ ನೀರು ಚಿಮುಕಿಸಿ, ಅವರಿಗೆ ಎಚ್ಚರವಾದಾಗ ಅವರು ಅತ್ಯಂತ ಆಘಾತಕ್ಕೊಳಗಾಗಿದ್ದರು. ಅವರು ನನಗೆ ಬಾವಿಯ ಕಡೆ ಕೈ ಮಾಡಿ ತೋರಿಸಿದರು. ಕೂಡಲೇ ನಾನು ಬಾವಿಯ ಬಳಿ ಹೋಗಿ ನೋಡಿದಾಗ ಸುಮಾ ಬಾವಿಯಲ್ಲಿ ಕಂಡಳು. ಆಕೆ ಬಾವಿಯಲ್ಲಿ ಬಿದ್ದು ಆದಾಗಲೇ ಎಷ್ಟು ಹೊತ್ತಾಗಿತ್ತೋ ಗೊತ್ತಿಲ್ಲ. ಅವಳನ್ನು ಬದುಕಿಸುವ ನನ್ನ ಪ್ರಯತ್ನವೂ ವಿಫಲ ವಾಯಿತು. ಅಷ್ಟರಲ್ಲಿ ಅಲ್ಲಿಗೆ ಬಂದವರು ಯಾರೋ ಗೋಪಾಲ ಭಟ್ಟರು ಅಂತ ಹೇಳಿದ ಹಾಗೆ ನೆನಪು. ಅವರು ಸುಬ್ಬಜ್ಜಿಯನ್ನು ಕರೆದುಕೊಂಡು ಹೋದರು. ಅಂದು ಅಲ್ಲಿ ಏನು ನಡೆದಿರಬಹುದೆಂಬುದು ನನ್ನ ಊಹೆಗೂ ನಿಲುಕದ ವಿಚಾರ. ನಾನೇನನ್ನೂ ಕೆದಕಲಿಲ್ಲ. ನಾನು ಸುಮಾಳನ್ನು ಬಿಟ್ಟು ಹೋದ ನಂತರ ಏನಾಯಿತೋ, ಅಲ್ಲಿಗೆ ಯಾರಾದರೂ ಬಂದಿದ್ದರೇನೋ, ಅವರುಗಳ ಮಧ್ಯೆ ಅದೇನು ನಡೆಯಿತೋ, ಆ ದೇವರೇ ಬಲ್ಲ. ಸುಬ್ಬಜ್ಜಿಯೇ ಏನಾದರೂ ಸುಮಾಳನ್ನು ಅಕಸ್ಮಾತ್ ಆಗಿ ಆವೇಶ ಅಥವಾ ಪ್ರಚೋದನೆಯಿಂದ ಸುಮಾಳನ್ನು ಬಾವಿಗೆ ದೂಡಿದರೋ, ಅಥವಾ ಆಕೆಯೇ ಬಾವಿಯಲ್ಲಿ ಕಾಲು ಜಾರಿ ಬಿದ್ದಳೋ ಅಥವಾ ಸುಮಾಳೇ ಏನಾದರೂ ಆತ್ಮಹತ್ಯೆ ಮಾಡಿಕೊಂಡಳೋ, ಅಥವಾ ಅಲ್ಲೇ ಇದ್ದ ಬೇರೆ ಯಾರಾದರೂ ಆ ಸಮಯದಲ್ಲಿ ಏನೋ ಮಾಡಿ ಸುಮಾಳನ್ನು ಬಾವಿಗೆ ದೂಡಿ ಓಡಿ ಹೋದರೋ, ಇಂದಿಗೂ ನನಗೆ ಯಕ್ಷಪ್ರಶ್ನೆ ಯಾಗಿದೆ. ಇದರ ಬಗ್ಗೆ ಬೇರೆ ಯಾರೂ ದೂರನ್ನೂ ನೀಡಲಿಲ್ಲ. ಆಕೆ ಕಾಲು ಜಾರಿಯೇ ಬಿದ್ದು ಸತ್ತಿರುವಳೆಂದು ಗುಲ್ಲೆದ್ದಿದ್ದರಿಂದ ಹಾಗೂ ಪೋಸ್ಟ್ ಮಾರ್ಟಂ ರಿಪೋರ್ಟ್ನಲ್ಲಿ ಏನೇ ಬಂದಿದ್ದರೂ ಸಾಕ್ಷ್ಯಾಧಾರಗಳ ಕೊರತೆ ಇದ್ದುದರಿಂದ ಪೊಲೀಸಿನವರು 'ಬಿ' ರಿಪೋರ್ಟ್ ಹಾಕಿದ್ದರಿಂದ ಆ ಕೇಸಿನ ವಿಚಾರಣೆ ಅಲ್ಲೇ ಸಮಾಪ್ತಿಯಾಯಿತು. ಕೇಸಿನ ವಿಚಾರಣೆ ಕೊನೆಗೊಂಡಿದ್ದುದರಿಂದ ಸುಮಾಳನ್ನು ಯಾರಾದರೂ ಕೊಲೆ ಮಾಡಿದ್ದರೇನೋ ಎಂಬ ನನ್ನ ಅನುಮಾನವನ್ನು ನಾನು ಅಲ್ಲೇ ಹೊಸಕಿ ಹಾಕಿಬಿಟ್ಟೆ. ನಾನು ಪೊಲೀಸ್ ಡಿಪಾರ್ಟ್‌ಮೆಂಟಿನಲ್ಲೇ ಇದ್ದರೂ ಇದರ ಬಗ್ಗೆ ಪುನಃ ತನಿಖೆ ನಡೆಸಲು, ದೂರು ನೀಡಲು ನನಗೇಕೋ ಮನಸಾಗಲಿಲ್ಲ. ದೂರು ನೀಡಿದರೆ ತನ್ನ ಪ್ರಮೋಷನ್‌ಗೆ ಎಲ್ಲಿ ಪೆಟ್ಟು ಬೀಳುವುದೋ ಎಂಬ ಹೆದರಿಕೆಯೂ ಸೇರಿತ್ತು. ಸುಮಾಳಂತೂ ಹೋದಳು. ದೂರು ಗೀರು ಅಂತ ಮುಂದುವರೆದರೆ ಸುಬ್ಬಜ್ಜಿಯೂ ಸೇರಿದಂತೆ ಬದುಕಿರುವ ನಾವೆಲ್ಲರೂ ಕಷ್ಟ ಪಡಬೇಕಾಗುವುದಲ್ಲ ಎಂಬ ಆಲೋಚನೆಯಿಂದ ನನಗೇಕೋ ಕೇಸನ್ನು ಮುಂದುವರೆಸಲು ಮನಸ್ಸೇ ಬರಲಿಲ್ಲ.

ಹಾಗಾಗಿ ನಾನೇ ದೂರದೂರಿಗೆ ವರ್ಗಾವಣೆ ಮಾಡಿಸಿಕೊಂಡು ದೂರ ಹೋಗಿಬಿಟ್ಟೆ. ಇಂದಿಗೂ ಸುಬ್ಬಜ್ಜಿಗೆ ನನ್ನ ಮೇಲೆ ಕೋಪ ಇದೆ, ಅದೇಕೋ

ಗೊತ್ತಿಲ್ಲ. ನೋಡಿ, ನಿಮಗೆ ಇದನ್ನೆಲ್ಲಾ ಹೇಳಬೇಕು ಅನ್ನಿಸಿತು ಹೇಳಿದೆ. ಅಂದು ನಡೆದ ಘಟನೆ ಸುಬ್ಬಜ್ಜಿಗೆ ಮಾತ್ರ ಅಥವಾ ಅಂದು ಅಲ್ಲಿದ್ದವರಿಗೆ ಮಾತ್ರ ಗೊತ್ತಿರಲು ಸಾಧ್ಯ. ಸುಮಾಳೇನಾದರೂ ಆತ್ಮಹತ್ಯೆ ಮಾಡಿಕೊಂಡಿದ್ದಲ್ಲಿ, ಯಾವುದಾದರೂ ಡೆತ್‌ನೋಟ್ ಬರೆದಿಟ್ಟಿದ್ದಳೋ ಏನೋ, ಅವಳ ಡೈರಿ ಯಾರಿಗಾದರೂ ಸಿಕ್ಕಿ ವಿಷಯ ಏನೆಂದು ಗೊತ್ತಾಗಿರಬಹುದು ಎಂದೆಲ್ಲಾ ಅಂದುಕೊಂಡಿದ್ದ ನನಗೆ ಇದುವರೆಗೂ ಈ ವಿಷಯ ಯಕ್ಷಪ್ರಶ್ನೆಯಾಗಿಯೇ ಉಳಿದಿರುವುದು ಬೇಸರ ತಂದಿದೆ.

ಸುಬ್ಬಜ್ಜಿ ಈ ಘಟನೆಯಿಂದ ಹೊರಬಂದು ನೆಮ್ಮದಿಯ ಬದುಕು ಬಾಳುವಂತಾಗಲಿ ಎಂದಷ್ಟೇ ನಾನು ಹಾರೈಸುತ್ತೇನೆ. ಈಗ ಕಾಲ ಮೀರಿರುವು ದರಿಂದ ಅಂದು ಏನೇ ನಡೆದಿದ್ದರೂ ಯಾರಿಗೂ ಯಾವ ನ್ಯಾಯವನ್ನೂ ದೊರಕಿಸಿಕೊಡಲಾಗುವುದಿಲ್ಲ. ಹಳೇ ನೆನಪುಗಳನ್ನು ಕೆದಕಿ ತೆಗೆದಷ್ಟೂ ಗಾಯ ಆಳವಾಗತೊಡಗುತ್ತದಷ್ಟೇ. ಇದನ್ನು ಇಲ್ಲೇ ಬಿಟ್ಟುಬಿಡಿ, ಏನೂ ಮಾಡಲು ಸಾಧ್ಯವಿಲ್ಲ"

ಹೀಗೆ ಹೇಳಿ ನಿಟ್ಟುಸಿರು ಬಿಡುತ್ತಾ, ದಿನಕರನು "ಈಗಾಗಲೇ ತಡವಾಗಿದೆ. ನಾನಿನ್ನು ಬರುತ್ತೇನೆ" ಎಂದು ಸುಹಾಸನಿಗೆ ವಿದಾಯ ಹೇಳಿ ಅಲ್ಲಿಂದ ಹೊರಟುಬಿಟ್ಟ.

ಅಧ್ಯಾಯ 10

ವಾಣಿ ದಿನೇಶ್

ಮರುದಿನ ಬೆಳಗಿನ ಜಾವ ಎಚ್ಚರವಾದ ಸುಬ್ಬಜ್ಜಿಗೆ ಮಸುಕು ಮಸುಕಾಗಿ ಹಿಂದಿನ ದಿನದ ನೆನಪಾಯಿತು. ದಿನಕರ್ ಏಕೆ ಬಂದಿದ್ದ? ನನ್ನ ಹತ್ರ ಚೆನ್ನಾಗೇ ಮಾತಾಡಿ ಹೋದನಲ್ಲಾ.ನವ್ಯ ಜೀವನ್‌ರ ಮದುವೆ ಮಾತುಕತೆಗೆ ಬಂದಿದ್ದನೆ, ಹಾಗೇನಾದರೂ ಇದ್ದಲ್ಲಿ ತಾನು ಇದಕ್ಕೆ ಸುತಾರಾಂ ಒಪ್ಪುವುದಿಲ್ಲ, ನವ್ಯಳಿಗೆ ಬೇರೆ ಹುಡುಗನನ್ನು ಹುಡುಕುವಂತೆ ಸುಹಾಸನಿಗೆ ಹೇಳ ಬೇಕು ಎಂದೆಲ್ಲಾ ಸುಬ್ಬಜ್ಜಿಯ ಯೋಚನಾಲಹರಿ ಸಾಗಿತ್ತು.

ದಿನಕರ್‌ನನ್ನು ಬೀಳ್ಕೊಟ್ಟು ಮನೆಗೆ ಬಂದ ಸುಹಾಸ ಯಾವುದೇ ನಿರ್ಧಾರಕ್ಕೂ ಬರದಾದ. ದಿನಕರನ ಮಾತುಗಳು ಅಮ್ಮನಿಗೆ ಸಮಾಧಾನ ತಂದಿರಬಹುದೇ? ನೋಡೋಣ, ನಾಳೆ ಹೇಗಿದ್ದರೂ ಡಾ. ಭರತ, ಡಾ. ಅಭಿಲಾಷ ಮನೆಗೆ ಬರುತ್ತಾರೆ, ಏನಾದರೂ ಪರಿಹಾರ ಸಿಗಬಹುದು ಎಂದು ಆಶಿಸಿದ ಸುಹಾಸ. ಮರುದಿನ ಕಚೇರಿಗೆ ರಜೆ ಹಾಕಿ ಮನೋ ವೈದ್ಯರ ಬರುವಿಕೆ ಯನ್ನು ಕಾಯುತ್ತಿದ್ದ. ಸುಮಾರು 12.00 ಗಂಟೆ ವೇಳೆಗೆ ಇಬ್ಬರೂ ಬಂದರು. ಅವರು ಬರುವ ವಿಷಯ ಮನೆಯಲ್ಲಿ ಮೊದಲೇ ತಿಳಿಸಿದ್ದರಿಂದ ಸುಬ್ಬಜ್ಜಿ, ಸುಜಾತಾ ಅಡುಗೆ ತಯಾರಿ ಜೋರಾಗಿ ನಡೆಸಿದ್ದರು. ತಿಳಿ ಸಾರು, ಪಲ್ಯ, ಆಲೂಗಡ್ಡೆ ಹುಳಿ, ಕೋಸಂಬರಿ, ಗಸಗಸೆ ಪಾಯಸ, ಅಂಬೊಡೆ ಇತ್ಯಾದಿ.

ಬನ್ನಿ, ಬನ್ನಿ, ಇಷ್ಟು ಹೊತ್ತಾದ್ರೂ ನೀವು ಬಾರದೆ ಇದ್ದುದರಿಂದ ಫೋನ್ ಮಾಡೋಣ ಅಂತ ಅಂದು ಕೊಳ್ಳುತ್ತಿದ್ದೆ. ಬನ್ನಿ, ಕುಳಿತುಕೊಳ್ಳಿ ಎಂದು ಹೇಳಿದ ಸುಹಾಸ.

ಮಲೆನಾಡಿನಲ್ಲಿ ಯಾರೇ ಬರಲಿ, ಪರಿಚಿತರು, ಅಪರಿಚಿತರು ಎಂದು ನೋಡದೆ ಮನೆಗೆ ಬಂದವರಿಗೆ ಬನ್ನಿ, ಕುಳಿತುಕೊಳ್ಳಿ ಎಂದು ಹೇಳಿ ಕುಡಿಯಲು ನೀರು ಬೆಲ್ಲ ಕೊಡುವುದು ವಾಡಿಕೆ.

ವೈದ್ಯರಿಬ್ಬರೂ ಮನೆಗೆ ಬಂದುದು ಸುಹಾಸನಿಗೆ ಸಂತೋಷವಾಗಿತ್ತು.

ಸುಜಾತ ಅಷ್ಟು ಹೊತ್ತಿಗೆ ಬಂದವರಾರೆಂದು ನೋಡಲು ಹೊರಗೆ ಇಣುಕಿದಾಗ ಕಾಫಿ ತರಲು ಹೇಳಿದ ಸುಹಾಸ.

ಸುಜಾತ ಕಾಫಿ ತಂದುಕೊಡುತ್ತಾ ಹೇಗಿದ್ದೀಯಪ್ಪಾ ಭರತ, ಮನೆಯಲ್ಲಿ ಎಲ್ಲರೂ ಕ್ಷೇಮವೇ? ಕೆಲವು ವರ್ಷಗಳ ನಂತರ ನಿನ್ನನ್ನು ನೋಡುತ್ತಿದ್ದೇವೆ ಎಂದು ಕಕ್ಕುಲತೆಯಿಂದ ವಿಚಾರಿಸಿದಳು. ನಾವೆಲ್ಲ ಕ್ಷೇಮ ಆಂಟಿ. ನವ್ಯ ಎಲ್ಲಿ? ಕಾಲೇಜ್‌ಗೆ ಹೋಗಿ ಆಯ್ತ, ಅವಳನ್ನು ನೋಡದೆ ತುಂಬಾ ದಿನಗಳೆ ಆಯ್ತು ಎಂದ ಭರತನಿಗೆ ಇನ್ನು ಸ್ವಲ್ಪ ಹೊತ್ತಿಗೆ ನವ್ಯ ಮನೆಗೆ ಬರುವುದಾಗಿ ಹೇಳಿದಳು. ಎಲ್ಲರೂ ಊಟಕ್ಕೆ ಬನ್ನಿ ಎಂಬ ಕರೆಗೆ ಓಗೊಟ್ಟು ಊಟ ಮಾಡಿದರು. ಊಟ ಬಹಳ ಚೆನ್ನಾಗಿತ್ತು. ನಿಮ್ಮ ಮನೆಯ ಅಡುಗೆಯ ಕೈ ರುಚಿಯ ಬಗ್ಗೆ ಭರತ ಯಾವಾಗಲೂ ಹೇಳುತ್ತಿದ್ದ. ಇವತ್ತು ಅದನ್ನು ಸವಿಯುವ ಭಾಗ್ಯ ನನಗೂ ಒದಗಿತು ಎಂದು ಡಾ. ಅಭಿಲಾಷ ಅವರ ಅಡುಗೆಯ ಕುರಿತು ಮೆಚ್ಚುಗೆಯ ಮಾತನಾಡಿದ. ಊಟ ಆದ ನಂತರ ಸುಬ್ಬಜ್ಜಿಯ ಬಾಯಲ್ಲಿ ಸತ್ಯ ಹೊರಡಿಸುವ ಪ್ರಯತ್ನ ಮಾಡೋಣ ಎಂದು ಸುಹಾಸ ಮತ್ತು ಡಾ. ಅಭಿಲಾಷ ನಿರ್ಧರಿಸಿದರು.

❖ ❖ ❖

ಕಲ್ಯಾಣಮ್ಮ ಗೋಪಾಲ ಭಟ್ಟರನ್ನು ಮದುವೆಯಾಗಿ ಬಂದಾಗ ಅಲ್ಲಿ ನೆರೆದಿದ್ದ ಜನರಿಂದ ಗೋಪಾಲ ಭಟ್ಟರು ಸುಮಾಳನ್ನು ಮದುವೆಯಾಗಲು ಆಸೆ ಪಟ್ಟಿದ್ದ ವಿಷಯ ಕಿವಿಗೆ ಬಿದ್ದಿತ್ತು. ಆದರೆ ಈ ವಿಷಯವನ್ನು ಕಲ್ಯಾಣಮ್ಮ ಗಂಭೀರವಾಗಿ ತೆಗೆದುಕೊಂಡಿರಲಿಲ್ಲ. ಆಗಾಗ ಗೋಪಾಲ ಭಟ್ಟರು ಪುರೋಹಿತ ಎಂಬ ಒಂದೇ ಕಾರಣಕ್ಕೆ ನನಗೆ ಹೆಣ್ಣು ಕೊಡದೆ ತಿರಸ್ಕರಿಸಿದ ಸುಬ್ಬಜ್ಜಿಗೆ ಹೀಗೇ ಆಗಬೇಕು, ಎಂದೆಲ್ಲಾ ಹೇಳುತ್ತಿದ್ದರು. ಇದರಿಂದ ಕಲ್ಯಾಣಮ್ಮನಿಗೆ ಸುಬ್ಬಜ್ಜಿಯ ಮಗಳು ಸುಮಾಳ ಸಾವಿನ ಹಿಂದೆ ಇವರ ಕೈವಾಡವೇನಾದರೂ ಇರಬಹುದೇ ಎಂಬ ಗುಮಾನಿ ಬಂದು ಹೋಗುತ್ತಿತ್ತು.

ಯಾವುದೋ ಯೋಚನೆಯಲ್ಲಿದ್ದ ಕಲ್ಯಾಣಮ್ಮನಿಗೆ ಸೊಸೆ ಸುಗುಣ ವಾಂತಿ ಮಾಡಿಕೊಳ್ಳುತ್ತಿದ್ದ ಶಬ್ದ ಕೇಳಿಸಿತು. ಕೂಡಲೇ ಸುಗುಣಳ ಕೈ ಯ ನಾಡಿ ಹಿಡಿದು ನೋಡಿದವಳ ಸಂತೋಷಕ್ಕೆ ಪಾರವೇ ಇರಲಿಲ್ಲ. ಕೃಷ್ಣಾ, ಕಡೆಗೂ ನಮ್ಮ ಮೇಲೆ ದಯೆ ತೋರಿದೆಯಾ ದೇವರೇ ಎನ್ನುತ್ತಾ ದೇವರಿಗೆ ತುಪ್ಪದ ದೀಪ ಹಚ್ಚಲು ದೇವರ ಕೋಣೆಗೆ ಹೊರಟಳು.

ಮೂಲೆ ಮನೆ ಶೇಷಮ್ಮ ಹೇಳಿದಳು ಅಂತ ಶಕಟಪುರದ ಸಂತಾನ ಗೋಪಾಲಕೃಷ್ಣನಿಗೆ ಹರಕೆ ಹೊತ್ತಿದ್ದು ಸಾರ್ಥಕವಾಯಿತು ಎಂದುಕೊಂಡರು ಕಲ್ಯಾಣಮ್ಮ. ಸೊಸೆ ಸುಗುಣ ತಮ್ಮ ವಂಶದ ಕುಡಿಯನ್ನು ಹೊತ್ತಿದ್ದಳು.

ವಿಷಯ ತಿಳಿದಾಗ ಖುಷಿಯಲ್ಲಿ ಸರಿತಾ ಅಲರೆ, ಅಲಾರೆ, ಮುಕುಂದ ಮುರಾರೆ, ಗೋಪಾಲ ಬಾರಯ್ಯ ಬಾ..ರೊ.. ಶ್ರೀ ಕೃಷ್ಣ ನೀ ಬೇಗ ಬಾ...ರೋ.. ಎಂದು ಸುಶ್ರಾವ್ಯವಾಗಿ ಹಾಡ ತೊಡಗಿದಳು.

ಸರಿತಾಳಿಂದ ತೆಗೆದು ಕೊಂಡಿದ್ದ ನೋಟ್ ಬುಕ್ ವಾಪಸ್ ಕೊಡುವ ಸಲುವಾಗಿ ಅಲ್ಲಿಗೆ ಬಂದ ಜೀವನ್ ಇವಳ ಹಾಡನ್ನು ತನ್ಮಯತೆಯಿಂದ ಕೇಳುತ್ತಾ ಹೊರಗೆ ಅದೆಷ್ಟು ಹೊತ್ತು ನಿಂತಿದ್ದನೋ... ದೇವರಿಗೆ ದೀಪ ಹಚ್ಚಿ ಸಂತಸದಿಂದ ಹೊರಗೆ ಬಂದ ಕಲ್ಯಾಣಮ್ಮ ಬಾಗಿಲಲ್ಲಿ ನಿಂತಿದ್ದ ಯುವಕನನ್ನು ಕಂಡು ಅಚ್ಚರಿಯಿಂದ "ಯಾರಪ್ಪಾ ನೀನು, ಯಾರು ಬೇಕಾಗಿತ್ತು" ಅಂದಳು. ಕಲ್ಯಾಣಮ್ಮನ ಧ್ವನಿ ಕಿವಿಗೆ ಬೀಳುತ್ತಿದ್ದ ಹಾಗೆ ವಾಸ್ತವಕ್ಕೆ ಬಂದ ಜೀವನ್ ತನ್ನ ಪರಿಚಯ ಮಾಡಿಕೊಂಡ. ಹೋ, ನಮ್ಮ ಸರಿತಾಳ ಸಹಪಾಠಿ ನಾ... ಬಾ ಒಳಗೆ ಕೂತ್ಕೋ ಎಂದು ಹೇಳಿ "ಏ ಸರಿತಾ ಬಾರೇ ಇಲ್ಲಿ" ಎಂದು ಗಟ್ಟಿಯಾಗಿ ಕೂಗಿದರು. ಅಷ್ಟರಲ್ಲಾಗಲೇ ಯಾರೋ ಮಾತಾಡುವ ಧ್ವನಿ ಕೇಳಿ ಹಾಡು ನಿಲ್ಲಿಸಿದ್ದ ಸರಿತಾ ಕರೆಗೆ ಓಗೊಟ್ಟು ಬೇಗನೆ ಹೊರಗೆ ಬಂದಳು.

ಒಳಗೆ ಬಂದು ನಿಂತಿದ್ದ ಜೀವನ್ ಅವಳನ್ನು ಕಂಡೊಡನೆ ನೋಟ್ ಬುಕ್ ಹಿಂತಿರಿಗಿಸಿದ. ಸರಿತಾ ಅವನಿಗೆ ಕುಳಿತುಕೊಳ್ಳುವಂತೆ ಕೈ ತೋರಿದಳು.

"ನೀವು ಮಾತನಾಡುತ್ತಿರಿ, ನಾನು ಕಾಫಿ ತರ್ತೀನಿ "ಎಂದು ಒಳಗೆ ಹೋದ ಕಲ್ಯಾಣಮ್ಮನಿಗೆ ಜೀವನ್ ಆಕ್ಷೀ..ಎಂದು ಸೀನುವ ಶಬ್ದ ಕೇಳಿ ಶುಂಠಿ, ಕಾಳು ಮೆಣಸಿನ ಕಷಾಯ ತಂದು ಕೊಟ್ಟಳು.

ಛೇ, ನಿಮಗೆ ಸುಮ್ಮನೆ ತೊಂದರೆ ಕೊಟ್ಟೆ ಎಂದು ಜೀವನ್ ಸಂಕೋಚ ವ್ಯಕ್ತಪಡಿಸಿದ. "ಅಯ್ಯೋ ಅದೇನು ತೊಂದ್ರೆ..ನೀನು ನಮ್ಮ ಸರಿತಾಳ ಸಹಪಾಠಿ ಎಂದ ಮೇಲೆ ಇಷ್ಟೂ ಮಾಡದಿದ್ದರೆ ಹೇಗೆ, ಏನೂ ಸಂಕೋಚ ಮಾಡಿಕೊಳ್ಳ ಬೇಡ ಎಂದು ಜೀವನ್‌ಗೆ ಹೇಳಿದ ಕಲ್ಯಾಣಮ್ಮ ಏನಾದರೂ ಸಿಹಿ ಮಾಡುವ ಸಲುವಾಗಿ ಅಡುಗೆ ಮನೆ ಪ್ರವೇಶಿಸಿದರು.

ಇತ್ತ ಸರಿತಾ ಜೀವನ್ ಹತ್ತಿರ ಇವತ್ತು ನಾನು ಸಂತೋಷದ ಮೂಡಿನಲ್ಲಿದ್ದೆ .ಹಾಗೆಯೇ ಹಾಡುವ ಮನಸ್ಸಾಗಿ ಹಾಡುತ್ತಿದ್ದೆ. ನೀವು ಬಂದಿದ್ದು ತಿಳಿಯಲಿಲ್ಲ. ದಯವಿಟ್ಟು ಕ್ಷಮಿಸಿ..ಎಂದಾಗ, ಜೀವನ್ ನಾನು ಸರಿಯಾದ ಸಮಯಕ್ಕೆ ಬಂದುದರಿಂದ ನಿಮ್ಮ ಹಾಡನ್ನು ಕೇಳುವ ಭಾಗ್ಯ ನನ್ನದಾಯಿತು. ಬಹಳ ಸೊಗಸಾಗಿ ಹಾಡಿದಿರಿ ಎಂದು ಹೊಗಳಿದ. ಸರಿತಾಳ ಕೆನ್ನೆ ಕೆಂಪೇರಿತು.

ಅಧ್ಯಾಯ 11

ಡಾ. ಚೇತನ್ ಸದಾನಂದ

ಅತ್ತ ನವ್ಯ ಜೀವನ್ ಮಾತಿನಿಂದ ಪ್ರೇರಿತಳಾಗಿ ತನ್ನ ಅಜ್ಜಿಯನ್ನು ಅರಿಯುವ ಸಕಲ ಪ್ರಯತ್ನದಲ್ಲಿದ್ದಳು ಆಕೆಗೆ ತನ್ನಜ್ಜಿ ದಿನಕರನನ್ನ ನೋಡಿ ಮಸುಕಾಗಿ ಭಯದಿಂದ ಮೂಲೆಯಲ್ಲಿ ಕುಳಿತ ಸಂಗತಿಯು ಕಾಡತೊಡಗಿತ್ತು.

ಇತ್ತ ಡಾ. ಭರತ್ ಮತ್ತು ಡಾ. ಅಭಿಲಾಷ್‌ನ ಕಂಡ ಸುಜಾತ ಇವರಿಬ್ಬರಲ್ಲೊಬ್ಬರು ನವ್ಯಳಿಗೆ ಆದೀತು ಎಂದು ಕನಸು ಕಾಣತೊಡಗಿದ್ದಳು. ಹೆತ್ತ ಕರುಳೇ ಹಾಗೆ.

ಇನ್ನೊಂದೆಡೆ ಬಾಳೆ ಎಲೆಯಲ್ಲಿ ಮೃಷ್ಟಾನ್ನ ಭೋಜನವನ್ನು ಸವಿದಂತಹ ಇಬ್ಬರೂ ವೈದ್ಯರು ಒಬ್ಬರನ್ನೊಬ್ಬರು ನೋಡಿಕೊಂಡು ಉದರದ ಮೇಲೆ ಕೈಯಾಡಿಸುತ್ತ "ಅಬ್ಬಬ್ಬಾ ಎಂತಹ ಕೈ ರುಚಿ ನಮ್ಮ ಸುಬ್ಬಜ್ಜಿದು!! ಆಕೆ ಏನಾದರೂ ಬೆಂಗಳೂರಿನಲ್ಲಿದ್ದಿದ್ದರೆ ಅಷ್ಟೇ! MTR ತರ STR ಅಂತ ಫೇಮಸ್ ಆಗಿ ಬಿಡ್ತಿದ್ರು ಅಂತ ಜುಗಲ್ಬಂದಿಯಲ್ಲಿ ತೇಗಿಬಿಟ್ಟರು. ಅಷ್ಟರಲ್ಲಿ ಅಭಿ ಸ್ವಲ್ಪ ಹೋಮ ಮಾಡಿ ಬರ್ತೀನಿ ಎಂದು ಗೇಟಿನ ಬಳಿಗೆ ಹೊರಟನು. (ಹೋಮ ಎಂಬುದು ಬೆಂಗಳೂರಿನಲ್ಲಿರುವ ಹಾಸ್ಟಲ್ ಹುಡುಗರ ಕೋಡ್ ವರ್ಡ್ ಸಿಗರೇಟ್ ಸೇದುವುದಕ್ಕೆ).

ಗೇಟಿನ ಬಳಿ ಸುಹಾಸನು ಒಂದು ಕೈ ಗೇಟಿಗೆ ಒರಗಿ ಇನ್ನೊಂದು ಕೈಯಲ್ಲಿ ಸಿಗರೇಟನ್ನು ಸೇದುತ್ತ ಏನೋ ಗಾಢವಾದ ಯೋಚನೆಯಲ್ಲಿ ಮುಳುಗಿದ್ದನ್ನು ಅಭಿಲಾಷ್ ಗಮನಿಸುತ್ತ ಹತ್ತಿರ ಹೋಗಿ "ಇಫ್ ಯು ಡೋಂಟ್ ಮೈಂಡ್ ಕ್ಯಾನ್ ಐ ಹ್ಯಾವ್ ಎ ಸಿಗರೇಟ್ ಪ್ಲೀಸ್" ಎಂದು ಕೇಳುತ್ತಾನೆ.

ಸುಹಾಸನು ಆಶ್ಚರ್ಯ ಚಕಿತನಾಗಿ 'ಡಾಕ್ಟ್ರೇ... ನೀವು... ನೀವು ಸಿಗರೇಟು?' ಎಂದು ಉದ್ಗಾರ ತೆಗೆಯುತ್ತಾ ಸಂಕೋಚದಿಂದ ಸಿಗರೇಟನ್ನು ಕೊಡುತ್ತಾನೆ

ಗರೇಟ್ ಹಚ್ಚಿದ ಅಭಿ "ನಾವೂ ಮನುಷ್ಯರೇ ಸ್ವಾಮಿ. ಈಗಲೋ ಆಗಲೋ ಒಂದು ಸೇದುವ ಅಭ್ಯಾಸವಿದೆ ಹಾಗಂತ ಚೇಯ್ನ್ ಸ್ಮೋಕರ್ ಅಲ್ಲ .ಈ ತರ ಹೊಟ್ಟೆ ಬಿರಿ ತಿಂದಾಗ ಕೆಲವೊಮ್ಮೆ ಬೇಕಾಗುತ್ತೆ ಅಷ್ಟೆ" ಎಂದು ಸಿಗರೇಟ್ ಸೇದುತ್ತ ಸುಹಾಸನನ್ನ ಗಮನಿಸುತ್ತಾನೆ.

ಎರಡು ಸಿಗರೇಟ್ ತಂದರೆ ಒಂದನ್ನು ಸೇದಿ ಇನ್ನೊಂದನ್ನು ಆಮೇಲಿಗೆಂದು ಎತ್ತಿಡುತ್ತಿದ್ದ ಸುಹಾಸ ಇಂದು ಒಂದರ ಹಿಂದೆ ಒಂದು ಸಿಗರೇಟ್ ಹಚ್ಚುತ್ತಿದ್ದ.

ದಿನಕರನನ್ನು ಕಂಡ ಅವನಿಗೆ ತಲೆಯಲ್ಲಿ ಚಂಡಮಾರುತ ಶುರುವಾಗಿತ್ತು. ಅಂದಿನ ದಿನ ಏನಾಗಿತ್ತು? ಅಕ್ಕ ಯಾತಕ್ಕಾಗಿ ಬಾವಿಗೆ ಹಾರಿದ್ದಳು? ದಿನಕರನು ಅಮ್ಮನ ಕಾಲಿಗೆ ನಮಸ್ಕರಿಸಿ ಮಾತನಾಡಿದ ರೀತಿ ನಡೆದುಕೊಂಡ ರೀತಿ, ಹಾವ ಭಾವ ಇದ್ಯಾವುದೂ ದಿನಕರನನ್ನು ಕೆಟ್ಟವನೆಂದು ಬಿಂಬಿಸುತ್ತಿರಲಿಲ್ಲ. ಆದರೂ ಆತ ಗೋಮುಖ ವ್ಯಾಘ್ರನಿರಬಹುದೇ? ಆತನನ್ನು ನೋಡಿ ಅಮ್ಮ ಭಯದಿಂದ ಮಬ್ಬಾಗಿದ್ದೇಕೆ? FIR ಕಾಪಿ ಯಾಕೆ ಸಿಗುತ್ತಿಲ್ಲ ಯಶಸ್ಸಿಗೆ? ಈ ಎಲ್ಲಾ ಪ್ರಶ್ನಾವಳಿಯು ದೀಪಾವಳಿಯ ಪಟಾಕಿಯಾಗಿ ಆತನ ತಲೆಯಲ್ಲಿ ಸಿಡಿಯುತ್ತಿತ್ತು.

ಸ್ನೇಹವೆಂಬುದು ಬಹಳ ಬೇಗ classmates, glassmates and homa buddies ಅವರಲ್ಲಿ ಬೇಗ ಆಗುತ್ತಂತೆ ಹಾಗೆ ಇಲ್ಲಿ ಡಾ. ಅಭಿ ಮತ್ತು ಸುಹಾಸ ತುಂಬಾ ಆತ್ಮೀಯರಂತೆ ಮಾತಾಡತೊಡಗಿದರು.

ಸುಹಾಸ ತನ್ನಮ್ಮನ ಎಲ್ಲಾ ವಿಷಯವನ್ನು ಡಾ. ಅಭಿಯ ಬಳಿ ತೋಡಿಕೊಂಡನು.

ಕೆಲವೊಮ್ಮೆ ಬಾವಿಯಿಂದ ನೀರುಸೇದುವಾಗ ಬರೀ ಬಿಂದಿಗೆಯಿಂದ ನೀರು ಸುರಿಯುತ್ತಿರಲಿಲ್ಲ, ಅಮ್ಮನ ಕಣ್ಣಲ್ಲೂ ನೀರು ಸುರಿಯುತ್ತಿತ್ತು ಎಂದು ಹೇಳುತ್ತ ಕಣ್ಣೀರಿಟ್ಟನು. ನನ್ನ ಅಮ್ಮನಿಗೆ ಏನಾಗಿದೆ? ಡಾಕ್ಟ್ರೇ? ಊರಲ್ಲಿ ಎಲ್ಲಾ ಅಮ್ಮನ್ನ ಹುಚ್ಚಿ ಹುಚ್ಚಿ ಎಂದಾಗ ಎದೆಯಲ್ಲಿ ನೂರು ಚೂರಿ ಚುಚ್ಚಿದಷ್ಟು ಬೇಜಾರಾಗುತ್ತೆ, ನೋವಾಗುತ್ತೆ.

ಮಕ್ಕಳು ವಠವಠ ಅಂತ ಅರ್ಥವಾಗದ ತೊದಲು ಮಾತಾಡ್ತಾ ಇದ್ದರೆ ಅವರನ್ನ ಯಾರೂ ಹುಚ್ಚರನ್ನೊಲ್ಲ ಅಲ್ವ?

ಹಾಗೆಯೇ ವಯಸ್ಸಾದ ಮೇಲೆ ಎಲ್ಲರೂ ಮಕ್ಕಳ ತರಾನೆ. ಅಪ್ಪನ್ನ ನಾ ನೋಡೇ ಇಲ್ಲ ನಂಗೆ ಅಮ್ಮನೇ ಎಲ್ಲಾ. ಒಬ್ಬಂಟಿಯಾಗಿ ನನ್ನ ಬೆನ್ನೆಲುಬಾಗಿದ್ದ ಅಮ್ಮನ ಬೆನ್ನು ಇವತ್ತು ಬಗ್ಗಿದೆ. ಅವಳಿಗೆ ನಾ ನೆರವಾಗಿ ನಿಲ್ಲುತ್ತೀನಿ ಡಾಕ್ಟ್ರೇ.

ತಾಯಿ ಎಂದೆಂದು ಈ ಜಗದಿ ಚಿರಸ್ಥಾಯಿ.

ಆ ತಾಯಿಯ ಮನೋರೋಗವನ್ನು ಸರಿ ಮಾಡಲಿಕ್ಕಾಗಲ್ವ ಡಾಕ್ಟ್ರೇ? ಹಾಗಂತ ಕರೆಂಟು ಅಂತೆಲ್ಲ ಕೊಟ್ಟು ಬಿಡಬೇಡಿ.

ಪಾಪ ನಮ್ಮಮ್ಮ ಜೀವನದಲ್ಲಿ ಆಗಲೇ ಸಾಕಷ್ಟು ನೋವು ಅನುಭವಿಸಿ ಬಿಟ್ಟಿದ್ದಾಳೆ. ಇನ್ನು ಕೆಲವರು ಆಕೆಯ ಒಳಗೆ ನನ್ನಕ್ಕನ ಆತ್ಮ ಹೊಕ್ಕಿದೆ ಎಂದೆಲ್ಲ ಉಡಾಫೆಯ ಮಾತಾಡಿದ್ದು ಕೂಡ ಕೇಳಿದ್ದೇನೆ.

ದಯವಿಟ್ಟು ಸಹಾಯಮಾಡಿ ಏನಾದ್ರು ಮಾಡಿ ನಮ್ಮಮ್ಮನ ಸರಿಮಾಡಿ.

ಡಾ. ಅಭಿ ಈ ಮುಗ್ಧತೆಯ ಮಾತುಗಳನ್ನು ಕೇಳಿ ಭಾವುಕರಾಗಿ ಹೇಳುತ್ತಾರೆ "ನೋಡಿ ಸುಹಾಸವರೆ ನಿಮ್ಮ ಅಮ್ಮನಿಗೆ post traumatic stress ಆಗಿರುವ ಸಾಧ್ಯತೆಯಿದೆ. ಅಂದರೆ ಮನಸ್ಸಿಗೆ ಆದ ಆಘಾತದಿಂದ ಅವರಿಗೆ ಹೊರಬರಲು ಆಗೇ ಇಲ್ಲ ಅಂತ ಹೇಳಬಹುದು. ಮೊದಲಿಗೆ ಪತಿಯ ಸಾವು ಅದು ಕೂಡ ಮರಹತ್ತಿ ಬಿದ್ದು ಕಲ್ಲಿಗೆ ತಲೆ ಒಡಿದು ಆದ ಸಾವು ಹಾಗಾಗಿ ಆಕೆ ಆಗಾಗ ಮರದಹತ್ತಿರ ಹಾಗು ಕಲ್ಲಿನ ಹತ್ತಿರ ನಿಂತು ಯಾಕೆ ಹೀಗೆ ಮಾಡಿಬಿಟ್ಟಿರಿ ಎಂದು ಮಾತಾಡುತ್ತಿರಬಹುದು?"

ಅದಾದ ನಂತರ ಮತ್ತೊಂದು ಆಘಾತ.. ಸುಮಳ ಸಾವು . ಬಾವಿಗೆ ಹಾರಿ ಜೀವ ಹೋದದ್ದರಿಂದ ಬಾವಿಯಲ್ಲಿ ನೀರು ಸೇದುವಾಗ ಭಾವುಕಳಾಗಿ ಕಂಬನಿ ಹರಿಸಿರಬಹುದು. ನಾನು ಗಮನಿಸಿದ ಹಾಗೆ ಬೇರೆಲ್ಲಾ ವಿಷಯದಲ್ಲಿ ಸರಿಯಾಗಿರುವ ಆಕೆ ಒಬ್ಬಳೇ ಮಾತಾಡುತ್ತಿರುವುದು ಕಂಡರೆ ಅದೂ ನಿರ್ಜೀವಿ ವಸ್ತುಗಳೊಂದಿಗೆ ಮಾತಾಡುವುದಕ್ಕೆ ಕಾರಣವೊಂದೇ. ಅವು ಆಕೆಯನ್ನು ಕಂಡು ಅಸಡ್ಡೆ ಅಥವಾ ಹೀನಭಾವದಿಂದ ನೋಡುವುದಿಲ್ಲ ಹಾಗಾಗಿ ಇರಬಹುದು. There is a thin line between sanity and insanity ಎಂಬಂತೆ ಒಂದು ಸಣ್ಣಗೆರೆ ಒಬ್ಬ ಮನುಷ್ಯನು ಮನೋರೋಗಿಯೋ ಅಥವಾ ಅಲ್ಲವೋ ಎಂಬುದನ್ನು ನಿರ್ಧರಿಸುತ್ತದೆ.

ಕರೆಂಟೆಲ್ಲ ನಮ್ಮ ಸಿನಿಮಾ ಗಿಮಿಕ್ಸ್ ಕಣ್ರೀ ಒಂದಷ್ಟು ಮಾತ್ರೆ ಮತ್ತು ಮಾತುಕತೆ ಮಾಡಿ ನಿಮ್ಮಮ್ಮನ ಸರಿ ಮಾಡಿಕೊಡ್ತೀನಿ ಕಣ್ರೀ. ಈ ಸಿಗರೇಟ್ ಮುಟ್ಟಿ ಪ್ರಮಾಣ ಮಾಡ್ತೀನಿ ಎಂದು ನಸು ನಕ್ಕನು. ಎಷ್ಟಾದರೂ ಹೆಣ್ಣುಮಕ್ಕಳನ್ನ ಮಾತೆ ಅಂತ ಕರೆಯೋದೆ ಅದಕ್ಕೆ ಮಾತೆಯರ ಮಾತೆ undefined ಜಾಸ್ತಿ ಅಂತ ಎಂದೆನಲು ಇಬ್ಬರೂ ನಕ್ಕುಬಿಡುವರು.

ಸಪ್ಪೆಯಾಗಿದ್ದ ಸುಹಾಸನ ಮುಖದಲ್ಲಿ ಆಶಾವಾದದ ಹೊಳಪು ಕಾಣತೊಡಗಿತು.

❖ ❖ ❖

"ನವ್ಯಳಿಗೆ ಈಗ ಹೊಸಹುರುಪು ತನ್ನಜ್ಜಿಯೊಂದಿಗೆ ಮತ್ತೆ ಅದೇ ಹಳೇ ಸಲುಗೆ ಸಂಭ್ರಮ! ಅಳಗುಳಿಮನೆಯೇನು, ಅವಲಕ್ಕಿ ಪವಲಕ್ಕಿಯೇನು ಕವಡೆಯಾಟವೇನು ಇದ್ದಬದ್ದ ಎಲ್ಲಾ ಹಳ್ಳಿ ಸೊಗಡನ್ನು ಬಿಂಬಿಸುವ ಆಟಗಳನ್ನು ಆಡುತ್ತ ತನ್ನಜ್ಜಿಯೊಂದಿಗಿನ ಒಡನಾಟದಲ್ಲಿ ತಲ್ಲೀನವಾಗಿಬಿಟ್ಟಳು.

ಸುಬ್ಬಜ್ಜಿಗೆ ಒಂದೆಡೆ ಆಶ್ಚರ್ಯವೋ ಆಶ್ಚರ್ಯ! ಇನ್ನೊಂದೆಡೆ ಎಲ್ಲಿಲ್ಲದ ಸಂತಸ. ತಡೆಯಲಾರದ ಆನಂದವಾದಾಗ ಕಣ್ಣಂಚಿನಲ್ಲಿ ಒಂದು ಹನಿ ಮೂಡುವುದು ಸಹಜ. ಇಲ್ಲೂ ಹಾಗೆ ಆಯಿತು.

ತನ್ನ ಸೆರಗ ತುದಿಯಿಂದ ಕಣ್ಣಂಚನ್ನು ಒರೆಸುತ್ತಿದ್ದ ಸುಬ್ಬಜ್ಜಿಯನ್ನು ಗಮನಿಸಿದ ನವ್ಯ ಕೇಳಿದಳು "ಯಾಕಜ್ಜಿ ಕಣ್ಣಲ್ಲಿ ನೀರು? ಏನಾಯ್ತು? ನನ್ನಿಂದ ಏನಾದರೂ ತಪ್ಪಾಯ್ತಾ?" ಎಂದಳು

ಸುಬ್ಬಜ್ಜಿ ಆಕೆಯನ್ನು ತಬ್ಬಿ ಹೇಳಿದಳು "ಇಲ್ಲ ಪುಟ್ಟಿ ನೀ ನನ್ನೊಂದಿಗೆ ನಡೆದು ಕೊಳ್ಳುವ ರೀತಿ, ನೀ ತೋರುತ್ತಿರುವ ಪ್ರೀತಿ ನನ್ನ ಕಣ್ಣಿಂದ ಸಂತಸದ ಹನಿಗಳನ್ನು ತಂದಿವೆ ಅಷ್ಟೆ ಕಂದ" ಎಂದು ತನ್ನ ಹಲ್ಲಿಲ್ಲದ ಬೊಚ್ಚು ಬಾಯಿಂದ ನವ್ಯಳ ಹಣೆಯ ಮೇಲೆ ಮುತ್ತಿಟ್ಟಳು. ಸೃಷ್ಟಿಯ ಅದ್ಭುತ ನೋಡಿ! ಖುಷಿಯಾದರೂ ಬೇಜಾರಾದರೂ ಕಣ್ಣಿನ ಅಂಚಲಿ ಹನಿಗಳು ಮೂಡುತ್ತವೆ ಅಲ್ವ? ನೋವಿಗೂ ನಲಿವಿಗೂ ಕಣ್ಣಿನ ಸ್ಪಂದನೆಯೊಂದೆ 'ಆದರೆ ಭಾವ ಬೇರೆ! ಪ್ರೀತಿಯೆಂಬ ಅಮೃತಸಿಂಚನವಾಗುತ್ತಿದ್ದಂತೆಯೇ ಕಮರುತ್ತಿದ್ದ ಸುಬ್ಬಜ್ಜಿ ಕ್ರಮೇಣವಾಗಿ ಚಿಗುರ ತೊಡಗಿದಳು. ಅದನ್ನು ಕಂಡ ಸುಹಾಸನಿಗೂ ಸುಜಾತಳಿಗೂ ಆಶ್ಚರ್ಯ ಹಾಗು ಹರ್ಷದ ಮಿಶ್ರ ಭಾವನೆ. ನವ್ಯಳ ಪ್ರೀತಿಯ ಮದ್ದು ಯಾವ ಮಾತ್ರೆ ಅಥವ ಮದ್ದಿಗೇನೂ ಕಮ್ಮಿಯಿಲ್ಲ ಎಂಬ ಸತ್ಯವನ್ನರಿತ ಸುಹಾಸ ಸುಜಾತ ಇಬ್ಬರೂ ತಮ್ಮಯ ಪಾಲಿನ ಪ್ರೇಮವನು ಹಂಚಲು ಶುರುಮಾಡಲು ಸುಬ್ಬಜ್ಜಿಯು ಬಹುಬೇಗ ಚೇತರಿಸತೊಡಗಿದಳು.

ಮನೋರೋಗಕ್ಕೆ ಮಾತ್ರವಲ್ಲ ಸರ್ವ ರೋಗಕ್ಕೂ ಪ್ರೀತಿಯೇ ಮದ್ದು ಎಂಬ ಸತ್ಯವು ಅಲ್ಲಿ ಅನಾವರಣಗೊಳ್ಳುತಿರುವುದು ಗಮನಾರ್ಹ.

ಸುಹಾಸನಿಗೆ ತನ್ನಮ್ಮನ ಚೇತರಿಕೆ ಸಂತೋಷ ತಂದಿದ್ದರೂ ಸಹ ಮನಸ್ಸಿನಲ್ಲಿ ಏನೋ ಕಳವಳ.

ತನ್ನಕ್ಕನ ಸಾವಿನ ಸುತ್ತ ಸುಳಿಯುತ್ತಿದ್ದ ಉತ್ತರವೇ ಇಲ್ಲದ ಸಹಸ್ರ ಪ್ರಶ್ನೆಗಳ ಶರಶಯ್ಯೆ ಮೇಲೆ ಆತ ಸುಖನಿದ್ರೆ ಮಾಡುವುದಾದರೂ ಹೇಗೆ ಪಾಪ.

ಮದುವೆಯೆಂಬುದು ಒಂದು ಪವಿತ್ರ ಬಂಧನ. ಬರಿ ಮೈ ಬೆಳೆದರೆ ಸಾಲದು, ಮನಸ್ಸಿನ ಪ್ರಬುದ್ಧತೆ ಕೂಡ ಅತ್ಯಗತ್ಯ. ಬಾಲ್ಯ ವಿವಾಹ ಒಂದು ಮಹಾಪರಾಧ. ಒಂದು ಮಗುವಿನ ಮನಸ್ಸಿಗೆ ವೈವಾಹಿಕ ವಹಿವಾಟು ದಾಂಪತ್ಯದ ಒಡನಾಟವೆಲ್ಲಾ ತಿಳಿದಿರಲು ಮಾತ್ರ ಹೇಗೆ ಸಾಧ್ಯ? ಮುಗ್ಧ ಮನಕ್ಕೆ ಮನೆ ಸಂಭಾಳಿಸಲು ಹೇಗೆ ಸಾಧ್ಯವಾದೀತು? ಇದನ್ನೆಲ್ಲ ನನ್ನಮ್ಮ ನನ್ನಜ್ಜ ಯಾಕೆ ಯೋಚಿಸಿರಲಿಲ್ಲ? ಪಾಪ ನನ್ನಕ್ಕ ಇವರು ಮಾಡಿದ ಆತುರದ ಅಚಾತುರ್ಯದ ನಿರ್ಧಾರಕ್ಕೆ ನಿರ್ದಾಕ್ಷಿಣ್ಯವಾಗಿ ಸತ್ತಳಾ? ಅಮ್ಮ ತನ್ನಪ್ಪನ ನಿರ್ಧಾರದ ಹೇರಿಕೆಯನ್ನು

ಅಲ್ಲಗೆಳೆಯಲಾಗದಷ್ಟು ಅಸಾಹಯಕಳಾಗಿದ್ದಳಾ? ಹಾಗಾದರೆ ಭುಜದೆತ್ತರಕ್ಕೆ ಹೆಣ್ಣೊಂದು ಬೆಳೆದು ನಿಂತಾಕ್ಷಣ ಆಕೆಯ ಮನಸ್ಥಿತಿಯನ್ನೂ, ಗಮನಿಸದೆ ವಯಸ್ಸನ್ನೂ ಲೆಕ್ಕಿಸದೆ ಮದುವೆ ಮಾಡಿ ಬಿಡುವ ನಿರ್ಧಾರ ತೆಗೆದುಕೊಂಡನೇ ನನ್ನಜ್ಜ? ಚಿಕ್ಕ ವಯಸ್ಸಿನವಳೆಂದು ಗೊತ್ತಾದ ಮೇಲೂ ಮದುವೆಗೆ ಒಪ್ಪಿದ ದಿನಕರ ಸುಶಿಕ್ಷಿತ ಅನಕ್ಷರಸ್ಥನಲ್ಲವೇ? ಅಕ್ಕನನ್ನು ಹೊರಗೆ ಸುತ್ತಾಡಿಸಲು ಕರೆದೊಯ್ದ ದಿನಕರ ಆಕೆ ಹೇಗಾದರೂ ನಾಳೆ ನನ್ನ ಪತ್ನಿಯಾಗುವವಳು, ಹೇಗೂ ಮದುವೆ ನಿಶ್ಚಯವಾಗಿದೆ ಎಂದು ಕೊಂಚ ಸಲುಗೆಯಿಂದ ವರ್ತಿಸಿ ಅಪ್ಪಿ ಮುದ್ದಿಸಲೇನಾದರೂ ಪ್ರಯತ್ನಿಸಿದ್ದೂ, ಅದು ನನ್ನ ಅಕ್ಕನ ಮನಸ್ಸಿಗೆ ಅಸಹ್ಯವೆನಿಸಿ ಏನಾದರು ಸಾವಿಗೆ ತುತ್ತಾದಳೆ? ಪಾಪ ಎಳೆ ಮನಸ್ಸಿಗೆ ಎಷ್ಟು ಗಾಯವಾಗಿರಬಹುದು ಎಂದೆಲ್ಲಾ ಯೋಚಿಸುತ್ತ ತಬ್ಬಿಬ್ಬಾಗಿ ಕುಳಿತ ಸುಹಾಸನ ಕಂಗಳಲ್ಲಿ ಕಂಬನಿ ಧಾರಾಕಾರವಾಗಿ ಹರಿಯತೊಡಗಿತು.

ಅಧ್ಯಾಯ 12

ಅನ್ನಪೂರ್ಣಮ್ಮ

ಸುಹಾಸ ರಾತ್ರಿ ಎಲ್ಲಾ ನಿದ್ರೆ ಇಲ್ಲದೆ ಅನುಭವಿಸಿದ ನರಕ ಯಾತನೆಯನ್ನು ಮೆಲುಕು ಹಾಕುತ್ತಾ ಭಾರವಾದ ಹೆಜ್ಜೆ ಇಡುತ್ತ ಬಚ್ಚಲ ಕಡೆ ಹೊರಟ. ಅಮ್ಮ ಮಾಡಿದ ಕಾಫಿ ಹೀರಿದರೆ ಎಲ್ಲಾ ಸರಿ ಹೋಗಬಹುದೆಂದು ಭಾವಿಸಿ ಅಡುಗೆ ಮನೆ ಬಾಗಿಲು ಸಮೀಪಿಸುವಷ್ಟರಲ್ಲಿ ಅಜ್ಜಿ ಮೊಮ್ಮಗಳ ನಗು ಕೇಳಿ ಮನಸ್ಸು ಮತ್ತಷ್ಟು ಹಗುರವೆನಿಸಿತು .ಕಾಫಿ ಕೇಳುವ ಮನಸ್ಸಾಗದೆ ರೂಮಿನ ಕಡೆ ನಡೆದ ಸುಹಾಸ ರೂಮಿನೊಳಗೆ ಹೋದುದನ್ನು ನೋಡಿದ ಸುಜಾತ ಮಗಳ ಮದುವೆ ವಿಷಯ ಪ್ರಸ್ತಾಪಿಸಲು ಇದೇ ಒಳ್ಳೆಯ ಸಮಯವೆಂದು ಭಾವಿಸಿ ಒಳ ನಡೆದಳು. ಸುಹಾಸನಿಗೆ ಹೆಂಡತಿಯನ್ನು ಕಂಡೊಡನೆ ಕಾಫಿ ನೆನಪಾಯಿತು "ಹೇ ಸುಜಿ ಪ್ಲೀಸ್ ಕಾಫಿ ತಗೊಂಡ್ ಬಾರೇ... ಬೇಗ ಬಾ" ಎನ್ನುತ್ತಿದ್ದಂತೆ ಸುಜಾತ ಮರು ಮಾತನಾಡದೆ ಅಡುಗೆ ಕೋಣೆಗೆ ಹೋದಳು. ಅಲ್ಲಿ ಯಾರೂ ಇರದಿದ್ದರಿಂದ ಲಗು ಬಗೆಯಿಂದ ಎರಡು ಲೋಟ ಕಾಫಿ ತಯಾರಿಸಿ ರೂಮಿಗೆ ಹೋಗಿ ಸುಹಾಸನ ಕೈಗಿಟ್ಟು ತಾನೂ ಕಾಫಿ ಹೀರುತ್ತಾ ಸುಹಾಸನ ಪಕ್ಕದಲ್ಲಿ ಕುಳಿತಳು. ಗಂಡ ಒಳ್ಳೆ ಮೂಡಲ್ಲಿ ಇರುವುದಂತೂ ಹೌದು. ಆದರೆ ವಿಷಯ ಹೇಗೆ ಪ್ರಸ್ತಾಪಿಸು ವುದೆಂದು ಯೋಚಿಸುವಷ್ಟರಲ್ಲಿ ಸುಹಾಸ 'ನೋಡೇ ಸುಜಿ... ಮೊಮ್ಮಗಳ ಪ್ರೀತಿ ಮತ್ತು ಸಲುಗೆಯಿಂದ ಅಮ್ಮ ಅಷ್ಟೋಇಷ್ಟೋ ಚೇತರಿಸಿಕೊಳ್ಳುತ್ತಿದ್ದಾಳೆ. ಆ ದಿನಕರ ಹೇಳಿದ ಪ್ರಕಾರ ಅಕ್ಕನ ವಿಷಯ ಅಮ್ಮನಿಗೆ ಬಿಟ್ಟರೆ ಬೇರೆ ಯಾರಿಗೂ ಗೊತ್ತಿದ್ದಂತಿಲ್ಲ ಆ ವಿಷಯ ಅಮ್ಮನಲ್ಲಿ ಪ್ರಸ್ತಾಪಿಸಿದರೆ ಅಮ್ಮ ಮೌನಕ್ಕೆ ಜಾರುವುದರೊಂದಿಗೆ ಮೊದಲಿನಂತಾದರೂ ಆಶ್ಚರ್ಯವಿಲ್ಲ. ಏನೇ ಆದರೂ ಸತ್ತ ಅಕ್ಕ ಮರಳಿ ಬರುವುದಿಲ್ಲ ಅಮ್ಮ ಚೆನ್ನಾಗಿರುವುದಷ್ಟೇ ಮುಖ್ಯ. ಅದಕ್ಕಾಗಿ

ನಾನೊಂದು ನಿರ್ಧಾರಕ್ಕೆ ಬಂದಿದ್ದೇನೆ". ಹೀಗೆ ಸುಹಾಸ ಹೇಳ್ತಾ ಹೋಗ್ತಿದ್ರೆ ಸುಜಾತ ಅವಳದೇ ಆದ ಚಿಂತೆಯಲ್ಲಿ ಮುಳುಗಿ ಹೋಗಿರ್ತಾಳೆ. ಸುಹಾಸ ಸುಜಿ ಅಂತ ಕರೆದು ಅಷ್ಟೊಂದು ಪ್ರೀತಿ ತೋರಿಸಿದ್ದು ಯಾಕೆ? ದಿನಕರ ಏನು ಹೇಳಿರ ಬಹುದು? ಅತ್ತೆಗೆ ತಲೆ ಸರಿ ಇಲ್ಲದಿರುವುದು ಸುಳ್ಳೇ? ನಾನು ಹೇಳಬೇಕೆಂದು ಕೊಂಡಿರುವ ವಿಷಯ ಹೇಳುವುದಾದರೂ ಯಾವಾಗ? ಹೀಗೆ ಸುಜಾತಳ ತಲೆಯಲ್ಲಿ ಯೋಚನಾ ಲಹರಿ ಹರಿಯುತ್ತಿರುವಷ್ಟರಲ್ಲಿ ಸುಹಾಸ ಹೆಂಡತಿಯ ಕಡೆ ತಿರುಗಿ "ಲೇ ಸುಜಿ ಏನ್ ಯೋಚನೆ ಮಾಡ್ತಾ ಇದ್ದೀಯಾ? ನಾನು ಮಾತಾಡ್ತಾನೇ ಇದೀನಿ ನೀನು ಸುಮ್ನೆ ಇದಿಯಲ್ಲ?" ಎನ್ನಲು ಸುಜಾತ ಬೆಚ್ಚಿಬಿದ್ದು "ಏನಿಲ್ಲಾ ರೀ ನೀವು ಹೇಳೋದನ್ನೆಲ್ಲ ಕೇಳಿಸಿಕೊಳ್ಳುತ್ತಿದೀನಿ" ಎಂದಳು. "ಸರಿ ಕೇಳು ಅಮ್ಮನಿಗೆ ಈಗ ಸ್ವಲ್ಪ ಶಕ್ತಿ ಇದೆ ಆರೋಗ್ಯ ಸುಧಾರಿಸುತ್ತಾ ಇದೆ. ಅದಕ್ಕೆ ಅಮ್ಮನ್ನ ತೀರ್ಥ ಯಾತ್ರೆಗೆ ಕಾಶಿ ಕ್ಷೇತ್ರಕ್ಕೆ ಕರ್ಕೊಂಡು ಹೋಗಿ ಬರೋಣ ಅಂತ. ದೇವರ ಅನುಗ್ರಹದಿಂದ ಅಮ್ಮನ ಮಾನಸಿಕ ಸ್ಥಿತಿ ಸರಿ ಹೋಗೋದಕ್ಕೂ ಸಹಾಯ ಆಗಬಹುದು ಅಂತ ನನ್ನ ಅನಿಸಿಕೆ ನೀನು ಬರ್ತಿಯಲ್ಲ?" ಸುಜಾತ ತಬ್ಬಿಬ್ಬಾಗಿ "ನಾನಾ?" ಅಂತ ಅರಳು ಕಣ್ಣಿನಿಂದ ನೋಡಿದಳು. ಸ್ವಲ್ಪ ಹೊತ್ತು ಇಬ್ಬರಲ್ಲೂ ಮೌನ ಆವರಿಸಿತು ಮೌನಂ ಸಮ್ಮತೇ ಲಕ್ಷಣಂ ಅಂತ ಭಾವಿಸಿ ಸುಹಾಸ ಮುಂದುವರೆದು ಸುಜಾತಾಳ ಹತ್ತಿರ ಸರಿದು ಕುಳಿತು ಬೆನ್ನ ಮೇಲೆ ಕೈ ಆಡಿಸುತ್ತಾ ಮಾತು ಮುಂದುವರೆಸಿದ. ಕೇಳೋದೇ ಬೇಡ ಹೆಚ್ಚಾಗಿ ಹೆಂಗಸರ ಹಣೆಬರಹವೇ ಇಷ್ಟು ಗಂಡ ಪ್ರೀತಿ ತೋರಿಸಿದರೆ ಕ್ಲೀನ್ ಬೋಲ್ಡ್ ಆಗಿಬಿಡುತ್ತಾರೆ

❖ ❖ ❖

ಅಮ್ಮನಿಗೆ ಚಿಕ್ಕ ವಯಸ್ಸಲ್ಲಿ ಮದುವೆ ಆಯಿತಂತೆ ಮನೆ ತುಂಬಾ ಜನ ಬರೋರು ಹೋಗೋರು ಜಾಸ್ತಿ ಹಿಂದಿನ ಕಾಲದಲ್ಲಿ ಹಾಗೆ ಅಲ್ವಾ? ಅಮ್ಮನನ್ನು ಅಡಿಗೆ ಮನೆ ಸ್ವತ್ತು ಅನ್ನೋ ರೀತಿ ಬಳಸಿಕೊಂಡರಂತೆ. ನಂತರ ಮಕ್ಕಳು.. ನಾನು ನನ್ನ ಅಕ್ಕ. ನಮ್ಮನ್ನು ಸಾಕೋದರಲ್ಲಿ ಸಂತೋಷ ಕಂಡವಳು, ಅಪ್ಪ ಬೇರೆ ಬೇಗ ಹೋಗಿ ಬಿಟ್ರು. ಗಿಳಿ ಸಾಕಿದ ತರ ಸಾಕಿದ ಮಗಳ ಸಾವಿನ ವಿಷಯ ಹೇಗೆ ಅರಗಿಸಿಕೊಂಡಾಳು? ಮನೆ ಬಿಟ್ಟು ಒಂದು ದಿನಕ್ಕೂ ಹೊರಗೆ ಹೋದವಳೇ ಅಲ್ಲ ಆದರೆ ಅಮ್ಮನಿಗೆ ದೇವಸ್ಥಾನ ದೇವರು ಅಂದರೆ ಬಹಳ ಇಷ್ಟ .ಆದ್ದರಿಂದ ಅಮ್ಮ ಒಪ್ಪಬಹುದು ಸುಜಾತ ಹೇಳಬೇಕೆಂದುಕೊಂಡ ವಿಷಯ ಮನದ ಮೂಲೆ ಸೇರಿತು ವಿಚಾರ ಲಹರಿ ಬೇರಡೆ ಹರಿಯ ತೊಡಗಿತ್ತು ನಾನು ಹೋಗಲು ಒಪ್ಪಿಕೊಳ್ಳಲೋ ಬೇಡವೋ? ಒಪ್ಪಿಕೊಂಡರೆ ನವ್ಯ ಒಬ್ಬಳೇ ಆಗ್ತಾಳೆ, ಅವರ ಜೊತೆ ಪ್ರಯಾಣಿಸಲು ಮೊದಲ ಬಾರಿ ಸಿಕ್ಕ ಒಂದು ಚಾನ್ಸನ್ನ ಕಳೆದುಕೊಳ್ಳೋದಾ ಏನು ಮಾಡೋದು? ಒಂದೂ ತೋಚದೆ ಗಂಡನೊಂದಿಗೆ ಸ್ವಲ್ಪ ಬಿಗುಮಾನ ಬಿಡದೆ "ಅಲ್ಲರೀ ನಾನ..

ಬಂದರೆ ನವ್ಯ ಒಬ್ಳೇ ಆಗ್ತಾಳೆ. ನೀವಿಬ್ಬರೂ ಹೋಗಿ ಬನ್ನಿ "ಅಂತ ಹೇಳಿ ಏಳಲು ಅನುವಾಗುವಷ್ಟರಲ್ಲಿ "ಅಲ್ವೇ ನಾನು ಅಷ್ಟು ಯೋಚಿಸಿಲ್ಲ ಅನ್ಕೊಂಡ್ಯಾ? ಹಗಲು ಕಾಲೇಜಿಗೆ ಹೋಗ್ತಾಳೆ, ರಾತ್ರಿಗೆ ಪದ್ಮಕ್ಕಗೆ ಬಂದು ಉಳ್ಕೊಳ್ಳೋಕ್ಕೆ ಹೇಳಿದ್ರೆ ಆಯ್ತು. ಅಮ್ಮನ ಈ ಪರಿಸ್ಥಿತಿಯಲ್ಲಿ ನೀನು ನಮ್ಮ ಜೊತೆ ಬರೋದೇ ಸರಿ" ಎಂದ ಸುಜಾತಳಿಗೂ ಅದೇ ಬೇಕಾಗಿತ್ತು. ಸಿಕ್ಕ ಅವಕಾಶ ಮಿಸ್ ಮಾಡಿಕೊಳ್ಳುವುದು ಬೇಡ ಅಂತ ನಿರ್ಧರಿಸಿ 'ಹಾಗೇ ಆಗಲಿ' ಅನ್ನುವಷ್ಟರಲ್ಲಿ ನವ್ಯ ಅಲ್ಲಿಗೆ ಬಂದು ಏನಮ್ಮ ಹಾಗೆ ಆಗಲಿ ಅಂತಿದ್ದೆ. ಅಪ್ಪ ಇವತ್ತು ಆಫೀಸಿಗೆ ರಜಾ ನಾ? ಬೆಳಿಗ್ಗನೇ ಇಬ್ಬರೂ ರೂಮ್ ಸೇರಿ ಬಿಟ್ಟಿದ್ದೀರಾ ಏನಾದ್ರೂ ಸಮಸ್ಯೆನಾ ಅಂತ ಪ್ರಶ್ನೆಗಳ ಸುರಿಮಳೆ ಸುರಿಸಿ ಬಿಡುತ್ತಾಳೆ, ನಿನ್ನ ಅಪ್ಪನ ಕೇಳ್ಕೋ ಅಂತ ಹೇಳಿ ಹೊರ ನಡೆದು ಬಿಡುತ್ತಾಳೆ ಸುಜಾತ.

"ಬಾ ಮಗಳೇ ಸರಿಯಾದ ಸಮಯಕ್ಕೆ ಬಂದಿದೀಯಾ. ಮೊದಲು ಕೂತ್ಕೋ, ಆಮೇಲೆ ನಿನ್ನ ಎಲ್ಲ ಪ್ರಶ್ನೆಗಳಿಗೆ ಉತ್ತರಿಸುತ್ತೇನೆ" ಅಂತ ಪ್ರೀತಿಯಿಂದ ಪಕ್ಕದಲ್ಲಿ ಕೂರಿಸಿಕೊಳ್ಳುತ್ತಾನೆ ಮೊದಲಿನಿಂದಲೂ ಅಪ್ಪನೊಂದಿಗೆ ಸಲಿಗೆ ಹೆಚ್ಚಾಗಿರುವುದರಿಂದ.

ಸುಹಾಸ ತನ್ನ ಹೆಂಡತಿಗೆ ಹೇಳಿದ ಎಲ್ಲಾ ವಿಷಯಗಳನ್ನು ಮಗಳಿಗೆ ಹೇಳಿ ಇನ್ಯಾವ ಸಮಸ್ಯೆಯೂ ಇಲ್ಲ. ನಿನ್ನ ಅಮ್ಮ ಅದನ್ನೇ ಹಾಗೆ ಆಗಲಿ ಅಂದಿದ್ದು. ನಾನು ಅಮ್ಮನ್ನ ಒಪ್ಪಿಸಿ ಮುಂದಿನ ಕೆಲಸಕ್ಕೆ ಅಣಿಯಾಗಬೇಕಲ್ಲ ಅದಕ್ಕೆ ಇವತ್ತು ಆಫೀಸಿಗೆ ರಜೆ ಮಾಡಿದ್ದೀನಿ. ನೀನು ಕಾಲೇಜಿಗೆ ಹೋಗಬೇಕಾ? ನವ್ಯ "ಇಲ್ಲ ಅಪ್ಪ ನಂಗೆ ಈ ವಾರ ಪೂರ್ತಿ ರಜೆ ಇದೆ ನಾನು ನಿನಗೆ ಸಹಾಯ ಮಾಡ್ತೀನಿ" ಅಂತ ಹೇಳಿ ಅಪ್ಪನನ್ನು ಕರ್ಕೊಂಡು ಅಜ್ಜಿ ಹುಡುಕಿಕೊಂಡು ಹೊರಟಳು "ಅಜ್ಜಿ ಅಜ್ಜಿ" ನವ್ಯಳ ಕೂಗು ಇಡೀ ಊರಿಗೆ ಕೇಳೋ ತರಹ ಇತ್ತು. ಸುಬ್ಬಜ್ಜಿ ಹಿತ್ತಲಲ್ಲಿ ಏನೋ ಕೆಲಸ ಮಾಡುತ್ತಿದ್ದವಳು, ಗಾಬರಿಯಿಂದ ಹೊರಬಂದು ನೋಡಿದರೆ ಅಪ್ಪ ಮಗಳು ಇಬ್ಬರೂ ಒಟ್ಟಿಗೆ ಬರುವುದನ್ನು ನೋಡಿ ಮತ್ತಷ್ಟು ಗಾಬರಿಯಿಂದ ಹತ್ತಿರ ಬಂದು "ಏನಾಯ್ತೆ ನವ್ಯ "ಅಂದರು "ಅಮ್ಮ ನೀ ಗಾಬರಿಯಾಗ್ಬೇಡ ಅವಳ ಸ್ವಭಾವ ಹಾಗೆ ಅಜ್ಜಿ ಕರಿ ಅಂದ್ರೆ ಊರು ಒಂದು ಮಾಡಿಬಿಡುತ್ತಾಳೆ ಬಾ ಜಗಲಿಯಲ್ಲಿ ಕೂತು ಮಾತಾಡೋಣ "ಅಂತ ಅಪ್ಪ ಮಗಳು ಇಬ್ಬರೂ ಒಂದೊಂದು ಕೈಹಿಡಿದು ಕರ್ಕೊಂಡು ಹೋಗಿ ತಮ್ಮ ಮಧ್ಯೆ ಕೂರಿಸ್ಕೊಳ್ತಾರೆ. ಅಜ್ಜಿಗೆ ಅಚ್ಚರಿಯೋ ಅಚ್ಚರಿ! ಏನಿವತ್ತು ಮಗನ ಪ್ರೀತಿ ಜಾಸ್ತಿ ಆಗಿರೋದು ನನ್ನಿಂದ ಏನಾದರೂ... "ನನಗೆ ತುಂಬಾ ಕೆಲಸ ಇದೆ ಕಣ್ರೋ.. ಸುಹಾಸ" "ಇರ್ಲಿ ಬಿಡಮ್ಮ ನಿನಗೆ ಯಾವಾಗ ಕೆಲಸ ಇರಲ್ಲ ಹೇಳು ನಿನ್ನ ಹತ್ರ ಸ್ವಲ್ಪ ಮಾತಾಡಬೇಕು ಇರು"

ನವ್ಯ "ಅಪ್ಪ ನಾನೇ ಹೇಳ್ತೀನಿ" ಅಂತ ಶುರು ಮಾಡೇ ಬಿಟ್ಲು "ಅಜ್ಜಿ ನಿಂಗೆ ಅಪ್ಪ ಏರೋಪ್ಲೇನ್ ಹತ್ತಿಸ್ತಾನಂತೆ." ಅಜ್ಜಿ ಮುಖ ಮುಖ ನೋಡಿದರು "ಏ ನವ್ಯ ನೀನು

ಏನೇನೋ ಹೇಳಿ ಅಮ್ಮನ ಗಾಬರಿ ಪಡಿಸಬೇಡ ನಾನು ಹೇಳ್ತೀನಿ "ಅಮ್ಮ ನಾನು ಸುಜಾತ ನಿನ್ನನ್ನ ಕರ್ಕೊಂಡು ಕಾಶಿ ಯಾತ್ರೆ ಮಾಡಿಕೊಂಡು ಬರೋಣ ಅಂತ ಯೋಚಿಸಿದ್ದೇವೆ."

"ನೋಡು ಸುಹಾಸ, ನೀವು ಹೋಗಿ ಬನ್ನಿ ನಾನು ಬರಲ್ಲ ನಾನು ಧರೆ ಮೇಲಿನ್ನ ಮರ ನನ್ನ ಕೈಲಾದ ಕೆಲಸ ಮಾಡಿಕೊಂಡು ರಾಮಕೃಷ್ಣಾ ಅಂತ ಹೇಳಿ ಮನೇಲಿ ಇರ್ತೀನಪ್ಪ. ಇತ್ತೀಚೆಗೆ ನನ್ನ ಆರೋಗ್ಯ ಕೂಡ ಅಷ್ಟು ಚೆನ್ನಾಗಿಲ್ಲ. ವಯಸ್ಸು ಆಯ್ತಲ್ಲ ನನ್ನ ಪಾಡಿಗೆ ನನ್ನ ಬಿಟ್ಟುಬಿಡಿ ಅಲ್ಲದೆ ನವ್ಯ ಕೂಡ ಒಬ್ಬಳೇ ಆಗ್ತಾಳಲ್ಲ". "ನನ್ನ ಚಿಂತೆ ಬಿಡಜ್ಜಿ ನಾನು ದೊಡ್ಡವಳಾಗಿದ್ದೇನೆ ನಿನಗೆ ದೇವರು ದೇವಸ್ಥಾನ ಅಂದ್ರೆ ಇಷ್ಟ ಅಲ್ವಾ ..ಹೋಗಿ ಬಾರಜ್ಜಿ ಅಮ್ಮ ಅಪ್ಪ ಮನಸ್ಸು ಮಾಡಿದ್ದೇ ದೊಡ್ಡದು. ಚೆನ್ನಾಗಿ ಕರ್ಕೊಂಡ್ ಹೋಗ್ ಬರ್ತಾರೆ" ಸುಹಾಸ "ನೋಡಮ್ಮ ನನ್ನ ಆಫೀಸಲ್ಲಿ ಮೂರು ವರ್ಷಕ್ಕೊಂದು ಸಾರಿ ಪ್ರವಾಸ ಭತ್ಯೆಅಂತ ಕೊಡ್ತಾರೆ. ಅದನ್ನು ಮಂಜೂರು ಮಾಡಿಸಿಕೊಂಡಿದ್ದೇನೆ ನಂಗೆ ದುಡ್ಡು ಕಾಸಿನ ತೊಂದರೆ ಕೂಡ ಇಲ್ಲ ನೀನ್ ಆಗಲ್ಲ ಅಂತ ಮಾತ್ರ ಹೇಳಬೇಡ ನಾನು ಮುಂದಿನ ತಯಾರಿ ಮಾಡಿಕೊಳ್ಳುತ್ತೇನೆ ನೀನು ತಯಾರಾಗು" ಅಂತ ಹೇಳಿ ಮರು ಮಾತಿಗೆ ಅವಕಾಶ ಕೊಡದೆ ಹೊರ ನಡೆದ. ಈ ಕಡೆ ನವ್ಯ ಅಜ್ಜಿಯನ್ನು ಪುಸಲಾಯಿಸಿದ್ದೇ ಪುಸಲಾಯಿಸಿದ್ದು. ಅವಳಿಗೆ ಒಳ ಒಳಗೇ ಖುಷಿ, ಜೀವನ್ ಜೊತೆ ಹೆಚ್ಚು ಸಮಯ ಕಳೆದು ಅವನನ್ನು ತನ್ನ ಹತ್ತಿರ ಮಾಡಿಕೊಳ್ಳುವುದಕ್ಕೆ ಇದೇ ಒಳ್ಳೆಯ ಸಮಯ ಅಂತ ಯೋಚಿಸಿ ಆ ಕ್ಷಣದಿಂದ ಕನಸು ಕಾಣಲು ಪ್ರಾರಂಭಿಸುತ್ತಾಳೆ.

ಇತ್ತ ಹೋಗುವ ಎಲ್ಲಾ ಸಿದ್ಧತೆಗಳು ಭರದಿಂದ ಸಾಗಿದವು. ನೆಂಟರಿಷ್ಟರಿಗೆಲ್ಲ ತಿಳಿಸಲು ಒಂದು ಸಣ್ಣ ಸಮಾರಂಭ ಔತಣಕೂಟವನ್ನು ಭಾನುವಾರಕ್ಕೆ ಏರ್ಪಾಟು ಮಾಡಲಾಯಿತು ಸುಜಾತ ಎಲ್ಲರಿಗೂ ಹೇಳಿಕೆ ಮಾಡುವ ವ್ಯವಸ್ಥೆ ಮಾಡಿದಳು. ಸುಬ್ಬಜ್ಜಿ ತಾನು ಪದ್ಮಳನ್ನು ಸೇರಿಸಿಕೊಂಡು ಅಡುಗೆ ಮಾಡುವುದಾಗಿ ಹೇಳಿದರು ಅವರಿಗೆ ಮೊದಲಿನಿಂದಲೂ ಒಬ್ಬರು ಸಹಾಯಕ್ಕಿದ್ರೆ ಸಾಕು ಎಷ್ಟು ಜನಕ್ಕಾದರೂ ರುಚಿಕರವಾದ ಅಡುಗೆ ಮಾಡುವ ಸಾಮರ್ಥ್ಯ ಇದೆ ಅಂತ ಗೊತ್ತು. ಅದಕ್ಕೆ ಸುಹಾಸ ಒಪ್ಪಿಕೊಂಡ.

ಆ ಸಂಸಾರದಲ್ಲಿ ಇಂತಹ ಸಂಭ್ರಮದ ದಿನಗಳು ಬಂದು ಬಹಳ ವರ್ಷಗಳೇ ಆಗಿತ್ತು. ನವ್ಯಳಿಗೆ ಎಲ್ಲರೂ ಲಗು ಬಗೆಯಿಂದ ಓಡಾಡುವುದನ್ನು ನೋಡುವುದೇ ಒಂದು ಖುಷಿ. ಅಜ್ಜಿಗೆ ಏನು ಬೇಕು ನೋಡಿ ಎಲ್ಲವನ್ನು ಪ್ಯಾಕ್ ಮಾಡಿ ಮುಗಿಸಿ ಅಮ್ಮನಿಗೂ ಸಹಕರಿಸಿದಳು ಇಷ್ಟರ ಮಧ್ಯೆ ಜೀವನ್‌ನನ್ನು ಔತಣಕೂಟಕ್ಕೆ ಕರೆಯಲು ಮರೆಯಲಿಲ್ಲ. ಇತ್ತ ಸುಹಾಸ, ಸುಜಾತಳ ಒತ್ತಾಯದ ಮೇರೆಗೆ, ಡಾ. ಭರತ್ ಮತ್ತು ಅಭಿಲಾಶ್‌ರನ್ನು ಕರೆಯುತ್ತಾನೆ ಸುಬ್ಬಜ್ಜಿ ದಾರಿ ಖರ್ಚಿಗೆಂದು

ಚಕ್ಕುಲಿ ಕೋಡುಬಳೆ ನಿಪ್ಪಟ್ಟು ಕುಟ್ಟವಲಕ್ಕಿ ತಯಾರಿಸಲು ಮರೆಯಲಿಲ್ಲ. ಕರಿದ ತಿಂಡಿ ವಾಸನೆ ಮೂಗಿಗೆ ಬಡಿದೊಡನೆ "ಏಯ್ ಅಜ್ಜಿ ಎಲ್ಲ ತಗೊಂಡು ಹೋಗಬೇಡ ನನಗೂ ಸ್ವಲ್ಪ ಇಡು ನೀವು ಬರುವ ತನಕ ಬಾಯಾಡಿಸೋಕೆ" ಅಂತ ರೂಮಿನಿಂದಲೇ ಕೂಗಿ ಹೇಳಿದ್ದು ಕೇಳಿ ಅಜ್ಜಿ "ಹುಚ್ಚು ಹುಡುಗಿ ನಿನಗೆ ಇಡದೆ ತಿಂದರೆ ನಮಗಾದರೂ ಜೀರ್ಣ ಆದೀತೇನೆ?". ಏನೇ ಮಾಡಿದರೂ ದೇವರಿಗೆ ಇಡ್ತಿನೋ ಇಲ್ಲವೋ? ಇವಳಿಗೆ ಮೊದಲ ನೈವೇದ್ಯ ಅನ್ನೋತೀರೋ ಅಷ್ಟರಲ್ಲಿ ಸುಹಾಸ ಅಲ್ಲಿ ಬಂದವನೇ ದೇವರಿಗೆ ಏನಾದರೂ ನೈವೇದ್ಯ ಮಾಡಬೇಕೆನಮ್ಮ ಅಂತ ಕೇಳಿದ "ಓಹ್ ಸುಹಾಸ, ಬಂದ್ಯಾ ಬಾಪ್ಪಾ.. ನಿನ್ನ ಮಗಳು ಬೆಳಿಗ್ಗೆಯಿಂದ ಕೋಣೆ ಸೇರಿ ಬಿಟ್ಟಿದ್ದಾಳೆ ಅವಳಿಗೆ ಈ ತಟ್ಟೆಯಲ್ಲಿ ಇರೋದನ್ನ ತಗೊಂಡು ಹೋಗಿ ಕೊಡು ಹುಚ್ಚು ಖೋಡಿ. ಊರಿಗೆಲ್ಲ ಕೇಳೋತರ ಅಲ್ಲಿಂದಲೇ ಮಾತಾಡುತ್ತೆ 'ಸುಹಾಸ, ಈಗ ಮೊಮ್ಮಗಳ ಕಾಲ ನಮ್ಮನ್ನ ಕೇಳೋರ್ಯಾರು ಅಂತ ಗೊಣಗಿಕೊಳ್ಳುತ್ತ ಪ್ಲೇಟ್ ಹಿಡ್ಕೊಂಡು ರೂಮಿನ ಕಡೆ ಹೊರಟ "ಅಜ್ಜೀ.. ಯಮ್ಮೀ..." ಅಂತ ಅಲ್ಲಿಂದಲೇ ಉತ್ತರ ಬಂತು.

ಭಾನುವಾರ ಬಂದೆ ಬಿಡ್ತು ಬೆಳಿಗ್ಗೆ ಪುರೋಹಿತರು ಬಂದು ಪಾರಾಯಣ ಮುಗಿಸಿ ಹೋದರು ನವ್ಯ ಇಂದು ಹೆಚ್ಚು ಆಸಕ್ತಿವಹಿಸಿ ಸಿಂಗರಿಸಿಕೊಂಡಿದ್ದಳು. ಅವಳು ಮತ್ತು ಅವಳ ಸ್ನೇಹಿತೆ ಸರಿತ ಒಟ್ಟಾಗಿ ಓಡಾಡಿಕೊಂಡು ಬಂದೋರನ್ನೆಲ್ಲ ಉಪಚರಿಸಿದರು ಸುಜಾತ ಆಗಾಗ ಕಾಣಿಸಿಕೊಂಡು ತನಗೆ ಬೇಕಾದವರನ್ನು ಮಾತಾಡಿಸುತ್ತಾ ಬೇರೆಯವರ ಕಡೆ ನೋಡಿ ನಕ್ಕು ಸುಮ್ಮನಾಗುತ್ತಿದ್ದಳು ಅವಳಿಗೆ ಡಾ. ಭರತ್ ಮಾತ್ರ ಬಂದಿದ್ದು ಸ್ವಲ್ಪ ಸಮಾಧಾನ ತಂದಿತ್ತು. ಜೀವನ್ ಬಂದಿದ್ದನ್ನು ನೋಡಿ ನವ್ಯಳ ಸಂತೋಷ ಇಮ್ಮಡಿಸಿತ್ತು. ಜೀವನ ನೆಡೆ ಒಂದು ನೋಟ ಬೀರಿ ಸಂತೋಷವನ್ನು ಕಣ್ಣಲ್ಲೇ ವ್ಯಕ್ತಪಡಿಸಿದಳು ಬಾಯಿಂದ ಮಾತೇ ಬರಲಿಲ್ಲ. ಭರತ್ ಸುಹಾಸನನ್ನು ಹುಡುಕಿಕೊಂಡು ಒಳ ನಡೆದು ಅಡುಗೆ ಕೋಣೆಗೆ ಬಂದ. ಸುಹಾಸ ಊಟದ ತಯಾರಿ ಮಾಡುತ್ತಿರುವುದನ್ನು ನೋಡಿ 'ನಾನು ಸಹಾಯ ಮಾಡಲೇ' ಎಂದ. ಸುಹಾಸ ಬೇಡ ಸಾರ್ ಎನ್ನುವಷ್ಟರಲ್ಲಿ ಅಲ್ಲೇ ಇದ್ದ ಪದ್ಮಕ್ಕ "ಯಾಕೋ ಸುಹಾಸ ಸಾರ್ ಅಂತ ಕರೀತಿಯ. ಅವನೇನು ಬೇರೇನೇ" ಅನ್ನಲು ಸುಬ್ಬಜ್ಜಿ ಕೂಡ "ಹೌದು ಪದ್ದುಗೆ ನೆಂಟರು ಅಂದರೆ ನಮಗೂ". ಭರತ್ ಸುಹಾಸ ತೆಗೆದುಕೊಂಡ ತೀರ್ಮಾನಕ್ಕೆ ಬೆಂಬಲ ಸೂಚಿಸುವ ಹಾಗೆ ಮತ್ತೊಮ್ಮೆ ಸುಬ್ಬಜ್ಜಿ ಅಡಿಗೆ ಸವಿಯಲು ಅವಕಾಶ ಮಾಡಿ ಕೊಟ್ಟಿದ್ದಕ್ಕೆ ಥ್ಯಾಂಕ್ಸ್ ಹೇಳಿದ. ಅಷ್ಟರಲ್ಲಿ ಸುಜಾತ ಜ್ಯೂಸ್ ಗ್ಲಾಸ್ ತಂದು ಭರತನ ಕೈಯಲ್ಲಿ ಕೊಟ್ಟು ಯೋಗಕ್ಷೇಮ ವಿಚಾರಿಸುತ್ತ ನಿಮ್ಮ ಅಭಿಲಾಶ್.. ಅನ್ನುವಷ್ಟರಲ್ಲಿ "ಓ ಅವನಿಗೆ ಯಾವುದೋ ಕೆಲಸ ಇತ್ತು ಇನ್ನೊಮ್ಮೆ ಕರ್ಕೊಂಡ್ ಬರ್ತೀನಿ ಬಿಡಿ" ಅಂದ. ಜೀವನ್‌ಗೆ ಒಬ್ಬನೇ ಕೂತು ಬೇಸರ ಬಂದು ನವ್ಯಳನ್ನು

ಕರೆದ. ಸ್ನೇಹಿತೆಯರಿಬ್ಬರೂ ಹೋದರು "ಏಯ್ ಸರಿತಾ ನವ್ಯಗೆಸೋ ಕೆಲಸ ಇರುತ್ತೆ ನಿಂಗೇನ್ ಕೆಲಸ ನಂಗೆ ಕಂಪನಿ ಕೊಡು" ಅಂತ ಪಕ್ಕದ ಕುರ್ಚಿ ಸರಿಸಲು ನವ್ಯ ಕೂಡ "ನನಗೇನು ಕೆಲಸ ಇಲ್ಲಪ್ಪ" ಅಂತ ಪಕ್ಕದಲ್ಲಿದ್ದ ಇನ್ನೊಂದು ಕುರ್ಚಿಯಲ್ಲಿ ಕೂರುತ್ತಾಳೆ. ಅಷ್ಟರಲ್ಲಿ ಸುಹಾಸ ಕೈ ಮುಗಿದು ಎಲ್ಲರನ್ನೂ ಊಟಕ್ಕೆ ಏಳಿ ಅಂತಾನೆ. ನವ್ಯಗೆ ರಸಭಂಗವಾದ ಅನುಭವವಾಯಿತು. ಸುಹಾಸನಿಗೆ ಬಂದವರಲ್ಲಿ ಒಬ್ಬ ವ್ಯಕ್ತಿ ಮಾತ್ರ ಪರಿಚಯವಿರಲಿಲ್ಲ. ಆದರೂ ಹೇಗೆ ಕೇಳುವುದೆಂದು ನಕ್ಕು ಸುಮ್ಮನಾದ. ಆದರೆ ಆ ವ್ಯಕ್ತಿ ನಾನು ಸುಬ್ಬಕ್ಕನ ದೂರದ ಸಂಬಂಧಿ. ನನ್ನ ಹೆಸರು ರಾಮಕೃಷ್ಣ ಅಂತ ಪರಿಚಯ ಮಾಡಿಕೊಂಡು ಊಟಕ್ಕೆ ನಡೆದರು. ಎಲ್ಲರೂ ಊಟ ಮಾಡಿ ಸುಬ್ಬಜ್ಜಿಯ ಅಡುಗೆ ಹೊಗಳಿ ಪ್ರಯಾಣಕ್ಕೆ ಶುಭ ಕೋರಿ ಅವರವರ ಮನೆಗೆ ತೆರಳಿದರು.

ಕಾರ್ಯಕ್ರಮ ಚೆನ್ನಾಗಿ ಆಗಿದ್ದಕ್ಕೆ ಎಲ್ಲರಿಗೂ ಖುಷಿಯಾಗಿತ್ತು. ಎಲ್ಲರಿಗೂ ಆಯಾಸವಾಗಿದ್ದರಿಂದ ಸಂಜೆ ಬೇಗ ಊಟ ಮುಗಿಸಿ ಎಲ್ಲರೂ ಕಾರ್ಯಕ್ರಮದ ಬಗ್ಗೆ ಮಾತಾಡುತ್ತಾ ಕುಳಿತಿದ್ದರು. ಅಷ್ಟರಲ್ಲಿ ಯಾರೋ ಬಾಗಿಲು ಬಡಿದ ಶಬ್ದ! ಸುಹಾಸ ಬಾಗಿಲು ತೆರೆದು ನೋಡಲು ಅದೇ ಅಪರಿಚಿತ ವ್ಯಕ್ತಿ!

ಅಧ್ಯಾಯ 13

ಸುಮಾ ವೆಂಕಟೇಶ್

ಆ ಅಪರಿಚಿತ ವ್ಯಕ್ತಿಯನ್ನು ನೋಡಿ ಸುಹಾಸನಿಗೆ ಆಶ್ಚರ್ಯವಾಯಿತು. ಇವರು ಮಧ್ಯಾಹ್ನ ನಮ್ಮಲ್ಲಿಗೆ ಬಂದ ಅಮ್ಮನ ದೂರದ ಬಂಧುಗಳಲ್ಲವೇ? ಈ ಹೊತ್ತಿನಲ್ಲಿ ಮತ್ತೆ ಬಂದುದೇಕೆ? ಎಂದು ಅವರನ್ನೇ ದಿಟ್ಟಿಸಿ ನೋಡುತ್ತಾ "ನಮಸ್ಕಾರ ಬನ್ನಿ ಬನ್ನಿ" ಎಂದು ಒಳಗೆ ಕರೆದನು. ಅವರು ತುಂಬಾ ಸಂತೋಷದಿಂದ ಒಳ ಬಂದ ನಂತರ ಅವರನ್ನು ಕೂರಲು ಹೇಳಿ "ನೀವು ಅಮ್ಮನ ನೆಂಟರಲ್ಲವೇ.. ಮಧ್ಯಾಹ್ನ ಸಣ್ಣ ಪರಿಚಯವಾಯಿತು ಅಷ್ಟೇ, ಸರಿಯಾಗಿ ಮಾತಾಡಲು ಆಗಿರಲಿಲ್ಲ" ಎಂದು ಅವರ ಹೆಸರನ್ನು ನೆನಪಿಟ್ಟುಕೊಳ್ಳಲು ಪ್ರಯತ್ನಿಸಿ ವಿಫಲನಾಗಿ ತನ್ನನ್ನೇ ಶಪಿಸಿ ಕೊಳ್ಳುತ್ತಾ "ಕ್ಷಮಿಸಿ ನಿಮ್ಮ ಹೆಸರು..." ಎಂದು ತೊದಲಿದನು. ಅವನ ಪೇಚಾಟ ವನ್ನು ನೋಡಿ ನಗು ಬಂದರೂ ಹಸನ್ಮುಖದಿಂದ "ಅಡ್ಡಿ ಇಲ್ಲ. ನಾನು ರಾಮಕೃಷ್ಣ ಅಂತ ನಿಮ್ಮ ಅಮ್ಮ ಸುಬ್ಬಕ್ಕ ಮತ್ತು ನನ್ನ ಪತ್ನಿ ರುಕ್ಮಿಣಿ ಆತ್ಮೀಯರು. ನಮ್ಮ ಊರು ರಾಮಪುರ. ನಿಮ್ಮ ತಾಯಿ ಊರಿನ ಹತ್ತಿರವೇ ನಮ್ಮ ಊರು ನಿಮ್ಮ ತಾಯಿ ಸುಬ್ಬಕ್ಕನೊಟ್ಟಿಗೆ ಸ್ವಲ್ಪ ಮಾತಾಡಬೇಕಿತ್ತು, ಅವರು ಮಲಗಿದ್ದರೆ ನಾಳೆ ಬೆಳಗ್ಗೆಯೇ ಬರುತ್ತೇನೆ" ಎಂದರು. ಸಾಮಾನ್ಯ ಎತ್ತರದ ಅರ್ಧ ನೆರೆತ ತಲೆ ಕೂದಲಿನ ಸುಮಾರು 70ರ ಆಸುಪಾಸಿನಲ್ಲಿರುವ ಸೌಮ್ಯಮೂರ್ತಿಯಂತೆ ಕಾಣುವ ರಾಮಕೃಷ್ಣರನ್ನು ನೋಡಿ ಸುಹಾಸನಿಗೆ ಗೌರವ ಭಾವ ಮೂಡಿತು. ಸುಹಾಸನು "ಹಾಗೇನಿಲ್ಲ ಕರೆಯುತ್ತೇನೆ ಇರಿ" ಎಂದು ಒಳಗೆ ಹೋಗಿ ಸುಬ್ಬಜ್ಜಿಯನ್ನು "ಅಮ್ಮ ಅಮ್ಮ" ಎಂದು ಕರೆದನು

ಇಷ್ಟು ಹೊತ್ತಿನಲ್ಲಿ ಯಾರು ಬಂದಿರೋದು ಎಂದು ಮಾತಾಡಿಕೊಳ್ಳುತ್ತಿದ್ದ ಸುಜಾತ ನವ್ಯ ಸುಹಾಸನನ್ನು ಯಾರು ಬಂದಿರೋದು ಎಂದು ಕೇಳಿದಾಗ ಮತ್ತೆ ಹೇಳುತ್ತೇನೆ ಅಮ್ಮ ಎಲ್ಲಿ ಎಂದು ಕೋಣೆಗೆ ಹೋದನು. ಆಗ ತಾನೆ ಬಚ್ಚಲಿಗೆ ಹೋಗಿಬಂದು ಮಲಗಲು ಅಣಿಯಾಗುತ್ತಿದ್ದ ಸುಬ್ಬಜ್ಜಿ ಯಾರೋ ಅದು ಏನಂತೆ ಎಂದರು. ಸುಹಾಸನು "ಅಮ್ಮ ಹೊರಗೆ ಬಾ. ನಿನ್ನ ನೆಂಟರೊಬ್ಬರು ಬಂದಿದ್ದಾರೆ ರಾಮಕೃಷ್ಣರು ಅಂತ ಮಧ್ಯಾಹ್ನ ಬಂದಿದ್ದರು ನೀನು ನೋಡಿರಬಹುದು ನಿಮ್ಮ ಊರಿನ ಹತ್ತಿರದ ರಾಮಪುರದವರಂತೆ ಏನೋ ಮಾತಾಡಬೇಕಂತೆ" ಎಂದನು ಸುಬ್ಬಜ್ಜಿ ಹೊರಬಂದು ಬಂದವರನ್ನೊಮ್ಮೆ ಪಿಳಿಪಿಳಿ ಪಿಳಿಪಿಳಿ ನೋಡಿದರು ಪರಿಚಯದ ಮುಖವೇ! ಮಧ್ಯಾಹ್ನ ನೋಡಿದಾಗಲೂ ಹಾಗೆ ಅನಿಸಿದ್ದರೂ ಕೆಲಸದ ಗಡಿಬಿಡಿ ನೆಂಟರ ತಮಾಷೆ ಹರಟೆ ಕಾಶೀಯಾತ್ರೆಗೆ ಹೋಗುವ ಸಡಗರದಲ್ಲಿ ಗಮನಿಸದೇ ಹೋದೆನಲ್ಲ ಎಂದೆನಿಸಿತು.

ಸುಬ್ಬಜ್ಜಿ ತುಸು ಸಂಕೋಚದಿಂದ "ಸರಿಯಾಗಿ ಗೊತ್ತಾಗಲಿಲ್ಲ ತಪ್ಪು ತಿಳಿಯಬೇಡಿ ವಯಸ್ಸಾಯ್ತಲ್ಲ ಹಾಳು ಮರೆವು ಕಣ್ಣು ತುಸು ಮಂಜು" ಎಂದು ಹೇಳಿ ಮತ್ತೊಮ್ಮೆ ಅವರನ್ನು ನೋಡಿದರು. ತಟ್ಟನೆ ಹೊಳೆಯಿತು ರಾಮಪುರದ ರಾಮಕೃಷ್ಣ ಎಂದು ಸುಹಾಸ ಹೇಳಿದ್ದನ್ನು ನೆನಪಿಸಿಕೊಳ್ಳುತ್ತ "ನೀವು ರುಕ್ಮಿಣಿ ಯಜಮಾನ್ರಲ್ವೇ?" ಎಂದು ಕೇಳಿದರು ತಕ್ಷಣ ರಾಯರು ಸುಬ್ಬಜ್ಜಿಯ ಕಾಲಿಗೆ ನಮಸ್ಕರಿಸಿ "ಹೌದು ಸುಬ್ಬಕ್ಕ ನಾನೇ ನಿಮ್ಮ ಬಾಲ್ಯದ ಗೆಳತಿ ಗೌರಿ ತಂಗಿ ರುಕ್ಮಿಣಿಯ ಗಂಡ ಮಧ್ಯಾಹ್ನ ನಿಮ್ಮನ್ನು ಮಾತಾಡಿಸಲು ಆಗಲಿಲ್ಲ ಈಗ ಅವೇಳೆಯಲ್ಲಿ ಬಂದು ತೊಂದರೆ ಕೊಡುತ್ತಿದ್ದೇನೆ ಕ್ಷಮಿಸಿ" ಎಂದರು.

ಸುಬ್ಬಜಿಯು ಸಂತಸದಿಂದ "ಕ್ಷಮೆಯ ಮಾತೇಕೆ ರುಕ್ಮಿಣಿ ಹೇಗಿದ್ದಾಳೆ, ಎಷ್ಟು ವರ್ಷವಾಯಿತು ನಿಮ್ಮನ್ನೆಲ್ಲ ನೋಡಿ. ಮಕ್ಕಳು ಹೇಗಿದ್ದಾರೆ? ಏನು ಮಾಡುತ್ತಿದ್ದಾರೆ?" ಹೀಗೆ ಪ್ರಶ್ನೆಗಳ ಸುರಿಮಳೆಗೈದರು ಅಮ್ಮನ ಸಂತೋಷದ ಮುಖ ನೋಡಿ ಸುಹಾಸನಿಗೆ ಆಶ್ಚರ್ಯ! ಇಷ್ಟೊಂದು ಖುಷಿಯಿಂದ ಬಡಬಡಿಸು ತ್ತಿರುವ ಅಮ್ಮನ ಹರುಷಕ್ಕೆ ಕಾರಣರಾದ ನೆಂಟರು ಇಷ್ಟು ದಿನದ ಮೇಲೆ ಬಂದಿದ್ದಾರೆ ಎಂದರೆ ಈಗ ಏನು ವಿಶೇಷ ಇರಬಹುದು ಎಂದು ಯೋಚಿಸು ತ್ತಿರುವಾಗ ಸುಬ್ಬಜ್ಜಿಯು "ನನ್ನ ಬುದ್ಧಿಗಿಷ್ಟು! ಇಲ್ಲೇ ಎಲ್ಲ ಮಾತಾಡೋ ಬದಲು ಒಳಗೆ ಕರೆದುಕೊಂಡು ಬಾ ಸುಹಾಸ" ಅಂತ ಒಳ ಹೋದರು ಸುಹಾಸ ಅವರನ್ನು ಪಡಸಾಲೆಯಿಂದ ನಡುಮನೆಗೆ ಕರೆದು ಕೂರಲು ಹೇಳಿದನು.

ಸುಜಾತ ಮತ್ತು ನವ್ಯರನ್ನು ಅವರಿಗೆ ಪರಿಚಯಿಸಿದನು ಸುಜಾತಳಿಗೆ ಇವರು ಮಧ್ಯಾಹ್ನ ಊಟಕ್ಕೆ ಬಂದದ್ದು ನೆನಪಾಯಿತು ಸುಹಾಸನನ್ನು ಕಣ್ಣಲ್ಲೇ ನೋಡಿ ಏನು ವಿಷಯ ಎಂಬಂತೆ ಕೇಳಿದಳು ಸುಹಾಸನು ಇವರು ಅಮ್ಮನ ದೂರದ

ಬಂಧುಗಳು ನೀನು ಮಧ್ಯಾಹ್ನ ಅವರನ್ನು ನೋಡಿರಬಹುದು ಅಲ್ವಾ ಎಂದಾಗ ಸುಜಾತ ಅವರಿಗೆ ನಮಸ್ಕರಿಸಿ ಹೌದೆಂದು ತಲೆ ಯಾಡಿಸಿದಳು. ಮಗಳು ಎಂದು ನವ್ಯಳನ್ನು ಪರಿಚಯಿಸಿದರು ಸುಬ್ಬಜ್ಜಿಯು ಸ್ವಲ್ಪ ಊಟ ಮಾಡಿ ಏಳಿ ಎಂದರು. ರಾಯರು ತನ್ನದು ಊಟವಾಯಿತು ಎಂದು ಹೇಳಿದಾಗ ಸುಬ್ಬಜ್ಜಿಯು ಸೊಸೆಗೆ ಹಣ್ಣು ಹಾಲನ್ನು ತರಲು ಹೇಳಿದರು .ರಾಮಕೃಷ್ಣರು "ಅಯ್ಯೋ ಏನು ಬೇಡ ಮಧ್ಯಾಹ್ನ ನಿಮ್ಮಲ್ಲಿ ಊಟ ಮಾಡಿದ್ದೇ ಇನ್ನು ಅರಗಿಲ್ಲ. ಸುಗ್ರಾಸ ಭೋಜನ!" ಎಂದು ನಕ್ಕರು. ಆದರೂ ಎಲ್ಲರ ಒತ್ತಾಯದ ಮೇರೆಗೆ ಸುಜಾತ ತಂದಿಟ್ಟ ಬಾಳೆಹಣ್ಣನ್ನು ತಿಂದರು ಹಾಲು ಬೇಡವೆಂದರು. ಎಲ್ಲರಿಗೂ ಒಂದು ತರಹದ ಕುತೂಹಲ ಇವರು ಇಷ್ಟು ದಿನದ ನಂತರ ಬಂದದ್ದೇಕೆ ಮತ್ತು ಏನು ವಿಷಯವಿರ ಬಹುದು ಎಂದು. ರಾಮಕೃಷ್ಣರು ಗಂಟಲು ಸರಿಪಡಿಸಿಕೊಂಡು" ಸುಬ್ಬಕ್ಕ ನಿಮಗೆ ಹಳೆಯದೆಲ್ಲ ನೆನಪಿದೆಯಲ್ಲವೇ. ನಮ್ಮ ಊರಿಗೆ ನೀವು ಬರದೇ ಯಾವುದೋ ಕಾಲವಾಯಿತು ನಮ್ಮ ರುಕ್ಮಿಣಿ ನಿಮ್ಮನ್ನು ಯಾವಾಗಲೂ ನೆನಪಿಸಿಕೊಳ್ಳುತ್ತಿರುತ್ತಾಳೆ. ನೀವು ಆ ಸಮಯದಲ್ಲಿ ಮಾಡಿದ ಸಹಾಯ ನಾವು ಮರೆಯುವುದುಂಟೇ?". ಎಂದು ಒಂದು ಕ್ಷಣ ಮೌನವಾದರು. ಸುಹಾಸ ಸುಜಾತ ನವರಿಗೆ ಒಂದು ಕ್ಷಣ ಗೊಂದಲ ಆಶ್ಚರ್ಯ. ವಿಷಯ ಏನೆಂದು ಅರ್ಥವಾಗದೆ ರಾಯರನ್ನೇ ನೋಡಿದರು. ಸುಬ್ಬಜ್ಜಿಗೆ ಹಳೆಯ ನೆನಪುಗಳು ಒಂದೊಂದಾಗಿ ಕಣ್ಣ ಮುಂದೆ ಬಂದವು. ಗೌರಿಯ ನೆನಪಾಗಿ ಅವರ ಕಣ್ಣುಗಳು ತೇವಗೊಂಡವು. ರಾಮಕೃಷ್ಣರು ಸುಹಾಸನಿಗೆ ಸುಬ್ಬಜ್ಜಿಯ ಸಹಾಯವೇನೆಂದು ಹೇಳಲು ಮುಂದಾದಾಗ ಸುಬ್ಬಜ್ಜಿಯನ್ನು ಗತಕಾಲದ ನೆನಪುಗಳು ಮುತ್ತಿದವು.

❖ ❖ ❖

ಸುಬ್ಬಜ್ಜಿ ಮತ್ತು ಗೌರಿ ದೂರದ ಬಂಧುಗಳು. ಒಟ್ಟಿಗೆ ಆಡಿ ಬೆಳೆದವರು ಆತ್ಮೀಯ ಸ್ನೇಹಿತರು ಮತ್ತು ಒಬ್ಬರನ್ನೊಬ್ಬರು ತುಂಬಾ ಹಚ್ಚಿಕೊಂಡಿದ್ದರು. ಒಬ್ಬರಿಗೆ ನೋವಾದರೆ ಇನ್ನೊಬ್ಬರು ನೋವುಪಡುತ್ತಿದ್ದರು. ಇಬ್ಬರ ಮನೆಯಲ್ಲಿ ಏನೇ ವಿಶೇಷ ತಿಂಡಿ ಮಾಡಿದರೂ ಇಬ್ಬರೂ ಹಂಚಿಕೊಂಡು ತಿಂದರೇ ಸಮಾಧಾನ! ಗೌರಿಗೆ ರುಕ್ಮಿಣಿ ಎಂಬ ಮುದ್ದಿನ ತಂಗಿ ಇದ್ದಳು. ಚಂದದ ಹುಡುಗಿ. ಸುಬ್ಬಜಿಗೆ ಅವಳನ್ನು ಕಂಡರೆ ಏನೋ ಅಕ್ಕರೆ.

ಹೀಗಿರುವಾಗ ಗೌರಿಯ ತಾಯಿ ಮೂರನೇ ಹೆರಿಗೆಯಲ್ಲಿ ಮಗುವಿನೊಟ್ಟಿಗೆ ತೀರಿ ಹೋದಾಗ ಗೌರಿಯ ತಂದೆ ಕಂಗೆಟ್ಟರು. ಸಣ್ಣ ಸಣ್ಣ ಹೆಣ್ಣು ಮಕ್ಕಳ ಜವಾಬ್ದಾರಿ ಮನೆಯ ಕೆಲಸದಲ್ಲಿ ಹೈರಾಣ ಆದರು. ಹಳ್ಳಿಯ ಶಾಲೆಯ ಮೇಷ್ಟರಾದ್ದರಿಂದ ಅವರು ಅಂತಹ ಅನುಕೂಲಸ್ಥರಲ್ಲ. ಸುಬ್ಬಜ್ಜಿಯು ಆಗಾಗ ಇವರ ಮನೆಗೆ ಬರುತ್ತಿದ್ದಳು. ರುಕ್ಮಿಣಿಯನ್ನು ಮುದ್ದು ಮಾಡುತ್ತಿದ್ದಳು ಏನಾದರೂ

ತಿಂಡಿ ತಂದು ಕೊಡುತ್ತಿದ್ದಳು. ಗೌರಿಗೆ ತನ್ನ ಗೆಳತಿ ತಂಗಿಯನ್ನು ಆದರಿಸುವುದನ್ನು ಕಂಡು ತುಂಬಾ ಖುಷಿಪಡುತ್ತಿದ್ದಳು. ತಾಯಿ ಇಲ್ಲದ ಮಕ್ಕಳ ಪರಿಸ್ಥಿತಿ ನೋಡಿ ಸುಬ್ಬಜ್ಜಿಯ ತಾಯಿ ತಂದೆ ಮೇಷ್ಟ್ರಿಗೆ ಅವರ ದೂರದ ಸಂಬಂಧಿ ಹುಡುಗಿಯನ್ನು ಮದುವೆಯಾಗಲು ಸಲಹೆ ಇತ್ತರು. ಬಡತನದ ಸಂಸಾರದ 5 ಹೆಣ್ಣು ಮಕ್ಕಳಿದ್ದ ಮನೆಯ ಮೂರನೇ ಹುಡುಗಿಯನ್ನು ಎಲ್ಲರ ಒತ್ತಾಯದ ಮೇರೆಗೆ ಗೌರಿಯ ತಂದೆ ಮದುವೆಯಾದರು. ಬಂದವಳು ಮಲತಾಯಿಯಾಗದೆ ಹೆತ್ತ ತಾಯಿಯಂತೆ ಗೌರಿ ರುಕ್ಮಿಣಿಯನ್ನು ಸಲಹಿದಳು. ಒಮ್ಮೆ ಗೌರಿ ಮತ್ತು ಸುಬ್ಬಜ್ಜಿ ತೋಟದ ಅಂಚಿನಲ್ಲಿ ಆಟವಾಡುತ್ತಿದ್ದಾಗ ಆಕಸ್ಮಿಕವಾಗಿ ಕಾಲು ಜಾರಿ ಸುಬ್ಬಜ್ಜಿ ನೀರಿನ ಸಣ್ಣ ಹೊಂಡಕ್ಕೆ ಬಿದ್ದಳು. ತಕ್ಷಣ ತಡಮಾಡದೆ ಗೌರಿ ಕಷ್ಟಪಟ್ಟು ಅವಳನ್ನು ನೀರಿನಿಂದ ಮೇಲೆತ್ತಿದಳು. ಮಳೆಗಾಲವಾದ್ದರಿಂದ ಅಲ್ಲೆಲ್ಲಾ ಕೆಸರಿತ್ತು .ಬಟ್ಟೆ ಎಲ್ಲಾ ಕೆಸರುಮಯ ಮತ್ತು ಕಾಲಿಗೆ ತರಚುಗಾಯವಾಗಿ ಮನೆಗೆ ಹೋಗಲು ಹೆದರಿದಳು ಸುಬ್ಬಜ್ಜಿ. ಗೌರಿ ಅವಳನ್ನು ಸೀದಾ ತನ್ನ ಮನೆಗೆ ಕರೆದುಕೊಂಡು ಹೋಗಿ ನೀರಿನಲ್ಲಿ ಬಟ್ಟೆಯನ್ನೆಲ್ಲ ತೊಳೆದು ಅವಳ ಹಳೆಯ ಲಂಗವನ್ನು ಹಾಕಲು ಕೊಟ್ಟಳು. ರುಕ್ಮಿಣಿ ಅಕ್ಕರೆಯಿಂದ ಸುಬ್ಬಕ್ಕನ ಕಾಲಿನ ಗಾಯಕ್ಕೆ ಮುಲಾಮು ಹಚ್ಚಿದಳು. ಅವರ ತಾಯಿಯು ಬಿಸಿ ಹಾಲು ಮಾಡಿ ಕೊಟ್ಟು ಆದರಿಸಿದಳು. ಇವರೆಲ್ಲರ ಪ್ರೀತಿ ಆದರ ಕಂಡು ಸುಬ್ಬಿಯ ಹೃದಯ ತುಂಬಿ ಬಂತು. ಹೀಗೆ ದಿನಗಳು ಉರುಳಿ ದೊಡ್ಡವಳಾದ ಸುಬ್ಬಜ್ಜಿ ಗೌರಿ ರುಕ್ಮಿಣಿಯ ಜೀವನ ಕವಲೊಡೆಯಿತು. ಸುಬ್ಬಜಿಗೆ ಮತ್ತು ಗೌರಿಗೆ ಮದುವೆಯಾಯಿತು ಗೌರಿ ಬೇರೆ ಊರಿಗೆ ಹೋದಳು ಇಬ್ಬರೂ ದುಃಖದಿಂದ ವಿದಾಯ ಹೇಳಿದರು. ತಬ್ಬಿಕೊಂಡು ಅತ್ತರು. ದಿನಗಳು ಸರಿದವು ಸುಬ್ಬಜ್ಜಿಗೆ ಸುಮಾ ಹುಟ್ಟಿದಳು. ಆದರೆ ಗೌರಿಗೆ ಮಕ್ಕಳಾಗದೆ ಕೊರಗುತ್ತಿದ್ದಳು ಸುಬ್ಬಜ್ಜಿ ಅವಳಿಗೆ ಸಮಾಧಾನ ಹೇಳಿ ಬರುತ್ತಿದ್ದಳು ಮುಂದಿನ ದಿನಗಳಲ್ಲಿ ರುಕ್ಮಿಣಿಗೂ ಮದುವೆಯಾಯಿತು. ಸುಬ್ಬಜ್ಜಿಗೆ ಸುಹಾಸ ಹುಟ್ಟಿದನು. ಸುಬ್ಬಜ್ಜಿಯು ಸಂಸಾರ ಸಾಗರದಲ್ಲಿ ಮುಳುಗಿದ್ದಾಗ ಬರ ಸಿಡಿಲಿನಂತೆ ಸುದ್ದಿ ಬಂತು. ಗೌರಿ ಮಕ್ಕಳಾಗದಕ್ಕೆ ಕೊರಗಿ ಕೃಷಳಾಗಿ ತೀರಿ ಹೋಗಿದ್ದಳು. ಸುಬ್ಬಜ್ಜಿ ಒದ್ದಾಡಿ ಹೋದಳು ಅತ್ತು ಅತ್ತು ಕಣ್ಣು ಬಾತುಕೊಂಡು ಊಟವು ಸೇರದಾಯ್ತು. ತನ್ನ ಪ್ರೀತಿಯ ಗೆಳತಿ ಹೋದದ್ದಕ್ಕೆ ತುಂಬಾ ಸಂಕಟಪಟ್ಟಳು. ಅವರ ಮನೆಗೆ ಹೋಗಿ ಎಲ್ಲರನ್ನೂ ಸಮಾಧಾನಿಸಿ ಬಂದಳು. ರುಕ್ಮಿಣಿಯ ಗೋಳು ಹೇಳತೀರದು ಅವಳನ್ನು ಸಮಾಧಾನಪಡಿಸಿ ಆಗಾಗ ಭೇಟಿಯಾಗೋಣ ಎಂದು ಸಂತೈಸಿದಳು. ಕಾಲಕ್ರಮೇಣ ಸುಬ್ಬಜಿಯ ಜೀವನದಲ್ಲೂ ಏರುಪೇರುಗಳಾದವು ಪತಿ ತೀರಿ ಹೋದರು ಮಕ್ಕಳು ದೊಡ್ಡವರಾಗುತ್ತಿದ್ದರು. ಎಲ್ಲರ ಸಲಹೆಯಂತೆ ಹಳ್ಳಿ

ಪುಣದಲ್ಲಿ ವಾಸಿಸಲು ನಿರ್ಧರಿಸಿದ ಸುಬ್ಬಜ್ಜಿ ಹೋಗುವ ಮುನ್ನ ರುಕ್ಮಿಣಿಯನ್ನು ನೋಡಿ ಹೋಗೋಣವೆಂದು ಅವರ ಮನೆಗೆ ಹೋದಳು

ರುಕ್ಮಿಣಿಗೆ ಒಂದು ಹೆಣ್ಣು ಒಂದು ಗಂಡು ಮಕ್ಕಳಿದ್ದರು. ಮನೆಗೆ ಬಂದ ಸುಬ್ಬಜಿಗೆ ಕಂಡದ್ದೇನು? ರುಕ್ಮಿಣಿ ತುಂಬಾ ಇಳಿದು ಹೋಗಿದ್ದಳು ಮುಖವೆಲ್ಲ ನೋವಿನಿಂದ ಬಾಡಿತ್ತು ಆದರೂ ನಗು ಮುಖದಿಂದ ಸುಬ್ಬಜ್ಜಿಯನ್ನು ಉಪಚರಿಸಿದಳು. ರುಕ್ಮಿಣಿಯ ಪತಿ ರಾಮಕೃಷ್ಣರು ಸಪ್ಪಗೆ ಇದ್ದರು. ಸುಬ್ಬಜ್ಜಿಗೆ ಏನೋ ಅನುಮಾನ.. ವಿಷಯವೇನೆಂದು ತುಂಬಾ ಒತ್ತಾಯಿಸಿ ಕೇಳಿದಾಗ ರುಕ್ಮಿಣಿ "ಏನಿಲ್ಲ ಸುಬ್ಬಕ್ಕ ಸ್ವಲ್ಪ ಹೊಟ್ಟೆ ನೋವಷ್ಟೇ..." ಎಂದಳು ಅವಳು ಪೂರ್ತಿ ವಿಷಯ ಹೇಳುತ್ತಿಲ್ಲ ಎಂದು ಸುಬ್ಬಜ್ಜಿಯು ಮತ್ತೊಮ್ಮೆ ರುಕ್ಮಿಣಿಯ ಕೈ ಹಿಡಿದು "ನಾನು ನಿಮ್ಮಕ್ಕ ಗೌರಿ ಹಾಗೆ. ನೀನು ನಿಜವಾದ ವಿಷಯ ಏನೆಂದು ನನ್ನೊಡನೆ ಸತ್ಯ ಹೇಳು" ಎಂದು ಒತ್ತಾಯಿಸಿದಳು. ಆಗ ರುಕ್ಮಿಣಿಯ ಕಣ್ಣೀರೇ ಉತ್ತರವಾಯಿತು. ರಾಮಕೃಷ್ಣರು ಹೇಳಲೋ ಬೇಡವೋ ಎಂದು ತಡವರಿಸುತ್ತಿದ್ದಾಗ ಸುಬ್ಬಜ್ಜಿಯು "ನಾನು ನಿಮಗೆ ದೂರದವಳಾಗಿ ಬಿಟ್ಟೆನೇ. ಸರಿ ನಾನು ಹೋಗುತ್ತೇನೆ" ಎಂದು ಎದ್ದೇಳಲು ರುಕ್ಮಿಣಿಯು "ಸುಬ್ಬಕ್ಕ ಹೋಗ್ಬೇಡ. ನನಗೆ ನೀನು ಗೌರಿ ಅಕ್ಕನ ಹಾಗೆ! ಅವಳಂತೂ ಹೋದಳು ನನಗೆ ಇನ್ಯಾರು" ಅಂತ ಅತ್ತಳು. ನಂತರ ಸುಧಾರಿಸಿ ಕೊಂಡು ತನಗೆ ಆಗಾಗ ಹೊಟ್ಟೆ ನೋವು ಬರುತ್ತಿದ್ದು ಸುಮಾರು ಕಡೆ ಚಿಕಿತ್ಸೆ ಮಾಡಿದರೂ ವಾಸಿಯಾಗದೆ ನಂತರ ಡಾಕ್ಟರ್ ಸಲಹೆಯಂತೆ ದೊಡ್ಡ ನಗರದಲ್ಲಿ ಆಸ್ಪತ್ರೆಯಲ್ಲಿ ತೋರಿಸಿದಾಗ ಅವರು ಆದಷ್ಟು ಬೇಗ ಶಸ್ತ್ರಚಿಕಿತ್ಸೆ ಅಗತ್ಯವೆಂದೂ ಅದಕ್ಕೆ ತುಂಬಾ ಹಣ ಖರ್ಚಾಗುತ್ತದೆ ಎಂದರು. "ಅಷ್ಟು ಹಣ ಹೊಂದಿಸುವುದು ಹೇಗೆ ಎಂದು ಯಜಮಾನ್ರು ತಲೆ ಮೇಲೆ ಕೈ ಹೊತ್ತಿದ್ದಾರೆ ಸುಬ್ಬಕ್ಕ. ನಮ್ಮ ಈಗಿನ ಪರಿಸ್ಥಿತಿಯಲ್ಲಿ ಅಷ್ಟು ಹಣ ಹೊಂದಿಸುವುದು ಕಷ್ಟ" ಎಂದು ತಲೆತಗ್ಗಿಸಿದಳು. ಸುಬ್ಬಜ್ಜಿಗೆ ಕರುಳು ಚುರ್ ಎಂದಿತು. ತನ್ನ ಪ್ರಾಣ ಗೆಳತಿ ಗೌರಿಯ ಮುದ್ದಿನ ತಂಗಿ ನನಗೂ ತುಂಬಾ ಪ್ರೀತಿ ಪಾತ್ರಳು ಇವಳಿಗೆ ಹೀಗಾಯಿತೇ ಎಂದು ದುಃಖಗೊಂಡಳು. ಸ್ವಲ್ಪ ಹೊತ್ತು ಮೌನವಾಗಿ ಕೂತು ಯೋಚಿಸಿದಳು. ರುಕ್ಮಿಣಿಯ ಸಣ್ಣ ಮಕ್ಕಳು ಏನು ಅರಿಯದ ಮುಗ್ಧರು. ರುಕ್ಮಿಣಿಗೆ ಏನಾದರೂ ಆದರೆ ಈ ಮಕ್ಕಳ ಗತಿ ಏನು? ಇವರು ಅಷ್ಟು ಹಣವಂತರಲ್ಲ, ತಂದೆಯ ಕಡೆಯೂ ಅಷ್ಟು ಸಹಾಯ ಇಲ್ಲ ಗೌರಿಯ ನೆನಪಲ್ಲೇ ತಂದೆಯು ತೀರಿದ್ದಾರೆ. ಈಗ ನಾನು ಏನಾದರೂ ಮಾಡಿ ರುಕ್ಮಿಣಿಯನ್ನು ಈ ಹಾಳು ಹೊಟ್ಟೆ ನೋವಿನಿಂದ ಪಾರು ಮಾಡಬೇಕೆಂದು ಪಣತೊಟ್ಟು ಇಬ್ಬರನ್ನೂ ಕರೆದು ಒಟ್ಟಿಗೆ ಕೂರಿಸಿ ತನ್ನ ಕೈಯಲ್ಲಿದ್ದ ತಾಯಿ ಮನೆಯವರು ಮಾಡಿಸಿದ್ದ ಬಂಗಾರದ ಬಳೆಗಳನ್ನು ಮತ್ತು ತನ್ನಲ್ಲಿದ್ದ ಸ್ವಲ್ಪ ಹಣವನ್ನು ತೆಗೆದು ಅವರ ಕೈಯಲ್ಲಿ ಇಟ್ಟಳು ಇದನ್ನು ತೆಗೆದುಕೊಳ್ಳಿ

ಇದರಿಂದ ಸ್ವಲ್ಪವಾದರೂ ನಿಮಗೆ ಸಹಾಯವಾಗಬಹುದು ದಯವಿಟ್ಟು ಬೇಡ ಅನ್ನಬೇಡಿ ಅಂದಳು. ದಂಪತಿಗಳಿಬ್ಬರು ದಿಗ್ಭ್ರಮೆಗೊಂಡರು ಚಿನ್ನದ ಬಳೆಗಳನ್ನು ಬಿಚ್ಚಿಕೊಟ್ಟಿದ್ದನ್ನು ನೋಡಿ ಬೆಚ್ಚಿ ಬಿದ್ದರು.

ರುಕ್ಮಿಣಿಯಂತೂ ಸುಬ್ಬಜ್ಜಿಯ ಕೈಹಿಡಿದು ಕಣ್ಣಿಗೊತ್ತಿಕೊಂಡು ಅತ್ತೇ ಬಿಟ್ಟಳು. ರಾಮಕೃಷ್ಣರು ಕೈಮುಗಿದು "ಸುಬ್ಬಕ್ಕ ನಿಮ್ಮ ಔದಾರ್ಯಕ್ಕೆ ನಾನು ಚಿರಋಣಿ ಆದರೆ ಇದು ಸರಿಯಲ್ಲ ಖಂಡಿತ ಬೇಡ" ಎಂದು ಹಠ ಹಿಡಿದರು ಸುಬ್ಬಜ್ಜಿಯು ಇಬ್ಬರನ್ನೂ ಸಮಾಧಾನ ಪಡಿಸಿ "ನಾನು ನಿಮ್ಮ ಅಕ್ಕ ಗೌರಿ ಹಾಗೆ ಎಂದು ನೀನೇ ಹೇಳಿದೆಯಲ್ಲ ರುಕ್ಮಿಣಿ. ಅವಳು ಕೊಟ್ಟರೆ ಅಥವಾ ಏನಾದರೂ ಸಹಾಯ ಮಾಡಿದರೆ ನೀನು ತೆಗೆದುಕೊಳ್ಳುತ್ತಿರಲಿಲ್ಲವೇ? ನಾನು ಹಾಗೆ ಅಂದುಕೋ. ನಿನ್ನ ಮಕ್ಕಳನ್ನು ನೋಡು ನೀನು ಬೇಗ ಹುಷಾರಾಗಿ ಬಾ. ಎಲ್ಲವೂ ಒಳ್ಳೆಯದಾಗುತ್ತದೆ. ರಾಮಕೃಷ್ಣರೇ ನೀವು ಏನೂ ಮಾತಾಡದೆ ಇದನ್ನು ಒಳಗೆ ತೆಗೆದಿಡಿ. ನಾಳೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಮಾಡಿಸಿ .ರುಕ್ಮಿಣಿ ಬೇಗ ಹುಷಾರಾಗಿ ಮನೆಗೆ ಬಂದರೆ ಸಾಕು" ಎಂದು ತುಂಬಾ ಒತ್ತಾಯ ಮಾಡಿ ಸಣ್ಣಗೆ ಗದರಿಸಿ ಅದನ್ನು ತೆಗೆದುಕೊಳ್ಳುವಂತೆ ಮಾಡಿ ಇಬ್ಬರಿಗೂ ಒಳ್ಳೆಯದಾಗಲಿ ಎಂದು ಹರಸಿ ಸ್ವಲ್ಪ ದಿನ ಬಿಟ್ಟು ಬರುತ್ತೇನೆ ಎಂದು ಹೇಳಿ ಹೊರಟಳು. ದಂಪತಿಗಳಿಬ್ಬರೂ ಏನು ಮಾತಾಡಲು ತೋಚದೆ ಮೂಕವಾಗಿ ಕಣ್ತುಂಬಿ ನಿಂತಿದ್ದರು.

ನಂತರದ ದಿನಗಳಲ್ಲಿ ಸುಬ್ಬಜಿಯ ಸಂಸಾರ ಪೇಟೆಗೆ ಬಂತು. ರುಕ್ಮಿಣಿಗೆ ಸರಿಯಾದ ಚಿಕಿತ್ಸೆ ಸಿಕ್ಕಿ ಆರೋಗ್ಯದಿಂದ ಮನೆಗೆ ಬಂದಳು ಸುಬ್ಬಜ್ಜಿಯು ಒಮ್ಮೆ ಹೋಗಿ ನೋಡಿ ಬಂದಳು ಕಾಲಕ್ರಮೇಣ ಎಲ್ಲರೂ ಸಂಸಾರ ಬಂಧನದಲ್ಲಿ ಸಿಲುಕಿ ಭೇಟಿಯಾಗುವುದು ಕಡಿಮೆಯಾಯಿತು ಸುಮಾ ತೀರಿದ ನಂತರ ಸುಬ್ಬಜ್ಜಿಯು ತನ್ನದೇ ಪ್ರಪಂಚದಲ್ಲಿ ಮೌನವಾದಳು .ಇತ್ತ ರುಕ್ಮಿಣಿಗೆ ಆಗಾಗ ಸುಬ್ಬಜ್ಜಿಯ ನೆನಪು ಆಗುತ್ತಿತ್ತು. ಅವಳು ಮಾಡಿದ ಸಹಾಯವನ್ನು ಯಾವಾಗಲೂ ಸ್ಮರಿಸುತ್ತಿದ್ದರು. ಹೇಗಾದರೂ ಮಾಡಿ ಸುಬ್ಬಜ್ಜಿಗೆ ಬಳೆಗಳನ್ನು ಮಾಡಿಸಿಕೊಡಬೇಕೆಂದು ಚಡಪಡಿಸುತ್ತಿದ್ದಳು. ಮಕ್ಕಳ ವಿದ್ಯಾಭ್ಯಾಸ ಮುಂಜಿ ಮದುವೆ ಎಂದು ಮುಳುಗಿ ಹೋದಳು. ಈ ಮಧ್ಯೆ ಸುಬ್ಬಜ್ಜಿಯನ್ನು ಭೇಟಿ ಮಾಡಬೇಕೆಂದು ಎಷ್ಟೇ ಪ್ರಯತ್ನ ಪಟ್ಟರೂ ಸಾಧ್ಯವಾಗದಾಯಿತು. ಮಕ್ಕಳು ದೊಡ್ಡವರಾಗಿ ಸ್ವಲ್ಪ ಹಣ ಸೇರಿದಾಗ ಸುಬ್ಬಜ್ಜಿಯನೊಮ್ಮೆ ಹೇಗಾದರೂ ನೋಡಿ ಬರಬೇಕೆಂದು ದಂಪತಿಗಳಿಬ್ಬರೂ ನಿಶ್ಚಯಿಸಿದರು. ಸುಬ್ಬಜ್ಜಿಯು ಕಾಶಿಗೆ ಹೋಗುವ ವಿಷಯ ಮತ್ತು ಮನೆಯಲ್ಲಿ ಚಿಕ್ಕ ಸಮಾರಂಭ ಇಟ್ಟುಕೊಂಡಿರುವ ವಿಷಯ ತಿಳಿದು ಆ ದಿನವೇ ಭೇಟಿಯಾಗಬೇಕೆಂದು ಹೊರಡಲು ಸಿದ್ಧವಾಗುತ್ತಿದ್ದಾಗ ರುಕ್ಮಿಣಿ ಕಾಲು ಜಾರಿ ಬಿದ್ದು ಬಲಗಾಲು ಉಳುಕಿತು. ನಡೆಯಲು ಕೊಂಚ ಕಷ್ಟವಾದಾಗ

ರಾಮಕೃಷ್ಣರು ನಾನೊಬ್ಬನೇ ಈಗ ಹೋಗಿ ಬರುತ್ತೇನೆ ಎಂದು ಹೊರಟು ಬಂದಿದ್ದರು. ಆ ಸಮಯದಲ್ಲಿ ರಾಮಕೃಷ್ಣರು ಸುಹಾಸ ಸುಜಾತ ನವ್ಯರಿಗೆ ಸುಬ್ಬಜ್ಜಿ ಮಾಡಿದ ಸಹಾಯ ಅವರ ಔದಾರ್ಯ, ರುಕ್ಮಿಣಿಯ ಗೆಳೆತನ ಎಲ್ಲವನ್ನೂ ಹೇಳಿ "ನಿಮ್ಮ ತಾಯಿ ಮಾಡಿದ ಆ ಸಹಾಯ ನಾವೆಂದೂ ಮರೆಯುವುದಿಲ್ಲ. ನಿಮ್ಮ ತಾಯಿಯ ದೊಡ್ಡ ಗುಣ ಒಳ್ಳೆಯತನವೇ ನಿಮ್ಮನ್ನು ಯಾವಾಗಲೂ ಕಾಪಾಡುತ್ತದೆ" ಎಂದರು. ರುಕ್ಮಿಣಿ ಈ ದಿನ ಬರಲಾಗದ್ದಕ್ಕೆ ಕಾರಣ ಹೇಳಿ ನೀವೆಲ್ಲರೂ ನಮ್ಮ ಊರಿಗೆ ಖಂಡಿತ ಆದಷ್ಟು ಬೇಗ ಬರಬೇಕೆಂದೂ, ಮಕ್ಕಳು ನಿಮ್ಮನ್ನು ನೋಡಲು ಕಾತರಿಸುತ್ತಿದ್ದಾರೆ ಎಂದರು. ಸುಹಾಸನಿಗೆ ತಾಯಿಯ ಬಗ್ಗೆ ಹೆಮ್ಮೆ ಉಂಟಾಯಿತು ಸುಜಾತಳಿಗೆ ತನ್ನ ಅತ್ತೆಯ ಬಗೆಗಿನ ಗೌರವ ಇಮ್ಮಡಿ ಯಾಯಿತು.ಇವರನ್ನು ನಾನು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ ಎಂದು ವ್ಯಥೆ ಪಟ್ಟಳು. ನವ್ಯ ಖುಷಿಯಿಂದ ಅಜ್ಜಿಯ ಕೊರಳನ್ನು ತಬ್ಬಿ "ಗ್ರೇಟ್ ಅಜ್ಜಿ" ಎಂದು ಮುತ್ತು ಕೊಟ್ಟಳು ನವ್ಯಳ ಮನ ನುಡಿಯಿತು, ನಾನು ಈ ಹಿಂದೆ ಅಜ್ಜಿಯನ್ನು ಎಷ್ಟು ಅಸಡ್ಡೆ ಮಾಡಿದ್ದೆ ಎಂತಹ ಚಿನ್ನದ ಗುಣ ಅಜ್ಜಿಯದು ಛೆ! ಅಜ್ಜಿಯನ್ನು ಆಗ ನೋಯಿಸಿದೆನಲ್ಲ ಎಂದು ತನ್ನನ್ನೇ ಹಳಿದುಕೊಂಡಳು. ಎಲ್ಲರೂ ಕೊಂಚ ಭಾವುಕರಾಗಿದ್ದರು ಆದರೆ ಎಲ್ಲರದೂ ಒಂದೇ ಪ್ರಶ್ನೆ. ಇಷ್ಟು ದಿನ ಈ ವಿಷಯ ನಮಗೆ ಗೊತ್ತಿರಲಿಲ್ಲ .ಅಜ್ಜಿ ಯಾರಲ್ಲೂ ಹೇಳಿರಲಿಲ್ಲವಲ್ಲ ಎಂದು. ಸುಬ್ಬಜ್ಜಿ ಏನು ಆಗದವರಂತೆ ಶಾಂತವಾಗಿ ಕೂತಿದ್ದರು ಅವರಿಗೆ ರುಕ್ಮಿಣಿಯನ್ನೂ ಮಕ್ಕಳನ್ನೂ ಯಾವಾಗ ನೋಡುವೆನು ಎಂದು ಚಡಪಡಿಸುವಂತಾಯ್ತು. ಸುಹಾಸ ಮತ್ತು ಸುಜಾತ ಕಾಶಿಗೆ ಹೋಗುವ ಮುನ್ನವೇ ಇವರ ಮನೆಗೆ ಹೋಗುವ ಅಲ್ವಾ ಎಂದು ಮಾತಾಡಿ ಕೊಂಡರು. ಅಲ್ಲಿಗೆ ಹೋಗುವ ಉತ್ಸಾಹ ಇಲ್ಲದಿದ್ದರೂ ಅಜ್ಜಿಯ ಗೆಳತಿಯ ಕುಟುಂಬ ನೋಡುವ ಕುತೂಹಲವಿತ್ತು. ಹಾಗಾಗಿ ನಾಳೆಯೋ ನಾಡಿದ್ದೋ ಹೋಗುವುದು ಎಂದು ಎಲ್ಲರೂ ತೀರ್ಮಾನಿಸಿದರು.

ರಾಮಕೃಷ್ಣರಿಗೆ ಆನಂದವೋ ಆನಂದ. ಇಷ್ಟು ಬೇಗ ಇವರೆಲ್ಲರೂ ನಮ್ಮ ಮನೆಗೆ ಬರಲು ಒಪ್ಪಿದರಲ್ಲ! ಎಂದು. ರಾಮಕೃಷ್ಣರು ಎದ್ದು ನಿಂತು "ತುಂಬಾ ಹೊತ್ತಾಯ್ತು, ನಾನಿನ್ನು ಹೊರಡುತ್ತೇನೆ. ನನ್ನ ಸಮೀಪ ಬಂಧುಗಳ ಮನೆಯಲ್ಲಿ ಈ ರಾತ್ರಿ ಇದ್ದು ನಾಳೆ ಬೆಳಗ್ಗೆ ಊರಿಗೆ ಹೊರಡುತ್ತೇನೆ ನೀವು ನಾಳೆಯೇ ಬರುವುದಾದರೆ ಸಂತೋಷ ಇಲ್ಲದಿದ್ದರೆ ನಾಡಿದ್ದು ಖಂಡಿತ ಬಂದು ನಮ್ಮ ಆತಿಥ್ಯ ಸ್ವೀಕರಿಸಬೇಕು" ಎಂದು ಸುಬ್ಬಜ್ಜಿಗೆ ಕೈ ಮುಗಿದರು.

ಅಧ್ಯಾಯ 14

ಸುಹಾಸಿನಿ ಪ್ರಸನ್ನ ಹೆಗಡೆ

ಕಾಫಿ ಮಾಡಿ ಸುಹಾಸ ಸುಜಾತರಿಗೆ ಕೊಟ್ಟ ಸುಬ್ಬಜ್ಜಿ, ಕೋಣೆಯಲ್ಲಿ ಓದುತ್ತಾ ಕುಳಿತಿದ್ದ ನವ್ಯಳಿಗೆ ಕಾಫಿ ಕೊಟ್ಟು ತಾವೂ ಕುಡಿದು, ಬೆಳಿಗ್ಗೆ ದೋಸೆ ಜೊತೆಗೆ ಚಟ್ನಿ ಮಾಡಲು ಅಣಿಯಾಗುತ್ತಿದ್ದರು. ಅಷ್ಟರಲ್ಲಿ ಗೋಪಾಲಭಟ್ಟರ ಮನೆಯಿಂದ ಸುಗುಣಳಿಗೆ ಹೆರಿಗೆ ನೋವು ಕಾಣಿಸಿಕೊಂಡಿದೆ ಎಂದು ಕರೆ ಬಂದದ್ದರಿಂದ ಸುಬ್ಬಜ್ಜಿ "ಸುಜಾತ, ನಾನು ಕಲ್ಯಾಣಿ ಮನೆಗೆ ಹೋಗಿ ಬರ್ತೀನಿ.ನೀವು ದೋಸೆ ಮಾಡಿಕೊಳ್ಳಿ" ಎನ್ನುತ್ತಾ ಲಗುಬಗೆಯಲ್ಲಿ ಹೊರಡಲನುವಾದಾಗ "ಅತ್ತೆ ನಮ್ಮೂರ ಫಣಿಯಮ್ಮನೇ ಸರಿ" ಎಂದು ನಗೆ ಬೀರಿ "ಅತ್ತೇ..ನೀವೂ ಎರಡು ದೋಸೆ ತಿಂದುಕೊಂಡೇ ಹೋಗಿ" ಎಂದು ಕೈಯಲ್ಲಿ ಹಿಡಿದಿದ್ದ ಪತ್ರಿಕೆಯ ವಿಶೇಷ ಪುರವಣಿಯನ್ನು ಟೀಪಾಯ್ ಮೇಲಿಟ್ಟು ಅಡುಗೆ ಮನೆಯತ್ತ ಹೆಜ್ಜೆ ಹಾಕಿದಳು.

ಹೆರಿಗೆ ಮಾಡಿಸುವುದರಲ್ಲಿ ಸುಬ್ಬಜ್ಜಿಯದು ಎತ್ತಿದ ಕೈ. ಬಹಳಷ್ಟು ಹೆಣ್ಣು ಮಕ್ಕಳ ಹೆರಿಗೆ, ಬಾಣಂತನ ಮಾಡಿಸಿದವರು. ಇತ್ತೀಚೆಗೆ ಆಸ್ಪತ್ರೆಗಳ ಸೌಲಭ್ಯ ಆಗಿ ಕರೆ ಬರುವುದು ಕಡಿಮೆಯಾಗಿದ್ದರೂ ಊರ ಮನೆಯವರು ಹೆಣ್ಣು ಮಕ್ಕಳ ಸಮಸ್ಯೆ ಗಳಿಗೆ ಸುಬ್ಬಜ್ಜಿಯ ಸಲಹೆ ಕೇಳುತ್ತಿದ್ದರು. ಸುಬ್ಬಜ್ಜಿ ತನಗೆ ಗೊತ್ತಿದ್ದ ಮನೆ ಔಷಧಿ ಮಾಡಿಕೊಡುವುದೋ ಹೇಳುವುದೋ ಮಾಡುತ್ತಿದ್ದರು. ಯಾವುದೇ ಜಾತಿ ಮತ ಅಂತಸ್ತು ನೋಡದ ಅವರ ಸೇವಾಕಾರ್ಯ ಊರವರ ಪ್ರಶಂಸೆಗೂ ಒಳಗಾಗಿತ್ತು.

ಅಪರೂಪಕ್ಕೆ ಬಹಳ ಸಮಯದ ನಂತರಬಂದ ಈ ಕರೆ ಸುಬ್ಬಜ್ಜಿಯನ್ನು ಉತ್ಸಾಹದಿಂದಲೇ ಹೊರಡುವಂತೆ ಮಾಡಿತ್ತು.

ಕಲ್ಯಾಣಮ್ಮ ನಾಲ್ಕಾರು ಬಾರಿ ಮನೆಯ ಬಾಗಿಲಿಗೆ ಬಂದು ಗೇಟಿನತ್ತ ನೋಡಿ ರಾಮಾ ಕೃಷ್ಣಾ ಅನ್ನುತ್ತಾ ಮನೆಯ ಒಳಗೂ ಹೊರಗೂ ಮೊಗದಲ್ಲಿ ಆತಂಕ

ಉಂಬಿಕೊಂಡು ಓಡಾಡುತ್ತಿದ್ದರು.

ಸುಬ್ಬಜ್ಜಿಯನ್ನು ಕಂಡೊಡನೆ ಲಗುಬಗೆಯಿಂದ ಗೇಟು ತೆರೆದು " ಅಬ್ಬ...ನೀವು ಬಂದ್ರಲ್ಲ ..ಇನ್ನು ಧೈರ್ಯ ಬಂತು" ಎನ್ನುತ್ತಾ ಒಳಗೆ ಕರೆದೊಯ್ದರು.

ಪತ್ರಿಕೆ ಓದುತ್ತಾ ಕುಳಿತಿದ್ದ ಕಿಶೋರ "ಬನ್ನಿ ಅಜ್ಜಿ ಬನ್ನಿ" ಎನ್ನುತ್ತಾ ಸ್ವಾಗತಿಸಿದ. "ಇದ್ಯೇನಪ್ಪಾ ಮನೇಲಿ..ನೀನು ಕಾಣಿಸೋದೇ ಅಪರೂಪ ಅನ್ನುತ್ತಲೇ ಕಲ್ಯಾಣಮ್ಮನ ಹಿಂದೆಯೇ ಸುಗುಣಳ ಕೋಣೆಯತ್ತ ಹೆಜ್ಜೆ ಹಾಕಿದರು.

"ಕಲ್ಯಾಣಿ, ಒಂದಷ್ಟು ಕೊತ್ತಂಬರಿ ಪುಡಿ ಮಾಡಿ ಕೊಡು, ಕಷಾಯ ಮಾಡಿ ಕೊಡೋಣ. ಹುಸಿ ನೋವು ಆಗಿದ್ದರೆ 10–15 ನಿಮಿಷದಲ್ಲಿ ನೋವು ಶಮನ ಆಗುತ್ತೆ" ಎಂದು ಹೇಳಿದ ಸುಬ್ಬಜ್ಜಿ ಒಂದು ಲೋಟ ಕುದಿಯುವ ನೀರಿಗೆ ಕಲ್ಯಾಣಮ್ಮ ಮಾಡಿ ಕೊಟ್ಟ ಪುಡಿ ಹಾಕಿ ಅರ್ಧದಷ್ಟಕ್ಕೆ ಕುದಿಸಿ ಸೋಸಿ ಹಾಲು, ಸಕ್ಕರೆ ಸೇರಿಸಿ ಸುಗುಣಳಿಗೆ ಕುಡಿಯಲು ಕೊಟ್ಟರು.

ಕಲ್ಯಾಣಮ್ಮನ ಆತಂಕ ಕೊಂಚ ದೂರವಾಗಿತ್ತು. ಅಡುಗೆ ಮನೆಯಲ್ಲೇ ಮಣೆ ಹಾಕಿ "ಬೆಳಿಗ್ಗೆ ಉಪ್ಪಿಟ್ಟು ಮಾಡಿದೀನಿ ಸ್ವಲ್ಪ ಕೊಡಲೇ" ಎಂದಾಗ "ಬೇಡ ಕಣೆ ಕಲ್ಯಾಣಿ.. ನಮ್ಮ ಮನೇಲಿ ಉದ್ದಿನ ದೋಸೆ. ನಾನು ಹೊರಡೋ ಅಷ್ಟರಲ್ಲಿ ಸುಜಾತ ಎರಡು ದೋಸೆ ತಿಂದುಕೊಂಡು ಹೋಗಿ ಅಂತ ಮಾಡಿಕೊಟ್ಟಳು. ಗಬಗಬಾಂತ ದೋಸೆ ತಿಂದುಕೊಂಡೇ ಬಂದೆ" ಅಂದರು ನಗುತ್ತಾ.

ತಟ್ಟೆಗೆ ಸ್ವಲ್ಪ ಉಪ್ಪಿಟ್ಟು ಹಾಕುತ್ತಾ ಇದ್ದ ಕಲ್ಯಾಣಮ್ಮನ ಕಾಲ ಬಳಿ ಬೆಕ್ಕು ಸುಳಿಯುತ್ತಾ ಇತ್ತು.

"ಪರವಾಗಿಲ್ಲ ಈಗ ಸುಜಾತ ಅಡುಗೆಮನೆ ಕಡೆ ತಲೆಹಾಕ್ತಾಳೆ ಅಂತಾಯ್ತು" ಅನ್ನುತ್ತಾ ಅಜ್ಜಿಯ ಮುಖವನ್ನು ಪ್ರಶ್ನಾರ್ಥಕವಾಗಿ ನೋಡುತ್ತಾ "ನಂದೂ ಇನ್ನೂ ತಿಂಡಿ ಆಗಿಲ್ಲ ಅವರದ್ದೆಲ್ಲಾ ಆಯ್ತು ನನ್ನ ಜೊತೆ ಸ್ವಲ್ಪ ತಗೊಳ್ಳಿ" ಎಂದಾಗ ಸುಬ್ಬಜ್ಜಿಗೆ ನಿರಾಕರಿಸಲು ಮನಸಾಗಲಿಲ್ಲ.

"ಹಾಗೇನಿಲ್ಲ ಕಣೆ. ಮನಸ್ಸು ಬಂದರೆ ಮಾಡ್ತಾಳೆ. ನಾನಿದೀನಲ್ಲ ಅಂತ ಅಡುಗೆ ಮನೆ ಕಡೆ ಬರಲ್ಲ... ಅದೇ ನನ್ಗೆ ಕಲೀಬೇಕೂಂತ ಆಸೆ ಇದೆ.. ಏನಾದ್ರೂ ಮಾಡಿದ್ರೆ ಇದು ಚೆನ್ನಾಗಿದೆ ಹೇಗೆ ಮಾಡಿದ್ರಿ ಅಜ್ಜಿ ಅಂತ ಕೇಳ್ತಾಳೆ" ಎಂದರು.

ಸ್ವಲ್ಪ ಹೊತ್ತು ಮಾತಾಡಿದ ಮೇಲೆ ಸುಬ್ಬಜ್ಜಿ ಸುಗುಣಳ ಕೋಣೆ ಗೆ ಬಂದರು.

ಹಿಂದೆಯೇ ಬಂದ ಕಲ್ಯಾಣಮ್ಮಗೆ

"ಸುಗುಣಳ ಹೊಟ್ಟೆ ನೋವು ಸ್ವಲ್ಪ ಕಡಿಮೆ ಆಯಿತು. ಕಲ್ಯಾಣಿ, ಇದು ಹುಸಿ ನೋವೇ ಕಣೇ" ಎಂದು ಹೇಳುತ್ತಾ ಸುಗುಣಳ ಕೈ ಕಾಲನ್ನೆಲ್ಲ ಸ್ವಲ್ಪ ತಿಕ್ಕುತ್ತಾ ಕುಳಿತರು. ಸುಗುಣಳಿಗೆ ಈಗ ಸ್ವಲ್ಪ ಹಾಯೆನಿಸಿತ್ತು.

ಅಂದು ಕೊಂಡ ಹಾಗೇ ಮುಂದಿನ ಎರಡು ದಿನಗಳಲ್ಲಿ ಸುಬ್ಬಜ್ಜಿ ಮನೆಯವರು ರಾಮಕೃಷ್ಣರ ಮನೆಗೆ ಹೊರಡುವ ತಯಾರಿ ನಡೆಸಿದರು. ಕಾಶಿಗೆ ಹೋಗಲೆಂದು ತಯಾರಿಸಿದ್ದ ಕೋಡುಬಳೆ, ಚಕ್ಕುಲಿ, ನಿಪ್ಪಟ್ಟು ಎಲ್ಲವನ್ನೂ ಅರ್ಧದಷ್ಟು ರುಕ್ಮಿಣಿಯ ಮನೆಗೆ ಕೊಂಡು ಹೋಗಲು ನಿರ್ಧರಿಸಿದ ಸುಬ್ಬಜ್ಜಿ ಸ್ಟೀಲ್ ಡಬ್ಬಿಗಳಲ್ಲಿ ತುಂಬಿಸಿ ಇಟ್ಟಳು.

ನವ್ಯಗೆ ಕಾಲೇಜ್‌ಗೆ ರಜೆ ಸಿಗದ ಕಾರಣದಿಂದಾಗಿ ನವ್ಯಳನ್ನು ಮನೆಯಲ್ಲೇ ಬಿಟ್ಟು ಹೋಗಬೇಕೆಂದು ತೀರ್ಮಾನಿಸಿ, ಸುಹಾಸ ಬ್ಯಾಂಕ್‌ಗೆ ರಜೆ ಹಾಕಿ , ಸುಹಾಸ, ಸುಜಾತ, ಹಾಗೂ ಸುಬ್ಬಜ್ಜಿ ಮೂರೂ ಜನರು ಕಾರಿನಲ್ಲಿ ರಾಮಕೃಷ್ಣರ ಮನೆಗೆ ಹೋಗುವ ನಿರ್ಧಾರ ಮಾಡಿದರು.

ಮರುದಿನ ಬೆಳಿಗ್ಗೆ ಸುಹಾಸ ರಾಮಕೃಷ್ಣ ರಾಯರಿಗೆ ಕರೆ ಮಾಡಿ ತಾವು ಇಂದೇ ನಿಮ್ಮಲ್ಲಿಗೆ ಬರುತ್ತಿದ್ದೇವೆ ಎಂದು ತಿಳಿಸಿದ್ದರಿಂದ ರಾಮಕೃಷ್ಣರಾಯರು ಮುಖ್ಯ ರಸ್ತೆಗೆ ಬಂದು ನೆಂಟರನ್ನು ಮನೆಗೆ ಕರೆದೊಯ್ದರು.

ರಾಮಕೃಷ್ಣ, ರುಕ್ಮಿಣಿ ದಂಪತಿಗಳಿಗೆ ಇವರ ಆಗಮನ ಅತ್ಯಂತ ಖುಷಿ ಕೊಟ್ಟಿತು. ಇವರನ್ನು ಅತ್ಯಂತ ಸಂಭ್ರಮದಿಂದ ಸ್ವಾಗತಿಸಿ,ರಾಜೋಪಚಾರ ಮಾಡಿದರು

ಸುಬ್ಬಜ್ಜಿ ಯನ್ನು ಕಂಡ ರುಕ್ಮಿಣಿ "ಬನ್ನಿ, ಬನ್ನಿ, ಸುಬ್ಬಕ್ಕ , ತುಂಬಾ ವರ್ಷಗಳ ನಂತರ ನಿಮ್ಮನ್ನು ನೋಡುವ ಭಾಗ್ಯ ಸಿಕ್ಕಿದೆ" ಎಂದು ಹೇಳುತ್ತಾ ಸುಬ್ಬಜ್ಜಿ ಯ ಕಾಲಿಗೆ ನಮಸ್ಕರಿಸಿದರು.

ನಂತರ ಇಬ್ಬರೂ ಗಟ್ಟಿಯಾಗಿ ತಬ್ಬಿಕೊಂಡರು.

ಹಳೇ ನೆನಪುಗಳು ಮರುಕಳಿಸಿತು. ಗೌರಿಯ ಗೆಳತನ,ಆ ಹುರುಪು ತುಂಬಿದ ದಿನಗಳು ಕಣ್ಮುಂದೆ ಬಂದು, ಸುಬ್ಬಜ್ಜಿಯ ಕಣ್ಣಲ್ಲಿ ನೀರು ತುಂಬಿತು.

ನಾಲ್ಕಾರು ಜನ ಆರಾಮವಾಗಿ ಉಳಿಯ ಬಹುದಾದ ಮನೆ.ಈಗ ಅವರು ಒಳ್ಳೆಯ ಜೀವನ ನಿರ್ಮಿಸಿಕೊಂಡಿದ್ದಾರೆ. ಸುತ್ತಲೂ ಹಚ್ಚ ಹಸಿರು.ತರ ತರಹದ ಹೂವಿನ ಗಿಡಗಳು ಬಣ್ಣ ಬಣ್ಣದ ಹೂವುಗಳು ಹಕ್ಕಿಗಳ ಚಿಲಿಪಿಲಿ. .ಮನೆಯೂ ಸಮೃದ್ಧಿಯಿಂದ ಕೂಡಿದಂತೆ ಇತ್ತು. ಎಲ್ಲವನ್ನೂ ನೋಡುತ್ತಿದ್ದ ಸುಬ್ಬಜ್ಜಿಗೆ ಒಂದು ಗೀಜಗದ ಗೂಡೂ ಕಾಣಿಸಿತು. ಸುಬ್ಬಜ್ಜಿಗೆ ತನ್ನ ಬಾಲ್ಯದ ದಿನಗಳು ನೆನಪಾಗಿ ಆ ತಂಪು ಗಾಳಿ ಹಿತ ವಾತಾವರಣ ಹಾಯೇನಿಸಿತು.

ಸುಜಾತ ಹೂದೋಟವನ್ನು ನೋಡುತ್ತಾ ಸಂತಸಪಡುತ್ತಿದ್ದರೆ ಸುಹಾಸ ರಾಮಕೃಷ್ಣರಾಯರ ಜೊತೆ ಚಾವಡಿಯಲ್ಲಿ ಮಾತಾಡುತ್ತ ಕುಳಿತಿದ್ದ.

ಸುಬ್ಬಜ್ಜಿಗೆ ಬಹಳ ಇಷ್ಟವಾದ ಗೋದಿ ಹಲ್ವಾ, ಅಕ್ಕಿ ಕೇಸರಿ (ಸಣ್ಣಕ್ಕಿ) ಪಾಯಸ, ಮೆಣಸಿನಕಾಯಿ ಬೋಂಡ, ಮಾವಿನ ಕಾಯಿ ಹುಳಿ, ಚಟ್ನಿ, ಬಣ್ಣದ ಸೌತೇಕಾಯಿ ಸಾಂಬಾರ್, ಮೊಳಕೆ ಬರಿಸಿದ ಹೆಸರು ಕಾಳಿನ ಪಲ್ಯ, ಹೀಗೆ ಸಾಕಷ

ನಿಷುಗಳನ್ನು ಬಡಿಸಿ, ಉಣಿಸಿ, ಸುಬ್ಬಜ್ಜಿಯ ಹಾಗೂ ಗೆಳತಿ ಗೌರಿ ಯ ಗೆಳೆತನದ ಕಾಲ್ಲದ ದಿನಗಳನ್ನು ನೆನಪಿಸಿ ಕೊಳ್ಳುತ್ತಾ ಊಟ ಮುಗಿಸಿದರು.

ಚಾವಡಿಯಲ್ಲಿ ಹಾಕಿದ್ದ ಜಮ ಖಾನದಲ್ಲಿ ಕುಳಿತ ಸುಹಾಸ

"ಅತಿಥಿ ಸತ್ಕಾರ ಹೇಗೆ ಮಾಡಬೇಕೂಂತ ಇವರ ಮನೇಲಿ ನೋಡಿ ಕಲೀಬೇಕು" ಎಂದಾಗ ಸುಜಾತ "ನಿಜವಾಗಲೂ ಹೌದು... ಪ್ರತಿಯೊಂದು ಕೆಲಸದಲ್ಲೂ ಎಷ್ಟೊಂದು ಅಚ್ಚುಕಟ್ಟು, ಅದೇನು ಉಪಚಾರ... ಇನ್ನೊಂದ್ಸರ್ತಿ ನವ್ಯಳನ್ನೂ ಕರೆದುಕೊಂಡು ಇಲ್ಲಿಗೆ ಬರಬೇಕು ಕಣ್ರೀ" ಎನ್ನುತ್ತಾ ಅವನ ಪಕ್ಕದಲ್ಲೇ ಕುಳಿತಳು.

ಒಳಗೆ ಸುಬ್ಬಜ್ಜಿ ರುಕ್ಮಿಣಿಯರ ಮಾತುಕತೆ ನಡೆದೇ ಇತ್ತು.ರಾಮಕೃಷ್ಣರಾಯರು ಮತ್ತೇನೋ ಸಿದ್ದತೆ ಮಾಡಿಕೊಳ್ಳುತ್ತಿದ್ದರು.

ಹೊರಡಲು ಅಣಿಯಾದಾಗ "ಇವತ್ತು ಉಳಿಯಿರಿ ಎರಡು ದಿನ ಇದ್ದು ಹೋದರಾಯಿತು" ಎಂದ ರುಕ್ಮಿಣಿಗೆ ಸುಹಾಸ "ನಾಳೆಯೇ ಕಾಶಿಗೆ ಹೊರಡಬೇಕಲ್ಲಾ. ಇಲ್ಲಾಂದ್ರೆ ಇರ್ತಿದ್ವಿ" ಎಂದಾಗ ರಾಮಕೃಷ್ಣ ರಾಯರು ಕೈಯಲ್ಲಿ ಒಂದು ತಟ್ಟೆ ಹಿಡಿದು ರುಕ್ಮಿಣಿಯ ಕೈಗೆ ಕೊಟ್ಟರು."ಸುಬ್ಬಕ್ಕ... ಇಲ್ಲಿ ಕೂತ್ಕೊಳ್ಳಿ" ಎಂದು ಕುರ್ಚಿಯಲ್ಲಿ ಕೂರಿಸಿದ ರುಕ್ಮಿಣಿ ತಟ್ಟೆಯನ್ನು ಸುಬ್ಬಜ್ಜಿಯ ಮುಂದೆ ತರುತ್ತಿದ್ದಂತೆ "ಇದೆಲ್ಲಾ ಯಾಕೇ ರುಕ್ಮಿಣಿ" ಎನ್ನುತ್ತಾ ತಟ್ಟೆಯಲ್ಲಿದ್ದ ಸೀರೆ ಮತ್ತು ಎರಡು ಚಿನ್ನದ ಬಳೆಗಳನ್ನು ನೋಡಿ ಅಚ್ಚರಿಗೊಂಡು "ಇದೇನು ರಾಮಕೃಷ್ಣ.. ಇದೆಲ್ಲಾ ಬೇಡವೇ ಬೇಡ" ಎಂದರು "ಸುಬ್ಬಕ್ಕ...ಕಷ್ಟದಲ್ಲಿದ್ದಾಗ ನೀವುಮಾಡಿದ ಉಪಕಾರ ಮರೆಯೋಕಾಗತ್ತಾ... ಇದೇನೂ ನೀವು ಕೊಟ್ಟಂತಹ ಬಳೆಗಳಲ್ಲ. ಏನೋ ದೇವರು ಅನುಕೂಲ ಮಾಡಿಕೊಟ್ಟಿರುವುದರಿಂದ ಇಷ್ಟು ಮಾಡಲು ಸಾಧ್ಯವಾಗಿದೆ. ಬೇಡ ಅನ್ನಬೇಡಿ ಸುಬ್ಬಕ್ಕ. ನೀವು ಬೇರೆಯಲ್ಲ, ಗೌರಕ್ಕ ನನಗೆ ಬೇರೆಯಲ್ಲ" ಎಂದು ಕಣ್ಣಲ್ಲಿ ನೀರು ತುಂಬಿಕೊಂಡು ಕಾಲಿಗೆ ನಮಸ್ಕರಿಸಿದಳು. ರಾಮಕೃಷ್ಣ ರಾಯರೂ ಜೊತೆಯಲ್ಲೇ ನಮಸ್ಕರಿಸಿದರು. ಕಣ್ತುಂಬಿಕೊಂಡು ಹರಸಿದ ಸುಬ್ಬಜ್ಜಿಯ ಈ ಸನ್ಮಾನದ ದೃಶ್ಯವನ್ನು ಸುಹಾಸ ಸುಜಾತ ಅವಾಕ್ಕಾಗಿ ನೋಡುತ್ತಿದ್ದರು.

ದಾರಿಯುದ್ದಕ್ಕೂ ರಾಮಕೃಷ್ಣ ರುಕ್ಮಿಣಿ ದಂಪತಿಗಳ ಉಪಚಾರ ಮತ್ತು ಒಳ್ಳೆಯತನವನ್ನು ಕೊಂಡಾಡುತ್ತಾ ಮೂವರೂ ಹಿಂದಿರುಗಿದರು.

ಇತ್ತ ಸರಿತಾ ಒಂದು ಹಾಡಿನ ಕಾರ್ಯಕ್ರಮಕ್ಕೆ ನವ್ಯ ಹಾಗೂ ಜೀವನ್ ಇಬ್ಬರನ್ನೂ ಆಹ್ವಾನಿಸಿರುತ್ತಾಳೆ.ನವ್ಯ ಕಾರ್ಯಕ್ರಮಕ್ಕೆ ಹೋಗಲು ಬಸ್ ಸ್ಟಾಪ್ ನಲ್ಲಿ ಕಾಯುತ್ತ ಇರುತ್ತಾಳೆ. ಅಷ್ಟರಲ್ಲಿ ಜೀವನ್ ಬೈಕ್‌ನಲ್ಲಿ ಅದೇ ದಾರಿಯಲ್ಲಿ ಬಂದವನು ನವ್ಯಳನ್ನು ಕಂಡು ಬೈಕ್ ನಿಲ್ಲಿಸಿ "ಸರಿತಾಳ ಕಾರ್ಯಕ್ರಮಕ್ಕೆ ಹೋಗ್ತಾ ಇದೀನಿ, ಬರ್ತೀಯಾ' ಎಂದು ಕರೆದಾಗ ನವ್ಯಾ ಖುಷಿಯಿಂದಲೇ " ನಾನೂ ಅಲ್ಲಿಗೇ ಹೊರಟಿದ್ದೆ" ಅಂತ ಹೇಳುತ್ತಾ ಬೈಕ್ ಏರುತ್ತಾಳೆ.

ಜೀವನ್ ಜೊತೆ ಪಯಣಿಸುವಾಗ ಅದೇನೋ ಹರ್ಷ [illegible] ಮನಸ್ಸು,

ಒಟ್ಟಿಗೆ ಕುಳಿತು ಕಾರ್ಯಕ್ರಮ ವೀಕ್ಷಿಸುತ್ತಿರುವಾಗ ನವ್ಯಳ ಪಾತ್ರ, [illegible] ಜೀವನ್ ಗೆ ಅವಳಿಗೆ ತನ್ನ ಮೇಲೆ ಇಷ್ಟ ಇರುವುದು ಖಾತ್ರಿಯಾಗುತ್ತದೆ.

ಅವಳೊಂದಿಗೆ ಆಗಾಗ ಹರಟುತ್ತಲೇ ವೇದಿಕೆಯ ಕಡೆ ಲಕ್ಷ್ಯ ಕೊಡುತ್ತಿರುತ್ತಾನೆ.

ಸರಿತಾಳನ್ನು ಬಹಳಷ್ಟು ಹೊಗಳಿ ಪರಿಚಯಿಸಿದಾಗ ಎಲ್ಲರೂ ಚಪ್ಪಾಳೆ [illegible] ಸ್ವಾಗತಿಸುತ್ತಾರೆ. ಆಕೆಯ ಗಾಯನ ಆರಂಭವಾದೊಡನೆ ಜೀವನ್ [illegible] ಕಾಣುತ್ತಾ ಮೈ ಮರೆತು ನವ್ಯ ಕರೆದರೂ ಮಾತನಾಡದಿದ್ದಾಗ ನವ್ಯ ಸರಿತಾ ಬಗ್ಗೆ ಅಸೂಯೆ ವ್ಯಕ್ತಪಡಿಸುತ್ತಾಳೆ.

'ಹಾಡು ನಿನ್ನನ್ನು ಸಮ್ಮೋಹನಗೊಳಿಸಿರಬೇಕಲ್ಲಾ ನಾನು ಮಾತಾಡಿದ್ದೂ ಕೇಳಿಸ್ತಾ ಇಲ್ಲ' ಅಂತ ಜೀವನ್ ನನ್ನು ಕುಟುಕುತ್ತಾಳೆ

ಜೀವನ್ ಗೆ ಅವಳ ಅಸೂಯೆ ಇಷ್ಟವಾಗದೆ,ಅವರಿಬ್ಬರ ನಡುವೆ ಒಂದು ಸಣ್ಣ ಜಗಳವೇ ಆಗಿ ಮಾತಿನ ಕಟಿಪಟಿ ಇಬ್ಬರಿಗೂ ಬೇಸರತರುತ್ತದೆ.

ಕಾರ್ಯಕ್ರಮ ಮುಗಿಯುತ್ತಿದ್ದಂತೆ ಸರಿತಾಳನ್ನು ಅಭಿನಂದಿಸಲು ಹೋದಾಗ ಸರಿತಾ ನವ್ಯಳನ್ನು ಕಂಡು "ಬಂದ್ಯಲ್ಲ. ಖುಷಿಯಾಯ್ತು" ಅಂತ ಸಂತೋಷಪಡುತ್ತಾಳೆ.

ಜೀವನ್‌ನನ್ನು ಕಂಡು "ಜೀವನ್, ಸ್ವಲ್ಪ ಹೊತ್ತು ಇರ್ತೀಯಾ.ನಾನು ನಿನ್ನ ಜೊತೆ ಬರಬಹುದಾ" ಅನ್ನುತ್ತಾಳೆ.

ಇವಳಿಗೆ ನಾನು ನವ್ಯಾಳನ್ನು ಕರೆದುಕೊಂಡು ಬಂದಿದ್ದು ಗೊತ್ತಿಲ್ಲವಲ್ಲಾ ಅಂದುಕೊಂಡ ಜೀವನ್ ಏನು ಹೇಳುವುದೆಂದು ತೋಚದೇ ಕಸಿವಿಸಿಯಾಗಿ ನವ್ಯಳ ಮುಖ ನೋಡಿದಾಗ

"ನೀನು ಅವಳನ್ನು ಕರೆದು ಕೊಂಡು ಬಾ... ನಾನು ಹೋಗ್ತೀನಿ ಪರವಾಗಿಲ್ಲ" ಅಂದವಳೇ ಜೀವನ್ ಉತ್ತರಕ್ಕೆ ತಿರುಗಿಯೂ ನೋಡದೇ ಹೊರಡುತ್ತಾಳೆ.

ಹಟ ಮತ್ತು ಬೇಸರ ಅವಳ ಮನಸ್ಸನ್ನು ವ್ಯಗ್ರವಾಗಿಸಿರುತ್ತದೆ.

ಮನೆ ಸೇರಿದವಳೇ ಮಂಚದಲ್ಲುರುಳಿ ಬೇಸರ ನುಂಗಿ ಸಮಾಧಾನ ಪಟ್ಟು ಕೊಳ್ಳಲು ಪ್ರಯತ್ನಿಸುತ್ತಾಳೆ.

ಸಂಜೆಯ ಸಮಯವಾಗಿದ್ದ ಕಾರಣ ನವ್ಯಳ ಪಕ್ಕದ ಮನೆಯ ಪದ್ಮಕ್ಕ ನವ್ಯ ಒಬ್ಬಳೇ ಇದ್ದಾಳಲ್ಲ ಎಂದುಕೊಂಡು ರಾತ್ರಿ ಊಟಕ್ಕೆ ಅವರ ಮನೆಗೇ ಬರಬೇಕೆಂದು ಕರೆಯೋಣ ಅಂದುಕೊಂಡು ಬಾಗಿಲು ಬಡಿಯುತ್ತಾಳೆ.

ಬಾಗಿಲು ತೆರೆಯದುದಕ್ಕೆ ಅಚ್ಚರಿ ಪಡುತ್ತಾ ಒಬ್ಬಳೇ ಹುಡುಗಿ, ಏನು ಮಾಡುತ್ತಿದ್ದಾಳೋ ಎಂದು "ನವ್ಯಾ" ಎಂದು ಗಟ್ಟಿಯಾಗೇ ಎರಡು ಬಾರಿ ಕರೆದಾಗ ನವ್ಯಾ ಬಂದು ಬಾಗಿಲು ತೆರೆಯುತ್ತಾಳೆ.

ಬಾಡಿದ ಮುಖ ಬತ್ತಿದ ಕಣ್ಣು ನೋಡಿದ ಪದ್ಮಕ್ಕ "ಏನೇ ನವ್ಯಾ, ಹುಷಾರಿಲ್ವಾ" ಅಂದಾಗ "ಏನಿಲ್ಲ ಸ್ವಲ್ಪ ತಲೆ ನೋಯ್ತಿತ್ತು ಅಷ್ಟೇ..ಮಲಗಿದ್ದೆ" ಅನ್ನುವಳು.

"ರಾತ್ರಿ ಊಟಕ್ಕೆ ನಮ್ಮನೇಗೆ ಬಾ ಅಂತ ಹೇಳಿ ಹೋಗೋಣ ಅಂತ ಬಂದೆ. ಒಬ್ಬಳೇ ಇದ್ಯಲ್ಲಾ. ಏನೂ ಮಾಡ್ಕೋಬೇಡ. ನಮ್ಮನೇಗೇ ಬಾ" ಎಂದು ಹೇಳಿ ಅವಳೇ ಬಾಗಿಲು ಎಳೆದುಕೊಂಡು ಹೋದಾಗ ನವ್ಯ ಶೂನ್ಯ ದೃಷ್ಟಿ ಬೀರುತ್ತಾ ಮತ್ತೆ ತನ್ನ ಕೋಣೆಗೆ ಹೋಗಿ ಮಂಚದ ಮೇಲುರುಳಿದಳು.

ಸುಹಾಸನವರು ಮನೆ ತಲುಪುವಾಗ ರಾತ್ರಿ ಒಂಬತ್ತಾಗಿತ್ತು.

ಸುಜಾತಾ ಮಗಳ ಮುಖ ನೋಡಿ ಗಾಬರಿಯಾಗಿ "ಇದೇನೇ ನವ್ಯ..ಯಾಕ್ ಹಿಂಗ್ ಇದ್ದೀಯ?" ಅಂತ ಕೇಳಿದಾಗ, ನವ್ಯ "ತುಂಬಾ ತಲೆನೋವು ಬಂದಿತ್ತು ಮಲಗಿದ್ದೆ. ಪದ್ಮತ್ತೆ ರಾತ್ರಿ ಊಟಕ್ಕೆ ಒತ್ತಾಯ ಮಾಡಿ ಕರೆದುಕೊಂಡು ಹೋದರು" ಅಂದಾಗ ಸುಜಾತಾ ಪದ್ಮಕ್ಕ ನಿಗೆ ಮನದಲ್ಲಿಯೇ ಧನ್ಯವಾದಗಳನ್ನು ಹೇಳಿಕೊಂಡಳು. ರುಕ್ಮಿಣಿ ಕೊಟ್ಟ ಗೋದಿ ಹಲ್ವವನ್ನು ನವ್ಯಳಿಗೆ ಕೊಟ್ಟ ಸುಜಾತ, ಅಲ್ಲಿಯ ಉಪಚಾರದ ಬಗ್ಗೆ ಹೇಳುತ್ತಿರುವಾಗ ಸುಬ್ಬಜ್ಜಿ ಕಷಾಯ ಮಾಡಿಕೊಂಡು ಬಂದೇ ಬಿಟ್ಟಿದ್ದರು .

❖ ❖ ❖

ಟ್ರಾವೆಲ್ ಏಜೆನ್ಸಿಯ ಮುಖಾಂತರವಾದ ಕಾರಣ ಕಾಶಿಗೆ ತಲುಪುವುದು ಸುಲಭವಾಯಿತು. ಎಂದೂ ವಿಮಾನ ಹತ್ತದ ಸುಬ್ಬಜ್ಜಿಗೆ ಈ ದೂರ ಪ್ರಯಾಣ ಹೊಸ ಅನುಭವ. ಕಾಲಕಳೆದಂತೆ ಎಷ್ಟೆಲ್ಲ ಅನುಕೂಲವಾಗಿದೆ ಎಂದು ಅಚ್ಚರಿ ಪಡುತ್ತಾ ಉತ್ಸಾಹದಿಂದ ತಿರುಗಾಡಿದರು. ಎಂದೂ ಅಷ್ಟು ದೂರದ ಪ್ರಯಾಣ ಮಾಡದ ಸುಬ್ಬಜ್ಜಿಗೆ ಸುಹಾಸ ಮೊಬೈಲ್‌ನಲ್ಲಿಯೇ ಗೂಗಲ್ ಮ್ಯಾಪ್ ಬಳಸಿ,ಎಷ್ಟು ದೂರವಿದೆ ಎಂದು ನೋಡುವುದು ಸಾಗುವ ದಾರಿಯನ್ನು ಮೊಬೈಲ್ ನಲ್ಲಿಯೇ ವೀಕ್ಷಿಸುವುದು ಮೊದಲಾದವನ್ನು ತೋರಿಸುತ್ತಾ ಆಗಿರುವ ಹೊಸ ಅವಿಷ್ಕಾರಗಳ ಬಗ್ಗೆ ಸುಬ್ಬಜ್ಜಿಗೆ ತಿಳಿಸಿ ಹೇಳುತ್ತಿದ್ದ. ಹೊರಗಿನ ದೊಡ್ಡ ದೊಡ್ಡ ಕಟ್ಟಡಗಳು, ಲಿಫ್ಟ್‌ಗಳು ಎಸ್ಕಲೇಟರ್‌ಗಳು ಎಲ್ಲವನ್ನೂ ನೋಡಿ ಬೆರಗಾದ ಸುಬ್ಬಜ್ಜಿ ಅಬ್ಬಾ ಕಾಲ ಎಷ್ಟು ಬದಲಾಗಿದೆ ಎಷ್ಟು ಮುಂದುವರೆದಿದೆ ಎಂದು ಆಶ್ಚರ್ಯ ಪಟ್ಟಳು..ಅಂದು ಸಂಜೆಯಾದ ಕಾರಣ ಮರುದಿನ ದೇವರ ದರ್ಶನಕ್ಕೆ ಹೋಗುವುದಾಗಿ ತೀರ್ಮಾನಿಸಿದರು. ಅಲ್ಲಿಯೇ ಒಂದು ಲಾಡ್ಜ್‌ನಲ್ಲಿ ಉಳಿದುಕೊಂಡರು. ಆಯಾಸವಾಗಿದ್ದ ಕಾರಣ ಎಲ್ಲರೂ ಊಟ ಮುಗಿಸಿ ಬೇಗ ಮಲಗಿದರು.

ಮರುದಿನ ಬೆಳಿಗ್ಗೆ ಬೇಗನೆ ಎದ್ದು ಮೂವರೂ ಕಾಶಿ ವಿಶ್ವನಾಥ ದೇಗುಲದ ದರ್ಶನಕ್ಕೆ ತೆರಳಿದರು.

ಕಾಶಿಯ ಆರಾಧನೆ, ಆ ವೈಭವ, ಜ್ಯೋತಿರ್ಲಿಂಗದ ದರ್ಶನ,
ಅಲಂಕಾರ, ಜನಸಾಗರ, ಭಕ್ತಿಭಾವ ಸ್ತುತಿ ಸ್ತೋತ್ರ, ವಿವಿಧ ವಿಧಿ ವಿಧಾನ,
ಮನಸ್ಕಾರ, ಎಂಥವರ ಲ್ಲಿಯೂ ಭಕ್ತಿ ಮೂಡಿಸುವ ಹಾಗೆ ಇತ್ತು.

ಕಾಶಿ ವಿಶ್ವನಾಥನ ದರ್ಶನ ಬಹಳ ಚೆನ್ನಾಗಿ ಆಯಿತು.

ಸುಬ್ಬಜ್ಜಿ ಅಲ್ಲಲ್ಲಿ ಬಹಳಹೊತ್ತು ಪ್ರಾರ್ಥಿಸುತ್ತಾ ನಿಂತುಬಿಡುತ್ತಿದ್ದರು. ಸುಹಾಸ ಸುಜಾತಳಿಗೆ "ಅಮ್ಮ ಎಲ್ಲಾದರೂ ನೋಡುತ್ತಾ ನಿಂತುಬಿಟ್ಟಾರು. ಗಮನಿಸಿ, ಅವರನ್ನು ಜೊತೇಲೇ ಕರೆದುಕೊಂಡು ಬಾ" ಎಂದು ಎಚ್ಚರಿಸಿದ್ದ

ಪವಿತ್ರ ಗಂಗೆಗೂ ನಮಸ್ಕರಿಸಿ, ಆಪ್ತರಿಗೆ, ಕುಟುಂಬದವರಿಗೆ,ಗಂಗಾ ಜಲವನ್ನು ತೆಗೆದುಕೊಂಡರು.

ದೇವಸ್ಥಾನಕ್ಕೆ 108 ಬಾರಿ ನಮಸ್ಕರಿಸಬೇಕು ಎಂದು ಸುಹಾಸ, ಸುಜಾತಾ, ಹೊರಟಾಗ ಸುಬ್ಬಜ್ಜಿ ತನಗೆ ಆಯಾಸವಾಗುತ್ತದೆ ಎಂದು ಅಲ್ಲೇ ಮರದ ಕೆಳಗೆ ವಿಶ್ರಾಂತಿ ತೆಗೆದುಕೊಳ್ಳುತ್ತೇನೆ ಎಂದು ಹೇಳಿ ಅವರನ್ನು ಕಳುಹಿಸಿ ಮರದ ಕಟ್ಟೆಯ ಮೇಲೆ ಕುಳಿತುಕೊಳ್ಳುತ್ತಾಳೆ.

"ಅಮ್ಮಾ ನಾವು ಬರುವವರೆಗೂ ಇಲ್ಲಿಯೇ ಇರು.ಎಲ್ಲಿಗೂ ಹೋಗಬೇಡ" ಎಂದು ಸುಹಾಸ ಹೇಳಿದಾಗ "ಹೌದು ಅತ್ತೇ..ಇಲ್ಲಿಯೇ ಇರಿ ಯಾರಾದರೂ ಕರೆದರೂ ಅಂತಲೋ... ಏನಾದರೂ ನೋಡಬೇಕು ಅಂತಲೋ ಅತ್ತಿತ್ತ ಹೋಗಬೇಡಿ" ಎಂದು ಮತ್ತೊಮ್ಮೆ ಎಚ್ಚರಿಸಿ ಸುಜಾತ ಸುಹಾಸನ ಹಿಂದೆ ಹೊರಟಳು.

ಆಗಸದಲ್ಲಿ ಅಗಲವಾಗಿ ಹಬ್ಬಿದ್ದ ಮರವನ್ನು ತಲೆ ಎತ್ತಿ ನೋಡಿದ ಸುಬ್ಬಜ್ಜಿ ಹಿಂದೆತಿರುಗಿ ನೋಡಿದ ಸುಜಾತ ತನ್ನತ್ತ ಕೈ ಬೀಸಿದ್ದನ್ನು ಕಂಡು ತಾನೂ ಕೈ ಬೀಸಿದಳು.

ಅಧ್ಯಾಯ 15

ಡಿ.ಎಸ್. ಪುಷ್ಪ

ಕಾಶಿ ವಿಶ್ವನಾಥನ ದರ್ಶನದಿಂದ ಅತ್ಯಂತ ಪುಳಕಿತರಾಗಿದ್ದರು ಸುಬ್ಬಜ್ಜಿ. ಮನೆಯವರೆಲ್ಲರೂ ಹೀಗೆ ಒಗ್ಗಟ್ಟಾಗಿ ಪರಮೇಶ್ವರನ ದರ್ಶನಕ್ಕೆ ಬಂದಿದ್ದು ಮಹಾಭಾಗ್ಯ ವಿಶೇಷವೆಂದೇ ತಿಳಿದರು. ಯುಗಯುಗ ಕಳೆದರೂ ನಮ್ಮ ಹಂಗೆ ಇರೋ ಹತಭಾಗ್ಯರಿಗೆ ಸದಾ ನೀನೇ ದರ್ಶನ ಭಾಗ್ಯ ಕರುಣಿಸಪ್ಪ.. ಕೈಬಿಡದೆ ಎಲ್ಲರನ್ನೂ ಕಾಪಾಡಪ್ಪ. ಹೀಗೆ ಮನಸ್ಸಿನ ತುಂಬಾ ಭಕ್ತಿ ಭಾವಗಳನ್ನು ತುಂಬಿಕೊಂಡು ಅರ್ಧ ನಿಮೀಲಿತ ನೇತ್ರದೊಂದಿಗೆ ಕೈ ಮುಗಿಯುತ್ತಾ ಶಿವ ಶಿವಾ ಶಂಕರ... ಎಂದು ಜಪಿಸಲು ಶುರು ಮಾಡಿದರು ಸುಬ್ಬಜ್ಜಿ.

ವಿಶ್ವನಾಥನ ಗುಡಿಗೆ ಸುತ್ತು ಹಾಕಲು ಹೋದವರಿನ್ನೂ ಬಂದಿರಲಿಲ್ಲ. ಗಂಗೆಯ ಅನತಿ ದೂರದಲ್ಲಿ ಶವದಹನ, ಪಿಂಡ ಪ್ರದಾನಿಸುವುದು ಕಾಣಿಸುತ್ತಿತ್ತು.

ಮನಸ್ಸು ವ್ಯಾಕುಲಗೊಂಡಂತೆ ಆಯ್ತು. ನಿಧಾನವಾಗಿ ಕಣ್ಣು ಮುಚ್ಚಿದರು ಸುಬ್ಬಜ್ಜಿ.

ಮನಸ್ಸು ಹಿಂದೆ ಹಿಂದೆ ಓಡಿತು ತಾನು ಎಲ್ಲಿರುವೆ ತಾನ್ಯಾರು ಎಂಬ ಪ್ರಜ್ಞೆಯೂ ಮರೆಯಾಗಿ ಪರವಶವಾದಂತೆ ಜೀವ ಭಾವ ಒಂದಾಗಿ ಗತಿಸಿದ ದಿನಗಳ ಭಾವ ಪ್ರಪಂಚದಲ್ಲಿ ಮುಳುಗಿ ಹೋಯಿತು. ಏನೋ ಒಂದು ರೀತಿ ಸುಸ್ತು ಮಂಪರು! ತಾತ ತಿಮ್ಮಪ್ಪಯ್ಯ ಕಣ್ಣ ಮುಂದೆ ನಿಂತಂತಾಯ್ತು. ತನ್ನ ಗಂಡ ಸೀತಾರಾಮ ಬಂದಂತಾಯಿತು ಸೋದರತ್ತೆಯರಾದ ಸತ್ಯಭಾಮೆ ಸಾವಿತ್ರಿ ಜೊತೆಗೆ ಸೀತತ್ತಿಗೆ ಎಲ್ಲರೂ ಯಾಕೆ ಹೀಗೆ ಗಿರಿ ಗಿರಿ ಗುಟ್ಟುತ್ತಾ ತನ್ನ ತಲೆಯೊಳಗೆ ಸುಳಿದಾಡುತ್ತಿದ್ದಾರೆ ಎಂದು ತಿಳಿಯದಾಯಿತು. ಎಂದೋ ಗತಿಸಿ ಹೋದ ಇವರೆಲ್ಲ ಇವತ್ತು ಯಾಕೆ ಹೀಗೆ ಗಕ್ಕನೆ ತನ್ನ ಮನದಲ್ಲಿ ಹಾಜರಿ ಹಾಕುತ್ತಿದ್ದಾರೆ? ಸುಬ್ಬಜ್ಜಿಗೆ ಕಳವಳವಾಯಿತು

ಹೇಳಲಾರದ ಯಾವುದೋ ನೋವಿನ ತಂತಿಗಳು ಮೀಟಿದಂತೆ ತಲೆ ಜುಮ್ ಎಂದಿತು. ತಲೆ ಯಾವುದಕ್ಕೋ ಒರಗಿದೆ. ಕಾಲು ನೀಡಿಕೊಂಡಿದೆ. ಸ್ವಲ್ಪ ಸುಸ್ತಾಗಿದ್ದ ಸುಬ್ಬಜ್ಜಿ ತಂಗಾಳಿಗೆ ಮುಖ ಒಡ್ಡಿ ಹಾಗೇ ನಿದ್ರೆಗೆ ಜಾರಿದರು.ಕಾಶಿ ವಿಶ್ವನಾಥನಿಗೂ ತನ್ನೀ ಕುಟುಂಬಕ್ಕೂ ಏನು ಸಂಬಂಧ,ಇಲ್ಲ್ಯಾಕೆ ಇವರೆಲ್ಲಾ ನೆನಪಾಗುತ್ತಿದ್ದಾರೆ. ನನ್ನ ತಾತ ಮುತ್ತಾತ ಎಲ್ಲರೂ ಕಾಶಿಗೆ ಬಂದು ಹೋದವರೇ. ಮುತ್ತಾತ ಶಂಭು ಭಟ್ಟರು ಮಾತ್ರ ಕಾಶಿಗೆ ಬಂದವರು ಮತ್ತೆ ಮನೆಗೆ ವಾಪಸ್ಸು ಬಂದೇ ಇಲ್ಲ .ಇಲ್ಲೇ ಗಂಗೆಯಲ್ಲಿ ತೇಲಿ ಹೋದ್ರಂತೆ ಅಂತ ಸುದ್ದಿ ಬಂದಿದ್ದು ,ಒಂದು ವರ್ಷದ ನಂತರ ವಾರಣಾಸಿ ವೇದ ಪಾಠಶಾಲೆಗೆ ಸೇರಿಕೊಂಡ ಗುಂಡಾ ಶಾಸ್ತ್ರಿಗಳಿಂದ. ಆಗೆಲ್ಲಾ ರೈಲು ಬಸ್ಸು ಏನಿತ್ತು? ಯಾರು ಯಾರೋ ಪಥಿಕರ ಜೊತೆಯಲಿ ಜೊತೆ ಸಿಕ್ಕರೆ ಸಾಕು ಅಂತ ನಡ್ಕೊಂಡೇ, ಇಲ್ಲ ಅಂದ್ರೆ ಯೋಗ ಇದ್ರೆ ಎತ್ತಿನ ಗಾಡಿನೋ ಸಾಮಾನುಸರಂಜಾಮು ಸಾಗಿಸೋ ಕುದುರೆ ಗಾಡಿನೊ.. ಏನೋ ಒಂದು ಸಿಕ್ಕಿ ಯಾತ್ರೆ ಸಾಗುತ್ತಿತ್ತು. ದೇವರ ದರ್ಶನ ಮಾಡಿ ಕಾಶಿ ತೀರ್ಥ ಪ್ರಸಾದ ತಗೊಂಡು ವಾಪಾಸು ಊರಿಗೆ ಬರುವುದೇ ಒಂದು ಪುಣ್ಯ ವಿಶೇಷ. ಯಾತ್ರೆ ಮಾಡಿದೋರಲ್ಲಿ ಉಳಿದೋರಿಗಿಂತ ಅಳಿದೋರೇ ಜಾಸ್ತಿ ಇದ್ರಂತೆ. ಪುಂಖಾನು ಪುಂಖ ವಾಗಿ ನೆನಪಿನ ವಾಲಗ ಸುಬ್ಬಜ್ಜಿಯ ಕಿವಿ ಊದುತ್ತಿತ್ತು.

ಮುತ್ತಾತ ಶಂಭುಭಟ್ಟರ ನೆನಪಾಗಿ ಸುಬ್ಬಜ್ಜಿ ವ್ಯಥೆ ಪಟ್ಟವರಂತೆ ಕಂಡರು. ತನ್ನ ಚಂದದ ಸೋದರತ್ತೆಯರು ಪಟ್ಟ ಪಾಡು, ಅವರ ನೋವಿನ ಬದುಕು ನೆನಪಾಯಿತು. ಕುಟುಂಬಸ್ಥರ ಕುರುಡು ಕಣ್ಣು ಹೆಣ್ಣು ಮಕ್ಕಳ ಕಣ್ಣೀರು ಒಂದೊಂದೂ ನೆನಪಾಗಿ ಸುಬ್ಬಜ್ಜಿ ಕಣ್ಣ ಕೊನೆಯಲ್ಲಿ ನೀರು ಹರಿಯಿತು.

ಒಂದೊಂದಾಗಿ ನೆನಪಿನ ಚಂದ್ರಸಾಲೆಯಲ್ಲಿ ವೇಷಗಳು ಕಣ್ಣಮುಂದೆ ನಲಿದಾಡಿದವು. ಇದು ಕನಸೇ... ನಿಜವೇ... 'ಸುಬ್ಬಜ್ಜಿಯ ನೆನಪಿನ ಕೋಶದಿಂದ ಹೆಕ್ಕಿ ತೆಗೆದ ನಿಜ ಜೀವನದ ಕಥೆಗಳೇ ಆಗಿದ್ದವು. ಅವುಗಳಲ್ಲಿ ಎಷ್ಟೊಂದು ಕಾಠಿಣ್ಯ, ಕಾಮ ಮೋಸ ವಂಚನೆ ಬಸಿರು ಬವಣೆ... ಹಡೆದ ಮಕ್ಕಳ ಕತ್ತಲೆಯ ಭವಿಷ್ಯ ಅನಾಥ ಸ್ಥಿತಿ ಸೂರಿಲ್ಲದೆ ನೆರಳಿಲ್ಲದೆ ದಿಕ್ಕು ದೆಸೆ ಇಲ್ಲದ ಅಲೆದಾಟ. ಕುಟುಂಬದ ಹೆಣ್ಣು ಮಕ್ಕಳನ್ನು ಹೀಗೆ ನಿರ್ದಾಕ್ಷಿಣ್ಯವಾಗಿ ಮನೆಯ ಗಂಡಸರು ನಡೆಸಿಕೊಂಡ ರೀತಿ ಮಾತ್ರ ಥೂ! ಯಾವ ಪಾಪಿಗೂ ಬರಬಾರದು. ಸಾವಿತ್ರಿ ಸತ್ಯಭಾಮೆಯರಿಗಿನ್ನೂ ಹನ್ನೊಂದರ ವಯಸ್ಸಂತೆ ಮದುವೆಗೆ ಗಂಡು ನೋಡ್ತಾ ಇದ್ರು ತಾತ. ಪುಟ್ಟ ಹೆಣ್ಣು ಮಕ್ಕಳು. ನೀಳ ಜಡೆ ಗುಂಗುರು ಕೂದಲಿನ ಕೆಂಪನೆ ಗುಲಾಬಿ ಪಾದಗಳು, ಎಳಸು ಮೈಯ ಚಂದದ ಹುಡುಗಿಯರು. ಒಂದು ದಿನ ಮನೆ ಹಿತ್ತಲಿನಲ್ಲಿ ಅತ್ತಿಗೆ ಜೊತೆ ಸೇರಿಕೊಂಡು ಮಲ್ಲಿಗೆ ಮೊಗ್ಗು ಬಿಡಿಸುತ್ತಿದ್ದವು. ಜೊತೆ ಜೊತೆಯಾಗಿ ಹಾಡಿಕೊಳ್ಳುತ್ತಾ ನಗುತ್ತಾ ಇದ್ವು. ಸತ್ಯಭಾಮ ಹೊಟ್ಟೆ

ನೋವಿಂದ ಮುಖ ಕಿವುಚುತ್ತಿದ್ದು. ಜೊತೆಯಲ್ಲಿದ್ದ ಸಾವಿತ್ರಿ ಹಾಗಲಕಾಯಿ ರಸ ಕುಡಿಯೇ ಅಕ್ಕಾ... ಹೊಟ್ಟೆ ನೋವು ಹೋಗುತ್ತೆ ಅಂತ ತಮಾಷೆ ಮಾಡ್ತಿದ್ಲು. ಶುರುವಾದ ಹೊಟ್ಟೆ ನೋವು ಜಾಸ್ತಿ ಆಗ್ತಾ ಬಂತು. ಅತ್ತಿಗೆಗೆ ಸಂಶಯ ಬಂತು. ರಾತ್ರಿ ಮಲಗಿ ಬೆಳಗಾಗಬೇಕಾದರೆ ಸತ್ಯಭಾಮೆ ರಜೋದರ್ಶನ ವಾಯಿತು ತಾತನಿಗೆ ಸುದ್ದಿ ಹೋಯಿತು ಎಲ್ಲರೂ ತಲೆಯ ಮೇಲೆ ಕೈ ಹೊತ್ತು ಕುಳಿತರು. ಸುದ್ದಿ ಹೊರಗಡೆ ಹರಡದಂತೆ ಕಾವಲು ಕಾದರು. ಪಾಪ ಹೆಣ್ಣು ಮಕ್ಕಳು! ಅಟ್ಟೆ ಬೆಟ್ಟ ಒಂದು ಮಾಡಿ ಕುಣಿದಾಡಿ ಕುಪ್ಪಳಿಸಿ ಹಾಡಿ ನಲಿದು ನಗಿಸಿ ಇರಬೇಕಾದವು ಗಳನ್ನು ದೂರದ ಕೊಟ್ಟಿಗೆ ಯಒಂದು ಮೂಲೆಯಲ್ಲಿ ಕೂಡಿ ಹಾಕಿದರು.

ಯಾಕೆ ಏನು ಎತ್ತ ಯಾರ ಬಳಿ ಕೇಳಿಯಾವು.ತಾಯಿಯಿಲ್ಲದ ತಬ್ಬಲಿಗಳವು. ಎರಡು ಮೂರು ದಿನಕಳೆದವಷ್ಟೇ.

ಊಟ ತಿಂಡಿ ನೀರು ಬೆಲ್ಲ ಎಲ್ಲ ಅಲ್ಲಿಗೇ ಹೋಯಿತು. ಅತ್ತರೂ ಹೊಟ್ಟೆ ಕೇಳತ್ಯೇ... ಅಲ್ಲಿ ಮುಟ್ಬೇಡ... ಇಲ್ಲಿ ಬರಬೇಡ... ಬಟ್ಟೆ ಎಲ್ಲ ಮುದುರಿಕೋ ಸ್ನಾನಕ್ಕೆ ನೀರ್ ತೋಡಿ ಹಾಕಿದ್ದನ್ನು ಮಿಂದು ಒಳಗೆ ಬಾ... ದೂರ ಇರು ಹೀಗೆ ಆಜ್ಞೆ ಕಟ್ಟಪ್ಪಣೆ ಹೊರಡಿಸುತ್ತಾ ಇದ್ರು ಹಿರಿಯರು.

ಯಾರಿಗೆ ಗೊತ್ತು. ಆಗಿನ ಕಾಲಕ್ಕೆ ಮದುವೆಗಿಂತ ಮೊದಲು ಮೈನೆರೆದರೆಂದರೆ ಅವುಗಳನ್ನು ಮದುವೆಯಾಗಲು ಯಾರೂ ಮುಂದೆ ಬರುತ್ತಿರಲಿಲ್ಲವಾಗಿ ತಾತನಿಗೆ ಅಪ್ಪನಿಗೆ ಜೊತೆಗೆ ಮನೆಯ ಹಿರಿಯರಿಗೆ ಆತಂಕ ಕಾಡಲು ಸುರುವಾಗಿದ್ದು ಆ ನಿರುಪದ್ರವಿ ದೇವತೆಯಂತಿದ್ದ ನನ್ನ ಪ್ರೀತಿಯ ಅತ್ತೆಯಂದಿರನ್ನು ಗಡಿಪಾರು ಮಾಡಿ ಯಾವುದೋ ದೇವಸ್ಥಾನಕ್ಕೆ ದೇವರ ಸೇವೆಗೆ ಬಿಡುವುದೆಂದು ಗುಟ್ಟಾಗಿ ಮಾತುಕತೆ ನಡೆಯಿತು. ನಾನಿನ್ನೂ ಪೂರಾ ಚಿಕ್ಕವಳು ಅವರ ಮಾತಿನ ಅಂತರಾತ್ಮ ತಿಳಿಯಲಾರದವಳಾಗಿದ್ದೆ.

ಯಾವುದೋ ಊರ ಪ್ರಮುಖರ ಹತ್ತಿರ ಗುಟ್ಟಾದ ಒಪ್ಪಂದವಾಗಿ ಅಲ್ಲಿಗೆ ಕಳುಹಿಸಲು ಸಕಲ ಏರ್ಪಾಟು ಮಾಡಿಕೊಂಡ ತಾತ ಮತ್ತುಳಿದವರು ಒಂದು ದಿನ ಮಧ್ಯರಾತ್ರಿ ಕಳೆದು ಎರಡು ಗಳಿಗೆಗೆ ಹೆಣ್ಣು ಮಕ್ಕಳಿಬ್ಬರನ್ನು ನಿದ್ರೆಯಿಂದ ಎಬ್ಬಿಸಿ ಕೊಂಡು ಸಾಮಾನು ತುಂಬಿದ ಗಾಡಿಗೆ ಬೈ ಹುಲ್ಲು ತುಂಬಿ ಮಕ್ಕಳಿಬ್ಬರನ್ನೂ ಹಾಕಿ ಕಳುಹಿಸಿಯೇ ಬಿಟ್ಟರು. ಅಳುತ್ತಾ ಗೋಳುಗರೆಯುತ್ತಿದ್ದ ತಮ್ಮದೇ ಕುಟುಂಬದ ಹೆಣ್ಣು ಮಕ್ಕಳನ್ನು ಕೈಯಾರೆ ಸಮಾಜದ ಕಟ್ಟಳೆಗೆ ಹೆದರಿ ದೂರ ತಳ್ಳಿ ಹೇಳ ಹೆಸರಿಲ್ಲದಂತೆ ಮಾಡಿದ್ದು ಮಾತ್ರ ಅನ್ಯಾಯದ ಪರಮಾವಧಿಯಲ್ಲದೆ ಮತ್ತೇನು? ನನ್ನ ಮುದ್ದಿನ ಅತ್ತೆಯಂದಿರನ್ನು ಎಲ್ಲಿಗೆ ಕಳಿಸಿದರು? ಆಕಾಶ ಪಾತಾಳ ಒಂದು ಮಾಡಿ ಅಳುತ್ತಿದ್ದ ನನ್ನನ್ನು ಎಳಕೊಂಡು ಹೋಗಿ ಕೋಣೆ ಬಾಗಿಲು ಹಾಕಿ ಎರಡು ಬಿಗಿದದ್ದು ಮಾತ್ರ ನೆನಪಾಗಿ ಉಳಿದಿದೆ. ಸುಬ್ಬಮ್ಮ ಅವಡುಗಚ್ಚಿದರು. ಯಾರದ್ದೂ

ಮಾತಿಲ್ಲ ಕತೆಯಿಲ್ಲ..ಎಲ್ಲಾ ಕಣ್ಣು ಸನ್ನೇಲೇ ಮಾತು. ನನಗೇನೂ ತಿಳಿಯ ಲೊಲ್ಲದು. ಅತ್ತೆಯರಿಬ್ಬರಿಲ್ಲದೆ ನನ್ನ ಬಾಳು ಶೂನ್ಯ ಎನಿಸಿತು. ವರ್ಷವೆರಡು ಕಳೆಯಿತು ಗಾಡಿಯ ನಾಗ ಮತ್ತೆ ಮನೆ ಕಡೆ ಸುಳಿದಾಡಿದ. ನನಗೆ ಭಯವಾಯಿತು. ನನ್ನನ್ನು ಹಾಗೆ ಮಧ್ಯ ರಾತ್ರಿಯಲ್ಲಿ ಮೂಟೆ ಕಟ್ಟಿ ಹೊರ್ತಾನೋ ಏನೋ ಎಂದುಕೊಂಡೇ ಕತ್ತಲ ಕೋಣೇಲ ನಾನೇ ಸೇರಿಕೊಂಡೆ. ಎರಡು ದಿನ ಮನೆ ಕಡೆ ಇದ್ದ ಗಾಡಿ ನಾಗ. ಗುಸು ಗುಸು–ಪಿಸಿಪಿಸಿ ಮತ್ತೆ ಶುರುವಾಯ್ತು ಹೆತ್ತಳಂತೆ. ಮಗುವಂತೆ. ಇಷ್ಟಂತೂ ಕಿವಿಗೆ ಬಿತ್ತು. ಯಾರು ಹಡೆದಿದ್ದಾರೆ ಅಂತ ಅತ್ತಿಗೆಮ್ಮನ ಬಳಿ ಪಿಸುಗುಟ್ಟಿದ್ರೆ ದೋಸೆ ಕಾವಲಿಯಲ್ಲಿದ್ದ ಸಟುಗದಿಂದ ಬರೆ ಮಾತ್ರ ಬಿತ್ತು ಮುಂಗೈಗೆ . ಒಮ್ಮೆ ನೋವಿನಿಂದ ಮುಖ ಹಿಂಡಿದರು ಸುಬ್ಬಜ್ಜಿ.

ಕಾಲ ಸರಿಯಿತು ವಿಚಾರ ಹೆಚ್ಚೇನೂ ತಿಳಿಯಲಿಲ್ಲ ನನಗೆ ಗಂಡು ನೋಡಲು ಶುರು ಮಾಡಿದರು 14–15ನೇ ವಯಸ್ಸಿಗೆ ಬಂದಾಗ ನಂಗೆ ಮದುವೆ ಮಾಡಿದ್ರು ಮತ್ತೆಂದೂ ಸತ್ಯಭಾಮೆ ಸಾವಿತ್ರಿ ಅವರ ಬಗ್ಗೆ ತಿಳಿಯಲಿಲ್ಲ ಅಥವಾ ನಂಗೆ ಬೇಕೂಂತಾನೇ ತಿಳಿಸಲಿಲ್ವಾ ಗೊತ್ತಾಗಲೇ ಇಲ್ಲ ಆದರೆ ಒಂದು ದಿನ ಕಾಶಿಗೆ ವೇದ ಪಾಠಶಾಲೆ ಕಲಿಯಲು ಹೋಗಿದ್ದ ಗುಂಡಾ ಶಾಸ್ತ್ರಿಗಳು ಮಾತ್ರ ನಿಮ್ಮನೆ ಹೆಣ್ಣು ಮಕ್ಕಳನ್ನು ಕಾಶಿಲಿ ನೋಡ್ದೆ.ಯಾರೋ ದೊಡ್ಡವರ ಜೊತೆಯಲ್ಲಿ ಇದ್ದರು. ಕೈಯಲ್ಲಿ ಒಂದು. ಜೊತೆಯಲ್ಲಿ ಒಂದೆರಡು ಕೂಸುಗಳಿದ್ದವು ಅಂದ್ರು .ಮುಂಡೇವು ಅಲ್ಲಿ ಯಾಕೆ ಹೋದ್ವು ಅಂತ ಅಜ್ಜಯ್ಯ ಬೈದ್ಕೊಂಡ್ರು. ಯಾರೋ ಪುಣ್ಯಾತ್ಮ ಸಾಕ್ತಾ ಇದ್ದಾನೆ ಅಂತ ಕಾಣುತ್ತೆ ಅಂತ ದೊಡ್ಡಪ್ಪಯ್ಯನ ಹತ್ತಿರ ಕೆಳ ಸ್ತರದಲ್ಲಿ ಮಾತಾಡುವುದು ಕಿವಿಗೆ ಬಿತ್ತು. ಒಳಗೆ ಆತಂಕವಿದ್ದರೂ ಒಂತರ ನಿಶ್ಚಿಂತೆಯಿಂದ ಇದ್ದರು ಅಜ್ಜಯ್ಯ. ಎಷ್ಟೇ ಆದರೂ ಮನೆ ಮಕ್ಕಳು .ಒಳಗೊಳಗೆ ಸಾಧ್ಯವಾದಷ್ಟು ವಿಷಯ ಸಂಗ್ರಹ ಮಾಡುತ್ತಿದ್ದರು. ಆಗ ಕಾನೂನು ಕಟ್ಟಳೆನೂ ಜೋರಾಗಿತ್ತಂತೆ. ಕೊನೆ ಕೊನೆಗೆ ವಿಷಯ ಎಲ್ಲಾ ಕಡೆ ಹಬ್ಬಿ ಜಿಲ್ಲಾ ದಫೇದಾರ್ ಜೋರಾಗಿ ಜೀಪಿನಲ್ಲಿ ಬಂದು ಅಜ್ಜಯ್ಯನ ಬೆದರಿಸಿ ಏನೋ ಬರವಣಿಗೆ ಮಾಡಿಸಿಕೊಂಡು ಹೋದರಂತೆ ಅಂತ ಗೊತ್ತಾಯ್ತು .

ತಲೆ ಭಾರವಾದಂತಾಗಿ ಒಂದು ಕಡೆ ಕಟ್ಟೆಯಲ್ಲಿ ವರಗಿಕೊಂಡ್ರು ಸುಬ್ಬಜ್ಜಿ. ಗೆಳತಿ ಗೌರಿಗೂ ಮದುವೆಯಾಗಿತ್ತು.ತೌರಿಗೆ ಬಂದ ಸುಬ್ಬಜ್ಜಿ ನಾಲ್ಕು ದಿನ ಇರಬೇಕೆಂದು ಅಂದಾಜು ಮಾಡಿ ಬಟ್ಟೆ ಬರೆ ತಗೊಂಡು ಬಂದಿದ್ಲು. ಒಂದು ದಿನ ಇದ್ದಕ್ಕಿದ್ದಂತೆ ಮನೆ ಎದುರು ಎತ್ತಿನಗಾಡಿ ಪ್ರತ್ಯಕ್ಷವಾಯಿತು. ಗಾಡಿಲಿ ಯಾರೋ ಬಂದಿದ್ದಾರೆ ನಿಧಾನಕ್ಕೆ ಜನ ಇಳಿದರು. ಸಾಮಾನು ಸರಂಜಾಮು ಇಳಿಯಿತು ತಟಕ್ಕನೆ ಗಾಡಿಯ ನಾಗನೇನೋ ಎಂದು ಸಂಶಯವಾಯಿತು ಸುಬ್ಬಜ್ಜಿಗೆ.ಒಂದು ಬಾರಿ ಬೆವರಿಬಿಟ್ಟರು. ಯಾಕೋ ಕನಸಲ್ಲಿ ಅವನು ಬಂದರೂ ಹೆದರಿ ಉಚೆ

ಹೊಯ್ದುಕೊಳ್ಳುವಂತಾಗುತ್ತಿತ್ತು. ಈಗ್ಗೆ ಹತ್ತಿಪ್ಪತ್ತು ವರ್ಷ ಕಳೆದೆ ಹೋಗಿದೆ ಅಲ್ವಾ? ಅವನ್ಯಾಕೆ ಈಗ ಬರುತ್ತಾನೆ ಆಗಲೇ ಅವನು ಮುದುಕನಾಗಿದ್ದ ಅಜ್ಜಯ್ಯನ ಖಾಸಾ ಆಳು ಬೇರೆ. ಯೋಚಿಸುತ್ತಾ ಕಿಟಕಿ ಮೂಲಕ ಅಂಗಳವನ್ನೇ ದಿಟ್ಟಿಸಿ ನೋಡುತ್ತಿದ್ದಳು ಸುಬ್ಬಜ್ಜಿ.

ಮುದುಕಿ ಬಾಗಿದ ಬೆನ್ನು ಕೆಂಪು ಸೀರೆ ತಲೆಯಲ್ಲಿ ಕೂದಲು ಇಲ್ಲ. ಆಂ ಮಡಿ ಮಾಡಿಕೊಂಡು ಬಂದವರಾರು. ಒಂದು ಪುಟ್ಟ ಹೆಂಗಸು, ಅವಳ ಕೈಹಿಡಿಕೊಂಡ ಮತ್ತೊಂದು ಹುಡುಗಿ. ಸೀದಾ ಬಂದವರೇ ಮನೆ ಮುಂದಿನ ಜಗಲಿಯಲ್ಲಿ ಒರಗಿಕೊಂಡರು. ಕೈಯಲ್ಲಿದ್ದ ಚೀಲವನ್ನು ಬದಿಗಿರಿಸಿ ಉಸಪ್ಪ ಎಂದು ನಿಟ್ಟುಸಿರು ಬಿಡುತ್ತ ಶೂನ್ಯಭಾವದಿಂದ ಮನೆಯೆಲ್ಲಾ ಒಮ್ಮೆ ನಿರುಕಿಸಿದಳು. ಮುಂಡಿಗೆ ಕಂಬವನ್ನು ಮುಟ್ಟಿ ನೋಡಿದಳು. ತಲೆಬಾಗಿಲ ಮೇಲಿನ ಚಿತ್ರಪಟವನ್ನು ಒಮ್ಮೆ ನಿರುಕಿಸಿ ದೀರ್ಘ ಉಸಿರೆಳೆದುಕೊಂಡಳು.

ಹಳಬರು ಯಾರೂ ಇಲ್ಲ. ಗತಿಸಿದವರ ಚಿತ್ರಗಳನ್ನು ಕೋಣೆಯ ಬಾಗಿಲಿನ ಮೇಲೆ ಸಾಲಾಗಿ ಇಡಲಾಗಿದೆ. ಬರೀ ಗಂಡಸರ ಚಿತ್ರಪಟಗಳು. ತುಟಿ ಕೊಂಕಿತು. ಆಗಲೇ ಒಳಗಿಂದ ನೀರು ಬೆಲ್ಲ ಬಂತು. ಬಂದವರು ಯಾರು? ಎಲ್ಲರಿಗೂ ಕುತೂಹಲ ಒಳಗಿನ ಮನೆಯಲ್ಲಿ ಪಿಸು ಪಿಸು ಮಾತು. ಅತ್ತಿಗೆಮ್ಮನ ಸೊಂಟ ಬಗ್ಗಿಹೋಗಿದೆ. ನಿಧಾನಕ್ಕೆ ಹೊರ ಜಗಲಿಗೆ ಬಂದರು .ಬಂದವರು ಯಾರೆಂದು ಕಣ್ಣಿಗೆ ಕೈ ಅಡ್ಡಲಾಗಿಟ್ಟು ನೋಡಿದ್ರು ಅತ್ತಿಗೆಮ್ಮ. ಯಾರೇ ಅದೂ ನಂಗೆ ಕಣ್ಣು ಸರಿ ಕಾಣ್ಸಲ್ಲ ಕಿವಿ ಇನ್ನು ಸ್ವಲ್ಪ ದೂರಾನೆ ಅಂತ ಹೇಳ್ತಾ ಹೆಣ್ಣು ಮಗುವನ್ನು ಬಗ್ಗಿ ನೋಡಿದರು. ಚಂದದ ಗೊಂಬೆ ಯಾರದೇ ಇದು? ಅಂತ ಹೇಳ್ತಾ ಕೆಂಪಜ್ಜಿ ಬಳಿ ಬಂದರು. ಕಾಮಾಕ್ಷಿ ತಟ್ಟನೆ ಅತ್ತಿಗೆಮ್ಮನ ಕಾಲು ಮುಟ್ಟಿ ನಮಸ್ಕರಿಸಿದಳು. ಊಟದ ಹೊತ್ತು. ಬರೀ ಉರಿ ಬಿಸಲು ಹೊರಗಡೆ. ಊಟ ಮಾಡುತ್ತೀರಾ ಕೇಳಿದರು. ಒಳಗಿಂದ ಒಬ್ಬರ ಮುಖ ಒಬ್ಬರು ನೋಡಿಕೊಂಡು ಹೂಂಗುಟ್ಟಿದರು ಜಗಲಿಯಲ್ಲಿದ್ದವರು.

ಮತ್ತೆ ಯಾರದ್ದೂ ಮಾತಿಲ್ಲ. ಹೊರಗೆ ಅಂಗಳದ ತೆಂಗಿನ ಮರದ ಬುಡದಲ್ಲಿದ್ದ ಚರಿಗೆಯಿಂದ ತಣ್ಣನೆ ನೀರು ತೆಗೆದು ತಂಬಿಗೆಯಿಂದ ಸುರಿದು ಕೊಂಡರು ಮುಖದ ಮೇಲೆ! ಅಷ್ಟು ಉರಿಬಿಸಿಲು ಹೊರಗಡೆ. ಪಾದಗಳು ಧೂಳಿನಿಂದ ಕೆಂಪಾಗಿದ್ದವು ನಡೆದು ನಡೆದು ಸುಸ್ತಾಗಿ ದಾರಿಯಲ್ಲಿ ಸಿಕ್ಕಿದ ಎತ್ತಿನ ಗಾಡಿಯನ್ನು ಹತ್ತಿಕೊಂಡು ಬಂದಿದ್ದರು ಕಾಮಾಕ್ಷಮ್ಮ. ಬಿಸಿ ಅನ್ನದ ಮೇಲೆ ತುಪ್ಪ ತಂಬುಳಿ ಬಿದ್ದ ಮೇಲೆ ಊಟಕ್ಕೆ ಶುರು ಮಾಡಿದರು. ಪೆರಿಂಬಾಳೆ (ಅನಾನಸು) ಗೊಜ್ಜು ಹುಳಿ, ಮಜ್ಜಿಗೆ ಉಂಡ ಮೇಲೆ ತುಸು ಶಕ್ತಿ ಬಂದಂತಾಯ್ತು ಎಲ್ರಿಗೂ.

ಊಟವಾದ ಮೇಲೇನೆ ಕಾಮಾಕ್ಷಿ ತನ್ನ ಬಗ್ಗೆ ಅತ್ತಿಗೆಮ್ಮನ ಹತ್ತಿರ ಹೇಳಕ್ಕೆ ಶುರು ಮಾಡಿದಳು. ಕಾಶಿ ಗುಂಡಾ ಶಾಸ್ತ್ರಿಗಳ ವಿಧವೇ ಪತ್ನಿ ನಾನು. ಮಕ್ಕಳಿಲ್ಲದ ನಮಗೆ

ನಿಮ್ಮ ನಾದಿನಿಯರು ಬಿಟ್ಟು ಹೋದ ಹೆಣ್ಣು ಮಕ್ಕಳು ಇವರು. ಅವರಂತೂ ಗಂಗೆ ಪಾಲಾದರು. ನಮ್ಮ ಯಜಮಾನರಿಗೆ ದಮ್ಮು ಜಾಸ್ತಿಯಾಗಿ ಆ ಥಂಡಿಊರಲ್ಲಿ ಸರಿಯಾಗಿ ಬೆಚ್ಚಗೆ ಇರೋಕಾಗದೆ ಒದ್ದಾಡಿದರು. ಓದು ಬರಹ ಅಂತ ಆರೋಗ್ಯದ ಕಡೆ ಗಮನ ಕೊಡಲೇ ಇಲ್ಲ ಮನೆ ತುಂಬಾ ಬರೀ ಪುಸ್ತಕ.ದಮ್ಮಿಗೆ ಔಷದಿ ಮಾಡೋಕಾಗದೇ ಹೋಗೇಬಿಟ್ರು. ಕಾಮಾಕ್ಷಮ್ಮ ಮಕ್ಕಳ ಕಡೆ ನೋಡಿದರು. ಇವಳು ಪದ್ಮ ಚಿಕ್ಕವಳು, ದೊಡ್ಡವಳು ಶಾರದೆ ಮದುವೆ ವಯಸ್ಸಿಗೆ ಬಂದಿದ್ದಾವೆ. ನಂಗೂ ಯಾರೂ ಗತಿಯಿಲ್ಲ. ಪಂಡಿತರಾಗಿದ್ದ ನಮ್ಮ ಯಜಮಾನರು ಒಂದಷ್ಟು ಪುಸ್ತಕ ಸ್ವಲ್ಪ ಹಣ ಬಿಟ್ಟು ಹೋಗಿದ್ದು ಬಿಟ್ಟರೆ ಮನೆ ಮಠ ಏನೂ ಇಲ್ಲ ನಮಗೆ. ಹೆಣ್ಣು ಮಕ್ಕಳು ದಾರಿಲಿ ಬೀಳಬಾರದು ಅಂತ ಏನು ಮಾಡಲಿಕ್ಕೂ ಗೊತ್ತಾಗದೆ ಅವುಗಳ ಮೂಲಕ್ಕೆ ತಂದು ಬಿಡುತ್ತಿದ್ದೇನೆ. ಹೇಳುತ್ತಲೇ ಇದ್ದರು ಕಾಮಾಕ್ಷಮ್ಮ. ಅತ್ತಿಗೆಮ್ಮನ ಎದೆ ಧಸಕ್ಕೆಂದಿತು. ಒಮ್ಮೆಗೆ ದಿಗಿಲಾಯಿತು. ಆಗೇ ಹೋತು ಕಥೆ! ಉಸಿರು ನಿಂತಂತಾಯ್ತು. ಏನ್ ಕಥೆ ಏನ್ ಮಾಡೋದು ಈಗ! ಶತಪಥ ತಿರುಗಾಡಿದರು ಅತ್ತಿಗೆಮ್ಮ ಜಗುಲಿಯಲ್ಲಿ. ಇಷ್ಟು ದೊಡ್ಡ ಮನೆಗೆ ಈಗ ನಾನೇ ಯಜಮಾನಿ. ನಾನು ಹೇಳಿದಂಗೆ ಉಳಿದವರು ಕೇಳಲೇಬೇಕು ಮನಸ್ಸಿನಲ್ಲೇ ಲೆಕ್ಕಾಚಾರ ಶುರು ಮಾಡಿದರು ಅತ್ತಿಗೆಮ್ಮ.

ಆ ಹೆಣ್ಣು ಮಕ್ಕಳು ಯಾರವೇ ಎಂದು ಕೇಳಿದ್ರೆ ಏನು ಹೇಳೋದು. ಸಾವಿತ್ರಿ ಸತ್ಯಭಾಮೆಯರ ಮಕ್ಕಳೆಂದು ಹೇಗೆ ಹೇಳೋದು? ಆ ಹೆಣ್ಣು ಮಕ್ಕಳ ಮೂಲ ಬೇರನ್ನೇ ಕಿತ್ತು ಹಾಕಿದರಲ್ಲ ಮಾವಯ್ಯ. ಹಾಗೆ ಮಾಡೋದು, ಕೊನೆಗೆ ತನಗೂ ಈ ಘಟನೆಗೂ ಸಂಬಂಧವೇ ಇಲ್ಲ ಅಂತ ಇದ್ದುಬಿಡೋದು ಅವರಿಗೆ ಚೆನ್ನಾಗಿ ಕರಗತವಾಗಿದ್ದ ಕಲೆ. ಒಂದು ಚೂರಾದರೂ ಕನಿಕರ ಬೇಡವೇ? ಹುಟ್ಟಿದ ಮನೆಯಿಂದ ಕಂಡು ಕೇಳರಿಯದ ಊರಿಗೆ ಸಾಗಿಸುವುದೆಂದರೆ? ಆನಂತರವೇ ಗೊತ್ತಾಗಿದ್ದಲ್ವಾ ಅದೇನೋ ಸ್ವಾತಂತ್ರ್ಯ ಹೋರಾಟಗಾರರಂತೆ ಕ್ರಾಂತಿಕಾರಿಗಳಂತೆ.. ಅದು ಯಾರೋ ರಾಜಾರಾಮರಾಯರ ಮಾತಿಗೆ ಬದ್ಧರಾಗಿ ಆ ದಿನ ಒಂದು ನಿರ್ಧಾರ ಮಾಡಿ ದಾರಿಯಲ್ಲಿ ಘಾಟಿ ಕೆಳಗೆ ಹೋಗುತ್ತಿದ್ದ ಇದೇ ಎತ್ತಿನಗಾಡಿಯನ್ನು ತಡೆದು ನಿಲ್ಲಿಸಿ ಅದರಲ್ಲಿದ್ದ ಹೆಣ್ಣು ಮಕ್ಕಳನ್ನು ಪಾರು ಮಾಡಿ ಒಬ್ಬೊಬ್ಬರನ್ನು ಅವರವ್ರೆ ಮದುವೆ ಮಾಡಿಕೊಂಡ್ರಂತಲ್ಲ. ಇದೆಲ್ಲಾ ಮಾವಯ್ಯಗೆ ಗೊತ್ತಾಗಿದ್ರೂ ಬಾಯಿ ಮುಚ್ಚಿಕೊಂಡು ತೆಪ್ಪಗೆ ಕೂತಿದ್ರಲ್ಲ. ಹೋಗಲಿ ಎಲ್ಲೋ ದಿಕ್ಕು ಕೆಟ್ಟು ಹೋಗುವುದಕ್ಕಿಂತ ಇದು ವಾಸಿ ಎನಿಸಿತು ನನಗೆ ಅವರಿಬ್ಬರಲ್ಲಿ ಸಲಿಗೆ ಪ್ರೀತಿ ಇದ್ದೇ ಇತ್ತು .ಈಗ ಅವರ ಮಕ್ಕಳೆ ಬಂದು ಜಗುಲಿಯಲ್ಲಿ ಕುಳಿತಿದ್ದಾರಲ್ಲ. ಇದು ಒಳ್ಳೆಯದಕ್ಕೆ ಆಗಿರಬೇಕು ನಾನು 85 ದಾಟಿದ ಮುದುಕಿ. ಊರ ಜನರೇನೂ ನಮ್ಮನೆ ಗಂಡು ಮಕ್ಕಳಿಗೆ ಹೆಣ್ಣು ಹುಡ್ಕಿ ಕೊಟ್ಟಿದ್ದಾರಾ. ಮೂಗು ಮುರೀತಾ

ಓಡಾಡಿರಲಿಲ್ವಾ, ಮಾಡ್ತೀನಿ ಅವರಿಗೆಲ್ಲ. ನನಗೆ ಯಾರು ಹಂಗೂ ಇಲ್ಲ. ನನ್ನ ಅನ್ನ ನಾನು ತಿನ್ನೋದು. ಸಮಾಜಕ್ಕೆ ನಾನ್ಯಾಕೆ ಹೆದರಲಿ ಹೆದರಿದರೆ ತಾನೇ ಹೆದರಿಸುತ್ತಾರೆ ಅಂತ ಸಮಾಜಕ್ಕೆ ಸೆಡ್ಡು ಹೊಡೆದು ನಿಲ್ಲುವುದೆಂದು ನಿರ್ಧರಿಸಿದಳು ಅತ್ತಿಗೆಮ್ಮ. ಕಾಮಾಕ್ಷಿಗೆ ಎಲ್ಲಾ ಗೊತ್ತಿದೆ ಆ ಶಿವಳ್ಳಿಗಳ ಮನೆ ಹುಡುಗ್ರೆ ಸಾವಿತ್ರಿ ಸತ್ಯಭಾಮೆಯರಿಗೆ ಧಿಕ್ಕಾಗಿದ್ದು ಅಂತ. ಇತ್ತೀಚೆಗೆ ಕಾಮಾಕ್ಷಿ ಹತ್ರ ಹೆಚ್ಚು ಸಲಿಗೆ ಅನಿಸುತ್ತಿತ್ತು ಅತ್ತಿಗೆಮ್ಮನಿಗೆ. ಏಕೋ ವಯಸ್ಸು ಆಗ್ತಾ ಎಲ್ಲರೂ ಆಪ್ತರಾಗಿ ಬಿಡ್ತಾರೆ. ಇನ್ನು ಇಟ್ಟುಕೊಳ್ಳೋಕೆ ಏನಿದೆ ಬದುಕಲ್ಲಿ? ಕನಿಕರ ಪ್ರೀತಿ ವಿಶ್ವಾಸದಿಂದ ಇನ್ನು ಉಳಿದ ದಿನ ಕಳಿಬೇಕು. ಮಾವಯ್ಯ ಮತ್ತು ಉಳಿದ ಹಿರಿಯ ತಲೆಗಳಿಂದ ತಪ್ಪಾಗಿದೆ ತಾನೇ. ಈ ಮಕ್ಕಳಿಗೆ ಯಾಕೆ ಶಿಕ್ಷೆ ಕೊಡಬೇಕು ಅವರು ತಲೆ ಎತ್ತಿ ಬಾಳುವ ಹಾಗೆ ಮಾಡಬೇಕು ಅಂತ ಅತ್ತಿಗೆಮ್ಮನ ಆಲೋಚನೆ ಹರಿಯುತ್ತಿತ್ತು ಕಾಮಾಕ್ಷಿ ಎರಡು ಹೆಣ್ಣು ಮಕ್ಕಳ ತಲೆ ಕಾಯುತ್ತಿದ್ದಳು. ಎಚ್ಚರ ತಪ್ಪದೇ ಹಗಲು-ರಾತ್ರಿ ಜೊತೆಯಲ್ಲಿ ಇಟ್ಟುಕೊಳ್ಳುತ್ತಿದ್ದಳು ಮುದ್ದು ಗೊಂಬೆಗಳೇ ಸರಿ ಇವುಗಳು. ನೆಟಿಗೆ ಮುರಿದು ದೃಷ್ಟಿ ತೆಗೆಯುತ್ತಿದ್ದಳು ಒಟ್ಟಾರೆ ಹೊಸಮನೆಯಾದರೂ ತಮ್ಮದೇ ಮನೆಯಂತೆ ಓಡಾಡಿಕೊಂಡಿದ್ದರು.

ಅತ್ತಿಗೆಮ್ಮ ತಲೆಯ ಮೇಲೆ ಕೈ ಹೊತ್ತು ಕುಳಿತರು. ಯೋಚನೆ ಮಾಡಿ ಮಾಡಿ ತಲೆ ಭಾರವಾದಂತೆ ಅನಿಸ್ತು. ಮೈದುನನ ಮಗ ವಿಶ್ವನಾಥ ಯಕ್ಷಗಾನದ ಖಯಾಲಿ ಹಚ್ಚಿಕೊಂಡು ಊರೂರು ಅಲೆದಾಡುತ್ತಿದ್ದ. ಬಣ್ಣದ ವೇಷ ಕಟ್ಟಿದ ಮೇಲಂತೂ ಮನೆ ಮಠ ಬಿಟ್ಟು ಮೇಳ ಮೇಳ ಅಂತ ಧೀಂಗಣ ಹಾಕುತ್ತಿದ್ದ. ಅವನ ಜೊತೆ ಅತ್ತಿಗೆಮ್ಮನ ಕಿರಿ ಮಗ ಚಂದ್ರಯ್ಯ ಬೇರೆ.! ಇಬ್ಬರೂ ಜೊತೆಯಾದ್ರೆ ಊರ್ ಹಾಳು ಮಾಡಕ್ಕೆ ಸಾಕು ಅಂತ ನೆಂಟರಿಷ್ಟರು ಮಾತಾಡಿಕೊಳ್ಳುತ್ತಿದ್ದರು. ಪದೇ ಪದೇ ಹೇಳುವಷ್ಟು ಗಂಟಲು ಚಂದ ಇಲ್ಲದಿದ್ದರೂ ಧಿಂಗಣ ಹಾಕುವಷ್ಟು ಜೀವ ಗಟ್ಟಿ ಇಬ್ರಿಗೂ. ಹಾಗಾಗಿ ಮನೆ ತೋಟ ಗದ್ದೆ ದನಕರು ಎಲ್ಲದರ ಜವಾಬ್ದಾರಿ ಅತ್ತಿಗಮ್ಮನ ಮೇಲೆ ಬಿದ್ದಿತ್ತು. ಆಳುಕಾಳುಗಳು ಮನೆ ಕಡೆ ಇದ್ದರೂ ಊರು ತಿರುಗೋ ಗಂಡಸರನ್ನು ಕಟ್ಟಿಕೊಂಡು ಹೋಗುವುದು ಸುಲಭ ಸಾಧ್ಯವಾದ ಕೆಲಸವಾಗಿರಲಿಲ್ಲ. ಮೊದಲೆಲ್ಲಾ ಸುಬ್ಬಿ ಮನೆಯಲ್ಲಿದ್ದಾಗ ಅತ್ತಿಗೆಮ್ಮನಿಗೆ ನಿರಾಳ ಎನಿಸುತ್ತಿತ್ತು. ಹಗಲು ರಾತ್ರಿ ಎನ್ನದೆ ಮನೆ ಕೆಲಸವನ್ನು ಮಾಡಿ ಮುಗಿಸುತ್ತಿದ್ದಳು ಸುಬ್ಬಿ. ಆವತ್ತು ಒಂದು ದಿನ ಹೀಗಾಯ್ತು. ಇದ್ದಕ್ಕಿದ್ದಂತೆ ವಿಶ್ವನಾಥ ಯಕ್ಷಗಾನದ ಪದ ಹೇಳುತ್ತಾ ಮನೆಯೊಳಗೆ ಕಾಲಿಟ್ಟ. ಎದುರು ಬಂದ ಸುಬ್ಬಿಯನ್ನು ಅಡಿಯಿಂದ ಮುಡಿಯ ವರೆಗೆ ನೋಡಿದ. ಏನೇ... ಸುಬ್ಬಿ... ಮನೆಯಲ್ಲಿ ಚೆನ್ನಾಗಿ ಊಟ ತಿಂಡಿ ಮಾಡಿಕೊಂಡು ವೈನಾಗಿ ಬೆಳೆದಿದ್ಯಲ್ಲೇ... ಕೆನ್ನೆ ನೋಡು ಕೆಂಪು ಕೆಂಪ್ಗೆ..ಹೇಗಿದೆ ಅಂತ ಹೇಳುತ್ತಾ ಅವಳ ಕೆನ್ನೆ ಮುಟ್ಟಲು ಕೈ ಮುಂದೆ

ಮಾಡಿದವನು ಯಾರೋ ಇದಾರೆ ಅಂತ ಗುಮಾನಿಯಲ್ಲಿ ಹಾಗೆ ಸೀದಾ ನಡುಮನೆ ಕಡೆ ನಡೆದ. ಈ ಸಂಭಾಷಣೆಯನ್ನು ಕೇಳುತ್ತಾ ಜಗಲಿ ದಾಟುತ್ತಾ ಇದ್ದ ಸುಬ್ಬಿಯ ತಂದೆಗೆ ಭಯವಾಯಿತು. ಅಯ್ಯೋ ಆಗೇ ಹೋಯ್ತು. ಇವು ಬೇರೆ ಬಿಂ ಹೊಕ್ಕಿದ್ವು. ಇನ್ನು ಸುಬ್ಬಿನ ಮನೇಲಿ ಇಟ್ಟುಕೊಳ್ಳುವುದು ಸರಿಯಲ್ಲ. ಒಂದೊಳ್ಳೆ ಗಂಡು ನೋಡಿ ಮದುವೆ ಮಾಡಬೇಕು. ಯಕ್ಷಗಾನ ಮೇಳ ಅಂತ ಊರೂರು ತಿರುಗೋವಕ್ಕೆ ಮನೆಯೋರು ಯಾರು, ಸ್ತ್ರೀ ವೇಷ ಯಾವ್ದುಅಂತ ವ್ಯತ್ಯಾಸ ಗೊತ್ತಾಗ್ದೇ ಹೋಗಕ್ಕೆ ಶುರುವಾಗಿದೆ. ಥೂ... ಅನಿಷ್ಟದವು.! ಇನ್ನು ಈ ಗಂಡಸರು ಮನೆಯಲ್ಲಿದ್ದರೆ ನಂಗೆ ಸುಬ್ಬಿನ ಕಾವಲು ಕಾಯೋದೇ ಕೆಲಸ ಆಗುತ್ತೆ ಅಂತ ಅಂದುಕೊಂಡು ಒಂದು ದಿನ ಬೆಳಗಾದ ಕೂಡ್ಲೇ ಮನೆಯಿಂದ ಹೊರಟು ಮೇಗರವಳ್ಳಿಗೆ ಹೋಗುವ ಶಟಲ್ ಬಸ್ ಹತ್ತಿ ಕೇದಿಗೆ ಮನೆ ಹತ್ತಿರ ಇಳಿದು ಅಲ್ಲಿಂದ ಎರಡು ಮೈಲಿ ನಡೆದು ಊಟದ ಹೊತ್ತಿಗೆ ಸಂಬಂಧಿಯೂ ಆಗಿದ್ದ ಗಣೇಶಯ್ಯನ ಮನೆ ತಲುಪಿದರು ಬಾಯಾರಿಕೆ ಊಟ ಉಪಚಾರಗಳನ್ನು ಪೂರೈಸಿದರು. ಸಂಜೆ ಮನೆ ಹಿರಿಯರೊಂದಿಗೆ ಮಾತುಕತೆ ನಡೆಸಿ ತಾನು ಬಂದ ವಿಚಾರ ತಿಳಿಸಿ ಗಣೇಶಯ್ಯನ ಮಗ ಸೀತಾರಾಮನಿಗೆ ಸುಬ್ಬಿಯನ್ನು ಕೊಡುವ ವಿಚಾರದಲ್ಲಿ ಒಪ್ಪಿಗೆಯನ್ನೂ ಇತ್ತು ರಾತ್ರಿ ಮನೆಗೆ ಬಂದರು.ಅತ್ತಿಗೆಮ್ಮನಿಗೆ ವಿಷಯ ತಿಳಿಸುವುದು ಹೇಗೆ ಎಂದು ಪೇಚಾಡಿದರು.

ಬೆಳಗಾಗ್ಲಿ... ಮಾತಾಡಿದರಾಯ್ತು ಅಂತ ತಲೆ ತಗ್ಗಿಸಿ ರಾತ್ರಿ ಊಟ ಪೂರೈಸಿದರು ಶಾಮಯ್ಯ. ಅತ್ತಿಗೆಮ್ಮನಿಗೆ ಏನೋ ವಾಸನೆ ಬಡಿಯಿತು.ಏನು ಶಾಮಂದು ಒಂದು ಸುದ್ದಿ ಇಲ್ಲ... ತಲೆ ಯಾಕೆ ಮೇಲೆ ಎತ್ತದೇ ಹೀಗೆ ಒಂದೇ ಸಮ ಗಬಗಬಾ ಅಂತ ತಿಂತಾ ಇದ್ದಾನೆ ..?ಸಂಶಯ ಬರದೇ ಇರುತ್ಯೇ ಅತ್ತಿಗೆಮ್ಮನಿಗೆ? ಹಿಂದೆ ಎಂದೂ ಈ ರೀತಿ ಮಾಡಿರದಿದ್ದ ಶಾಮು, ತಡೆಯಲಾರದೆ ಎಲ್ಲಾ ವಿಷಯ ಹೇಳಿ ಸುಬ್ಬಿನ ಗಣೇಶನ ಮಗ ಸೀತಾರಾಮನಿಗೆ ಕೊಡುವಂತೆ ನಿಶ್ಚಯ ಮಾಡಿಕೊಂಡು ಬಂದುಬಿಟ್ಟೆ ಎಂದು ತೊದಲುತ್ತಾ ನುಡಿದರು.

ಸ್ವಲ್ಪ ಕೋಪಿಷ್ಠೆಯಾಗಿದ್ದ ಅತ್ತಿಗೆಮ್ಮ ಸರಿಯಾಗಿ ಊಟ ಪೂರೈಸದೆ ತಟ್ಟೆ ಎತ್ತಿ ಬಚ್ಚಲು ಮನೆಗೆ ಹಾಕಿ ಸೀದಾ ಮಲಗುವ ಕೋಣೆಗೆ ಹೋದರು. ಅತ್ತಿಗೆಮ್ಮನಿಗೆ ಹೊಟ್ಟೆ ಉರಿ ಶುರುವಾಯಿತು ಭಾವಯ್ಯನಿಗೆ ಏನು ಅರ್ಜೆಂಟಾಗಿತ್ತು ..ಸುಬ್ಬಿನ ವಿಶ್ವನಾಥನಿಗೋ ಇಲ್ಲಾ ಚಂದ್ರನಿಗೋ ತರಬಹುದಾಗಿತ್ತು.. ಊರವರೆಲ್ಲ ಏನೇ ಹೇಳಲಿ ಮನೆಯವರು ಹೀಗಾ ಮಾಡೋದು ..ದಂಡಿಯಾಗಿ ಜಮೀನು ಇಲ್ವೇ... ಅದು ಸಾಕಾಗಲ್ವೇ...ಯಾವತ್ತು ಸುಬ್ಬಿ ಮದುವೆ ವಿಷಯ ನಾನು ಎತ್ತಿದರೂ ಹಾಗೂ ಹೀಗೂ ತಪ್ಪಿಸಿಕೊಳ್ಳುತ್ತಿದ್ದ ಶಾಮಯ್ಯ ಇವತ್ತು ನನಗೊಂದು ಮಾತೂ ಹೇಳದೇ ಸುಬ್ಬಿಗೆ ಗಂಡು ನೋಡಿಕೊಂಡು ಬಂದಿದ್ದಾನೆ. ಅಯೋಗ್ಯ .

ಸುಬ್ಬಿಯ ತಂದೆ ಶಾಮಯ್ಯ ಮಾತ್ರ ಇದಾವುದಕ್ಕೂ ಸೊಪ್ಪು ಹಾಕದೆ ಸುಬ್ಬಿಯನ್ನು ಸೀತಾರಾಮನಿಗೆ ಕೊಟ್ಟು ಮದುವೆ ಮಾಡಿಬಿಟ್ಟಿದ್ದರು ಇತ್ತ ವಿಶ್ವನಾಥನಿಗೆ 32 ವರ್ಷ ಅತ್ತಿಗೆಮ್ಮನ ಕಿರಿ ಮಗ ಚಂದ್ರಯ್ಯನಿಗೆ 30 ವರ್ಷ ಇಷ್ಟು ವರ್ಷವಾದರೂ ಮದುವೆಯಾಗಿಲ್ಲ ಅಂತ ಅತ್ತಿಗೆಮ್ಮ ಕೊರಗುತ್ತಿದ್ದರು ಯಾರೂ ಇವರಿಗೆ ಹೆಣ್ಣು ಕೊಡಕ್ಕೆ ಮುಂದೆ ಬರುತ್ತಿರಲಿಲ್ಲ ಕಾರಣ ಸ್ತ್ರೀ ಪಾತ್ರಧಾರಿಗಳ ಜೊತೆ ಇವರ ನಡುವಳಿಕೆ ಸರಿ ಇಲ್ಲವೆಂಬ ಸುದ್ದಿ ಊರಿಡೀ ಹರಿದಾಡಿ, ಅಕಸ್ಮಾತ್ ಎಲ್ಲೋ ಒಂದೊಂದು ಊಟದ ಮನೆಗೆ ಅವರಿಬ್ಬರೂ ಬಂದ್ರು ಅಂದರೆ ನಿಧಾನವಾಗಿ ಹೆಣ್ಣು ಮಕ್ಕಳು ಜಾಗ ಖಾಲಿ ಮಾಡುತ್ತಿದ್ದರು. ಇದು ಅವರಿಬ್ಬರ ಅರಿವಿಗೂ ಬಂದಿತ್ತು. ಈಗ ತಮ್ಮ ಮನೆಗೆ ಹೊಸಬರ ಆಗಮನದ ಸುದ್ದಿ ಅದು ಹೇಗೋ ಅವರಿಬ್ಬರ ಗಮನಕ್ಕೂ ಬಂತು. ಅತ್ತಿಗಮ್ಮ ಯೋಚಿಸುತ್ತಾ ಕುಳಿತಿದ್ದರು ತಟಕ್ಕನೇ ಏನೋ ಹೊಳೆದಂತಾಯಿತು ಮನಸ್ಸಲ್ಲಿ. ಯಾಕಾಗಬಾರದು ಮದ್ದಿಗೆಂದು ಕತ್ತಲಲ್ಲಿ ಹುಡುಕುತ್ತಿದ್ದ ಬಳ್ಳಿ ಕಾಲಿಗೆ ತೊಡರಿಕೊಂಡಂತೆ ಆಯ್ತು ಅಲ್ವೇ ಮತ್ತೆ... ಕಾಮಾಕ್ಷಿ ಕರೆದುಕೊಂಡು ಬಂದಿದ್ದ ಹೆಣ್ಣು ಮಕ್ಕಳನ್ನು ಹೇಗಾದರೂ ಮಾಡಿ ಈ ಹುಡುಗರಿಗೆ ಗಂಟು ಹಾಕಬೇಕೆಂದು ಆಲೋಚಿಸಿ ದಳು, ಮೇಳಕ್ಕೆ ಹೋದವರಿಗೆ ಸುದ್ದಿ ಹೋಯಿತು ಕಾಮಾಕ್ಷಿ ಮತ್ತು ಹೆಣ್ಣು ಮಕ್ಕಳನ್ನು ತಿಂಗಳುಗಟ್ಟಲೆ ಚೆನ್ನಾಗಿ ಉಪಚರಿಸಿದ ಅತ್ತಿಗೆಮ್ಮ ಅವರೆಲ್ಲರನ್ನೂ ತನ್ನ ಕಡೆಗೆ ಮಾಡಿಕೊಂಡು ಗುಟ್ಟಾಗಿ ಕಾಮಾಕ್ಷಿಗೆ ಸೂಕ್ಷ್ಮ ವಿಚಾರಗಳನ್ನು ತಿಳಿಸಿದಳು

ಚಂದ್ರಯ್ಯನಿಗೆ ಶಾರದೆಯನ್ನು ತರುವುದೆಂದು ಸಂಬಂಧ ಕುದುರಿಸಿದಳು. ಊರ ದೇವಸ್ಥಾನದ ಪ್ರಾಂಗಣದಲ್ಲಿ ಮದುವೆ ನೆರವೇರಿಸುವುದು ಅಂತ ಪುರೋಹಿತರಿಗೆ ಹೇಳಿ ವಾಲಗ ಊದಿಸಲಿಕ್ಕೆ ಎಲ್ಲಾ ತಯಾರಿ ಮಾಡಿಕೊಂಡಳು ಅತ್ತಿಗೆಮ್ಮ. ವಿಶ್ವನಾಥ ಘಟ್ಟದ ಕೆಳಗೆ ಮೇಳದ ಆಟಕ್ಕೆ ಹೋಗಿದ್ದವ ಮುಖ್ಯ ಪಾತ್ರ ಬೇರೆ ಮಾಡಬೇಕಾದ್ದರಿಂದ ಕೂಡಲೇ ಮನೆಗೆ ವಾಪಸ್ ಬರೋಕೆ ಆಗಲ್ಲ ಅಂತ ಹೇಳಿ ಕಳಿಸಿದ. ಅಕಸ್ಮಾತ್ ಬಂದ್ರೂ ಅವನ ಕೆಲಸ ಆಗುವಂತಿರಲಿಲ್ಲ.

ಈ ಮಧ್ಯೆ ಬಹಳ ಬೇಸರದಿಂದಲೇ ಶಾರದೆ ಎಂಬ ಮುದ್ದು ಗಿಣಿಯನ್ನು ಚಂದ್ರಯ್ಯನೆಂಬ ಟೊಣಪನಿಗೆ ಕೊಡಲು ಒಪ್ಪಿದ್ದಳು ಕಾಮಾಕ್ಷಿ. ವಿಧಿ ಇಲ್ಲ .ಅವಳ ಬದುಕು ಇನ್ನು ಇಲ್ಲೇ ಕಳೆಯಬೇಕು.. ವಯಸ್ಸಾದ ಗಂಡಿಗೆ ಈ ಪುಟ್ಟ ಹೆಂಗಸನ್ನು ಕೊಡುವುದು ಕಾಮಾಕ್ಷಿಗೆ ನೋವಿನ ಸಂಗತಿಯಾಗಿತ್ತು ಆದರೂ ದೇವರ ಇಚ್ಛೆಯೆಂದು ಆಕಾಶ ನೋಡಿ ಕೈಮುಗಿದಿದ್ದಳು. ಬಂಗಾರದಂತ ಹೆಣ್ಣು ಮಕ್ಕಳನ್ನು ಕಾಪಾಡುವುದು ಕಾಮಾಕ್ಷಿಯ ಕೈಯಲ್ಲಿ ಆಗದ ಮಾತಾಗಿತ್ತು .ಒಂದು ಶುಭದಿನ ಶಾರದೆ ಚಂದ್ರಶೇಖರನ ಮದುವೆ ನಡೆದು ಹೋಯಿತು.

ಕಾಮಾಕ್ಷಮ್ಮ ತನ್ನ ಜೊತೆಯನ್ನು ಬಿಡದೆ ಕಾಪಾಡುತ್ತಿದ್ದು ಶಾರದೆಗೆ ಸಂತಸ ತಂದಿತ್ತು.

ಮದುವೆಗೆ ಬಂದಿದ್ದ ವಿಶ್ವನಾಥನನ್ನು ನೋಡಿ ಕಾಮಾಕ್ಷಿಗೆ ಭಯವೇ ಆಯ್ತು ರಾಕ್ಷಸನ ಬಣ್ಣದ ವೇಷ ಹಾಕುತ್ತಿದ್ದ ವಿಶ್ವನಾಥ ನೋಡಲೂ ಹಾಗೇ ಇದ್ದ. ಆ ಗಡ್ಡ, ದಪ್ಪ ಮೀಸೆ ,ರಾಶಿ ಕೂದಲು.. ಅಬ್ಬಾ! ಪುಟ್ಟ ಗುಬ್ಬಿ ಮರಿ ಪದ್ಮಳ ಮೇಲೆ ಅವನ ಕಣ್ಣು ಬೀಳದಂತೆ ಹಾಗೂ ಹೀಗೂ ಕಾಪಾಡುತ್ತಲಿದ್ದಳು ಕಾಮಾಕ್ಷಿ. ಅಂತೂ ನಾಲ್ಕಾರು ದಿನದ ಮದುವೆ ಕಾರ್ಯಕ್ರಮ ಸಂಪನ್ನವಾಯಿತು. ಬೇಕಾದ ಹಾಗೆ ಊಟ ತಿಂಡಿ ಕಾಫಿ ಕಷಾಯಗಳ ಸಮಾರಾಧನೆಯಾಯ್ತು. ಯಾವುದಕ್ಕೂ ಕೊರತೆ ಇಲ್ಲದ್ದನ್ನು ನೋಡಿ ಕಾಮಾಕ್ಷಿ ಸಂತಸ ಪಟ್ಟಳು. ಬದುಕೆಂದರೆ ಹೀಗೆಯೋ ಏನೋ... ಎಲ್ಲರಿಗೂ ಎಲ್ಲವೂ ಸರಿಯಾಗಿ ಸಿಗುವುದೆಂದರೆ ಅದು ಮಹಾ ಭಾಗ್ಯವೇ ಇರಬೇಕು. ವಯಸ್ಸಿನ ಅಂತರವಿದ್ದರೂ ಅವರು ಹೇಗೋ ಹೊಂದಿಕೊಂಡು ಬಾಳಲಿ ಎಂದು ಮನಸಲ್ಲೇ ಹಾರೈಸಿದಳು.

ಕಾಮಾಕ್ಷಿಗೆ ಬೇರೆ ಯಾರೂ ದಿಕ್ಕಿಲ್ಲ ತವರಿನವರು ಎಲ್ಲಾ ದೂರವಾಗಿದ್ದರು. ಗಂಡನ ಕಡೆಯವರೆಲ್ಲ ಸತ್ತು ಕೆಟ್ಟು ಹೋಗಿದ್ದರು ತವರಿಗೆ ಬಂದಿದ್ದ ಸುಬ್ಬಿ ಈ ನಡುವೆ ಆಪ್ತಳಾಗಿದ್ದಳು. ಸುಬ್ಬಿ ಸಂತೋಷದಿಂದ ದಾಂಪತ್ಯ ಜೀವನ ನಡೆಸುತ್ತಿದ್ದಳು. ಹೇಗಾದರೂ ಮಾಡಿ ಪದ್ಮಳನ್ನು ಸುಬ್ಬಿ ಕಡೆ ಯಾರಿಗಾದರೂ ಕೊಡಬೇಕೆಂದು ಅಂದಾಜು ಹಾಕಿದಳು ಕಾಮಾಕ್ಷಿ. ಅದಕ್ಕೆ ಸರಿಯಾಗಿ ಸುಬ್ಬಿ ಅತ್ತಿಗೆಯ ಮಗ ಭಾಸ್ಕರನಿಗೆ ಹುಡುಗಿ ಹುಡುಕುತ್ತಿರುವ ಸುದ್ದಿ ಸುಬ್ಬಿಯ ಕಿವಿಗೆ ಬಿದ್ದು ಆ ವಿಷಯವನ್ನು ಕಾಮಾಕ್ಷಿಗೆ ತಿಳಿಸಿದಾಗ ಅವನಿಗೇ ಪದ್ಮಳನ್ನು ಕೊಡಬಹುದೆಂದುಕೊಂಡಳು.

ಮಾತುಕತೆಯೂ ಆಯ್ತು.

ಶುಭ ಮುಹೂರ್ತದಲ್ಲಿ ಪದ್ಮ ಹಾಗೂ ಭಾಸ್ಕರನ ಮದುವೆ ನಡೆಯಿತು. ತಾಲೂಕು ಆಫೀಸಿನಲ್ಲಿ ಗುಮಾಸ್ತನಾಗಿದ್ದ ಭಾಸ್ಕರನಿಗೆ ಪದ್ಮಳನ್ನು ಕೊಟ್ಟು ಮದುವೆ ಯಾಗಿದ್ದು ನೋಡಿ ಎಲ್ಲರಿಗೂ ಸಂತೋಷವಾಯಿತು ಅನುರೂಪ ಜೋಡಿ. ಒಳ್ಳೆಯದಾಗಲಿ ಅಂತ ಊರವರೆಲ್ಲರೂ ಹರಸಿದರು. ದಿನಗಳು ಉರುಳಿದವು. ಸುಬ್ಬಜ್ಜಿ ಜೀವನದಲ್ಲಿ ನೋವಿನ ಬಿರುಗಾಳಿ ಎದ್ದಿತು. ಹಳ್ಳಿ ಬಿಟ್ಟು ಪೇಟೆಗೆ ಬರುವಂತಹ ಪ್ರಸಂಗ ನಿರ್ಮಾಣವಾಯ್ತು. ಕಷ್ಟ ಜೀವಿ ಸೀತಾರಾಮನ ದುರ್ಮರಣದಿಂದ ಸುಬ್ಬಿ ಜರ್ಝರಿತವಾಗಿ ಹೋದಳು. ತಂದೆಯ ನೆರವಿನಿಂದ ಪೇಟೆ ಸೇರುವಂತಾಯ್ತು. ಗಂಡನಿಲ್ಲದೆ ಸುಬ್ಬಜ್ಜಿಗೆ ಭವಿಷ್ಯ ಕತ್ತಲಾದಂತೆ ಆಯಿತು. ಛಲ ಬಿಡದೆ ಬಾಳನ್ನು ಸರಿದಾರಿಗೆ ಕೊಂಡೊಯ್ದಳು ಸುಬ್ಬಜ್ಜಿ.

ಆ ದಿನಗಳಲ್ಲಿ ಪದ್ಮಳ ಗಂಡ ಭಾಸ್ಕರನಿಗೆ ತೀರ್ಥಹಳ್ಳಿಗೆ ವರ್ಗವಾಗಿತ್ತು. ಸುಬ್ಬಜ್ಜಿಯ ಮನೆ ಹತ್ತಿರದಲ್ಲೇ ಮನೆ ಮಾಡಲು ಅವರಿಗೆ ಅವಕಾಶವಾಯಿತು. ಪದ್ಮಳ ಸಂತೋಷಕ್ಕೆ ಪಾರವೇ ಇರಲಿಲ್ಲ. ಚಿಕ್ಕವಳಾದ ಸುಮಳನ್ನು, ಪುಟ್ಟ ಮಗು ಸುಹಾಸನನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಳು ಪದ್ಮ. ಸುಬ್ಬಜ್ಜಿಗೆ ಅನಾರೋಗ್ಯವಾದಾಗಲು ಮನೆಯಿಂದ ಅಡಿಗೆ ಊಟ ಮಾಡಿಕೊಂಡು ತಂದು ಕೊಡುತ್ತಿದ್ದಳು. ಮಕ್ಕಳನ್ನು ಶಾಲೆಗೆ ಕಳಿಸುವುದು ಕರೆದುಕೊಂಡು ಬರುವುದು ಮಾಡುತ್ತಿದ್ದಳು. ಒಟ್ಟಾರೆ ಅವರಿಬ್ಬರ ಮಧ್ಯೆ ಉತ್ತಮ ಬಾಂಧವ್ಯ ಬೆಳೆದಿತ್ತು. ಭಾಸ್ಕರ ಕೆಲಸದ ಮೇಲೆ ಬೇರೆ ಊರಿಗೆ ಹೋದಾಗ ಸುಬ್ಬಜ್ಜಿ ಪದ್ಮಳ ಬಗ್ಗೆ ಕಾಳಜಿ ತೋರಿಸುತ್ತಿದ್ದಳು ಹಾಗಾಗಿ ಹೊಕ್ಕು ಬಳಕೆ ಚೆನ್ನಾಗಿತ್ತು. ನೋಡ ನೋಡುತ್ತಲೇ ಅನೇಕ ವರ್ಷಗಳು ಉರುಳಿದವು ಪದ್ಮ ಹಾಗೂ ಸುಮಳ ನಡುವೆ ಪ್ರೀತಿ ಹಾಗೂ ಸ್ನೇಹ ಬೆಳೆದಿತ್ತು ಮುದ್ದಾದ ಹುಡುಗಿ ಸುಮಾ. ಶಾಲಾ ಜೀವನದ ನಂತರ ಅವಳಿಗೆ ಮದುವೆ ಮಾಡಬೇಕೆಂಬ ಆಸೆ ಸುಬ್ಬಜ್ಜಿಗೆ. ಚಂದದ ಗುಣಾಡ್ಯನಾದ ವರ ಸಿಗಲೆಂದು ದೇವರಲ್ಲಿ ಪ್ರಾರ್ಥಿಸುತ್ತಿದ್ದಳು. ಅನೇಕ ಬಾರಿ ಪದ್ಮಳ ಬಳಿ ಈ ಬಗ್ಗೆ ಹೇಳಿಯೂ ಇದ್ದಳು. ಈ ನಡುವೆ ಅವಾಗವಾಗ ಮನೆಗೆ ಪೌರೋಹಿತ್ಯಕ್ಕೆಂದು ಸುಬ್ಬಜ್ಜಿ ಮನೆಗೆ ರಾಮಕೃಷ್ಣ ಭಟ್ಟರು ಬರುತ್ತಿದ್ದರು. ಕೈ ಕೆಲಸಕ್ಕೆ ಅವರ ಜೊತೆ ಆಗಮಿಸುತ್ತಿದ್ದ ಗೋಪಾಲ ಭಟ್ಟನ ಕೆಟ್ಟ ದೃಷ್ಟಿ ಸುಮಾಳ ಮೇಲೆ ಬಿತ್ತು. ಕಣ್ಣು ಬಾಯಿ ಬಿಟ್ಟು ಈ ಚಂದದ ಗೊಂಬೆಯನ್ನು ಕದ್ದು ಕದ್ದು ನೋಡುತ್ತಾ ಮನಸ್ಸಿನಲ್ಲಿ ಮಂಡಿಗೆ ತಿನ್ನುತ್ತಿದ್ದ. ಇದ್ಯಾವುದರ ಪರಿವೆಯೂ ಸುಬ್ಬಜ್ಜಿ ಮನೆಯವರಿಗೆ ಇರಲಿಲ್ಲ. ಸುಬ್ಬಜ್ಜಿ ಮಾತ್ರ ತನ್ನ ತವರಿನ ಸಂಬಂಧಿಗಳಿಗೆ ತನ್ನ ಮಗಳನ್ನು ಕೊಡಬೇಕೆಂದು ಬಯಸಿದ್ದರು. ಹಾಗಾಗಿ ತವರುಮನೆ ಕಡೆ ಹೋಗುವುದನ್ನು ಮರೆಯುತ್ತಿರಲಿಲ್ಲ.

ತವರು ಕಡೆ ಹೋಗಿ ಬರಲು ಒಂದು ಮನೆ ಅಂತ ಉಳೀತಲ್ಲ ಎಂದು ಬಾಯಿ ತುಂಬಾ ಹೊಗಳುತ್ತಿದ್ದಳು ಸುಬ್ಬಜ್ಜಿ. ಸುಮ ದೊಡ್ಡವಳಾದಂತೆ ಸುಬ್ಬಿಗೆ ಮಗಳ ಮದುವೆ ಯೋಚನೆ ಶುರು ಆಯ್ತು. ತಟ್ಟನೆ ತವರಕಡೆ ಸಂಬಂಧಿ ದಿನಕರನ ನೆನಪಾಯಿತು ಯಾಕಾಗಬಾರದು? ತವರಿನ ನಂಟು ಭದ್ರವಾಗುತ್ತದೆ ಅಂತ ಯೋಚಿಸಿ ವಿಚಾರವನ್ನು ಪದ್ಮಳಿಗೆ ತಿಳಿಸಿದಳು. ಪದ್ಮ ಸುಮಳ ಮದುವೆ ವಿಚಾರ ಪ್ರಸ್ತಾಪ ಮಾಡಿದಳು. ದೇವಲೀಲೆ ಎಂಬಂತೆ ಪೊಲೀಸ್ ಕೆಲಸದಲ್ಲಿದ್ದ ದಿನಕರ ಒಂದು ಒಳ್ಳೆಯ ದಿನ ಸುಮಳ ಮನೆಗೆ ಹೋಗಿ ನೋಡುವ ಶಾಸ್ತ್ರ ಮಾಡಿ ತನ್ನ ಮನೆಯವರೆಲ್ಲರ ಅಭಿಪ್ರಾಯ ಪಡೆದು ಸುಮಳನ್ನು ವರಿಸಲು ಒಪ್ಪಿಗೆ ಕೊಟ್ಟ. ಸುಬ್ಬಿಯ ಸಂತಸಕ್ಕೆ ಪಾರವೇ ಇರಲಿಲ್ಲ ಸುಮಳ ಮದುವೆಗೆ ಒಂದೆರಡು ತಿಂಗಳು ಬಾಕಿ ಇತ್ತು. ಸುಬ್ಬಿ, ಪದ್ಮ ಹಾಗೂ ಮನೆಯವರೆಲ್ಲರಿಗೆ ಮದುವೆ ಕೆಲಸದ ಓಡಾಟ ಶುರುವಾಯಿತು. ಸುಮಾಳ ಮದುವೆ ವಿಚಾರ ಊರಲ್ಲೆಲ್ಲ ಸಂತಸದಿಂದ

ಹರಿದಾಡಿತು. ತಮಗೆ ಆಗುವಂತ ಕೆಲಸ ಮಾಡಿಕೊಡಲು ಸಂತೋಷದಿಂದ ಒಪ್ಪಿಕೊಂಡರು. ಸುಬ್ಬಜ್ಜಿಗೆ ನಿರಾಳವಾಯಿತು. ಇತ್ತ ಗೋಪಾಲ ಭಟ್ಟ ಮಾತ್ರ ಇಂಗು ತಿಂದ ಮಂಗನಂತಾದ. ಸುಮಳ ಮದುವೆ ವಿಚಾರ ಕೇಳಿ ಅವನಿಗೆ ಮೈಪರಚಿಕೊಳ್ಳುವಂತಾಯಿತು. ಕೈಗೆ ಬಂದದ್ದು ಬಾಯಿಗೆ ಇಲ್ಲ. ಕಣ್ಣೆದುರು ಇದ್ದ ಹುಡುಗಿ ಇನ್ಯಾರೋ ಪೋಲಿಸಪ್ಪನ ತೆಕ್ಕೆಗೆ ಜಾರಿದಳು ಎಂಬ ವಿಷಯ ಅವನಿಗೆ ಅರಗಿಸಿಕೊಳ್ಳಲು ಆಗಲಿಲ್ಲ. ಹಗಲು ಇರುಳು ಇದೇ ವಿಚಾರದ ಗುಂಗಿ ಹುಳ ಅವನ ತಲೆ ಕೊರೆಯಲು ಆರಂಭಿಸಿತು. ಹೇಗಾದರೂ ಮಾಡಿ ಮದುವೆ ತಪ್ಪಿಸಬೇಕೆಂದು ಲೆಕ್ಕ ಹಾಕುತ್ತಿದ್ದ.ಒಂದು ದಿನ ಮದುವೆ ವಿಚಾರ ತಿಳಿಯದಂತೆ ನಟಿಸಿ ಸುಬ್ಬಜ್ಜಿಗೆ ಕೆಟ್ಟದಾಗಿ ದಿನಕರನ ಬಗ್ಗೆ ಇಲ್ಲಸಲ್ಲದ್ದನ್ನು ಹೇಳಿ ತಲೆ ಹಾಳು ಮಾಡಬೇಕೆಂದು ಯೋಚಿಸಿದ. ಹಾಗೇ ಒಂದು ದಿನ ಸೀದಾ ಸುಬ್ಬಜ್ಜಿಯ ಮನೆಗೆ ಹೋದವನೇ ದಿನಕರನ ಬಗ್ಗೆ ಕೆಟ್ಟದಾಗಿ ಹೇಳಿ ಸುಮಳನ್ನು ತನಗೆ ಕೊಡಬೇಕೆಂದೂ ತಾನೇ ಯೋಗ್ಯ ವರನೆಂದೂ ಬಿಂಬಿಸಿದ. ಸುಬ್ಬಜ್ಜಿಗೆ ಇವನ ಬಗ್ಗೆ ಕೋಪ ಬಂತು. ಅಸಹ್ಯವಾಯಿತು. ಇವನ ಅವಿವೇಕತನ ಊರಿಗೆಲ್ಲ ತಿಳಿದಂತೆ ಆಗಿತ್ತು. "ಬುದ್ಧಿಹೀನ ಭಟ್ಟ" ಬೈದುಕೊಂಡಳು ಸುಬ್ಬಜ್ಜಿ .ಅಷ್ಟಕ್ಕೂ ಸುಬ್ಬಜ್ಜಿಯ ತವರಿನ ಪ್ರೀತಿಯ ಮುಂದೆ ಇವನು ಬಾರಿಸಿದ ಪುಂಗಿ ಏನೂ ಕೆಲಸ ಮಾಡಲಿಲ್ಲ ಮುಖ ಕಪ್ಪು ಮಾಡಿಕೊಂಡು ಹಿಂದಿರುಗಿದ.

ನೆನಪಿನಲ್ಲಿ ವಿಹರಿಸುತ್ತಲೇ ನಿದ್ದೆಗೆ ಜಾರಿದ್ದ ಸುಬ್ಬಜ್ಜಿ ಯಾರೋ ಕರೆದಂತಾಗಿ ಮೆಲ್ಲನೆ ಕಣ್ಣು ಬಿಟ್ಟಳು. ಸುಜಾತ ಮೆಲ್ಲನೆ ಕರೆದು ಭುಜ ತಟ್ಟಿದ್ದಳು. ಹಿಂದೆಯೇ ಇದ್ದ ಸುಹಾಸ ಹೊರಡೋಣವೇ ಎಂದ.

ಅಧ್ಯಾಯ 16

ಆಶ್ರಿತಾ ಕಿರಣ್

ಕಾಶಿಯಿಂದ ಮರಳಿ ಬಂದ ಸುಬ್ಬಜ್ಜಿ ಕೊಂಚ ಮಂಕಾಗಿದ್ದರು. ದೂರದ ಪ್ರಯಾಣ ಜೊತೆಗೆ ಅಪ್ಪಳಿಸುತ್ತಿದ್ದ ಹಳೆ ನೆನಪುಗಳು ನಿಂತ ನೀರನ್ನು ಕದಡಿದಂತಾಗಿತ್ತು. ನೆನಪುಗಳೇ ಹಾಗೆ ಅಲ್ಲವೇ! ನೋವನ್ನು ಜಾಸ್ತಿ ಮಾಡುವಂತಹ ನೆನಪುಗಳನ್ನು ಮರೆಯಬೇಕೆಂದುಕೊಂಡರೂ ಅದು ಮತ್ತೆ ಮತ್ತೆ ನೆನಪಾಗಿ ನೋವನ್ನು ಹೆಚ್ಚಿಸುತ್ತದೆ. ಸುಬ್ಬಜ್ಜಿಯ ಮನಸ್ಥಿತಿ ತನ್ನ ಬಾಲ್ಯ, ಯೌವನ ಹಾಗೆ ಮದುವೆ ನಂತರದ ಜೀವನ ಮಗಳ ಸಾವು ಎಲ್ಲವೂ ಯಾತ್ರೆಗೆ ಬಂದಂತೆ ಮರುಕಳಿಸಿ ಹದಗೆಡಿಸಿತು. ಮನದ ನೋವು ದೇಹದ ಆಯಾಸ ಸುಬ್ಬಜ್ಜಿಗೆ ಸಣ್ಣ ಜ್ವರದ ಛಾಯೆ ಆವರಿಸಿದಂತಿತ್ತು. ಮೇಲ್ನೋಟಕ್ಕೆ ಓಡಾಡಿಕೊಂಡು ಕೆಲಸ ಮಾಡುತ್ತಾ ತನ್ನ ನೋವನ್ನು ಮರೆಯುವ ಪ್ರಯತ್ನದಲ್ಲಿದ್ದರು ಸುಬ್ಬಜ್ಜಿ.

ಕಾಶಿದಾರ ತಂದಿದ್ದ ಅಜ್ಜಿ ನವ್ಯಾಗೆ ಕಟ್ಟೋಣ ಎಂದುಕೊಂಡವರು ಈಗಿನ ಕಾಲದ ಮಗು ಎಲ್ಲಿ ಕಟ್ಟಿಕೊಳ್ಳುತ್ತಾಳೆಂದು ಸುಮ್ಮನೆ ತಮ್ಮಲ್ಲಿಯೇ ಇಟ್ಟು ಕೊಂಡಿದ್ದರು. ನವ್ಯಾ, ಕಾಶಿಯಿಂದ ತಂದ ತಿಂಡಿ ತಿನಿಸು ಬಟ್ಟೆಗಳನ್ನು ಗಮನಿಸು ತ್ತಿದ್ದವಳು ಅಜ್ಜಿಯ ನೆನಪಾಗಿ ಅಜ್ಜಿಯನ್ನು ಕೂಗುತ್ತಾ ಬಂದಳು. ಕಾಶಿಯಲ್ಲಿ ಮಗ ಕೊಡಿಸಿದ ಜಪಮಣಿ ಹಿಡಿದು ಕುಳಿತಿದ್ದ ಅಜ್ಜಿ ನವ್ಯಾಳನ್ನು ಕಂಡು ಮುಗುಳುನಗೆ ಬೀರುತ್ತಾ ಕೂರುವಂತೆ ಕಣ್ಸನ್ನೆ ಮಾಡಿದರು. ಅಜ್ಜಿ ,ಜಪ ಮುಗಿಯುತ್ತಿದ್ದಂತೆ ನವ್ಯಾಳಿಗೆ ಅಜ್ಜಿಯ ಬ್ಯಾಗ್ ಕಾಣಿಸಿತು. ಹತ್ತಿರ ಎಳೆದು ಕೊಂಡು ನೋಡಲು ಆರಂಭಿಸಿದಳು. ಚಿಕ್ಕ ಪೊಟ್ಟಣದಲ್ಲಿ ಒಂದಿಷ್ಟು ದಾರಗಳನ್ನು ಕಂಡು ಪ್ರಶ್ನಾರ್ಥಕವಾಗಿ ಅಜ್ಜಿಯನ್ನು ಕಂಡಾಗ "ಇದು ಕಾಶಿ ದಾರ. ಇದನ್ನು ದೃಷ್ಟಿನಿವಾರಣೆಗೆ ಕಟ್ಟುತ್ತಾರೆ. ನೀನು ಈ ಕಾಲದವಳು ಎಲ್ಲಿ ನಂಬುತ್ತಿ ಇದನ್ನೆಲ್ಲಾ

ಎಂದು ಕೊಡಲ್ಲಿಲ್ಲ ಅಷ್ಟೇ" ಎಂದರು. ಅಜ್ಜಿ ಮಾತನ್ನು ಕೇಳಿ ನವ್ಯಾ ನಗುತ್ತಾ "ಯಾಕೆ ನಂಬಲ್ಲ ನೀನು ತಂದಿದ್ದಿ ಅಂದ ಮೇಲೆ ಕಟ್ಟಿಕೊಳುತ್ತೇನೆ. ಆದರೆ ಅಜ್ಜಿ ಇಷ್ಟು ದಾರ ಒಟ್ಟಿಗೆ ಕಟ್ಟಿಕೊಳ್ಳಬೇಕಾ" ಎಂದು ಮೂತಿ ಉದ್ದ ಮಾಡಿ ಕುಳಿತ ಮೊಮ್ಮಗಳನ್ನು ಕಂಡು ತನ್ನ ಬೊಚ್ಚು ಬಾಯಿಗೆ ಸೆರಗನ್ನು ಅಡ್ಡ ಹಿಡಿದು ನಗಲಾರಂಭಿಸಿದಳು ಸುಬ್ಬಜ್ಜಿ. ಹುಸಿಗೋಪ ತೋರಿದ ಮೊಮ್ಮಗಳನ್ನು ರಮಿಸುತ್ತಾ "ಅಲ್ವೆ ಕೋಡಂಗಿ! ಇಷ್ಟೂ ಒಟ್ಟಿಗೆ ಅಲ್ಲ ಒಂದನ್ನು ಕಟ್ಟಿಕೊಂಡರೆ ಸಾಕು" ಎಂದಳು

"ಮತ್ತೆ ಇಷ್ಟು ಯಾಕೆ ತಂದಿದ್ದು?" ಎಂದ ನವ್ಯಳಿಗೆ

"ಕಾಶಿಯಿಂದ ಬಂದ ಮೇಲೆ ಅಲ್ಲಿಂದ ತಂದ ತೀರ್ಥವನ್ನು ಹಂಚುವ ಕಾರ್ಯಕ್ರಮ ಮಾಡುತ್ತಾರೆ. ಒಂದು ವೇಳೆ ನಿಮ್ಮ ಅಪ್ಪ ಕಾರ್ಯಕ್ರಮ ಮಾಡಲು ಒಪ್ಪಿದರೆ ಬಂದವರಲ್ಲಿ ಯಾರಾದರು ಕೇಳಿದರೆ ಕೊಡಲು ತಂದಿರುವೆ" ಎಂದಳು ಅಜ್ಜಿ

"ಹೋ ಹೌದಾ ಅಪ್ಪನ ಬಳಿ ಮಾತನಾಡುವೆ" ಎಂದು ಓಡಲು ಹೊರಟ ನವ್ಯ ಬಾಗಿಲ ಹಿಂದೆ ಅಜ್ಜಿ ಮೊಮ್ಮಗಳ ಮಾತನ್ನು ಆಲಿಸುತ್ತಿದ್ದ ಅಪ್ಪನನ್ನು ಕಂಡು ಬೆರಗಾದಳು. ಸುಹಾಸ್ ಅಮ್ಮನ ರೂಮ್ ಬಳಿ ಬರುವುದು ಅಪರೂಪ. ಅಜ್ಜಿ ಮೊಮ್ಮಗಳ ಮಾತನ್ನು ಆಲಿಸಿದ ಸುಹಾಸನಿಗೆ ಅಮ್ಮನಿಗೆ ಕಾಶಿ ಸಮಾರಾಧನೆ ಮಾಡುವ ಆಲೋಚನೆ ಇದೆ ಎಂದು ತಿಳಿದು ಇದರ ಬಗ್ಗೆ ಕುಲಪುರೋಹಿತರ ಬಳಿ ಮಾತನಾಡಬೇಕೆಂದು ನಿರ್ಧರಿಸಿದ. ಅಪ್ಪ ಮಗಳು ಹರಟುತ್ತಾ ಊಟ ಮುಗಿಸಿ ತಮ್ಮ ತಮ್ಮ ಕೋಣೆಗೆ ಹೋಗಿ ನಿದ್ರಿಸಿದರು. ಸುಬ್ಬಜ್ಜಿ ಮಾತ್ರ ಎಂದಿನಂತೆ ನಿದ್ದೆ ಬಾರದೆ ಹೊರಳಾಡುತ್ತಿದ್ದರು.

ಮಧ್ಯರಾತ್ರಿ ಸುಬ್ಬಜ್ಜಿಗೆ ವಿಪರೀತ ಜ್ವರ ಕಾಡಲಾರಂಭಿಸಿತು. ನೀರು ಕುಡಿಯಲೆಂದು ಅಡುಗೆ ಮನೆಯ ಬಳಿ ಬಂದ ಸುಹಾಸ್ ಗೆ ಪಕ್ಕದ ಕೋಣೆಯಲ್ಲಿ ಮಲಗಿದ್ದ ಅಮ್ಮನ ನರಳುವಿಕೆ ಕೇಳಿಸಿತು. ಬಾಗಿಲ ಬಳಿ ಬಂದು ನೋಡಿದವನಿಗೆ ಮುದುರಿಕೊಂಡು ನಡುಗುತ್ತಾ ಮಲಗಿದ ಅಮ್ಮನನ್ನು ಕಂಡು ಗಾಬರಿಯಾಯಿತು. ಹೆಂಡತಿಯನ್ನು ಕರೆದ. ಕೆಂಡದಂತೆ ಸುಡುತ್ತಿದ್ದ ಸುಬ್ಬಜ್ಜಿಗೆ ಪ್ರಜ್ಞೆ ತಪ್ಪಿತ್ತು. ತಡ ಮಾಡದೆ ಹತ್ತಿರದ ಆಸ್ಪತ್ರೆಗೆ ಕರೆದುಕೊಂಡು ಹೋದರು. ಎಲ್ಲಾ ತರಹದ ಪರಿಕ್ಷೆ ಮಾಡಲು ತಿಳಿಸಿದ ಕಾರಣ ಅಲ್ಲಿಯೇ ಉಳಿಯಬೇಕಾಯಿತು. ಸುಬ್ಬಜ್ಜಿಗೆ ಪ್ರಜ್ಞೆ ಬಂದಾಗ ತಾನು ಎಲ್ಲಿದ್ದೇನೆ ಎಂದು ತಿಳಿಯದೆ ಸುತ್ತಮುತ್ತ ಕಣ್ಣಾಡಿಸು ತ್ತಿರುವಾಗ ಪಕ್ಕದಲ್ಲಿ ಅಳುತ್ತಿದ್ದ ನವ್ಯಳನ್ನು ಕಂಡರು. ಅಜ್ಜಿ ಕಣ್ಣು ಬಿಟ್ಟಿದ್ದನ್ನು ಕಂಡೊಡನೆ ತಬ್ಬಿಕೊಂಡು ಅಳಲಾರಂಭಿಸಿದಳು. ಸುಬ್ಬಜ್ಜಿಗೆ ವಿಷಯವೇನೆಂದು ಅರ್ಥೈಸಲು ಕೊಂಚ ಸಮಯ ಹಿಡಿಯಿತು. ತಾನು ಆಸ್ಪತ್ರೆಯಲ್ಲಿರುವೆನೆಂದು ಖಾತರಿಯಾದ ನಂತರ ನನಗೇನೋ ಆಗಿದೆ ಎಂಬ ಭಯದಲ್ಲಿ ನವ್ಯ ಅಳುತ್ತಿದ್ದಾಳೆ ಎಂಬುದನ್ನು

ಅವರ "ಸಾಹಿತಿ ಅಪ್ಪು ಶಂಕರ್. ನನ್ನ ಮನದ ನೋವಿನ ಸಾಂತ್ವನಾಕ್ಷಣ" ಎಂದು ಹೊಗಳಿದಳು ಸರೋಜಾ. ಎಲ್ಲರಿಗೂ ಒಳ್ಳೆಯ ಹಾಗು ಪರಿಚಯವಿರುವ ನ್ಯಾಯಾಧೀಶ ಶಾಂತ ಶಿವಾನಂದ ಎಂದು ತಿಳಿದ ನ್ಯಾಯ ಒಂದಿಷ್ಟು ಸಾಹಿತ್ಯಗಳನ್ನು ಕೊಟ್ಟು ಕಳುಹಿಸಿದರು.

ಅವರೊಂದಿಗೆ ಸುಷ್ಮಳೂ ಹೇಳಿಕೊಂಡು ಮನೆಗೆ ಹಿಂದಿರುಗಿ ನ್ಯಾಯದ ವಿಚಾರ ತಿಳಿದು. ಮಗ ಶಾಂತಿ ಸಮಾರಂಭದ ಬಗ್ಗೆ ಅಧ್ಯಯನ ಮಾಡಿದ ಸಂತೋಷವನ್ನು ಹೇಳಿ ಮಾಡಿ ವಿಷಯವನ್ನು ತಿಳಿಸಿದಳು. ಎಲ್ಲ ನೆಂಟರಿಷ್ಟರನ್ನು ಆಮಂತ್ರಿಸಲಾಗಿತ್ತು.

ಈ ಬಾರಿ ನನ್ನ ಸತೀಶನನ್ನು ಶಾಲೆ ಸಮಾರಂಭಕ್ಕೆ ಕರೆಯುವ ಮನಸ್ಸು ಮಾಡಲಿಲ್ಲ. ಕಾರಣ ಕಾಶಿಗೆ ಹೋಗುವ ಮುನ್ನ ಅವರಿಗೆ ನಿರಾಸಕ್ತಿ ಆದಂತಹ ಜೀವನ್ ಸತೀಶನನ್ನೇ ನೋಡುತ್ತಾ ಕರೆದು ಹೋಗುವುದನ್ನು ಗಮನಿಸಿದ ನನ್ನ ಈ ಬಾರಿ ಜೀವನ್ ನನ್ನನ್ನೇ ನೋಡುತ್ತಾನೆ ಎಂಬ ಕಾರಣಕ್ಕೆ ಸತೀಶನನ್ನು ಕರೆಯಲಿಲ್ಲ. ಮೊದಲಿನಿಂದಲೂ ಸತೀಶನೆಂದರೆ ಸುಷ್ಮಳಿಗೆ ಅಕ್ಕರೆ. ಹಾಗಾಗಿ ನಮ್ಮಳ ತಾಯಿ ಹಾಗೂ ಸುಷ್ಮಳ ಸತೀಶನನ್ನು ಕರೆಯಲು ಮರೆಯಲಿಲ್ಲ.

* * *

ಒಂದು ಭಾನುವಾರ ಶಾಲೆ ಸಮಾರಂಭಗಳಿಗಾಗಿ ಹೊರಟಿತು ಹಾಗೂ ಅಪ್ಪನವರು ಎಲ್ಲ ನೆಂಟರು ಸೇರಿದ್ದರು. ಹುಡುಗಿಯನ್ನು ನೋಡಿದಂತ ನಂತರ ತಂದ ತಿಂಡಿಗಳನ್ನು ಎಲ್ಲರೂ ಹಂಚಿ ತಿನ್ನುತ್ತಿರುವಲ್ಲಿ ಭಾಗಿಯಾಗಿ ಎಲ್ಲರೂ ಹೊರಟರು. ಹುಡುಗಿಯ ಕಡೆಯ ಜೀವನ್ ಅಂದು ಬಂದಿರಲಿಲ್ಲ. ಬರುತ್ತಾನೆ ಎಂದು ನಿರೀಕ್ಷಿಸಿದ್ದ ಸುಷ್ಮಳ ಆಸೆ ನಿರಾಸೆಯಾಗಿತ್ತು. ಏಕೆ ಬರಲಿಲ್ಲವೆಂದು ಅವನ ಅಣ್ಣನನ್ನು ಕೇಳಿದಳು. ಮನೆ ಮಂದಿಯೆಲ್ಲ ನನ್ನ ಒಡತಿ ನೂರ್ಜಹಾನ್ ಎಂದು ಭಾವಿಸಿದ್ದರು. ಅವರ ಮನದೊಳಗೆ ಕೊರಗುತ್ತಿದ್ದ ನನ್ನ ಯಾವುದನ್ನೂ ಹೇಳಿಕೊಳ್ಳಲಿಲ್ಲ. ಸುಷ್ಮಳಿಗೆ ಮಾತ್ರ ನಮ್ಮಳ ಮನಸ್ಸಿನಲ್ಲಿ ಯಾರೋ ಇದ್ದಾರೆ ಎಂಬ ಸಂಶಯ ಬಲವಾಗಿತ್ತು.

ಮರುದಿನ ಕಾಲೇಜಿಗೆ ಹೋದಾಗ ಅಲ್ಲಿಯೂ ಜೀವನ್ ಬಾರದಿದ್ದನ್ನು ನೋಡಿ ಅವನ ಮನೆಗೆ ಹೋಗಿ ವಿಚಾರಿಸಿಕೊಂಡು ಬರಬೇಕೆಂದುಕೊಂಡಳು. ಒಬ್ಬಳೇ ಹೋಗಲು ಮುಜುಗರ. ಏನು ಮಾಡುವುದೆಂದು ಯೋಚಿಸುತ್ತಿದ್ದು ನಾಗೇಶ ಸತೀಶನನ್ನು ಕರೆದು ಜೀವನ್‌ನನ್ನು ನೋಡಿಕೊಂಡು ಬರಲು ಜೊತೆ ಬರುವಂತೆ ಒಪ್ಪಿಸಿದಳು. ಮೊದಲಿಗೆ ಇಲ್ಲವೆಂದ ಸತೀಶ ಸುಷ್ಮಳ ಹಠಕ್ಕೆ ಒಪ್ಪಿದ್ದರಿಂದ ಜೀವನ್ ಮನೆ ಕಡೆಯ ದಾರಿಯಲ್ಲಿ ಪ್ರಯಾಣ ಬೆಳೆಸಿದರು. ಜೀವನ್ ಮನೆಗೆ ತಲುಪಿದಾಗ ಆಶ್ಚರ್ಯ, ಅವರ ತಾಯಿ ಬರಮಾಡಿಕೊಂಡರು.

ಸರಿತಾಳನ್ನು ಕಂಡು ಜೀವನ್ ತಾಯಿಗೆ ಇವಳು ತನ್ನ ಮಗನಿಗೆ ತಕ್ಕ ಜೋಡಿ ಎಂಬ ಭಾವನೆ ಮನದಲ್ಲಿ ಚಿಗುರಿತ್ತು. ರೂಪದಲ್ಲಿ ನವ್ಯ ಸುಂದರಿಯಾಗಿದ್ದರೂ ಸರಿತಾಳ ಬಳಿ ಎಲ್ಲರನ್ನೂ ಸೆಳೆಯುವ ಆಕರ್ಷಣೆಯೊಂದಿತ್ತು. ಅದುವೇ ನಗುವಿನೊಂದಿಗೆ ಕೆನ್ನೆ ಮೇಲೆ ಬೀಳುವ ಗುಳಿ. ಈ ಗುಳಿಕೆನ್ನೆಗೆ ಸೋಲದವರಿರಲಿಲ್ಲ. ಸೋತವರ ಪೈಕಿ ಜೀವನ್ ತಾಯಿಯೂ ಒಬ್ಬರಾಗಿದ್ದರು. ಸರಿತಾಳ ಪೂರ್ವಾಪರವನ್ನು ವಿಚಾರಿಸಿ ಗಂಡನೊಂದಿಗೆ ಮಾತನಾಡಬೇಕೆಂದು ಮನದಲ್ಲೇ ನಿರ್ಧರಿಸಿಕೊಂಡಿದ್ದರು.

ಹುಷಾರಿಲ್ಲದೆ ಮಲಗಿದ್ದ ಜೀವನ್‌ನನ್ನು ಕಂಡು ನವ್ಯಾಳ ಎದೆ ಭಾರವಾಗಿತ್ತು. ನಿರೀಕ್ಷಿಸಿರದ ಅತಿಥಿಗಳನ್ನು ಕಂಡ ಜೀವನ್‌ಗೆ ಏನು ಮಾತನಾಡುವುದೆಂದು ತೋಚದೆ ಸುಮ್ಮನಾಗಿದ್ದ. ಸರಿತಾಳನ್ನು ಕಂಡ ಜೀವನ್‌ಗೆ ಅವಳ ಸುಶ್ರಾವ್ಯ ಕಂಠದಿಂದ ಹಾಡನ್ನು ಕೇಳಬೇಕೆಂಬ ಮನಸಾಗಿ ಕೇಳಿಕೊಂಡ. ಮೊದಲಿಗೆ ಸಂಕೋಚಪಟ್ಟ ಸರಿತಾ ನಂತರ ಹಾಡಲಾರಂಭಿಸಿದಳು. ಅವಳ ಕಂಠದಿಂದ ಮೂಡಿಬಂದ ಯಾವ ಮೋಹನ ಮುರಳಿ ಕರೆಯಿತು ಹಾಡಿನ ನಿನಾದ ಇಡೀ ಮನೆಯನ್ನು ಆವರಿಸಿತು. ಎಲ್ಲರೂ ಸರಿತಾಳ ಇಂಪಾದ ಕಂಠಕ್ಕೆ ಸೋತು ಹೋಗಿದ್ದರು. ಜೀವನ್ ಮುಖದಲ್ಲಿನ ನಗುವನ್ನು ಕಂಡು ನವ್ಯಾಳಿಗೆ ಕೊಂಚ ಸಮಾಧಾನವಾದರೆ ಇನ್ನೊಂದೆಡೆ ಈ ಸರಿತಾಳನ್ನು ಯಾಕೆ ಕರೆದುಕೊಂಡು ಬಂದೆ ಎಂಬ ಪ್ರಶ್ನೆ ಮೂಡತೊಡಗಿತು. ಸರಿತಾಳನ್ನು ಜೀವನ್ ಅಮ್ಮ ಸತ್ಕರಿಸುತ್ತಿದ್ದ ರೀತಿಗೆ ನವ್ಯಾಳ ಹೊಟ್ಟೆ ಉರಿಯುತ್ತಿತ್ತು. ಜೀವನ್‌ಗೆ ನನ್ನ ಮೇಲಿರುವುದು ಆಕರ್ಷಣೆಯೋ ಪ್ರೀತಿಯೋ ಎಂಬ ಗೊಂದಲ ಅವಳನ್ನು ಕಾಡುತ್ತಿತ್ತು. ನವ್ಯಾಳನ್ನು ಕಂಡಾಗ ಮೂಡುವ ಭಾವನೆಗಳು ಹಾಗೂ ಸರಿತಾಳನ್ನು ಕಂಡಾಗ ಮೂಡುವ ಭಾವನೆಗಳಲ್ಲಿ ವ್ಯತ್ಯಾಸವಿರುವುದು ಜೀವನ್ ಗಮನಕ್ಕೆ ಬಂದಿತ್ತು. ಇಂದು ನವ್ಯ ಹಾಗೂ ಸರಿತಾ ಒಟ್ಟಿಗೆ ಬಂದಾಗ ಸರಿತಾಳ ಹಾಡಿಗೆ ಅವಳ ನಗುವಿನ ಮೋಡಿಗೆ ಮನಸ್ಸು ಅವಳೆಡೆಗೆ ಜಾರುತ್ತಿರುವ ಅನುಭವ ಜೀವನ್‌ನದಾಗಿತ್ತು. ಅಮ್ಮ ಮಗ ಇಬ್ಬರ ಮನಸಲ್ಲೂ ಸರಿತಾ ಬೇರೂರಿದ್ದಳು.

ಡಾಕ್ಟರ್ ಅಭಿ ಸಲಹೆಯಂತೆ ಸುಬ್ಬಜ್ಜಿಯೊಂದಿಗೆ ಪ್ರತಿದಿನವೂ ಒಂದು ಅರ್ಧ ಗಂಟೆ ಸುಹಾಸ್ ನವ್ಯ ಹಾಗೂ ಸುಜಾತ ಪ್ರತ್ಯೇಕವಾಗಿ ಕಾಲ ಕಳೆಯುತ್ತಿದ್ದರು. ತಾನು ಒಂಟಿ ನನ್ನವರು ಯಾರಿಲ್ಲ ಎಂಬ ಭಾವ ಹೋಗಿಸುವಂತಹ ಪ್ರಯತ್ನದಲ್ಲಿ ಮನೆ ಮಂದಿ ಎಲ್ಲರೂ ಡಾಕ್ಟರ್ ಸಲಹೆಯಂತೆ ಕೈಜೋಡಿಸಿದ್ದರು. ಹೀಗಾಗಿ ಸುಬ್ಬಜ್ಜಿಯ ಮನಃಸ್ಥಿತಿ ಕೊಂಚ ಹತೋಟಿಯಲ್ಲಿತ್ತು. ಡಾ. ಅಭಿಗೆ ಪ್ರತಿಬಾರಿ ನವ್ಯಾಳನ್ನು ನೋಡಿದಾಗೆಲ್ಲಾ ಮನಸ್ಸು ಪ್ರಫುಲ್ಲಗೊಳ್ಳುತ್ತಿತ್ತು. ಅದೇನೋ ಹೇಳಲಾರದಂತ ಒಂದು ಭಾವ ಮನದಲ್ಲಿ ನರ್ತಿಸುತ್ತಿತ್ತು. ನವ್ಯ ಮನೋವೈದ್ಯೆ

ಅಧ್ಯಾಯ 17

ಅನುಷ ಎಂ.ಎಂ.

ಕಾಲೇಜಿನ ವಾರ್ಷಿಕೋತ್ಸವವು ಹತ್ತಿರ ಬರುತ್ತಿದ್ದಂತೆಯೇ ಕಾಲೇಜಿನ ವಿದ್ಯಾರ್ಥಿಗಳಿಗೆ ಎಲ್ಲಿಲ್ಲದ ಸಂಭ್ರಮ, ಸಡಗರ. ಕಾಲೇಜಿನ ಕಡೆಯ ವರ್ಷವಾದ್ದರಿಂದ ಅದು ಸಂತಸವೂ ಹೌದು, ಬೇಸರವೂ ಹೌದು. ಇನ್ನೇನು ಕಾಲೇಜು ಮುಗಿದಂತೆ ಎಲ್ಲರೂ ಡಾಕ್ಟರ್, ಇಂಜಿನಿಯರ್, ಲಾಯರ್, ಸಿ.ಎ, ಬಿಸ್ನೆಸ್, ಐ.ಎ.ಎಸ್. ಎಂಬ ಎಲ್ಲಾ ಆಕಾಂಕ್ಷೆಗಳೊಡನೆ ಎಲ್ಲರೂ ದೂರವಾಗಲೇಬೇಕು ಎಂಬ ಕಠಿಣ ಸತ್ಯವನ್ನು ಎಲ್ಲರೂ ಜೀರ್ಣಿಸಿಕೊಳ್ಳುತ್ತಿದ್ದರು. "ನೀನು ಯಾವ ಕಾಲೇಜ್ ಸೇರಬೇಕೆಂದಿದ್ದೀಯೇ?" "ಕಾಲೇಜು ಮುಗಿದ ಮೇಲೂ ಕಾಂಟ್ಯಾಕ್ಟ್ ಇಟ್ಟುಕೊಳ್ಳೋದನ್ನ ಮರೀಬೇಡ್ವೆ!" "ಯಾವಾಗಲೂ ಫೋನ್ ಮಾಡ್ತಾ ಇರು ಆಯ್ತಾ?" "ನನ್ನ ಸ್ಲಾಮ್ ಬುಕ್ ಬರೆದು ಕೊಡೆ" "ಅವನು ಅವಳ (Slam Book) ಸ್ಲಾಮ್ ಬುಕ್ ನಲ್ಲಿ ಏನು ಬರೆದಿದ್ದ ಗೊತ್ತಾ?" ಈ ಮಾತುಗಳೇ ಹೆಚ್ಚಾಗಿ ಕೇಳಿಬರುತ್ತಿದ್ದವು.

ಇತ್ತ ನವ್ಯಾಳಿಗೆ ಮನಸ್ಸಿನಲ್ಲೇನೊ ಕಳವಳ. ಸರಿತಾಳ ಸಂಗೀತ ಕಛೇರಿಯ ದಿನ ಆಕೆ ಜೀವನ್ ಹಾಗೂ ಸರಿತಾಳೊಂದಿಗೆ ನಡೆದುಕೊಂಡಂತಹ ರೀತಿ ಆಕೆಗೆ ಮುಜುಗರ ಉಂಟು ಮಾಡಿತ್ತು. "ಛೇ, ಎಂತಹ ತಪ್ಪಾಯ್ತು ನನ್ನಿಂದ. ಜೀವನ್ ಮೇಲೆ ಕೋಪ ಮಾಡಿಕೊಂಡುಬಿಟ್ನಲ್ಲಾ ನಾನು! ನಾನು ಹಾಗೆ ಅವರಿಬ್ಬರಿಗೂ ಮುಖಕ್ಕೆ ಹೊಡೆದ ಹಾಗೆ ಮಾತನಾಡಬಾರದಿತ್ತು. ಅವರಿಬ್ಬರೂ ನನ್ನ ಬಗ್ಗೆ ಏನೆಂದುಕೊಂಡರೋ ಏನೋ! ಸುಬ್ಬಜ್ಜಿ ಹೇಳೋದು ನಿಜ, ನನಗೆ ಮುಂಗೋಪ ಮೂಗಿನ ತುದಿ ಮೇಲೇ ಇರುತ್ತೆ. ಒಮ್ಮೆ ಹೋಗಿ ಜೀವನ್ ಹಾಗು ಸರಿತಾರನ್ನು ಮಾತನಾಡಿಸಬೇಕು."

ಹೀಗೆ ಯೋಚಿಸಿದ ನವ್ಯ, ಜೀವನ್ ಹಾಗು ಸರಿತಾರನ್ನು ಹುಡುಕಿಕೊಂಡು ಹೊರಟಳು. ಹೀಗೆ ಹೊರಟ ನವ್ಯಾಳಿಗೆ ಕಂಡ ದೃಶ್ಯದಿಂದ ಆಕೆಗೆ ಎಲ್ಲಿಲ್ಲದಂತಹ ಸಿಟ್ಟು, ಅಸೂಯೆ ಮರುಕಳಿಸಿತು. ಕಾರಣ ಆಕೆಗೆ ಕಂಡದ್ದು ಜೀವನ್ ಹಾಗು ಸರಿತಾ ನಗುನಗುತ್ತಾ ಮಾತನಾಡುತ್ತಿದ್ದದ್ದು. ಇಬ್ಬರೂ ಅವರವರ (Slam Book) ಸ್ಲಾಮ್ ಬುಕ್ ಬರೆಯುತ್ತಾ, ಹರಟೆ ಹೊಡೆಯುತ್ತಾ ಸಂತಸದಲ್ಲಿದ್ದುದನ್ನು ಕಂಡ ನವ್ಯಾಳ ನಿರಾಶೆ ಹೇಳತೀರದು. ಅಲ್ಲಿಂದ ತಕ್ಷಣ ಹೊರಡಬೇಕೆನ್ನುವಾಗ ಜೀವನ್ ನವ್ಯಾಳನ್ನು ನೋಡಿ ಕರೆದನು.

"ಹೇ ನವ್ಯ, ನಾವಿಬ್ರೂ ನಿನ್ನನ್ನೇ ಹುಡುಕಬೇಕು ಅಂತ ಅಂದುಕೊಳ್ತಿದ್ವಿ! ನೂರು ವರ್ಷ ಆಯಸ್ಸು ನಿಂಗೆ! ಹೇಗಿದ್ಯಾ ನೀನು? ನೀನು ಬಂದಿದ್ದು ಒಳ್ಳೆದಾಯ್ತು ನೋಡು. ನಮ್ಮಿಬ್ಬರ (Slam Book) ಸ್ಲಾಮ್ ಬುಕ್ ಬರೆದು ಕೊಡ್ತ್ಯಾ?" ಅಂತ ಜೀವನ್ ಪಟ್ ಪಟ ಮಾತನಾಡಿದನು.

ನವ್ಯ ಸಿಟ್ಟು ಬೇಸರದಲಿದ್ದರೂ ಬೇರೆ ದಾರಿಯಿಲ್ಲದೆ ಅವರತ್ತ ನಡೆದಳು.

ಅಸೂಯೆ ಎಂಬ ಭಾವನೆಯೇ ವಿಚಿತ್ರ. ತನಗೆ ಬೇಕಾಗುವುದೆಲ್ಲವನ್ನೂ ಆ ದೇವರು ಕರುಣಿಸಿದ್ದರೂ ಬೇರೆಯವರ ಬಳಿ ಇರುವುದನ್ನು ಬಯಸುವ ಮನಸ್ಸು, ಬೇರೆಯವರ ಏಳಿಗೆ ಕಂಡು ಮೈ ಪರಚಿಕೊಳ್ಳುವ ಖಾಯಿಲೆಯು ಈ ಅಸೂಯೆ ಎಂಬ ಭಾವನೆ. ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನಾ ಅಂತ ಕವಿ ಗೋಪಾಲಕೃಷ್ಣ ಅಡಿಗರು ಹೇಳಿರುವ ಹಾಗೆ ನಾನು ಇದನ್ನು ಯಾಕೆ ಯೋಚಿಸುತ್ತಿದ್ದೀನಿ? ನಾನು ಯಾಕೆ ಹೀಗಾಗಿ ಹೋದೆ? ಎಂದು ಯೋಚಿಸುತ್ತಾ ಮೌನವಾಗಿ ಕುಳಿತ ನವ್ಯಾಳಿಗೆ ಅಂದಿನ ದಿನದ ಘಟನೆ ತಲೆಯಲ್ಲಿ ಕೊರೆಯುತ್ತಿತ್ತು.

ಜೀವನ್ ಹಾಗು ಸರಿತಾ ಹತ್ತಿರವಾಗುತ್ತಿರುವುದು, ಜೀವನ್ ಪ್ರತಿದಿನವೂ ಬಂದು ಸರಿತಾ "ಯಾವ ಹೂವು ಯಾರ ಮುಡಿಗೋ" ಹಾಡಿನ ಪ್ರಾಕ್ಟೀಸ್ ಕೇಳಿ "ಈ ಬಾರಿಯ ಹಳೆಯ ಚಲನಚಿತ್ರ ಗೀತೆಗಳ ಸ್ಪರ್ಧೆಯಲ್ಲಿ ಗೆಲ್ಲುವುದು ಸರಿತಾಳೇ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ" ಎಂದು ಖುಷಿಯಿಂದ ಹಿಗ್ಗುವುದು, ಜೀವನ್ ಸರಿತಾಳನ್ನು ಹೊಗಳುವ ರೀತಿ, ಜೀವನ್ ತದೇಕಚಿತ್ತದಿಂದ ಸರಿತಾಳ ಸಂಗೀತವನ್ನು ಆಲಿಸುವ ರೀತಿ, ಜೀವನ್‌ನ ತಾಯಿಯೂ ಸರಿತಾಳನ್ನು ಅಕ್ಕರೆಯಿಂದ ಕಂಡ ರೀತಿ ಇವೆಲ್ಲವೂ ನವ್ಯಾಳಿಗೆ ಬೇಸರವುಂಟುಮಾಡಿದರೂ ಇವೆಲ್ಲವನ್ನು ಯೋಚಿಸಿದಾಗ ಆಕೆಗೆ ಒಂದು ಕಹಿ ಸತ್ಯದ ಅರಿವು ಮೂಡತೊಡಗಿತು.

ನವ್ಯ ಮನೆಯ ಮುಂದಿನ ಜಗುಲಿಯ ಮೇಲೆ ಕುಳಿತು ಈ ಯೋಚನೆಯ ಸಾಗರದಲ್ಲಿ ಮುಳುಗಿದ್ದಾಗ "ಹೇಗಿದ್ಯಾ ನವ್ಯ? ಏನು NEET Exam ತಯಾರಿ ಜೋರ?" ಎಂದು ಹೇಳುವುದು ಕೇಳಿ ತನ್ನ ಆಲೋಚನೆಗಳಿಂದ ವಾಪಸ್ಸು

ಬಂದಳು. "ಓಹ್, ಡಾ॥ ಅಭಿಲಾಷ್, ನೀವ್ಯಾವಾಗ ಬಂದ್ರಿ?" ಎನ್ನುತ್ತಾ ಎದ್ದಳು ನವ್ಯ. "ಅಮ್ಮಾ, ಯಾರು ಬಂದಿದ್ದಾರೆ ನೋಡು" ಎನ್ನುತ್ತಾ ಅಭಿಲಾಷ್ ರನ್ನು ಮನೆಯೊಳಗೆ ಕರೆದಳು. ಸುಜಾತಳಿಗಂತೂ ಡಾ॥ ಅಭಿಲಾಷ್ ಬಂದದ್ದನ್ನು ಕಂಡು ಎಲ್ಲಿಲ್ಲದ ಖುಷಿ. ಅಭಿಲಾಷ್ ರನ್ನು ಮನೆಯೊಳಗೆ ಬರಮಾಡಿಕೊಂಡು ಉಪಚರಿಸಿದಳು. "ಅಯ್ಯೋ, ನಂಗೇನು ಬೇಡ ಆಂಟಿ, ಜಸ್ಟ್ ಕಾಫಿ ಕುಡಿದು ಬಂದೆ. ಪಕ್ಕದ ಊರಿಗೆ ಒಂದು ಕೆಲಸಕ್ಕೆ ಬಂದಿದ್ದೆ, ಹಾಗೆ ಪದ್ಮ ಆಂಟಿ ಮತ್ತೆ ನಿಮ್ಮೆಲ್ಲರನ್ನೂ ನೋಡ್ಕೊಂಡ್ ಹೋಗೋಣ ಅಂತ ಬಂದೆ. "ಡಾ. ಅಭಿಲಾಷ್ ಹೇಳಿದನು. "ಅರೇ, ಬಂದಿದ್ದು ಸಂತೋಷ, ಆದ್ರೆ ಹಾಗೆ ಹೇಳಿದ್ರೆ ಹೇಗೆ, ಇರು ಬರ್ತೀನಿ" ಅಂತ ಅಡುಗೆ ಮನೆ ಹೊಕ್ಕಳು ಸುಜಾತ.

ನವ್ಯಾಳ ಜೊತೆ NEET ಪರೀಕ್ಷೆಯ ಸಿದ್ಧತೆಯ ಬಗ್ಗೆ ಮಾತನಾಡುತ್ತಿದ್ದಾಗ ನವ್ಯ ಬೇಸರವಾಗಿರುವುದು ಅಭಿಲಾಷ್‌ನ ಗಮನಕ್ಕೆ ಬಂದಿತು. ಏನು ಎಂದು ಕೇಳಲು ಆಗದೆ ಕಾರಣ ಏನಿರಬಹುದೆಂದು ಊಹಿಸಲು ಪ್ರಯತ್ನಿಸಿದನು. ಏನೆಂದು ತಿಳಿಯದಿದ್ದರೂ ನವ್ಯಾಳಿಗೆ ಕಿವಿಮಾತನ್ನೊಂದು ಹೇಳಿದನು. "ನವ್ಯ, ಹೀಗೆ ಹೇಳ್ತೀನಿ ಅಂತ ತಪ್ಪು ತಿಳೀಬೇಡ, ಒಂದು ಸಣ್ಣ ಸಲಹೆ ಅಷ್ಟೆ. ನೀನು ಯಾವುದೋ ವಿಷಯದಲ್ಲಿ ಸಿಲುಕಿ ಗೊಂದಲದಲ್ಲಿ ಇದ್ಯಾ ಅನ್ಸುತ್ತೆ. ಯಾವುದೇ ವಿಷಯದ ಬಗ್ಗೆ ತುಂಬಾ ತಲೆ ಕೆಡಿಸ್ಕೋಬೇಡ, ನಿನ್ನ ಪರೀಕ್ಷೆ ಬೇರೆ ಹತ್ತಿರ ಬರ್ತಿದೆ. ಜೊತೆಗೆ ಸುಬ್ಬಜ್ಜಿಯ ಆರೋಗ್ಯದೆಡೆಗೂ ಗಮನ ಕೊಡಬೇಕು. ನೀನು ಬೇರೆ ವಿಷಯಗಳ ಆಲೋಚನೆಗಿಂತ ನಿನ್ನ ಮನೋವೈದ್ಯಳಾಗುವ ಕನಸನ್ನು ನನಸು ಮಾಡಿಕೊಳ್ಳುವ ಬಗ್ಗೆ ಯೋಚಿಸು. ನೀನು ತುಂಬಾ ಜಾಣೆ, ಖಂಡಿತಾ ನಿನ್ನ ಗುರಿಯನ್ನು ಮುಟ್ಟುತ್ತೀ! ಇನ್ನೂ ಹಲವಾರು opportunities ಇವೆ. Psychiatrist ಆಗಬೇಕೆಂದ್ರೆ MBBS ಮಾಡಿ Psychological Medicine ಡಿಪ್ಲೊಮ ಅಥವ Psychiatry M. D ಮಾಡಬಹುದು. ಅಥವಾ Clinical Psychologist ಆಗಬೇಕು ಅಂದ್ರೆ Psychology ಡಿಗ್ರಿ ಪಡೆದು Clinical Psychology ಮಾಸ್ಟರ್ಸ್ ಮಾಡ್ಬಹುದು. ಯೋಚನೆ ಮಾಡಿ ಪ್ರಿಪೇರ್ ಆಗು, ಆಯ್ತ? ಗುಡ್ ಲಕ್!" ಎಂದು ಹೇಳಿದ ಡಾ॥ ಅಭಿಲಾಷ್ ಸುಜಾತಾಳ ಆತಿಥ್ಯ ಸ್ವೀಕರಿಸಿ, ಮನೆಯಲ್ಲಿಲ್ಲದ ಸುಬ್ಬಜ್ಜಿಯನ್ನೂ ಹಾಗೂ ಸುಹಾಸನನ್ನೂ ವಿಚಾರಿಸಿ, ಮತ್ತೊಮ್ಮೆ ಬರುವುದಾಗಿ ಹೇಳಿ ಹೊರಟನು.

ಡಾ॥ ಅಭಿಲಾಷ್ ಹೇಳಿದ ಮಾತುಗಳು ನವ್ಯಾಳ ಮನಸ್ಸಿನಲ್ಲಿ ಬೇರೂರಿದವು. "ಹೌದು, ನಾನು ಜೀವನ್, ಸರಿತಾರವರ ಚಿಂತೆ ಬಿಟ್ಟು ನನ್ನ ಗುರಿಯತ್ತ ಸೀರಿಯಸ್ ಆಗಿ ಯೋಚನೆ ಮಾಡಬೇಕು. NEET ಪರೀಕ್ಷೆಗೆ ಹೆಚ್ಚಿನ ಸಮಯ ಉಳಿದಿಲ್ಲ. NEETನಲ್ಲಿ ಒಳ್ಳೆಯ Rank ಪಡೆದು, ಅತ್ಯುತ್ತಮ ಕಾಲೇಜಿನಲ್ಲಿ ಸೀಟ್

ನನಿಮ ಅಪ್ಪ, ಅಮ್ಮ, ಸುಬ್ಬಜ್ಜಿಗೆ ಖುಷಿಯಾಗುವಂತೆ ಮಾಡಬೇಕು. ಜೀವನ್ ಸರಿತಾ ಮಧ್ಯೆ ನಾನು ಸುಮ್ಮನೆ ಪ್ರವೇಶಿಸಬಾರದಿತ್ತು. ಜೀವನ್ ಕೂಡ ನನ್ನ ಒಬ್ಬ ಒಳ್ಳೆಯ ಗೆಳೆಯನಾಗಿ ನನ್ನ ಬಗ್ಗೆ ಆಶಿಸಿದ್ದು ನಾನು ನನ್ನ ಗುರಿ ಮುಟ್ಟಬೇಕೆಂಬುದನ್ನೇ. ನನಗೂ ಈಗ ನನ್ನ ಗುರಿ ಮುಟ್ಟುವುದೇ ಮುಖ್ಯ!" ಹೀಗೆಲ್ಲಾ ಆಲೋಚಿಸಿದ ನವ್ಯಾಳಿಗೆ ಮನಸ್ಸು ಹಗುರವಾದಂತೆನಿಸಿತು. ಆಕೆಯಲ್ಲಿದ್ದ ಅಸೂಯೆ, ಸಿಟ್ಟು ಶಾಂತವಾಗತೊಡಗಿತು. ಇವೆಲ್ಲಾ ಆದನಂತರ ನವ್ಯಾಳು ಸರಿತಾ ಹಾಗೂ ಜೀವನ್ ರೊಡನೆ ಮತ್ತೆ ಆತ್ಮೀಯತೆಯಿಂದ ವರ್ತಿಸಲಾರಂಭಿಸಿದಳು. ಕಾಲೇಜಿನ ವಾರ್ಷಿಕೋತ್ಸವದ ಅಂಗವಾಗಿ ಆಯೋಜಿಸಲಾಗಿದ್ದ ಹಳೆಯ ಚಲನಚಿತ್ರ ಗೀತೆಗಳ ಸ್ಪರ್ಧೆಯಲ್ಲಿ ಸರಿತಾ ಗೆದ್ದಳು ಎಂಬ ವಿಷಯ ತಿಳಿದು ನವ್ಯ ಮನಸಾರೆ ಸರಿತಾಳನ್ನು ಅಭಿನಂದಿಸಿದಳು.

❖ ❖ ❖

ಇತ್ತ ದಿನಕರನ ಮನೆಯ ವಾತಾವರಣ ಬೇರೆಯೇ ಆಗಿತ್ತು. ಈ ಹಿಂದೆಯೇ ತನ್ನ ವಿಷಯವಾಗಿ ಸುಬ್ಬಜ್ಜಿಯ ಮನೆಯೊಂದಿಗೆ ಸಂಬಂಧ ಮುರಿದಿದ್ದು ದಿನಕರ್ ನಿಗೆ ಬಹಳ ಬೇಸರ ತರಿಸಿತ್ತು. ನವ್ಯಾಳನ್ನು ನೋಡಿದ ದಿನದಿಂದ ದಿನಕರ್‌ನ ಮನಸ್ಸಿನಲ್ಲಿ ಆಕೆಯೇ ತನ್ನ ಮಗನಿಗೆ ಅನುರೂಪಳಾದ ಜೋಡಿ. ಎಂದೆನಿಸಿ. ಇದರಿಂದ ಸುಬ್ಬಜ್ಜಿಯ ಮನೆಯೊಂದಿಗೆ ಸಂಬಂಧ ಬೆಳೆಸಿ ಆಗಿಹೋದ ಘಟನೆಗಳನ್ನು ಈ ಮೂಲಕ ಸರಿಪಡಿಸಬಹುದು ಎಂದೆಲ್ಲಾ ಆಲೋಚಿಸಿ ಪತ್ನಿಯಾದ ಮೀರಾಳಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ.

ಆದರೆ ಮೀರಾಳ ಆಲೋಚನೆಯು ಬೇರೆಯದೇ ಆಗಿತ್ತು. ಆ ದಿನ ಜೀವನ್ ಆರೋಗ್ಯ ಸರಿಯಿಲ್ಲದ್ದರಿಂದ ಕಾಲೇಜ್‌ಗೆ ಹೋಗದೆ ಮನೆಯಲ್ಲೇ ಇದ್ದಾಗ ನವ್ಯ, ಸರಿತಾ ಇಬ್ಬರೂ ಜೀವನ್‌ನನ್ನು ನೋಡಲು ಮನೆಗೆ ಬಂದದ್ದು, ಜೀವನ್ ಸರಿತಾಳಿಗೆ ಹಾಡು ಹಾಡಲು ಒತ್ತಾಯಿಸಿದ್ದು, ಸರಿತಾ ಹಾಡಿದಾಗ ಜೀವನ್ ಸಂತೋಷ ಪಟ್ಟಿದ್ದು, ಎಲ್ಲವನ್ನೂ ನೆನಪಿಸಿಕೊಂಡ ಮೀರಾ ದಿನಕರ ನಿಗೆ ಆಕೆಯ ಮನಸ್ಸಿನ ಮಾತುಗಳನ್ನು ವಿವರಿಸಿದಳು. "ನಮ್ಮ ಜೀವನ್ ಗೆ ಸರಿತಾ ತಕ್ಕ ಜೋಡಿ. ನನಗೆ ಸರಿತಾ ತುಂಬಾ ಇಷ್ಟವಾದಳು. ಅವಳ ನಡೆ ನುಡಿ ಎಲ್ಲಾ ನಮ್ಮ ಜೀವನ್‌ಗೆ ಹೇಳಿ ಮಾಡಿಸಿದ ಹಾಗೆ ಇದೆ. ನನಗಂತೂ ಸರಿತಾಳೇ ಈ ಮನೆಗೆ ತಕ್ಕ ಸೊಸೆ ಅನ್ನಿಸುತ್ತೆ" ಎಂದು ಮೀರಾ ದಿನಕರ್ ನಿಗೆ ತನ್ನ ಅಭಿಪ್ರಾಯವನ್ನು ತಿಳಿಸಿದಳು. ಹೀಗೆ ಅವರಿಬ್ಬರ ನಡುವೆ ಮಾತಿನ ಚಕಮಕಿ ನಡೆದು ಪರಸ್ಪರ ಭಿನ್ನಾಭಿಪ್ರಾಯ ಮೂಡಿತು. ಕೊನೆಗೆ, ಮದುವೆಯಾಗ ಬೇಕಿರುವ ಹುಡುಗ ಜೀವನ್. ಆತನ ಮನೋಭಿಲಾಷೆ ಏನೋ ಯಾರಿಗೆ ಗೊತ್ತು? ಆತನ ವಿದ್ಯಾಭ್ಯಾಸ ಕೂಡ ಇನ್ನೂ ಮುಗಿದಿಲ್ಲ. ಈ ವಿಷಯದಲ್ಲಿ ಅವನ ಅಭಿಪ್ರಾಯವೇ ಮುಖ್ಯ ಎಂದು ದಿನಕರ

ಹಾಗೂ ಮೀರಾ ಪರಸ್ಪರ ಒಮ್ಮತಕ್ಕೆ ಬಂದು ಜೀವನ್ ನ ಮುಂದಿನ ಭವಿಷ್ಯದ ಬಗ್ಗೆ ಆಲೋಚಿಸುತ್ತಾ ಕುಳಿತರು.

❖ ❖ ❖

"ಕೆಲದಿನಗಳಿಂದ ನಮ್ಮ ಮನೆಯಲ್ಲೆಲ್ಲವೂ ಒಳ್ಳೆಯ ಘಟನೆಗಳಾಗುತ್ತಿವೆ. ಸದಾ ದೇವರ ಅನುಗ್ರಹ ಹೀಗೇ ಇರ್ಲಿಪ್ಪಾ" ಎಂದುಕೊಳ್ಳುತ್ತಾ ಸುಜಾತ ಕೆಲಸವನ್ನು ಮುಗಿಸಿ ಆಫೀಸಿನಿಂದ ಹಿಂದಿರುಗುತ್ತಾ ಯೋಚಿಸತೊಡಗಿದಳು. ಸುಬ್ಬಜ್ಜಿಯ ಮನಸ್ಥಿತಿ ಈಗೀಗ ಸ್ವಲ್ಪ ಹಗುರವಾದಂತೆ ಕಾಣುತ್ತಿದೆ. ಕಾಶೀ ತೀರ್ಥಯಾತ್ರೆ ಸುಖಕರವಾಗಿ ನಡೆಯಿತು. ಕಾಶಿ ಸಮಾರಾಧನೆ ಫಂಕ್ಷನ್ ಸಹ ಚೆನ್ನಾಗಿ ನಡೆಯಿತು. ರುಕ್ಮಿಣಿ ಹಾಗೂ ರಾಮಕೃಷ್ಣ ರವರ ಕುಟುಂಬ ಮತ್ತೆ ಹತ್ತಿರವಾದ ಸಂಗತಿ ಸುಬ್ಬಜ್ಜಿಯ ಖುಷಿಯನ್ನು ಇಮ್ಮಡಿಗೊಳಿಸಿತ್ತು. ನವ್ಯಾ ತನ್ನ ಕಾಲೇಜು, ಪರೀಕ್ಷೆಯ ಸಿದ್ಧತೆಯ ಬಗ್ಗೆ ಖುಷಿಯಾಗಿದ್ದಳು. ಸುಹಾಸನೂ ಕೂಡ ತನ್ನ ತಾಯಿಯ ಚೇತರಿಕೆಯನ್ನು ಕಂಡು ಸಂತಸದಿಂದಿದ್ದನು. ಇವೆಲ್ಲವನ್ನೂ ಯೋಚನೆ ಮಾಡುತ್ತಾ ಸುಜಾತಳಿಗೆ ಒಂದು ಆಲೋಚನೆ ಬಂದಿತು. ಮನೆಯಲ್ಲಿ ಸದ್ಯದಲ್ಲೇ ಒಂದು ಸತ್ಯನಾರಾಯಣ ಪೂಜೆಯನ್ನು ಮಾಡಿಸುವುದು ಉತ್ತಮ ಅಂದು ಕೊಳ್ಳುತ್ತಾ, ಸುಹಾಸ ಹಾಗೂ ಸುಬ್ಬಜ್ಜಿಗೆ ಈ ವಿಷಯ ತಿಳಿಸಿದಳು. ಅವರಿಗೂ ಇದು ಒಳ್ಳೆಯ ಯೋಚನೆ ಎಂದೆನಿಸಿ ಹಾಗೇ ಮಾಡುವುದೆಂದು ನಿರ್ಧರಿಸಿದರು.

ಮನೆಯಲ್ಲಿ ಪೂಜೆ ಮಾಡಿಸುವುದೆಂದರೆ ಸುಮ್ಮನೆಯೇ?! ಮನೆಯ ಒಪ್ಪ ಓರಣವನ್ನು ಈಗಿನಿಂದಲೇ ಸ್ವಲ್ಪ ಸ್ವಲ್ಪ ಮಾಡಿಕೊಳ್ಳುವ ಸಲುವಾಗಿ ಅಟ್ಟ ಹತ್ತಿದ್ದ ಸುಜಾತಾಳಿಗೆ ಅಲ್ಲಿದ್ದ ಸಾಮಾನುಗಳನ್ನು ನೋಡಿ ತಲೆ ತಿರುಗಿದಂತಾಯ್ತು. ಹೇಗಾದರೂ ಮಾಡಿ ಈ ಬಾರಿ ಹಳೆಯ ಸಾಮಾನುಗಳನ್ನೆಲ್ಲ ಕಣ್ಣು ಮುಚ್ಚಿ ಬಿಸಾಕಿಬಿಡಲೇಬೇಕೆಂಬ ಛಲದಿಂದ ಹಳೆಯ ಸಾಮಾನುಗಳನ್ನೆಲ್ಲ ಒಂದೆಡೆ ಸೇರಿಸತೊಡಗಿದಳು. ಹಳೆಯ ಪಾತ್ರೆಗಳು, ಪುಸ್ತಕಗಳು, ಬಟ್ಟೆಗಳು, ಆಟದ ಸಾಮಾನುಗಳು, ಒಂದೇ? ಎರಡೇ?! ಅಬ್ಬಬ್ಬಾ!! ಉಪಯೋಗಕ್ಕೆ ಬಾರದ ಹಳೇ ಸಾಮಾನುಗಳು. ಯಾವುದರಲ್ಲಿ ಏನಿದೆ ಎಂದೇ ಗೊತ್ತಿಲ್ಲ. ಯಾವುದೇ ಸಾಮಾನು ಬೇಕಾದರೂ ಪ್ರತೀ ಬಾರಿ ಹೊಸದಾಗಿ ತರುವುದೇ ಆಗುತ್ತದೆ. ಅಟ್ಟದ ಮೇಲೆ ಇರುವುದೂ ನೆನಪಿಗೆ ಬರೋದಿಲ್ಲ. ಸುಮ್ಮನೆ ಪೇರಿಸಿಡುತ್ತೇವೆ. ಸುಬ್ಬಜ್ಜಿಗೆ ಎಲ್ಲವೂ ಬೇಕು. ಸುಹಾಸ ಹಾಗೂ ಸುಮ ಚಿಕ್ಕವರಾಗಿದ್ದಾಗಿನ ಆಟದ ಸಾಮಾನುಗಳೂ ಅಲ್ಲಿದ್ದವು. ಅವೆಲ್ಲವೂ ಬಹುಶಃ ಸುಮಾಳ ನೆನಪಿಗಾಗಿ ಇರಬೇಕು ಎಂದು ತಾನೂ ಇಷ್ಟು ವರ್ಷ ಸುಮ್ಮನಿದ್ದದ್ದಾಯಿತು. ಇನ್ನು ತನ್ನಿಂದ ಸಾಧ್ಯವಿಲ್ಲ. ಹೇಗಾದರೂ ಮಾಡಿ ಸುಬ್ಬಜ್ಜಿಯನ್ನು ಒಪ್ಪಿಸಿ ಆ ಸಾಮಾನುಗಳನ್ನೆಲ್ಲ ಈ ಬಾರಿ ಬಿಸಾಕಲೇಬೇಕು ಎಂದು ಮನದಲ್ಲೇ ಲೆಕ್ಕ ಹಾಕಿಕೊಂಡಳು.

ಹೀಗೆ ಒಂದು ಕಡೆಯಿಂದ ಅಟ್ಟವನ್ನು ಸ್ವಚ್ಛಗೊಳಿಸುತ್ತಿದ್ದಾಗ ಹಳೆಯ ಟ್ರಂಕ್ ಒಂದು ಕಾಣಿಸಿತು. "ಇದರೊಳಗಿನ್ನೇನೇನಿದೆಯಪ್ಪಾ!" ಅಂತ ಅಂದುಕೊಳ್ಳುತ್ತಾ ಅದರ ಮುಚ್ಚಳ ತೆರೆದಳು.

ಆ ಟ್ರಂಕಿನ ತುಂಬಾ ಹಳೆಯ ಬಟ್ಟೆಗಳು... ಬಹುಶಃ ಸುಮಾಳದ್ದೇ ಇರಬೇಕೆಂದು ಊಹಿಸಿದಳು. ಒಂದೊಂದಾಗಿ ಬಟ್ಟೆಗಳನ್ನು ತೆಗೆಯುತ್ತಿರುವಾಗ ಬದಿಯಲ್ಲಿ ಒಂದು ಪುಟ್ಟ ಡೈರಿ ಕಾಣಿಸಿತು. ಕುತೂಹಲದಿಂದ ಅದನ್ನು ಕೈಗೆತ್ತಿಕೊಂಡಳು.

"ಇದು ಯಾರ ಡೈರಿ ಇರಬಹುದು? ತುಂಬಾ ಹಳೆಯ ಡೈರಿ ಇದ್ದ ಹಾಗಿದೆ. ಈ ಡೈರಿ ಯಾರು ಬರೆದದ್ದಾಗಿರಬಹುದು?" ಎಂದೆಲ್ಲ ಯೋಚಿಸುತ್ತಾ ಪುಟಗಳನ್ನು ತಿರುಗಿಸಿ ನೋಡತೊಡಗಿದಳು. ಮೊದಲ ಪುಟದಲ್ಲೇ 'ಸುಮಾ' ಎಂದು ಗುಂಡಾದ ಅಕ್ಷರಗಳಲ್ಲಿ ಬರೆಯಲಾಗಿದ್ದನ್ನು ನೋಡಿ ಅದು ಸುಮಾಳ ಡೈರಿ ಎಂಬುದು ಖಾತ್ರಿಯಾಯಿತು. ಅಂದವಾದ ಬರವಣಿಗೆ. ನೋಡಿದ ಕೂಡಲೇ ಓದಬೇಕೆನಿಸುತ್ತಿತ್ತು. ಅತೀವ ಉತ್ಸುಕತೆಯಿಂದ ಓದಬೇಕೆಂದು ಪುಟ ತಿರುಗಿಸಿದಳು. ಅಷ್ಟರಲ್ಲಿ "ಸುಜಾತ ಎಲ್ಲಿದೀಯೇ? ಎಲ್ಲರೂ ಊಟಕ್ಕೆ ಬನ್ನಿ, ತಡವಾಗಿದೆ" ಅಂತ ಸುಬ್ಬಜ್ಜಿ ಕೂಗುತ್ತಿರುವುದನ್ನು ಕೇಳಿದ ಸುಜಾತ ಕೂಡಲೇ ಕೆಳಗಿಳಿದು ಬಂದು ಸುಹಾಸನ ಬಳಿಗೋಡಿ "ರೀ ಅಟ್ಟದ ಮೇಲೆ ಇದ್ಯಾವುದೋ ಡೈರಿ ಸಿಕ್ಕಿತು. ನಿಮ್ಮಕ್ಕನ ಹೆಸರಿದೆ. ಅವರದ್ದೇ ಇರಬೇಕು. ನೋಡಿ" ಎಂದು ಆ ಡೈರಿಯನ್ನು ಅವನ ಕೈಯಲ್ಲಿಟ್ಟು ಊಟದ ಕೋಣೆಗೆ ನಡೆದಳು. ಆಶ್ಚರ್ಯ ಚಕಿತನಾದ ಸುಹಾಸ ಆ ಡೈರಿಯನ್ನು ಹಿಂದೆ ಮುಂದೆ ತಿರುಗಿಸಿ ನೋಡಿ, ಸುಮಕ್ಕನದೇ ಎಂದು ಖಾತ್ರಿ ಮಾಡಿಕೊಂಡು "ಇದೆಲ್ಲಿತ್ತಪ್ಪಾ ಇಷ್ಟು ವರ್ಷ? ಇದೆಲ್ಲಿಂದ ಸಿಕ್ಕಿತು ಇವಳಿಗೆ? ಏನು ಬರೆದಿರಬಹುದು?" ಎಂಬ ಕುತೂಹಲದಿಂದ ಅದನ್ನು ಜೋಪಾನವಾಗಿರಿಸಿ, ಊಟ ಮುಗಿಸಿದ ಕೂಡಲೇ ಅದನ್ನು ಓದಬೇಕು ಎಂದೆಣಿಸಿ ಊಟಕ್ಕೆ ಹೊರಟ.

"ಇಷ್ಟು ವರ್ಷಗಳು ಈ ಡೈರಿ ನಮಗ್ಯಾರಿಗೂ ಸಿಕ್ಕಿರಲೇ ಇಲ್ಲವಲ್ಲ. ಅಮ್ಮನಿಗೂ ಈ ಡೈರಿಯ ಬಗ್ಗೆ ಖಂಡಿತ ಗೊತ್ತಿರಲಿಕ್ಕಿಲ್ಲ. ಗೊತ್ತಿದ್ದಿದ್ದರೆ ಅದನ್ನು ಜತನದಿಂದ ಕಾಪಾಡುತ್ತಿದ್ದಳು. ಬಹುಷಃ ಅಕ್ಕ ಹೋದ ಸಮಯದಲ್ಲಿ ಟ್ರಂಕು ಅಟ್ಟ ಸೇರಿರಬೇಕು. ಅಕ್ಕನೇ ಇಲ್ಲವಾದ ಮೇಲೆ ಆಕೆಯ ಬಟ್ಟೆ ಬರೆ ಯಾರಿಗೆ ತಾನೇ ಉಪಯೋಗಕ್ಕೆ ಬಂದೀತು. ನಾನು ಬೇರೆ ಹುಡುಗ. ಅಲ್ಲದೆ ಅವಳ ಬಟ್ಟೆಗಳು ಕಣ್ಣಿಗೆ ಕಾಣುತ್ತಿದ್ದರೆ ಆಕೆಯ ನೆನಪುಗಳು ಮತ್ತಷ್ಟು ಕಾಡುವುದೆಂದು ಅದನ್ನು ಅಟ್ಟದ ಮೇಲೆಯೇ ಬಿಟ್ಟರೇನೋ. ಈ ಹಿಂದೆ ದಿನಕರ್ ಹೇಳಿದ ಹಾಗೆ ಅಕ್ಕ ಸತ್ತಾಗ ಪೋಲೀಸಿನವರು ಸ್ಥಳ ಮಹಜರ್, ಸ್ಥಳ ಪರಿಶೀಲನೆ ಇತ್ಯಾದಿಗಳನ್ನು ನಡೆಸಿರಲೇಬೇಕು. ಈ ಡೈರಿ ಟ್ರಂಕಿನೊಡನೆ ಅದ್ಯಾವುದೋ ಮಾಯದಲ್ಲಿ ಅಟ್ಟ

ಸೇರಿದ್ದರಿಂದ ಅಲ್ಲಿ ಯಾರೂ ಹುಡುಕಾಟ ನಡೆಸಿರಲಾರರು. ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ಅಂದು ದಿನಕರ್ ಹೇಳಿದ ಹಾಗೆ ಪೋಲೀಸಿನವರು ಬಿ ರಿಪೋರ್ಟ್ ಹಾಕಿ ಕೇಸನ್ನು ಮುಕ್ತಾಯಗೊಳಿಸಿದ್ದಾರೆ. ಆದರೆ ಈಗ ಈ ಡೈರಿ ಸಿಕ್ಕಿರುವುದರಿಂದ ಇದರಿಂದೇನಾದರೂ ಅಕ್ಕನ ಸಾವಿಗೆ ಕಾರಣ ಕಂಡು ಹಿಡಿಯಲು ನೆರವಾಗಬಹುದೇ. ಇದನ್ನು ಸಾಕ್ಷಿ ಎಂದು ಪರಿಗಣಿಸಿ ಈಗ ನಾನೇನಾದರೂ ಕೇಸನ್ನು ರೀ-ಓಪನ್ ಮಾಡಿಸಬಹುದೇ, ನನ್ನ ವಕೀಲ ಮಿತ್ರ ಯಶಸ್ ನನ್ನು ಒಮ್ಮೆ ಕೇಳಬೇಕು" ಎಂದುಕೊಂಡ.

ಸುಹಾಸ ಚಿಕ್ಕ ಪ್ರಾಯದಲ್ಲಿದಾಗ ತನ್ನಕ್ಕ ಸುಮಾಳನ್ನು ಕಳೆದುಕೊಂಡ. ಆಕೆಯ ನೆನಪುಗಳೇ ಇರಲಿಲ್ಲ ಆತನಿಗೆ. ಆಕೆ ಹೇಗಿದ್ದಿರಬಹುದು, ಆಕೆಯ ಆಸೆ, ಆಕಾಂಕ್ಷೆ ಗಳೇನಿದ್ದಿರಬಹುದು, ಆಕೆ ಈ ಡೈರಿಯಲ್ಲಿ ಏನು ಬರೆದಿರಬಹುದು, ಆಕೆಯ ಸಾವಿಗೆ ಕಾರಣವೇನಿರಬಹುದು, ಇವೆಲ್ಲವೂ ಸುಹಾಸನ ತಲೆಯಲ್ಲಿ ತಿರುಗುತ್ತಿದ್ದವು. ಊಟವೂ ಸರಿಯಾಗಿ ಮಾಡದೆ, ಆ ಡೈರಿಯಲ್ಲಿ ಏನಿರ ಬಹುದೆಂದು ಯೋಚಿಸುತ್ತಾ ಊಟ ಮುಗಿಸಿ ಕೈ ತೊಳೆದು ಬಂದ ಸುಹಾಸ, ತಕ್ಷಣ ರೂಮಿಗೆ ತೆರಳಿ ಆ ಡೈರಿಯನ್ನು ಕೈಗೆತ್ತಿಕೊಂಡ. ಬಹಳ ಹಳೆಯದಾದ ಆ ಪುಸ್ತಕವು ಧೂಳು ಹಿಡಿದು, ಪುಸ್ತಕದ ಪುಟಗಳು ಹರಿದು ಬರುವಂತಿತ್ತು. ಪುಟಗಳು ಹಳೆಯದಾಗಿದ್ದರೂ, ಅದರಲ್ಲಿನ ಬರವಣಿಗೆ ಎದ್ದು ಕಾಣುವಂತಿತ್ತು. ತನ್ನಕ್ಕನ ಬರವಣಿಗೆಯನ್ನು ಮೊದಲಬಾರಿಗೆ ನೋಡುತ್ತಿದ್ದೀನಿ ಅಂತ ಆಲೋಚಿಸುತ್ತಾ ಸುಹಾಸ ಮಧ್ಯದ ಒಂದು ಪುಟಕ್ಕೆ ತಿರುಗಿಸಿ ಓದಲಾರಂಭಿಸಿದ

13-06-1978

ಇಂದಿನ ದಿನ ಸೊಗಸಾಗಿತ್ತು. ಬೆಳಿಗ್ಗೆ ಎದ್ದು ಎಂದಿನಂತೆ ಬೆಳ್ಳಿ ಮತ್ತು ಗೌರಿಯ ಹತ್ತಿರ ಹೋಗಿ ಹಾಲು ಕರೆದು ಅಮ್ಮನ ಬಳಿ ತಂದುಕೊಟ್ಟೆ. ಸುಹಾಸನಂತೂ ದಿನದಿಂದ ದಿನಕ್ಕೆ ತನ್ನ ಆಟ-ಕೀಟಲೆಗಳನ್ನು ಜಾಸ್ತಿ ಮಾಡುತ್ತಿದ್ದಾನೆ. ಆತನ ಮುದ್ದಾದ ತೊದಲು ನುಡಿಗಳು ಹಾಗು ಅವನ ತರಲೆ-ತುಂಟಾಟಗಳಲ್ಲಿಯೇ ನನ್ನ ಇಡೀ ದಿನ ಮಾಯವಾಗುತ್ತದೆ.

ಮಧ್ಯಾಹ್ನ ಊಟಕ್ಕೆ ನನ್ನ ಸ್ನೇಹಿತೆ ಸರಳ ಕೂಡ ಬಂದಿದ್ದಳು. ಇಂದು ಸಂಜೆ ನಾವಿಬ್ಬರೂ ವಾಕಿಂಗಿಗೆ ಹೋದಾಗ ಮಧುಕರನು ಸಿಕ್ಕಿದ್ದನು. ಆತನ ಶಾಲೆ, ಶಿಕ್ಷಕರು, ಗೆಳೆಯರು ಎಲ್ಲರ ಬಗ್ಗೆ ಎಂದಿನಂತೆ ಹೇಳತೊಡಗಿದನು. ಮಾತನಾಡುತ್ತಿದ್ದಾ ತನ್ನ ಕ್ರಿಕೆಟ್ ಗೆ ತಡವಾಯಿತೆಂದು ಹೇಳಿ ಓಡಿದ. ಅವನು ಮಾತನಾಡಿದ್ದನ್ನು ನೆನೆದು, ನನಗೆ ನನ್ನ ಶಾಲೆ, ಶಿಕ್ಷಕರು, ಗೆಳೆಯರು ಎಲ್ಲವೂ ನೆನಪಿಗೆ ಬಂದಿತು. ನಾನಿನ್ನೂ ಶಾಲೆಯಲ್ಲಿ ಓದುತ್ತಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು.

ಸುಹಾಸನು ಹುಟ್ಟಿ, ಅಪ್ಪ ಕೂಡ ಹೋದಮೇಲೆ ಅಮ್ಮ ಒಬ್ಬಂಟಿ ಆಗಿಬಿಟ್ಟಳು. ನಾನು ಕೂಡ ಶಾಲೆ ಬಿಡಬೇಕಾಯಿತು. ಆದರೂ, ಅಮ್ಮನಾದರೂ ಎಷ್ಟೂ ಅಂತ ಕಷ್ಟ ಪಟ್ಟಾಳು. ಒಂದು ಲೆಕ್ಕದಲ್ಲಿ ನಾನು ಶಾಲೆಯನ್ನು ಬಿಟ್ಟಿದ್ದು ಒಳ್ಳೆಯದೇ ಆಯಿತು.

ರಾತ್ರಿ ಊಟಕ್ಕೆ ಅಮ್ಮನಿಗೆ ಸಹಾಯ ಮಾಡಿ, ಊಟವನ್ನು ಮುಗಿಸಿ ಈಗ ಇದನ್ನು ಬರೆದು ಮುಗಿಸಿ ಮಲಗಲು ಹೊರಟೆ.

❖ ❖ ❖

ಇದನ್ನು ಓದಿದ ಸುಹಾಸನಿಗೆ ತನ್ನಕ್ಕನ ಮೇಲಿನ ಕನಿಕರ, ಪ್ರೀತಿ ಹೆಚ್ಚಾಯಿತು. "ಪಾಪ, ಎಂತಹ ಕಷ್ಟದ ದಿನಗಳು. ಸರಳ, ಮಧುಕರ ಎಲ್ಲರೂ ಯಾರಿರ ಬಹುದು? ಅಕ್ಕನ ಸ್ನೇಹಿತರಿರಬೇಕು. ಮಧುಕರ ಅನ್ನೋ ಹೆಸ್ರು ಎಲ್ಲೋ ಕೇಳಿದ್ದೀನಲ್ಲಾ! ಓಹ್, ಹೌದು, ಪದ್ಮಕ್ಕ ಗಂಡನ ತಮ್ಮ ಮಧುಕರ ಅಂತ ಹೇಳಿದ್ದ ನೆನಪು. ಅವನು ಸುಮಕ್ಕ ಹೋದ ಸಮಯದಲ್ಲೇ ತೀರಿಹೋದ ಅಂತೇನೋ ಅಂದಿದ್ರು.

ಆ ಕಷ್ಟದ ಸಮಯದಲ್ಲಿ ಅಮ್ಮ ಮತ್ತು ಅಕ್ಕ ಹೇಗೆ ಮನೆ ನಡೆಸುತ್ತಿದ್ದರೇನೋ! ಅಕ್ಕ ಪಾಪ, ಶಾಲೆಯನ್ನು ಬಿಟ್ಟು ಅಮ್ಮನಿಗೆ ಸಹಾಯ ಮಾಡಬೇಕಾಯಿತು. ಅಂತಹ ಕಷ್ಟದ ಸಮಯದಲ್ಲಿಯೂ ನನ್ನನ್ನು ಅಷ್ಟು ಪ್ರೀತಿ, ಮಮಕಾರದಿಂದ ನೋಡಿಕೊಂಡಿದ್ದ ನನ್ನಕ್ಕ ಎಷ್ಟು ಒಳ್ಳೆಯವಳು. ಅವಳ ಬಳಿ ಮಾತನಾಡಿದ ನೆನಪು ಕೂಡ ಇಲ್ವಲ್ಲಾ ನಂಗೆ. ಛೇ! ಅಕ್ಕ ಈಗ ಇದ್ದಿದ್ದರೆ ಎಷ್ಟು ಚೆನ್ನಾಗಿ, ಎಲ್ಲರೂ ಖುಷಿಯಾಗಿರಬಹುದಿತ್ತು. "ಅಂತ ಯೋಚಿಸುತ್ತಾ ಮುಂದಿನ ಯಾವುದೋ ಒಂದು ಪುಟಕ್ಕೆ ತಿರುಗಿಸಿ ಪುನಃ ಓದಲಾರಂಭಿಸಿದ.

17-07-1980

ನನ್ನ ವಿವಾಹ ನಿರ್ಧಾರವಾಗಿಬಿಟ್ಟಿದೆಯಾದರೂ ನನ್ನಲ್ಲಿರುವ ಗೊಂದಲಗಳಿಗೆ ಕೊನೆಯೇ ಕಾಣುತ್ತಿಲ್ಲ. ದಿನಕರ ಒಳ್ಳೆಯವನು, ನನ್ನನ್ನು ಚೆನ್ನಾಗಿ ನೋಡಿ ಕೊಳ್ಳುತ್ತಾನೆ ಅಂತ ಎಲ್ಲರೂ ಹೇಳುತ್ತಿದ್ದಾರೆ. ಅದು ನಿಜವಿರಬಹುದು. ಆದರೆ ನನ್ನ ಮನಸ್ಸಿನ ಇಚ್ಛೆ ಬೇರೆಯದೇ ಇದ್ದಂತೆ ಕಾಣುತ್ತಿದೆ.

ಮಧುಕರನಿಗೆ ನಾನು ಇಷ್ಟ ಇರುವುದು ಖಚಿತ. ಆದರೆ ನನಗೂ ಅವನನ್ನು ಕಂಡರೆ ಇಷ್ಟ ಎಂದು ಯಾವ ಬಾಯಿಯಲ್ಲಿ ಹೇಳಲಿ? ಹೇಳಿದರೂ ಯಾರ ಬಳಿ ಹೇಳಲಿ?

ಅಮ್ಮ ಮದುವೆ ಮಾಡುವುದಕ್ಕಾಗಿ ಪಡುತ್ತಿರುವ ಕಷ್ಟವನ್ನು ನೋಡಿಯೂ ಆಕೆಯ ಬಳಿ ಹೇಗೆ ಮಾತನಾಡಲಿ? ಸರಳಾಳ ಬಳಿಯಾದರೂ ಹೇಳೋಣ ಅಂದ್ರೆ ಆಕೆ ಅಮ್ಮನಿಗೆ ತಿಳಿಸದೇ ಖಂಡಿತಾ ಬಿಡುವುದಿಲ್ಲ.

ಮಧುಕರನ ಬಳಿ ನನ್ನ ಇಕ್ಕಟ್ಟಿನ ಪರಿಸ್ಥಿತಿಯನ್ನು ಹೇಳಿದರೆ ಈ ವಿತಂಡ ದೊಡ್ಡದಾಗದೆ ನಿಲ್ಲುವುದಿಲ್ಲ. ಆತನೇನಾದರೂ ಮನೆಯನ್ನು ಬಿಟ್ಟು ಬಾ ಎಂದು ಬಿಟ್ಟರೆ ನಾನೇನು ಮಾಡಿಯೇನು?

ಸುಹಾಸನಂತೂ ಈಗಿನ್ನೂ ಮಾತು ಕಲಿಯುತ್ತಿರುವ ಎಳೆ ಕೂಸು. ಇವರನ್ನು ಬಿಟ್ಟು ನನ್ನ ಕಷ್ಟಗಳನ್ನು ಹೇಳಿಕೊಳ್ಳಲು ನನಗೆ ಇರುವುದಾದರೂ ಯಾರು?

ಅಷ್ಟಕ್ಕೂ ನನಗಿನ್ನೂ 15 ಪ್ರಾಯ ಕೂಡ ತುಂಬಿಲ್ಲ. ಈ ವಯಸ್ಸಿನಲ್ಲಿ ನಾನು ಮದುವೆಯಾಗುವುದಾದರೂ ಹೌದಾ? ನನಗೆ ಇಷ್ಟು ಬೇಗ ಮದುವೆ ಯಾಗುವುದಕ್ಕೆ ಇಷ್ಟವಿಲ್ಲ ಅಂತ ಹೇಗೆ ಹೇಳಲಿ? ಅಮ್ಮ ಕೂಡ ಸರಿಸುಮಾರು ನನ್ನ ಪ್ರಾಯದಲ್ಲಿದ್ದಾಗಲೇ ಮದುವೆಯಾಗಿದ್ದು. ನಾನು ಈಗಲೇ ಮದುವೆಯಾದರೇ ಒಳ್ಳೆಯದು ಎಂಬ ಯೋಚನೆ ಅಮ್ಮನದು.

ಮಧುಕರನು ಏನಾದರು ಮನೆಯನ್ನು ಬಿಟ್ಟು ಬಾ ಎಂದರೆ ಅಮ್ಮನನ್ನು ಸುಹಾಸನನ್ನು ಬಿಟ್ಟುಹೋಗಲು ನನ್ನಿಂದ ಸಾಧ್ಯವೇ? ಖಂಡಿತಾ ಇಲ್ಲ. ಇಷ್ಟು ವರ್ಷಗಳಿಂದ ಸಾಕಿ-ಸಲಹಿರುವ ಅಮ್ಮ ಪಾಪದವಳು. ಅಪ್ಪ ಕೂಡ ಹೋದ ಮೇಲೆ ಅಮ್ಮ ಒಬ್ಬಂಟಿ ಆಗಿಬಿಟ್ಟಳು. ನನ್ನನ್ನು ಮತ್ತು ಸುಹಾಸನನ್ನು ಸಾಕಲು, ಒಂದು ಹೊತ್ತು ಊಟ ಹಾಕಲು ಕೂಡ ಇವತ್ತಿಗೂ ಎಷ್ಟು ಕಷ್ಟ ಅನುಭವಿಸುತ್ತಿದ್ದಾಳೆ. ಅದರ ಮೇಲೆ ನನಗೆ ಮದುವೆ ಮಾಡುವ ಜವಾಬ್ದಾರಿ ಬೇರೆ ಅಮ್ಮನ ಮೇಲೆ!

ದಿನಕರನೂ ಒಳ್ಳೆಯವನು ಅನಿಸುತ್ತದೆ. ಆತನನ್ನು ಮದುವೆಯಾದರೆ ಅಮ್ಮನ ಜವಾಬ್ದಾರಿಯಾದರೂ ತೀರಬಹುದೇನೋ! ದಿನಕರನು ನನ್ನಮ್ಮ ಮತ್ತು ಸುಹಾಸನನ್ನು ನೋಡಿಕೊಳ್ಳಲು ಮುಂದೆ ಖಂಡಿತಾ ಸಹಾಯ ಮಾಡುತ್ತಾನೆ. ಅಮ್ಮನಿಗೆ ನಾನು ಸಹಾಯ ಮಾಡಿ ಸುಹಾಸನನ್ನು ನೋಡಿಕೊಳ್ಳಬಹುದು. ಇದೇ ಸರಿ. ಅಲ್ಲದೆ ಈಗಾಗಲೇ ನನ್ನ ಮದುವೆಯ ಸುದ್ದಿ ಊರೆಲ್ಲ ಹಬ್ಬಿದೆ. ನಮ್ಮ ಮನೆಯ, ಕುಟುಂಬದ ಮಾನ ಮರ್ಯಾದೆ ಪ್ರಶ್ನೆ! ಅಮ್ಮ ಪಾಪ, ಎಷ್ಟು ಅಂತ ಕಷ್ಟಪಡುತ್ತಾಳೆ. ನಾನು ದಿನಕರನನ್ನು ಮದುವೆಯಾದರೆ ಆಕೆಗೆ ಆಧಾರ ಸ್ಥಂಭವಾಗಿ ನಿಲ್ಲಬಹುದು.

ಹೌದು, ಈಗ ನಿಶ್ಚಯವಾಗಿರುವ ಮದುವೆ ಆಗಲಿ. ಆಗುವುದೆಲ್ಲಾ ಒಳ್ಳೆಯದಕ್ಕೆ ಅಂತ ಅಮ್ಮ ಯಾವಾಗಲೂ ಹೇಳುತ್ತಾಳೆ. ಈ ಮದುವೆಯಿಂದ ಅಮ್ಮ ಹಾಗೂ ಸುಹಾಸನಿಗೆ ಒಳ್ಳೆಯದಾಗುವುದಾದರೆ ನನಗೂ ನೆಮ್ಮದಿ.

ಮಧುಕರನತ್ತ ಮನಸ್ಸು ವಾಲಿದ್ದು ನನ್ನ ತಪ್ಪು. ಆಗಬಾರದಿತ್ತು. ಇನ್ನು ಮುಂದೆ ಆತನನ್ನು ಮರೆತು ನನ್ನ ಕುಟುಂಬದ ಮರ್ಯಾದೆ ಬಗ್ಗೆ, ಅಮ್ಮ ಹಾಗೂ ಸುಹಾಸನ ಒಳಿತಿನ ಬಗ್ಗೆ ಆಲೋಚಿಸಬೇಕು.

❖ ❖ ❖

ಇತ್ತ ಡೈರಿಯನ್ನು ಓದುತ್ತಾ ಕುಳಿತ ಸುಹಾಸನ ಮನದಲ್ಲಿ ನೂರಾರು ಆಲೋಚನೆಗಳು ಓಡುತ್ತಿತ್ತು.

"ಪಾಪ, ನನ್ನಕ್ಕ. ಮನಸ್ಸಿನಲ್ಲಿ ಮಧುಕರನಿದ್ದು ಯಾರಿಗೂ ಹೇಳಿಕೊಳ್ಳಲು ಆಗದೆ ಸಂಕಟಕ್ಕೆ ಸಿಲುಕಿದ್ಳು. ಮದುವೆಯ ಒತ್ತಡ ಬೇರೆ. ಅಷ್ಟು ಚಿಕ್ಕ ಪ್ರಾಯದಲ್ಲಿ ಮದುವೆ ಯಾಕೆ ಅಂತ ಯಾರೂ ಆಲೋಚಿಸಲಿಲ್ವಾ ಹಾಗಾದ್ರೆ? ಪಾಪ ಅಕ್ಕ, ನನ್ನ ಮತ್ತು ಅಮ್ಮನ ಕಷ್ಟ ನೋಡಲಾರದೆ ಅಷ್ಟು ಚಿಕ್ಕ ವಯಸ್ಸಿನಲ್ಲಿ ಮದುವೆಗೆ ಒಪ್ಪಿಕೊಳ್ಳಬೇಕಾಯಿತಲ್ಲಾ! ಅದು ಬೇರೆ ಮನಸ್ಸಿನಲ್ಲಿ ಮಧುಕರನಿದ್ದರೂ, ದಿನಕರನೊಡನೆ ವಿವಾಹಕ್ಕೆ ಮುಂದಾಗಿದ್ದಳಲ್ಲ, ಅಕ್ಕ! ಅವನೇನಂದಿರಬಹುದು? ವಿಷಯ ಗೊತ್ತಾದ ಮೇಲೆ ಏನಾಗಿರಬಹುದು? ಸುಮಕ್ಕನ ಮರಣಕ್ಕೂ ಮಧುಕರ ತೀರಿಹೋದದ್ದಕ್ಕೂ ಸಂಬಂಧವಿರಬಹುದೇ?

ಆದರೂ ಅಕ್ಕ ಯೋಚಿಸಿದ್ದು ಒಂದು ರೀತಿಯಲ್ಲಿ ಅರ್ಥಪೂರ್ಣ. ಅಮ್ಮ ಪಾಪ ಅಂದಿನ ದಿನಗಳಲ್ಲಿ ಅಕ್ಕನೂ ಹೋದ ಮೇಲೆ ಅಮ್ಮ ಅದ್ಹೇಗೆ ಇದ್ದಳೋ? ಗಂಡ, ಮಗಳು ಇಬ್ಬರನ್ನೂ ಕಳೆದುಕೊಂಡ ನೋವು ಒಂದೆಡೆಯಾದರೇ, ನನ್ನನ್ನು ನೋಡಿಕೊಳ್ಳಬೇಕಾಗಿದ್ದ ಜವಾಬ್ದಾರಿ ಬೇರೆ. ಎಷ್ಟು ದುಃಖ, ನೋವು ತಿಂದ ಜೀವನ ಆಕೆಯದು. ಆ ದುಃಖದ ನಡುವೆಯೂ ದುಡಿದು, ಮನೆ ಸಂಭಾಳಿಸಿ ನನ್ನನ್ನು ಪೋಷಿಸಿ ಬೆಳೆಸಿದಳಲ್ಲಾ ಅಮ್ಮ, ಅಮ್ಮ ನಿಜವಾಗಲೂ ಗ್ರೇಟ್!"

20 – 07 – 1980

ವಿವಾಹದ ದಿನ ಹತ್ತಿರ ಬರುತ್ತಿದ್ದಂತೆಯೇ ನನ್ನ ಕಳವಳ ಜಾಸ್ತಿಯಾಗುತ್ತಿದೆ. ನನ್ನ ವಿವಾಹ ನಿಶ್ಚಯವಾಗಿರುವುದು ಸುತ್ತಮುತ್ತಲು ಎಲ್ಲರಿಗೂ ಗೊತ್ತಾಗಿದೆ. ದಿನಕರನೂ ಆಗಾಗ ಮಾತನಾಡಿಸಲು ಮನೆಗೆ ಬರುತ್ತಾ ಇರುತ್ತಾನೆ.

ನನ್ನ ವಿವಾಹದ ವಿಷಯ ತಿಳಿದಂದಿನಿಂದ ಗೋಪಾಲನ ಸಿಟ್ಟು ಜಾಸ್ತಿಯಾಗಿದೆ. ಆತನಿಗೆ ನನ್ನ ಮೇಲೆ ಕಣ್ಣು ಇದೆ ಎಂದು ತಿಳಿದಿದ್ದರೂ, ನಾನು ಅವನ ತಂಟೆಗೆ ಹೋಗಿರಲಿಲ್ಲ. ನನ್ನ ವಿವಾಹ ದಿನಕರನೊಡನೆ ನಿಶ್ಚಯವಾಗಿದೆ ಅಂದಾಕ್ಷಣ ಕೋಪದಿಂದ ನನ್ನೆದುರು ಕಿರುಚಾಡಿದನು. ಇಂದು ಮನೆಗೆ ಬಂದಿದ್ದನು. ತನಗೆ ದಿನಕರ ದೂರದಿಂದ ಪರಿಚಯ, ಆತ ಒಳ್ಳೆಯವನಲ್ಲ, ನನ್ನನ್ನು ಪ್ರೀತಿಯಿಂದ ಸಾಕುವುದಿಲ್ಲ ಎಂದೆಲ್ಲ ನನ್ನಮ್ಮನ ಬಳಿ ಹೇಳಿದನಂತೆ. ದಿನಕರನ ಬದಲು ಅವನು ನನ್ನನ್ನು ಮದುವೆಯಾದರೆ ನನ್ನನ್ನು ರಾಣಿಯಂತೆ ನೋಡಿಕೊಳ್ಳುವುದಾಗಿ ಹೇಳಿಕೊಂಡು ತನ್ನ ಬಗ್ಗೆ ಹೊಗಳಿಕೊಂಡನಂತೆ. ಅಮ್ಮ ಆತನ ಟೊಳ್ಳು ಮಾತುಗಳನ್ನು ನಂಬದೆ, ಆತನಿಗೆ ಬಯ್ದು ಕಳುಹಿಸಿದಳು. ಸಂಜೆ ನನ್ನನ್ನು ಕಂಡಾಗ ಇನ್ನೂ ಕೋಪದಲ್ಲಿದ್ದವನು "ಅದ್ಹೇಗೆ ದಿನಕರನನ್ನು ಮದುವೆ

ಆಗ್ತೀಯ ಅಂತ ನೋಡೆಬಿಡ್ತೀನಿ" ಅಂತ ಹೇಳಲಾರಂಭಿಸಿದ. ನಾನು ಎಂದಿನಂತೆ ಮರುಮಾತನಾಡದೆ ನನ್ನ ಕೆಲಸ ಮುಗಿಸಿ ಹಿಂತಿರುಗಿದೆ.

ಗೋಪಾಲನ ಕಥೆ ಇದಾದರೆ, ಮಧುಕರನ ಪ್ರತಿಕ್ರಿಯೆಯು ಬೇರೆಯದೇ ಆಗಿತ್ತು. ನನ್ನ ಮದುವೆ ನಿಶ್ಚಯವಾದುದ್ದನ್ನು ತಿಳಿದಾಕ್ಷಣವೇ ಮಧುಕರನು ಆ ವಿಷಯವು ನಿಜವೇ ಎಂದು ತಿಳಿಯಲು ಓಡಿಬಂದು ನನ್ನೊಡನೆ ಮಾತನಾಡಿದನು. ಅದು ನಿಜ ಎಂದು ತಿಳಿದಕೂಡಲೇ ನಾನು ಆ ವಿವಾಹಕ್ಕೆ ಒಪ್ಪುವುದು ಬೇಡ, ಆತ ನನ್ನನ್ನು ಇಷ್ಟ ಪಡುತ್ತಿದ್ದಾನೆ, ಇನ್ನೇನು ಕೆಲಸ ಸಿಕ್ಕಿದ ಕೂಡಲೇ ಅಮ್ಮನ ಬಳಿ ಮಾತನಾಡಿ ವಿವಾಹಕ್ಕೆ ಏರ್ಪಾಡುಮಾಡುವುದಾಗಿ ಹೇಳಿದನು. "ನೀನು ನನ್ನನ್ನು ಮನಸಾರೆ ಇಷ್ಟಪಡುತ್ತೀ ಅಂತ ನೀನು ಹೇಳದಿದ್ದರೂ ನನಗೆ ತಿಳಿದಿದೆ. ಮೊದಲು ಈ ಮದುವೆ ಬೇಡ ಅಂತ ಸುಬ್ಬಕ್ಕನ ಹತ್ರ ಹೇಳು, ಎಲ್ಲಾ ಸರಿ ಹೋಗುತ್ತೆ. ನೀನೆಂದಿಗೂ ನನ್ನವಳಾಗಲೇಬೇಕು, ಏನೇ ಆದರೂ ನಾನು ನಿನ್ನನ್ನು ಬಿಡುವುದಿಲ್ಲ" ಎಂದೆಲ್ಲಾ ಹೇಳತೊಡಗಿದನು. ನನಗೆ ಆತನ ಬಗ್ಗೆ ಪ್ರೀತಿ ಇಲ್ಲ ಎಂದು ಎಷ್ಟು ಹೇಳಿದರೂ ಕೇಳದೆ ಜಗಳವಾಡ ತೊಡಗಿದನು. ನಾನು ಈಗಾಗಲೇ ದಿನಕರನನ್ನು ಮದುವೆಯಾಗುವುದಕ್ಕೆ ನನ್ನ ಒಪ್ಪಿಗೆ ಕೊಟ್ಟುಬಿಟ್ಟಿದ್ದೇನೆ ಎಂದು ಹೇಳಿದರೂ ಅವನು ನನ್ನ ಮಾತನ್ನು ನಂಬಲಿಲ್ಲ. ನನಗೆ ಮಧುಕರನನ್ನು ಮದುವೆಯಾಗಲು ಯಾವುದೇ ಆಸಕ್ತಿಯಿಲ್ಲ, ನನ್ನನ್ನು ನನ್ನಪಾಡಿಗೆ ಇರಲು ಬಿಟ್ಟುಬಿಡು ಎಂಬುದಾಗಿ ಹೇಳಿ ನಾನು ಮನೆಗೆ ಬಂದೆ. ನಾಳೆ ದಿನಕರ ಬರುತ್ತಿದ್ದಾನೆ. ಪೇಟೆಯಲ್ಲಿ ನಾಳೆ ಜಾತ್ರೆ ನಡೆಯುತ್ತಿದೆ ಅಂತ ಹೇಳುತ್ತಿದ್ದರು. ಮನೆಗೆ ಬಂದಾಕ್ಷಣ ಅಮ್ಮ "ಎಲ್ಲಿಗೆ ಹೋಗಿದ್ಯೇ? ಇಷ್ಟು ಹೊತ್ತಾಯ್ತು. ಬಾ, ನಿನ್ನ ಮದುವೆಗೆ ಅಂತ ಈ ಒಡವೆಗಳ್ನ ತೆಗೆದಿದ್ದೀನಿ. ನೋಡು ಬಾ ಕೂತ್ಕೊ" ಅಂತ ಅಮ್ಮ ಕರೆದಳು. ಎಲ್ಲ ನೋಡಿಯಾದ ನಂತರ ಸುಹಾಸನನ್ನು ಮಲಗಿಸಿ ಬಂದೆ.

❖ ❖ ❖

ಸುಹಾಸನಿಗೆ ಇದನ್ನೆಲ್ಲಾ ಓದಿ ಹುಚ್ಚು ಹಿಡಿದಂತಾಯಿತು. "ಇದ್ಯಾರು ಗೋಪಾಲ. ಓಹ್, ಗೋಪಾಲ ಭಟ್ಟರಿರಬಹುದು. ಇಷ್ಟೆಲ್ಲ ನಡೆದಿತ್ತು ಅಂತ ಗೊತ್ತೇ ಇರಲಿಲ್ಲ. ಅವರು ದಿನಕರ ಸರಿಯಿಲ್ಲ ಅಂತೆಲ್ಲ ಯಾಕಾದ್ರು ಹೇಳಿದ್ರೊ. ಅಷ್ಟಲ್ಲದೆ, ಅಕ್ಕನ ಮದುವೆ ಹೇಗಾಗುತ್ತೆ ನೋಡ್ತೀನಿ ಅಂತ ಬೆದರಿಕೆ ಬೇರೆ ಹಾಕಿದ್ರು ಅಂದ್ರೆ ಅವ್ರೇನಾದ್ರು ಅಕ್ಕನಿಗೆ ತೊಂದರೆ ಮಾಡಿರಬಹುದಾ? ಆದರೆ ಅವರದ್ದು ಯಾವಾಗಲೂ ಬೊಗಳೆ ಮಾತುಗಳಷ್ಟೇ ಅಂತಾರೆ, ಎಲ್ಲರೂ.

ಮಧುಕರನೂ ತನ್ನ ಜೊತೆ ವಿವಾಹ ಮಾಡಿಕೊಳ್ಳಲು ಒತ್ತಾಯ ಮಾಡಲು ಪ್ರಯತ್ನಿಸಿದ ಹಾಗೂ ಬೆದರಿಕೆ ಬೇರೆ ಹಾಕಿದ ಅಂತಾಯ್ತು. ಅಮ್ಮ ಹಾಗೂ ಪದ್ಮಕ್ಕನಿಗೆ ಇವೆಲ್ಲಾ ವಿಷಯಗಳು ಗೊತ್ತಿದ್ಯೋ, ಇಲ್ವೋ? ಅಕ್ಕ ಪಾಪ, ಈ

ಸಂಕಟದಲ್ಲಿ ಸಿಲುಕಿ ಯಾರಿಗೂ ಹೇಳದೆ ಅದೆಷ್ಟು ಹಿಂಸೆ, ದುಃಖ ಅನುಭವಿಸಿದ್ಲೋ! ಮಧುಕರನಿಗೆ ಬಿಟ್ಟುಬಿಡು ಅಂದ್ಮೇಲೆ ಅವನು ಸುಮ್ಮನಾಗಿರ್ಬಹುದಾ ಅಥವಾ ಮತ್ತೂ ಅಕ್ಕನಿಗೆ ತೊಂದರೆ ಏನಾದರೂ ಕೊಟ್ನಾ?

ಇದೆಲ್ಲದರ ನಡುವೆ ನನ್ನಕ್ಕ ಪಾಪ ಹೇಗಿದ್ದಳೋ?

ಈಗ ಈ ಡೈರಿಯನ್ನು ಓದುತ್ತಿದ್ದರೆ ನಿಜವಾಗಲೂ ನನ್ನ ಅಕ್ಕನದು ಆತ್ಮಹತ್ಯೆ ಅಲ್ಲ ಅನಿಸುತ್ತಿದೆ. ಆಕೆಗೆ ಯಾರು ಏನು ಮಾಡಿರಬಹುದು? ಅಮ್ಮ ಏನಾದರೂ ಅಂದಿನ ಘಟನೆಯನ್ನು ಕಣ್ಣಾರೆ ನೋಡಿರಬಹುದೆ ಅಲ್ಲಿ ನಡೆದ ಅವಘಡ ನೋಡಿ ಮಾನಸಿಕ ಆಘಾತಕ್ಕೊಳಗಾಗಿ ಇಷ್ಟು ವರ್ಷ ಹೀಗಾಡುತ್ತಿದ್ದಳೇ. ಇದೀಗ ತಾನೇ ಚೇತರಿಸಿಕೊಳ್ಳುತ್ತಿರುವ ಅಮ್ಮನನ್ನು ಈಗ ಇದರ ಬಗ್ಗೆ ಕೇಳುವುದಾದರೂ ಹೇಗೆ? ಮತ್ತೆ ಆಕೆ ಮಾನಸಿಕವಾಗಿ ಜರ್ಜಳಿತಳಾದರೆ? ಬೇಡಪ್ಪಾ ಬೇಡ. ಹಾಗಾದರೆ ಇದಕ್ಕೆಲ್ಲ ಕಾರಣ ಆ ಮಧುಕರನೇ ಇರಬಹುದೆ? ಆತನೇ ಏನಾದರೂ ಸುಮಾಳನ್ನು ಬಾವಿಗೆ ದೂಡಿ ಕೊಲೆ ಮಾಡಿದನೇ? ಅವನು ನದಿಗೆ ಕಾಲು ಜಾರಿ ಬಿದ್ದು ಸತ್ತ ಎಂದು ಹೇಳುವರು. ತನ್ನ ಕೃತ್ಯ ಬಯಲಾಗಬಹುದೆಂದು ಹೆದರಿ ನದಿಗೆ ಹಾರಿ ಸತ್ತಿರಬಹುದೇ?ಅಂದಿನ ಘಟನೆಯ ಬಗ್ಗೆ ಇನ್ಯಾರಿಗೆ ಗೊತ್ತಿರಲು ಸಾಧ್ಯ ಇತ್ಯಾದಿ ಯೋಚಿಸುತ್ತಾ ತಲೆ ಚಿಟ್ಟು ಹಿಡಿದಂತಾಗಿ ಕೂಡಲೇ ಯಶಸ್ ಗೆ ಫೋನ್ ಮಾಡಿ ವಿಷಯವನ್ನೆಲ್ಲ ವಿವರಿಸಿದ. ಎಲ್ಲವನ್ನೂ ಕೇಳಿದ ಯಶಸ್ ಒಂದು ವೇಳೆ ಕೋರ್ಟಿನಲ್ಲಿ ಪೋಲೀಸಿನವರು ಹಾಕಿದ ಬಿ ರಿಪೋರ್ಟ್ ಅಕ್ಸೆಪ್ಟ್ ಆಗಿದ್ದರೆ ಅದನ್ನು ಚಾಲೆಂಜ್ ಮಾಡುವುದು ತುಂಬಾ ಕಷ್ಟ ಎಂದು ಹೇಳಿದ. ಅಲ್ಲದೆ ಕೇವಲ ಡೈರಿಯನ್ನಿಟ್ಟುಕೊಂಡು ಏನೂ ಮಾಡಲೂ ಸಾಧ್ಯವಿಲ್ಲವೆಂದೂ ಹೇಳಿದ. ಒಂದು ವೇಳೆ ಆಕೆ ಡೆತ್ ನೋಟ್ ಏನಾದರೂ ಬರೆದಿದ್ದರೆ ಅಥವಾ ಯಾರಾದರೂ ಪ್ರತ್ಯಕ್ಷ ಸಾಕ್ಷಿಗಳಿದ್ದಲ್ಲಿ ಮಾತ್ರ ಕೋರ್ಟಿನಲ್ಲಿ ಪ್ರಶ್ನಿಸಬಹುದೆಂದು ತಿಳಿಸಿದ.

ಈ ಡೈರಿಯಲ್ಲಿ ಅಂತಹ ಸುಳುಹುಗಳೇನಿವೆ ಎಂದು ಮೆಲುಕು ಹಾಕತೊಡಗಿದ.

ದಿನಕರ ಮಾರನೇ ದಿನ ಬರ್ತಾನೆ ಅಂತ ಬರೆದಿದ್ದಾಳೆ. ಪೇಟೆಯಲ್ಲಿ ಜಾತ್ರೆ ಅಂತ ಬೇರೆ ಬರೆದಿದ್ದಾಳೆ.

ಒಂದ್ನಿಮ್ಷ, ಪೇಟೆಯಲ್ಲಿ ಜಾತ್ರೆ, ದಿನಕರ ಬರ್ತಿದ್ದಾನೆ ಅಂದ್ರೆ....

ಅಂದ್ರೆ.... ಅಕ್ಕ. . .

ಅವತ್ತೇ ಅಕ್ಕ ಸತ್ತಿದ್ದು. ದಿನಕರ್ ಜೊತೆ ಪೇಟೆಗೆ ಹೋಗ್ಬಂದ್ಮೇಲೆ."

ಮರುದಿನ ಸುಮಾ ಡೈರಿಯಲ್ಲಿ ಏನಾದರೂ ಬರೆದಿದ್ದಾಳಾ ಅಂತ ನೋಡಲು, ಸುಹಾಸ ತಕ್ಷಣ ಪುಟವನ್ನು ತಿರುಗಿಸಿದನು.

21 – 07 – 19[illegible]

ಖಾಲಿ ಪುಟ. ದಿನಾಂಕವೊಂದು ಬರೆದಿತ್ತು. ಅದು ಬಿಟ್ಟರೆ. ಆ ಪುಟದಲ್ಲಿ ಏನೂ ಬರೆದಿರಲಿಲ್ಲ. "ಛೇ. ಅವತ್ತು ಏನಾಗಿರಬಹುದು? ಅಕ್ಕನ ಸಾವಿಗೆ ಕಾರಣವಾದವರೂ ಯಾರಿರಬಹುದು?" ಅಂತ ಯೋಚಿಸುತ್ತ ಪೈಂ ನೋಡಿದಾಗ, ಆ ಪುಟಗಳ ಮಧ್ಯೆ ಒಂದು ಸಣ್ಣ ಮಡಿಚಿದ ಕಾಗದವೊಂದು ಕಾಣಿಸಿತು. ಸುಹಾಸನು ತಕ್ಷಣ ಅದನ್ನು ಬಿಡಿಸಿ ಓದಿದನು.

"ಇಂದು ಸಂಜೆ ಮನೆಯ ಹಿಂಭಾಗದ ಬಳಿಯಿರುವ ಬಾವಿಯ ಹತ್ತಿರ ನನ್ನನ್ನು ಭೇಟಿ ಮಾಡು.

ಇಲ್ಲದಿದ್ದರೆ..."

[illegible]

[illegible]

[illegible]

[illegible]

[illegible]

ಒಂದೂವರೆ ತಿಂಗಳ ಕೋರ್ಸ್, ಆಮೇಲೆ ನಾಲ್ಕುದಿನ ಎ.ಎಂ.ಸಿ. (ಅಡ್ವಾನ್ಸ್ಡ್ ಮೆಡಿಟೇಷನ್ ಕೋರ್ಸ್), ಈ ಎರಡನ್ನೂ ಮುಗಿಸಿದರೆ ಒಂದು ಹಂತ ತಲುಪಿದಂತೆ. ಎಸ್.ಎಸ್.ವೈ. ಗೆ ನಿನ್ನ ಮನೆಯವರೆಲ್ಲರೂ; ಅದರಲ್ಲೂ ನಿನ್ನ ಅತ್ತೆಯೂ ಸೇರಿದರೆ ಬಹಳ ಒಳ್ಳೆಯದು' ಹೇಳಿದ್ದ ಆಶಾಳ ಮಾತುಗಳನ್ನು ನೆನಪಿಸಿಕೊಳ್ಳುತ್ತಿದ್ದವಳಿಗೆ ಬುದ್ಧ ನಂತಿರುವ ನನ್ನ ಗಂಡ ಬದ್ಧನಾಗಿ ಧ್ಯಾನಕ್ಕೆ ಕೂರಲು ಪ್ರಾರಂಭಿಸಿದರೆ! ಯೋಚಿಸುತ್ತಾ ಪೂಜೆಗೆ ಹೂವು ಕೊಯ್ಯುತ್ತಿದ್ದವಳಿಗೆ ನವ್ಯಾ 'ಅಮ್ಮಾ ಆಶತ್ತೆ ಹೇಳಿದ್ದು ನಾ ಕೇಳಿಸ್ಕೊಂಡೆ. ಹೋಗಿ ಬಾ ಅಮ್ಮಾ, ನಿನಗೊಂದು ಬದಲಾವಣೆ ಸಿಗುತ್ತೆ' ಎಂದು ಹೇಳಿ ಅಮ್ಮನ ಕೈಯಿಂದ ಹೂಬುಟ್ಟಿ ತೆಗೆದುಕೊಂಡು ಒಳಗೆ ಹೊರಟಳು.

ಕ್ಲಾಸ್ ಯಾವಾಗಿನಿಂದ ಪ್ರಾರಂಭವೋ! ಈ ವಾರವಂತೂ ಸೇರಲಾರೆ. ಸತ್ಯನಾರಾಯಣಸ್ವಾಮಿ ವ್ರತ ಇಟ್ಟುಕೊಂಡಿದ್ದೇವೆ. ಡಾ॥ ಅಭಿಲಾಷ್ ಮತ್ತು ಡಾ॥ ಭರತ್ ಕುಟುಂಬವನ್ನೂ ಆಹ್ವಾನಿಸಬೇಕು. ಮೊದಲು ಮನೆ ಸ್ವಚ್ಛ ಗೊಳಿಸಬೇಕು. ರಾಮಾಪುರದ ರುಕ್ಮಿಣಿಯಕ್ಕ ಎರಡುದಿನ ಮುಂಚಿತವಾಗಿಯೇ ಬರುತ್ತೇನೆಂದಿದ್ದಾರೆ, ಅವರು ಬಂದರೆ ಪೂರ್ಣ ಜವಾಬ್ದಾರಿ ತೆಗೆದುಕೊಳ್ತಾರೆ. ಕಾಶಿ ಸಮಾರಾಧನೆಯಲ್ಲಿ ನನ್ನ ಹಿರಿಯಕ್ಕನಂತೆ ಓಡಾಡಿದವರು. ಪದ್ಮಕ್ಕನನ್ನೂ ರುಕ್ಮಿಣಿಯಕ್ಕನ ಜೊತೆ ನಮ್ಮ ಮನೆಯಲ್ಲೇ ಉಳಿದುಕೊಳ್ಳುವಂತೆ ಒತ್ತಾಯಿಸ ಬೇಕು. ಒಟ್ಟಿನಲ್ಲಿ ಅತ್ತೆ ತಮ್ಮ ಮನಸ್ಸಿನಲ್ಲಿ ಮಡುಗಟ್ಟಿಸಿಕೊಂಡಿರುವ ಚಿಂತೆಯಿಂದ ಹೊರಬರಬೇಕು. ಒಳಬಂದವಳಿಗೆ, ರಾತ್ರಿ ಊಟವನ್ನೂ ಸರಿಯಾಗಿ ಮಾಡದೆ ನಿದ್ದೆಯೂ ಸರಿಯಿಲ್ಲದೆ ತೊಳಲಾಡುತ್ತಿರುವ ಗಂಡನ ಬಗ್ಗೆ ಯೋಚನೆ ಯಾಯಿತು.' ಈ ಸ್ಥಿತಿಗೆ ಕಾರಣ ನಿನ್ನೆ ಸಿಕ್ಕಿದ ಡೈರಿ ಇರಬಹುದೆ? ಅಂಥಾದ್ದೇನಿರ ಬಹುದು ಅದರಲ್ಲಿ? ನಾನಾಗಿ ಕೇಳುವುದು ಬೇಡ; ಇಂದಲ್ಲದಿದ್ದರೆ ನಾಳೆಯಾದರೂ ಗಂಡ ಅದರ ಬಗ್ಗೆ ತನ್ನೊಡನೆ ಚರ್ಚಿಸದೇ ಇರಲಾರ'. ಯೋಚಿಸುತ್ತಾ ಅತ್ತೆಗೆ ಕಾಯಿ ತುರಿದುಕೊಡಲೆಂದು ಅಡಿಗೆಮನೆಗೆ ನಡೆದಳು ಸುಜಾತಾ.

ಪೇಪರ್ ಹುಡುಗನ ಸೈಕಲ್ ಶಬ್ಧಕ್ಕೆ ಎಚ್ಚರಗೊಂಡ ಸುಹಾಸ ಬೆಳ್ಳನೆ ಬೆಳಕಾಗಿರುವುದನ್ನು ಕಂಡು ಧಿಗ್ಗನೆ ಎದ್ದುಕುಳಿತ. ತಲೆಯೊಳಗೆ ಧಿಂ ಎಂದಂತಾಗಿ ಹಾಗೆಯೇ ಪುನಃ ಹಾಸಿಗೆಗೊರಗಿದವನಿಗೆ ಅಕ್ಕನ ಡೈರಿಯಲ್ಲಿ ಸಿಕ್ಕಿದ ಚೀಟಿಯಲ್ಲಿದ್ದ 'ಇಲ್ಲದಿದ್ದರೆ' ಎಂಬ ಮಧುಕರನ ಒಕ್ಕಣೆ ನೆನಪಾಗಿ ಮನಸ್ಸು ಅಲ್ಲೋಲಕಲ್ಲೋಲವಾಯ್ತು. ಉತ್ತರವೇ ಸಿಗದಿದ್ದ ಅಕ್ಕನ ಸಾವಿನ ಬಗೆಗಿನ ಪ್ರಶ್ನೆಗಳು ಮತ್ತೆ ಮನಸ್ಸನ್ನು ಮುತ್ತಿದವು.

ಮಗ ಎದ್ದಿದ್ದಾನೊ ಎಂದು ನೋಡಲು ಬಂದ ಸುಬ್ಬಜ್ಜಿ ಅವನು ಎಚ್ಚರ ಗೊಂಡಿರುವುದನ್ನು ಕಂಡು 'ಸುಹಾಸ ಏನಾಗ್ತಿದೆ ನಿಂಗೆ? ಸುಜಾತಾ ಹೇಳಿದ್ಲು ,

ನೀನು ಸರಿಯಾಗಿ ನಿದ್ದೆನೂ ಮಾಡಿಲ್ಲಾ ಅಂತ. ಕಷಾಯ ಮಾಡಿ ತರಲೇ?'

'ಅಮ್ಮಾ ಡಬಲ್ ಸ್ಟ್ರಾಂಗ್ ಕಾಫೀನೇ ಮಾಡು, ಸ್ನಾನ ಮಾಡಿ ಬಂದು ಕುಡೀತೀನಿ' ಎಂದು ಹೇಳುತ್ತಾ ನಿಧಾನವಾಗಿ ಎದ್ದವನ ಹಣೆ ಮುಟ್ಟಿ ನೋಡಿ ಸುಬ್ಬಜ್ಜಿ 'ಪಟಪಟಾಂತ ನರ ಹೊಡ್ಕೋತಿದೆಯಲ್ಲೋ ರಜೆ ಹಾಕಿದರಾಗದೆ?' ಎಂದಳು.

'ಅಮ್ಮಾ ನಿನ್ನ ಕಾಫೀ ನಾಲಿಗೆಗೆ ತಾಕಿದರೆ ಸಾಕು ಈ ತಲೆನೋವು ಹಾರಿ ಹೋಗುತ್ತೆ' ನಗುತ್ತಾ ಹೇಳಿದ ಸುಹಾಸನನ್ನು ಅಕ್ಕರೆಯಿಂದ ನೋಡಿದ ಸುಬ್ಬಜ್ಜಿ ಅಡಿಗೆಮನೆಯತ್ತ ನಡೆದಳು.

ಎಲ್ಲೋ ಹೋಗಿದ್ದ ಬೆಕ್ಕು ಇವಳನ್ನು ಕಂಡೊಡನೆ 'ಮೀಯಾಂ' ಕೂಗುತ್ತಾ ಕಾಲಿನಸುತ್ತ ಸುತ್ತ ತೊಡಗಿತು. ಅದನ್ನು ಕುರಿತು, 'ಬೆಳಿಗ್ಗೆ ಬೆಳಿಗ್ಗೆ ಎಲ್ಲಿ ಹೋಗಿದ್ದೆ ಚಿಕ್ಕಿ? ನೋಡು ಸುಹಾಸಂಗೆ ತಲೆನೋವಂತೆ! ನನ್ ಬಗ್ಗೆ ತುಂಬಾ ಚಿಂತೆ ಮಾಡ್ತಾನೆ ಕಣೆ. ನಿಂಗೊತ್ತಾ ಸುಜಾತಾನೂ ಈಗ ನನ್ನ ಕಡೆಗಣಿಸ್ತಿಲ್ಲಾ. ಅತ್ತೇ ಅತ್ತೇ ಅಂತ ಅವಳು; ಅಜ್ಜೀ ಅಜ್ಜೀ ಅಂತ ಮೊಮ್ಮಗಳು!'" ದೇಶಾವರಿ ನಗೆ ನಗುತ್ತಾ ಸುಬ್ಬಜ್ಜಿ ಹಿಂದುಗಡೆ ಬಾಗಿಲ ಪಕ್ಕ ಇಟ್ಟಿದ್ದ ಅದರ ತಟ್ಟೆಗೆ ಹಾಲು ಸುರಿದಳು.

ಸ್ನಾನ–ಸಂಧ್ಯಾವಂದನೆ ಮುಗಿಸಿ, ದೇವರಿಗೆ ಪೂಜೆ ಸಲ್ಲಿಸಿ ಅಡಿಗೆಮನೆಗೆ ಬಂದವನಿಗೆ ಸುಬ್ಬಜ್ಜಿ ಅವ ಬಯಸಿದಂತಹ ಕಾಫಿಯ ಜೊತೆ ಜೊತೆಗೆ ತಿಂಡಿಯ ತಟ್ಟೆಯನ್ನೂ ಇಟ್ಟಳು. ಹೊಟ್ಟೆ ಚುರ್ ಗುಟ್ಟುತ್ತಿದ್ದುದರಿಂದ ಬಿಸಿ ಬಿಸಿ ಇಡ್ಲಿ, ಚಟ್ನಿ–ಸಾಂಬಾರ್ ನೊಂದಿಗೆ ಗಬಗಬನೆ ತಿಂದ ಸುಹಾಸ. 'ಅಮ್ಮಾ ಪದ್ಮಕ್ಕ ಯಾಕೋ ಕಾಣಿಸ್ತಿಲ್ಲವಲ್ಲಾ ಎಂದ. 'ಹೌದು ಕಣೊ ಅವಳು ಎರಡ್ದಿನ ಇಲ್ಲದೆ ಇರೋದು ನಮಗೆ ಎಷ್ಟೋ ದಿನ ಅನ್ನಿಸ್ತಿದೆ. ಭರತ್‌ಗೆ ಅವಳು ತೋರಿಸಿದ ಹುಡುಗಿ ಒಪ್ಪಿಗೆಯಾದಳಂತೆ. ಮಾತುಕತೆಗೆ ಅವನ ಕಡೆಯ ಹಿರಿಯರಾಗಿ ಪದ್ಮ ಭಾಸ್ಕರ ದಂಪತಿಗಳನ್ನು ಕರೆದಿದ್ದಾರಂತೆ. ಇವತ್ತು ಬರುವವರಿದ್ದಾರೆ. ರಾತ್ರಿ ಊಟಕ್ಕೆ ಇಲ್ಲಿಗೇ ಬರಹೇಳಿದ್ದೇನೆ' ಎಂದಳು ಸುಬ್ಬಜ್ಜಿ. ಹಾಗಾದರೆ ಮಧುಕರನ ಬಗ್ಗೆ ಮಾತಿನ ಪೀಠಿಕೆ ಇಂದೇ ಹಾಕಬೇಕು ಎಂದು ಮನದಲ್ಲೇ ನಿರ್ಧರಿಸಿದ ಸುಹಾಸ 'ಅಕ್ಕನ ಡೈರಿಯನ್ನು ಸರಿಯಾಗಿ ನೋಡಬೇಕು, ಆದರೆ ನವ್ಯಾಳ ಗಮನಕ್ಕೆ ಬಾರದಂತೆ ಓದುವುದು ಕಷ್ಟಕರ ಕೆಲಸ. ಅವಳು ರಾತ್ರಿ ಮಲಗಿದ ಮೇಲೆ ನೋಡುವುದೇ ಸರಿ' ಎಂದು ಯೋಚಿಸಿ ಬ್ಯಾಂಕ್‌ಗೆ ಹೊರಡಲು ಬಟ್ಟೆ ಧರಿಸ ಹೋದವನಿಗೆ ಬಟ್ಟೆಗೆ ಇಸ್ತ್ರೀ ಇಲ್ಲದ್ದು ಕಂಡು ಮಧುಕರನ ಚೀಟಿ ನನ್ನ ದಿನಚರಿಯನ್ನೆ ಅಡಿಮೇಲು ಮಾಡುತ್ತಿದೆ ಎಂದುಕೊಳ್ಳುತ್ತಾ ಇಸ್ತ್ರೀ ಮಾಡತೊಡಗಿದ, 'ಅಪ್ಪಾ ನನ್ನದೂ ಒಂದು' ಮಗಳ ಸ್ವರದಲ್ಲಿಯೇ ಬೇಡಿಕೆಯನ್ನು ಗುರುತಿಸಿ ಈ ಪುಟ್ಟ ಹುಡುಗಿಗೆ ಈಗಲೇ ಮದುವೆ ಮಾಡುವ

ಯೋಚನೆ ಸುಜಾತಾಳ ಮನಸ್ಸಿಗೆ ಬಂದಿತಾದರೂ ಏಕೆ! ನಾ ಒಪ್ಪಕೂಡದು; ಮನೋವೈದ್ಯೆಯಾಗಬೇಕೆಂಬ ಅವಳ ಆಸೆಗೆ ನಾನು ಇಂಬು ಕೊಡಲೇಬೇಕು ಎಂದು ಗಟ್ಟಿ ನಿರ್ಧಾರಕ್ಕೆ ಬಂದ ಸುಹಾಸ.

❖ ❖ ❖

ಸುಬ್ಬಜ್ಜಿಯ ಸಲಹೆಯಂತೆ ಕಲ್ಯಾಣಮ್ಮ ಹೊಟ್ಟೆನೋವಿನಿಂದ ಬಳಲುತ್ತಿರುವ ಸೊಸೆಗೆ ಜೀರಿಗೆ ಕಷಾಯ ಮಾಡಿಕೊಟ್ಟದ್ದಲ್ಲದೆ ಮೈ, ಕೈ ಹಗುರಾಗಿ ಹೆರಿಗೆ ಸುಲಭವಾಗಲೆಂದು ತೆಂಗಿನೆಣ್ಣೆ, ಅರಿಶಿಣ ಬಿಸಿ ಮಾಡಿ ನವಿರಾಗಿ ಹಚ್ಚಿ, ಬಿಸಿ ಬಿಸಿ ನೀರೆರೆದಿದ್ದರು. ಇಂತಹ ಸಮಯದಲ್ಲಿ ತಾಯಿಯ ನೆನಪು ಕಾಡುವುದು ಸಹಜ. ಆದರೆ ಅವಳ ತಾಯಿ ನೀರು ಹಿಡಿಯುವಾಗ ಕಾಲು ಜಾರಿ ಮೂಳೆ ಮುರಿದು ಕೊಂಡಿದ್ದರಿಂದ ಅವಳನ್ನು ತವರಿಗೆ ಕರೆದೊಯ್ದಿರಲಿಲ್ಲ. ಕಳಿಸುವ ಇಚ್ಛೆ ಮಗ ಕಿಶೋರನಿಗೂ ಇರಲಿಲ್ಲ. ಸುಬ್ಬಜ್ಜಿ ಹತ್ತಿರದಲ್ಲಿಯೇ ಇರುವುದರಿಂದ ಅಲ್ಲದೆ ಸುಗುಣಾ ಸುಧಾರಣೆ ಇರುವ ಹುಡುಗಿಯಾದ್ದರಿಂದ ಕಲ್ಯಾಣಮ್ಮನೂ ಸೊಸೆಯ ಜವಾಬ್ದಾರಿಯನ್ನು ಧೈರ್ಯದಿಂದಲೇ ನಿರ್ವಹಿಸಲು ಮಾನಸಿಕವಾಗಿ ತಯಾರಾಗಿದ್ದರು. ಸಿಡುಕಿನ ಸ್ವಭಾವದ ಗಂಡ ಯಾವುದೇ ಕೆಲಸವನ್ನು ಸಂಪೂರ್ಣವಾಗಿ ನಿರ್ವಹಿಸಿದವರಲ್ಲ. ತನ್ನ ಮೇಲೆ ಜವಾಬ್ದಾರಿಯ ಹೊರೆ ಬೀಳುತ್ತೆಂದರೆ ಸುಲಭದಲ್ಲಿ ನುಣುಚಿಕೊಳ್ಳುವವರು. ಹಾಗಾಗಿಯೆ ಇನ್ನೂ ತನಗಿಂತ ಕಿರಿಯರಿಗಾದರೂ ಸರಿಯೆ ಸಹಾಯಕ ಪುರೋಹಿತರಾಗಿಯೇ ಇರುವುದು. ಅವರ ಸಿಡುಕಿನ ಸ್ವಭಾವಕ್ಕೆ ನಾನು ಮತ್ತು ಕಿಶೋರ ಹೊಂದಿಕೊಂಡು ನಡೆವುದು ನಮ್ಮ ಕರ್ಮ. ಆದರೆ ಸುಗುಣಾ ಮತ್ತು ಸರಿತಾ! ಇವರ ರೇಗಾಟಕ್ಕೆ, ಹಾರಾಟಕ್ಕೆ ಹೆದರಿ ಗುಬ್ಬಚ್ಚಿಯಂತಾಗುವ ಮಕ್ಕಳು ಸಾಧ್ಯವಾದಷ್ಟೂ ಅವರ ಮುಂದೆ ಬರುವುದನ್ನು ತಪ್ಪಿಸಿಕೊಳ್ಳುತ್ತಿದ್ದರು. 'ಅತ್ತೇ' ಸರಿತಾಳ ಸ್ವರ ಅವರನ್ನು ಎಚ್ಚರಿಸಿತ್ತು "ಅತ್ತೇ ಸುಗುಣಕ್ಕಂಗೆ ನೋವು ಜೋರಾಗ್ತಿದೆಯಂತೆ; ಕಿಶೋರಬಾವ ಹೇಳಿದ್ರು" ಎಂದ ಸರಿತಾಳತ್ತ ನೋಡಿದ ಕಲ್ಯಾಣಮ್ಮ, ಉಪ್ಪಿಟ್ಟಿಗೆ ಕಾಯಿ ತುರಿ ಹಾಕುತ್ತಿದ್ದವರು 'ಉಪ್ಪಿಟ್ಟು ಬೆಂದಿದೆ; ನೀನು, ಕೆಲಸದ ಸೋಮಿ ತಗೊಂಡು ಬಿಡಿ, ಎಲ್ಲ ಒಟ್ಟಿಗೆ ಅಂತ ಕೂತ್ರೆ ಆಗೋಲ್ಲ' ಎನ್ನುತ್ತಾ ಉಪ್ಪಿಟ್ಟಿನ ತಟ್ಟೆಯ ಜೊತೆಗೇ ಬಾಣಂತಿ ಕೋಣೆ ಹೊಕ್ಕರು . ಹೆಂಡತಿಯ ಮಗ್ಗುಲು ಬಿಟ್ಟು ಕದಲದ ಮಗನಿಗೆ "ತಗೋ ಕಿಶೋರ, ಅವಳಿಗೆ ಉಪ್ಪಿಟ್ಟು ತುಂಬಾ ಇಷ್ಟ, ಎರಡು ತುತ್ತು ತಿನ್ನಿಸು. ಮೊದಲಿಷ್ಟು ನೀರು ಕುಡಿಸು. ಅವಸರಿಸಬೇಡ; ನಿಧಾನ" ಎಂದವರು "ಸುಗುಣಾ ಈ ನೋವಿನಲ್ಲಿ ತಿಂಡಿ ರುಚಿಸೋಲ್ಲ ಅಂತ ನಂಗೂ ಗೊತ್ತು, ಆದರೂ ಎಷ್ಟು ಸೇರುತ್ತೋ ಅಷ್ಟು ತಿನ್ನು" ಎಂದರು. ಅವರ ಮಾತು ಕೇಳಿ ಸುಗುಣಾಳಿಗೆ ಕಣ್ಣು ತುಂಬಿ ಬಂತು. ಆ ಕಣ್ಣೀರಿಗೆ ಹೊಟ್ಟೆನೋವೂ ಕಾರಣವಾಗಿತ್ತು; ಅತ್ತೆ ಮತ್ತು ಗಂಡ

ಕಾಡುತ್ತಿದ್ದ ಕಾಳಜಿಯೂ ಕಾರಣವಾಗಿತ್ತು. 'ಅಮ್ಮಾ ಸುಬ್ಬಜ್ಜಿಯನ್ನು ಕರೆಸಿ ಬಿಡೋಣ. 'ಆಟೋ ಸಿಕ್ಕಿ ಅವರು ಬರಬೇಕಲ್ಲಾ' ಮಗ ಹೇಳಿದಾಗ ಸುಬ್ಬಜ್ಜಿಯನ್ನು ಕರೆಯಲು ಫೋನ್ ಕೈಗೆತ್ತಿಕೊಂಡರು.

ಫೋನ್ ರಿಂಗುಟ್ಟಿದ್ದು ಕೇಳಿ ಓಡಿಬಂದ ನವ್ಯಾ ರಿಸೀವರ್ ಎತ್ತಿ ಹಲೋ ಎನ್ನುವಷ್ಟರಲ್ಲಿ ಸುಬ್ಬಜ್ಜಿಯೂ ಅತ್ತ ಬಂದಳು. ನಿನ್ನೆ ಸಂಜೆಯೇ ಕಲ್ಯಾಣಿ, ಸುಗುಣಾಳಿಗೆ ಸಣ್ಣದಾಗಿ ಹೊಟ್ಟೆನೋವು ಬರುತ್ತಿರುವ ವಿಷಯ ತಿಳಿಸಿದ್ದಳು. ಬಹುಶಃ ನೋವು ಜೋರಾಗಿರಬೇಕು. ಫೋನ್ ಅಲ್ಲಿಂದಲೇ ಇರಬೇಕು, ಯೋಚಿಸುತ್ತಾ ಬಂದ ಸುಬ್ಬಜ್ಜಿ ಕರೆ ಬಂದೀತೆಂದೇ ಬೇಗ ಬೇಗ ಕೆಲಸ ಮುಗಿಸಿದ್ದು ಒಳ್ಳೆಯದೆ ಆಯ್ತು ಎಂದುಕೊಂಡಳು. ಅವಳಂದುಕೊಂಡಂತೆಯೇ ಅತ್ತಕಡೆಯಿಂದ ಕಲ್ಯಾಣಮ್ಮನ ಸ್ವರ ಕೇಳಿಬಂತು.

'ನವ್ಯಾ ಸುಬ್ಬಜ್ಜೀಗೆ ಆದಷ್ಟು ಬೇಗ ಬರೋಕ್ಕೆ ಹೇಳ್ತೀಯಾ; ಸುಗುಣಾಗೆ ನೋವು ಜೋರಾಗ್ತಿದೆ' ಅಲ್ಲಿಯೇ ಇದ್ದ ಸುಹಾಸ ಫೋನ್ ತಗೊಂಡವನು 'ಇನ್ನರ್ಧ ಗಂಟೇಲಿ ಅಲ್ಲಿರ್ತೀವಿ; ಧೈರ್ಯವಾಗಿರಿ' ಎಂದವ ತಾಯಿಯ ಕಡೆ ತಿರುಗಿ "ಅಮ್ಮಾ ಹೊರಡು; ನಿನ್ನನ್ನು ಅಲ್ಲಿ ಬಿಟ್ಟು ನಾನು ಬ್ಯಾಂಕ್ ಕಡೆ ಹೋಗುತ್ತೇನೆ" ಎಂದು ಹೇಳಿ ಹೊರಡಲನುವಾದ. ಅದಾಗಲೆ ಅಮ್ಮ ಊಟದ ಡಬ್ಬಿ, ನೀರು, ಕರವಸ್ತ್ರ, ಮೊಬೈಲ್, ಚಾರ್ಜರ್ ಎಲ್ಲಾ ತನ್ನ ಬ್ಯಾಗ್‌ನ ಪಕ್ಕ ಶಿಸ್ತಾಗಿ ಜೋಡಿಸಿಟ್ಟಿರುವುದನ್ನು ಕಂಡು ಅಭಿಮಾನದಿಂದ ಮನಸ್ಸು ಬೀಗಿತು. ಜೊತೆಯಲ್ಲಿಯೇ ಸುಮಕ್ಕ ಬದುಕಿದ್ದಿದ್ದರೆ ಅಮ್ಮನಂತೆಯೇ ಶಿಸ್ತಿನ ಸಿಪಾಯಿಯಾಗಿ ತಯಾರಾಗಿರುತ್ತಿದ್ದಳು ಎಂಬ ಯೋಚನೆ ಬಂದು ಕಣ್ಣಲ್ಲಿ ನೀರು ಜಿನುಗಿತು.

"ಸುಜಾತಾ ಬೆಕ್ಕಿಗೆ, ನಾಯಿಗೆ ಅನ್ನ ಹಾಲು ಹಾಕೋದು ಮರೀಬೇಡ. ಸುಹಾಸನಿಗೆ ಮಾಡಿದ ಅನ್ನವೇ ಉಳಿದಿದೆ. ಅದನ್ನೇ ಹಾಕು.ಸೂರಲೆಕುಡಿ ತಂಬುಳಿ, ಸೌತೆಕಾಯಿಯ ಸಾಂಬಾರ್ ಮಾಡಿಟ್ಟಿದ್ದೇನೆ, ಊಟ ಮಾಡಿಬಿಡಿ, ನನ್ನನ್ನು ಕಾಯುವುದು ಬೇಡ ಹಸು ಕರುಗಳನ್ನು ನಿಂಗಿ ನೋಡ್ಕೋತಾಳೆ" ಸುಬ್ಬಜ್ಜಿ ಹೇಳುತ್ತಿದ್ದಂತೆಯೇ ನವ್ಯಾ: "ಅಮ್ಮಾ ಅಜ್ಜೀ ಜೊತೆ ನಾನೂ ಹೊರಟೆ, ಹ್ಯಾಗೂ ಮುಂದೆ ಡಾಕ್ಟರಳಾಗೋಳು, ನಾ ಜೊತೇಲಿದ್ರೆ ಅಜ್ಜಿಗೂ ಧೈರ್ಯ ಇರುತ್ತೆ" ಹೊರಟು ನಿಂತ ಮೊಮ್ಮಗಳ ಕಿವಿ ಮೆಲ್ಲಗೆ ಹಿಂಡಿದ ಸುಬ್ಬಜ್ಜಿಯನ್ನು ತಳ್ಳಿಕೊಂಡಂತೆಯೇ ಹೊರಗೊಯ್ದಳು ನವ್ಯ. ಅವಳ ಮಾತು ಕೇಳಿಸಿಕೊಂಡ ಸುಹಾಸ ನಗುತ್ತಾ ಕಾರಿನ ಬಾಗಿಲು ತೆರೆದು "ಕೂತ್ಕೊಳ್ಳಿ ಡಾಕ್ಟ್ರೇ" ಎಂದು ಸೆಲ್ಯೂಟ್ ಹೊಡೆದು ನಿಂತ. ಅಪ್ಪನ ಕಡೆ ಬೆಳದಿಂಗಳ ನಗೆ ನಕ್ಕವಳು "ನಾ ಕಾರ್ ಓಡಿಸ್ಲೇನಪ್ಪಾ" ಎಂದು ಕೇಳಿದಳು

"ನಿನ್ನ ಪರೀಕ್ಷೆ ಮುಗಿದಮೇಲೆ ಹತ್ತಿರದಲ್ಲೇ ಎಲ್ಲಿಗಾದ್ರು ಹೋಗಿಬರೋಣ, ಆಗ ನೀನೇ ಓಡಿಸೋವಂತೆ" ಎಂದ ಸುಹಾಸ ಪರ್ಸ್ ನಿಂದ ಹಣ ತೆಗೆದು ಮಗಳ ಕೈಗಿಡುತ್ತಾ ಹೇಳಿದ 'ಇದರಲ್ಲಿ ಐದು ಸಾವಿರ ರೂಪಾಯಿಯಿದೆ, ಕಿಶೋರನ ಕೈಯಲ್ಲಿಟ್ಟುಬಿಡು, ಅನುಪತ್ಯಕ್ಕಿರಲಿ. ಸಾಲ ಅಂತೇನೂ ಅಲ್ಲ" ಕಾರ್ ಚಲಾಯಿಸುತ್ತ ಹೇಳಿದ ಮಗನ ದೃಷ್ಟಿ ತೆಗೆದಳು ಕುಳಿತಲ್ಲೇ ಸುಬ್ಬಜ್ಜಿ.

ಕಾರಿನಲ್ಲಿ ಬಂದಿಳಿದ ಸುಬ್ಬಜ್ಜಿ, ನವ್ಯಾ, ಹಾಗೂ ಸುಹಾಸರನ್ನು ಕಂಡು ಸರಿತಾ "ಸುಬ್ಬಜ್ಜಿ ಬಂದ್ರು" ಎಂದು ಗಟ್ಟಿಯಾಗಿ ಕೂಗಿ ಹೇಳಿದಳು. ಸರಿತಾಳ ಸ್ವರದಲ್ಲಿ 'ಇನ್ನು ಭಯವಿಲ್ಲ' ಎಂಬ ಭಾವವೂ ಸೇರಿತ್ತು. 'ತಾಯೀ ಹೆರಿಗೆ ಸುಸೂತ್ರವಾಗಿ ನಡೆದು ಮಗು–ಬಾಣಂತಿ ಕ್ಷೇಮವಾಗಿರುವಂತೆ ನೋಡಿಕೊಳ್ಳಮ್ಮಾ; ನಿನ್ನನ್ನೇ ನಂಬಿದ್ದೇನೆ' ಮನಸಾರೆ ದುರ್ಗಾ ಪರಮೇಶ್ವರಿಯನ್ನು ನೆನಯುತ್ತಾ ಒಳಗಡಿ ಯಿಟ್ಟಳು ಸುಬ್ಬಜ್ಜಿ. 'ಬಂದ್ರ್ಯಾ ಬನ್ನಿ... ಬನ್ನಿ ... ಕುಳಿತುಕೊಳ್ಳಿ. ಸರಿತಾ ನೀರು ತಾರಮ್ಮಾ' ಎಂದ ಕಲ್ಯಾಣಮ್ಮನಿಗೆ 'ಭಟ್ಟರು, ಕಿಶೋರ ಮನೆಯಲ್ಲಿದ್ದಾರೆಯೆ' ಎಂದು ಕೇಳಿದ ಸುಹಾಸ, ಕಿಶೋರ ಇಲ್ಲದ ಪಕ್ಷದಲ್ಲಿ ತಾನೆ ರಜೆ ಹಾಕುವ ಯೋಚನೆಯಲ್ಲಿ. 'ಇವರು ಬರುವುದು ರಾತ್ರಿಯಾಗುತ್ತೆ, ಕಿಶೋರ ಇದ್ದಾನೆ. ಕೈ, ಕಾಲು ತೊಳೆದುಬನ್ನಿ, ಒಂದಿಷ್ಟು ತಿಂಡಿ ತಿನ್ನೋರಂತೆ. ಅವನೂ ಬೆಳಗ್ಗಿನಿಂದ ಏನೂ ತಗೊಂಡಿಲ್ಲ...' ಎಂದು ಹೇಳುತ್ತಾ ಒಳ ನಡೆದರು ಕಲ್ಯಾಣಮ್ಮ. ಸುಬ್ಬಜ್ಜಿಯೂ ಕೈ, ಕಾಲು ತೊಳೆದು ಸುಗುಣ ಮಲಗಿದ ಕೋಣೆಯತ್ತ ನಡೆದರು. ನವ್ಯಾ ಅದಾಗಲೆ ಸರಿತಾಳ ಜೊತೆ ಸುಗುಣಳ ಹಾಸಿಗೆಯ ಪಕ್ಕ ಕೂತಾಗಿತ್ತು. 'ಸುಬ್ಬಜ್ಜೀ, ನಂಗೆ ಅಮ್ಮಂಗೆ ಈಗ ಧೈರ್ಯ ಬಂತು ನೋಡಿ' ಎನ್ನುತ್ತಾ ಕಾಲಿಗೆರಗಿದ ಕಿಶೋರನ ಬೆನ್ನು ತಟ್ಟಿ "ದೇವರ ದಯೆಯಿಂದ ಎಲ್ಲಾ ಸುಸೂತ್ರವಾಗಿ ನಡೆಯುತ್ತೆ; ಹೆದರಬೇಡ" ಎಂದರು. ಸೋಮಿಯನ್ನು ಕರೆದು "ಸೋಮಿ; ತಗೋ ಕಾಳುಜೀರಿಗೆ ತಂದಿದ್ದೀನಿ, ಜಜ್ಜಿ ಪುಡಿಮಾಡಿ ಬೆಲ್ಲ ಸೇರಿಸಿಟ್ಟಿರು, ಹೆರಿಗೆ ಆದಮೇಲೆ ಕೊಡೋಕ್ಕೆ ಬೇಕು. ಮಗುವನ್ನು ಮಲಗಿಸಲು ಮೊರ, ಹಾಸಲು, ಹೊದೆಯಲು ಬಟ್ಟೆ ಶುಭ್ರವಾಗಿಟ್ಟಿದ್ದೀಯಷ್ಟೆ?" ಕೇಳಿದರು, ಹೊಟ್ಟೆನೋವಿನಿಂದ ಬಸವಳಿಯುತ್ತಿದ್ದ ಸುಗುಣಾಳ ತಲೆ ನೇವರಿಸಿ ಕೆನ್ನೆ ತಟ್ಟಿ ಇನ್ನು ಸ್ವಲ್ಪ ಹೊತ್ತು ತಡೆ; ಪುಟ್ಟ ಕೂಸಿನ ಮುಖ ಕಾಣುವವರೆಗಷ್ಟೆ ಈ ಬಳಲಾಟ' ಎಂದ ಅವರ ಹಸನ್ಮುಖ, ಆ ಸ್ಪರ್ಶ ಹಿತವೆನಿಸಿ ಹಾಗೆಯೇ ನಿದ್ದೆಗೆ ಜಾರಿದಳು ಸುಗುಣಾ. ಸುಬ್ಬಜ್ಜಿ ಕಾಫಿ ಮಾಡುತ್ತಿದ್ದ ಕಲ್ಯಾಣಮ್ಮನ ಬಳಿ ಹೋಗಿ "ಕಲ್ಯಾಣೀ ಈ ಹೆಣ್ಣುಮಕ್ಕಳನ್ನು ಮೇಲಿನ ಕೋಣೆಗೆ ಕಳಿಸಿಬಿಡು. ಹೆದರಿಯಾವು" ಎಂದಾಗ ಹೌದು ಹೆರಿಗೆಯ ಬಗ್ಗೆ ಮನಸ್ಸಿನಲ್ಲಿ ಹೆದರಿಕೆ ಕೂತುಬಿಟ್ಟರೆ ಕಷ್ಟ ಎಂದುಕೊಳ್ಳುತ್ತಾ ಸೋಮಿಯನ್ನು ಸುಗುಣಾಳ ಜೊತೆ ಇರಲು ಹೇಳಿ ಎಲ್ಲರನ್ನೂ ತಿಂಡಿಗೆ ಕರೆದರು ಕಲ್ಯಾಣಮ್ಮ.

ಸುಹಾಸ ಕಾಫಿಯನ್ನು ಮಾತ್ರ ತೆಗೆದುಕೊಂಡವನು "ನಾನಿನ್ನು ಹೊರಡುತ್ತೇನೆ ಬ್ಯಾಂಕ್ ಗೆ ತಡವಾಗುತ್ತಿದೆ" ಎಂದು ಹೇಳಿ ಕಿಶೋರನ ಕೈ ಕುಲುಕಿ ಶುಭ ಹಾರೈಸಿ, "ಅಮ್ಮಾ ನಾನು ಹೋಗಿಬರುತ್ತೇನೆ ಸುಗುಣಳಿಗೆ ಧೈರ್ಯ ಹೇಳು" ಎನ್ನುತ್ತಾ ಕಲ್ಯಾಣಮ್ಮನ ಕಾಲಿಗೆರಗಿ ಹೊರಟ. ಎಷ್ಟು ಒಳ್ಳೆಯವನು ಈ ಸುಹಾಸ; ಇಂಥ ಅಳಿಯನನ್ನು ಪಡೆಯೋಕೆ ಸುಜಾತಾಳ ತಂದೆ, ತಾಯಿ ಅದೆಷ್ಟು ಪುಣ್ಯ ಮಾಡಿದ್ದರೋ! ಯೋಚಿಸುತ್ತ ಕಲ್ಯಾಣಮ್ಮ ಮನದುಂಬಿ ಆಶೀರ್ವದಿಸಿದರು. "ಅಪ್ಪಾ ರಾತ್ರಿ ನಿದ್ದೆ ಸರಿಯಿಲ್ಲದೆ ನೀ ಬಳಲಿದ್ದೀ. ಕೆಲಸ ಮುಗಿಸಿ ಬೇಗ ಬಂದು ರೆಸ್ಟ್ ತಗೊ" ಎನ್ನುತ್ತ ಬಂದ ಮಗಳ ಮಾತು ಕೇಳಿ ಸುಹಾಸನ ಮನಸ್ಸು ಮಧುರವಾಯಿತು.

ಬಿಸಿನೀರಿನಲ್ಲಿ ಅದ್ದಿದ ಕತ್ತರಿ, ಹತ್ತಿ ಇತ್ಯಾದಿ ಪರಿಕರಗಳೊಂದಿಗೆ ಸುಗುಣಾಳ ಬಳಿ ಬಂದ ಸುಬ್ಬಜ್ಜಿ ಎಚ್ಚರಗೊಂಡ ಅವಳನ್ನು ನೋಡಿ ಏನಾದರೂ ಕುಡಿಯಬೇಕೆನ್ನಿಸುತ್ತಿದೆಯೆ? ಎಂದು ಕೇಳಿದವರಿಗೆ "ಅಜ್ಜೀ ಯಾಕೋ ತುಂಬಾ ನಿದ್ದೆ ಆದ್ರೆ ಹೊಟ್ಟೆನೋವಿಗೆ ಎಚ್ಚರ ಆಗಿಬಿಡುತ್ತೆ" ಎಂದಳು ಸುಗುಣ. "ಅದು ಹಾಗೇ ಆಗೋದು, ನನಗೂ ಆಗಿತ್ತು ಬಳಲಿಕೆಯಿಂದಾಗಿ ಹಾಗಾಗುತ್ತೆ ಹೆದರಬೇಡ" ಎಂದರು.

ಹೊಟ್ಟೆನೋವು ತೀವ್ರವಾಗುತ್ತಿರುವುದನ್ನು ಗಮನಿಸಿದ ಸುಬ್ಬಜ್ಜಿ "ಸುಗುಣಾ ನಿನ್ನ ಇಷ್ಟದೇವರನ್ನು ನೆನೆಯಮ್ಮಾ... ಸುಸೂತ್ರವಾಗಿ ಹೆರಿಗೆ ಆಗಲಿ" ಎಂದವರು ಸೋಮಿಗೆ ಕೋಣೆಯ ಬಾಗಿಲು ಓರೆ ಮಾಡಲು ಹೇಳಿದರು. ಕಿರ್ ಎಂದು ಬಾಗಿಲು ಓರೆ ಮಾಡಿದ ಸದ್ದು ಕೇಳಿ ಕಲ್ಯಾಣಮ್ಮ ಶಕಟಾಸುರದ ಸಂತಾನ ಗೋಪಾಲಕೃಷ್ಣನ ಜಪ ಮಾಡತೊಡಗಿದರು. ಕೂತಿರಲೂ ಆಗದೆ, ನಿಂತಿರಲೂ ಆಗದೆ ಚಡಪಡಿಸುತ್ತಿದ್ದ ಮಗನಿಗೆ "ಸ್ವಲ್ಪ ಸೈರಣೆಯಿರಲಿ; ಕೂತುಕೋ; ಎಲ್ಲಾ ಒಳ್ಳೆಯದೇ ಆಗುತ್ತೆ" ಎಂದರು. ಮಡಿಲಲ್ಲಿ ತಲೆಯಿಟ್ಟು ಮಲಗಿದ ಕಿಶೋರನಿಗೆ ಅಲ್ಲೇ ಜೋಂಪು ಹತ್ತಿತು.

ಮಗುವಿನ ಅಳುವಿನ ಜೊತೆ ಜೊತೆ 'ಜಾಗಂಟೆ ಶಬ್ದ ಮೊಳಗಲಿ ಗಂಡುಮಗು" ಸುಬ್ಬಜ್ಜಿಯ ಸ್ವರದಲ್ಲಿ ಸಂಭ್ರಮವಿತ್ತು. ಕಿಶೋರನ ಮನೆಯಲ್ಲಿ ಮೊಳಗಿದ ಜಾಗಂಟೆಯ ಸದ್ದು ನೆರೆಹೊರೆಯವರಿಗೆಲ್ಲ ಸುದ್ದಿ ಕೊಟ್ಟಿತ್ತು; 'ತಾಯಿ, ಮಗು ಕ್ಷೇಮ' ಎಂದು.

ಮಗುವಿನ ಅಳುವಿನ ದನಿ ಕೇಳಿ ಕೆಳಗೋಡಿಬಂದ ಸರಿತಾ ಮತ್ತು ನವ್ಯಾ ಮಗುವನ್ನು ಯಾವಾಗ ಕಂಡೇವೋ ಎಂದು ತವಕದಿಂದ ಕಾಯುತ್ತಾ ನಿಂತರು.

ಕಲ್ಯಾಣಮ್ಮ ಮತ್ತು ಕಿಶೋರ ಮನದಲ್ಲಿಯೇ ದೇವರಿಗೆ ವಂದಿಸಿದರು.

ಶಿಶುವನ್ನು ಶುಭ್ರಗೊಳಿಸಿ ಮೆತ್ತನೆಯ ಬಟ್ಟೆಯನ್ನು ಹೊದಿಸಿ ಸಿದ್ಧಪಡಿಸಿಟ್ಟ

ಮೊರದಲ್ಲಿ ಮೆಲ್ಲಗೆ ಮಲಗಿಸಿ, ಕಲ್ಯಾಣಮ್ಮನನ್ನು ಕರೆದರು ಸುಬ್ಬಜ್ಜಿ. ಬಯಸಿ, ಬಯಸಿ ಪಡೆದ ಮೊಮ್ಮಗನನ್ನು ಎತ್ತಿಕೊಂಡ ಕಲ್ಯಾಣಮ್ಮ ಸಂತಾನ ಗೋಪಾಲಕೃಷ್ಣನಿಗೆ ಪುನಃ ಪುನಃ ವಂದಿಸುತ್ತಾ ಸೊಸೆಯ ಕಡೆ ಅಭಿಮಾನದಿಂದ ನೋಡಿ 'ನನ್ನ ಮನೆಯ ದೇವತೆ ನೀನು; ನನ್ನ ಮನೆಯನ್ನು ನಂದಗೋಕುಲ ವಾಗಿಸಿದೆ' ಎನ್ನುವಾಗ ಅವರ ಕಣ್ತುಂಬಿ ಬಂದಿತ್ತು.

ಸರಿತಾ ಮತ್ತು ನವ್ಯಾ ಕಿಶೋರನ ಕೈಯಲ್ಲಿದ್ದ ಮಗುವನ್ನು ನೋಡಿದ್ದೇ ನೋಡಿದ್ದು. ಗುಲಾಬಿ ಬಣ್ಣದ ಪುಟ್ಟ ಕಂದ ಯಾರ ಹಾಗೆ ಎಂಬ ಚರ್ಚೆ ಅದಾಗಲೆ ಪ್ರಾರಂಭವಾಗಿ ಬಿಟ್ಟಿತ್ತು ಇಬ್ಬರ ನಡುವೆ. ಮಗುವನ್ನು ನವ್ಯಾಳ ಕೈಯಲ್ಲಿಟ್ಟು ಮಗಳಬಗ್ಗೆ ಕಾತುರತೆಯಿಂದ ಕಾಯುತ್ತಿರುವ ಅತ್ತೆಗೆ ಮೊದಲು ಫೋನ್ ಮಾಡಬೇಕು; ನಂತರ ತಂದೆಗೆ ಹೀಗೆ ಪಟ್ಟಿ ಹಾಕುತ್ತ ಫೋನ್‌ನತ್ತ ನಡೆದ ಕಿಶೋರ.

ಹೆರಿಗೆಯಾದ ನಂತರ ಮಾಡಲೇಬೇಕಾದ ವಿಧಿ-ವಿದಾನಗಳನ್ನು ಸೋಮಿಯ ಸಹಾಯದಿಂದ ಪೂರೈಸಿದ ಸುಬ್ಬಜ್ಜಿ "ಕಿಶೋರ; ನೀನಿನ್ನು ಒಳಗೆ ಹೋಗಬಹುದು" ನಗುತ್ತಾ ಹೇಳಿದಾಗ ಅದಕ್ಕಾಗಿಯೇ ಕಾಯುತ್ತಿದ್ದವನು, ಒಳಹೋದವನೇ ಕಣ್ಮುಚ್ಚಿ ಮಲಗಿದ್ದ ಹೆಂಡತಿಯನ್ನು ಎಬ್ಬಿಸಲೋ ಬೇಡವೋ ಎಂಬಂತೆ ಮೆಲ್ಲಗೆ 'ಸುಗುಣಾ' ಎಂದ. ಗಂಡನ ಪ್ರೀತಿಯ ಕರೆಗೆ ಕಣ್ಬಿಟ್ಟ ಸುಗುಣಾಳಿಗೆ "ತುಂಬಾ ನೋವು ಅನುಭವಿಸಬೇಕಾಯ್ತು." ಇನ್ನೂ ಏನೋ ಹೇಳಹೊರಟವನ ಬಾಯಿಗೆ ಬೆರಳನ್ನು ಅಡ್ಡವಾಗಿಟ್ಟವಳು "ಈಗ ಎಲ್ಲಾ ಮರೆತುಹೋಯ್ತು" ಎಂದು ಮೃದುವಾಗಿ ನಕ್ಕಳು.

"ಏ ಕಿಶೋರ; ಹೊರಗೆ ಬಾ; ಹಸಿ ಮೈ ಬಾಣಂತಿ, ನಂಜಾದೀತು" ತಾಯಿಯ ಸ್ವರ ಕೇಳಿ ಥಟ್ಟನೆ ಎದ್ದ ಕಿಶೋರ 'ನನ್ನ ಹೆಂಡತಿ ಇಷ್ಟು ಅನುಭವಿಸಿದ್ದೇ ಸಾಕು' ಎಂದುಕೊಳ್ಳುತ್ತಾ ಹೆಂಡತಿಯೆಡೆಗೆ ತಿರುತಿರುಗಿ ನೋಡುತ್ತಾ ಹೊರನಡೆದ. ಮನದಲ್ಲೇ ಮಹಾಗಣಪತಿಯನ್ನು ನೆನೆದ ಸುಗುಣಾ 'ದೇವರು ನನ್ನನ್ನೆಷ್ಟು ಒಳ್ಳೆಯ ಮನೆ ಸೇರಿಸಿದ್ದಾನೆ! ಪ್ರೀತಿಸುವ ಗಂಡ; ಅಕ್ಕರೆಯಿಂದ ಕಾಣುವ ಅತ್ತೆ!' ಇನ್ಫೋಸಿಸ್ ಸುಧಾಮೂರ್ತಿಯವರ ಮಾತು ನೆನಪಾಗಿತ್ತು. 'ಹೆಣ್ಣು ಗಂಡನಿಂದ ಬಯಸುವುದಾದರೂ ಏನು! ಬೊಗಸೆ ತುಂಬಿದ ಪ್ರೀತಿ; ಅರ್ದಮೊಳ ಮಲ್ಲಿಗೆ!' ನಿಜವೇ ಅಲ್ಲವೇ! ಅಂದುಕೊಂಡವಳಿಗೆ ಮಾವನ ಬಗ್ಗೆ ಪ್ರಶ್ನೆ ಕಾಡಿತ್ತು. ಮಾವ...?! ಮಾವನೇಕೆ ಹೀಗೆ? ಯಾವಾಗಲು ಸಿಡುಕು; ಅಸಹನೆ! ಅಮ್ಮನ ಮಾತು ನೆನಪಾಯ್ತು. ಅದೂ ಅಕ್ಕರೆಯಿಂದಲೇ ಎಂದು! ಇದ್ದೀತು; ನಾನು ಮಾವನನ್ನು ಕಾಣುವ ರೀತಿ ತಪ್ಪೇನೋ... ಗುರಾಣಿಯಂತೆ ಕಾಯುವ ಗಂಡನಿರುವಾಗ ಏನನ್ನಾದರೂ ಸಹಿಸಬಲ್ಲೆ ಬಳಲಿಕೆಯಿಂದಾಗಿ ನಿದ್ದೆ ಹತ್ತಿತ್ತು.

ಕಲ್ಯಾಣಮ್ಮ ಕೊಟ್ಟ ಕಷಾಯ ಕುಡಿದು ಸುಬ್ಬಜ್ಜಿ ಸುಗುಣಾಳನ್ನೊಮ್ಮೆ ಇಣುಕಿ ನೋಡಿ ಅಗತ್ಯ ಬಿದ್ದರೆ ಕರೆಯುವಂತೆ ಹೇಳಿ, ನವ್ಯಾಳೊಡನೆ ಮನೆಗೆ ಹೊರಟರು. ಅಪ್ಪನಿತ್ತ ಹಣವನ್ನು ಕಿಶೋರನ ಕೈಲಿಡಲು ಮರೆಯಲಿಲ್ಲ ನವ್ಯಾ.

ನವ್ಯಾಳಿಂದ ಗಂಡುಮಗುವಾದ ವಿಷಯ ತಿಳಿದ ಸುಜಾತಾಳಿಗೆ ಅತ್ತೆಯ ಮೇಲಿನ ಅಭಿಮಾನ ಮತ್ತಷ್ಟು ಹೆಚ್ಚಾಗಿತ್ತು. ಆಯಾಸಗೊಂಡಿದ್ದ ಅತ್ತೆ ಮತ್ತು ನವ್ಯಾರಿಗೆ ಊಟ ಬಡಿಸುತ್ತಾ ಅತ್ತೆಯನ್ನುದ್ದೇಶಿಸಿ ಹೇಳಿದಳು ಸುಜಾತ "ಅತ್ತೇ ಸಂಜೆ ಐದು ಘಂಟೆಗೆ ನಾನು ಪ್ರವಚನಮಂದಿರಕ್ಕೆ ಆಶಾ ಜೊತೆ ಹೋಗುವವಳಿದ್ದೇನೆ. ಇವರೂ ಒಪ್ಪಿದ್ದಾರೆ. ನೀವೂ ಬರಬಹುದು"

"ಸಂಜೆಯಾಯಿತೆಂದರೆ ರಾಮಜಪ, ಲಲಿತಾಸಹಸ್ರನಾಮ ಇದರಲ್ಲೆ ಸಮಯ ಕಳೆಯುತ್ತೆ. ಮುಂದೆ ಯಾವಾಗಲಾದರೂ ನೋಡೋಣ; ನೀನು ಹೋಗಿಬಾ. ಇವತ್ತು ರಾತ್ರಿಗೆ ಪದ್ಮ, ಭಾಸ್ಕರ ಬರೋರಿದ್ದಾರೆ. ನಾನಿಷ್ಟು ಮಲಗೇಳುತ್ತೇನೆ. ನವ್ಯಾ ನೀನೂ ಮಲಗು" ಎನ್ನುತ್ತಾ ಮಲಗಲು ಹೊರಟರು ಸುಬ್ಬಜ್ಜಿ.

ಬ್ಯಾಂಕ್ ಕೆಲಸ ಮುಗಿಸಿ ಮನೆಯಕಡೆ ಹೊರಟ ಸುಹಾಸ, ಮಗುವನ್ನು ನೋಡಲು ಕಿಶೋರನ ಮನೆಯ ಕಡೆ ಹೊರಟವನು, ಸುಜಾತಾಳ ಜೊತೆಯಲ್ಲಿ ನೋಡಿದರಾಯ್ತೆಂದು ತೀರ್ಮಾನಿಸಿ, ಮನೆಯಕಡೆ ಕಾರು ತಿರುಗಿಸಿದ. ಅಕ್ಕನ ಸಾವಿನ ಸುತ್ತ ಮನಸ್ಸು ಸುತ್ತ ತೊಡಗಿತು. ಮೃದು ಮನಸ್ಸಿನ ಪದ್ಮಕ್ಕನ ಬಳಿ ಅವರು ಮಗನಂತೆ ಸಾಕಿದ್ದ ಮೈದುನನದೇ ವಿಷಯ ಮಾತನಾಡುವುದು ಹಿಂಸೆ ಎನಿಸುತ್ತದಾದರೂ ಅಕ್ಕನ ಸಾವಿನ ನಿಗೂಢತೆಯನ್ನು ಬಯಲು ಮಾಡಬೇಕೆಂದರೆ ಪದ್ಮಕ್ಕನ ಬಳಿ ಮಾತನಾಡುವುದು ಅನಿವಾರ್ಯ. ಅಕ್ಕನ ಗೆಳತಿಯ ಬಗ್ಗೆಯೂ ವಿಚಾರಿಸಬೇಕು. 'ಇಲ್ಲದಿದ್ದರೆ' ಅಂತಷ್ಟೇ ಬರೆದು ನಿಲ್ಲಿಸಿದ್ದರ ಅರ್ಥ? ಅವಳು ಬಂದೇ ಬರುವಳೆಂದೇ ಹೀಗೆ ಬರೆದಿರಬೇಕು ಮಧುಕರ. ಅದನ್ನು ಓದಿದ ಅಕ್ಕನ ಮನಸ್ಸು ಅದೆಷ್ಟು ತೊಯ್ದಾಡಿರಬೇಡ!

ಮದುವೆ ಆಗುವುದಿದ್ದರೆ ದಿನಕರನನ್ನೇ ಎಂಬ ಗಟ್ಟಿ ನಿರ್ಧಾರಕ್ಕೆ ಬಂದ ಅಕ್ಕ ಖಂಡಿತಾ ಆತ್ಮಹತ್ಯೆಯ ಯೋಚನೆ ಮಾಡಿರಲಾರಳು. ಬಾವಿಗೆ ಹಾರಲು ಹೊರಟ ಮಧುಕರನನ್ನೇನಾದರೂ ಉಳಿಸಹೋಗಿ ಆಯ ತಪ್ಪಿ ಅಕ್ಕನೇ ಬಾವಿಗೆ ಬಿದ್ದಿರಬಹುದೆ?

ಅಧ್ಯಾಯ 19

ಹು.ವಾ. ಶ್ರೀಪ್ರಕಾಶ

"ಸುಜಾತ ಎಲ್ಲಿ ಹೋಗಿದ್ದಾಳೆ" ಬಾಗಿಲು ತೆರೆದ ಅಮ್ಮನನ್ನು ಪ್ರಶ್ನಿಸುತ್ತಲೇ ಒಳಬಂದ ಸುಹಾಸ ಕೀಯನ್ನು ಮೊಳೆಗೆ ಸಿಕ್ಕಿಸಿ ಸೋಫಾ ಮೇಲೆ ಕುಳಿತ. "ಆಶಾ ಬಂದಿದ್ದಳು. ಅವಳ ಜೊತೆ ಪ್ರವಚನ ಮಂದಿರಕ್ಕೆ ಹೋಗಿದ್ದಾಳೆ. ನಿನಗೆ ಹೋಗ್ತೀನೀಂತ ಹೇಳಿದ್ಲಂತಲ್ಲ" ಎಂದು ಸುಬ್ಬಜ್ಜಿ ಒಳಗೆ ಕಾಫಿತರಲು ಹೋದಾಗ "ಹೌದು ಮರೆತಿದ್ದೆ" ಎಂದು ಸುಹಾಸ ಟೀಪಾಯ್ ಮೇಲೆ ಕಾಣಿಸಿದ ಪುಸ್ತಕದ ಮೇಲೆ ದೃಷ್ಟಿ ಹಾಯಿಸಿದ. ಇವತ್ತು ಪದ್ಮಕ್ಕನ ಹತ್ತಿರ ಮಧುಕರನ ವಿಷಯ ಹೇಗೆ ಪ್ರಸ್ತಾಪಿಸುವುದು ಎಂದು ಯೋಚಿಸುತ್ತ ಪುಸ್ತಕ ಕೈಗೆತ್ತಿಕೊಂಡ. ಅದೊಂದು ಆಧ್ಯಾತ್ಮ ಪತ್ರಿಕೆ. ಸುಜಾತ ಯಾವಾಗಲೋ ಚಂದಾ ಕಟ್ಟಿ ಬಂದಿರುತ್ತಾಳೆ. ಪತ್ರಿಕೆ ಓದೋದು ಅಷ್ಟರಲ್ಲೇ ಇದೆ ಎಂದುಕೊಳ್ಳುತ್ತಾ ಪುಟ ತಿರುವಿದ.

'ಕಾಲ ನಿಲ್ಲುವುದಿಲ್ಲ. ನಿರಂತರ ಸಾಗುತ್ತಲೇ ಇರುತ್ತದೆ. ಭವಿಷ್ಯದಲ್ಲಿ ಅಡಗಿದ್ದದ್ದು ವರ್ತಮಾನಕ್ಕೆ ಬಂದು ಭೂತಕ್ಕೆ ಜಾರುತ್ತದೆ. ಕಾಲದ ಮಹಾ ಸಾಗರದಲ್ಲಿ ಎಲ್ಲವೂ ಲೀನವಾಗುತ್ತದೆ. ನಾವು ಭೂತ ಕಾಲದ ನೆನಪುಗಳಿಂದ ವರ್ತಮಾನಕ್ಕೆ ಅಡ್ಡಿ ಆತಂಕಗಳನ್ನು ತಂದೊಡ್ಡಿಕೊಳ್ಳುತ್ತೇವೆ. ಬದುಕಲ್ಲಿ ಆಗಿ ಹೋದದ್ದಕ್ಕೆ ಮಹತ್ವ ಕೊಡುತ್ತ, ಭವಿಷ್ಯದ ಬಗ್ಗೆ ಚಿಂತಿಸುತ್ತಾ ನಿತ್ಯ ಜೀವನದ ಸಂತೋಷ ಕಳೆದುಕೊಳ್ಳುತ್ತೇವೆ.'

ಪುಸ್ತಕದಲ್ಲಿ ಮುಳುಗಿದ್ದ ಅವನಿಗೆ ಅಮ್ಮ ಕಾಫಿ, ಕುಟ್ಟವಲಕ್ಕಿ ತಂದಿಟ್ಟಾಗಲೇ ಎಚ್ಚರಾದದ್ದು.

ಅಮ್ಮ ಈಗ ಆರಾಮಾಗೆ ಇದ್ದಾಳೆ. ಇನ್ನು ಆ ಪದ್ಮಕ್ಕನ ಹತ್ತಿರ ಯಾವಾಗಲೋ ಸತ್ತು ಹೋಗಿರುವ ಅವಳ ಮೈದುನನ ವಿಷಯ ತೆಗೆದು ಆಕೆಯ ಮನಸ್ಸನ್ನು

ಯಾಕೆ ನೋಯಿಸಬೇಕು. ಹೀಗೆ ಯೋಚಿಸುತ್ತಿರುವಾಗ ಸುಬ್ಬಜ್ಜಿ "ಸುಹಾಸ, ಸತ್ಯನಾರಾಯಣ ವ್ರತಕ್ಕೆ ಏನೆಲ್ಲ ತಯಾರಿಯಾಗಬೇಕು ಮಾಡಿಕೊಂಡಿದ್ದೀಯೇನೋ" ಅಂದರು. ಅವನ ಯೋಚನೆ ಪಲ್ಲಟವಾಯಿತು. ರಾಮಕೃಷ್ಣಭಟ್ಟರಿಗೆ ಹೇಳಿಯಾಗಿದೆ. ಇನ್ನು ರುಕ್ಮಿಣಿ ಎರಡು ದಿನ ಮುಂಚೆ ಬರ್ತಾರಲ್ಲ, ಅಡುಗೆಗೆ ನೀವೇ ಸಾಕಲ್ಲ. ಒಂದು ಹದಿನೈದು ಜನ ಆಗಬಹುದು. ಇನ್ನು ಕಲ್ಯಾಣಮ್ಮನೂ ಬರ್ತಾರೆ. ಅಂದ.

"ಅವಳು ಏನು ಮಾಡ್ತಾಳೋ ಬಾಲೆ ಸಣ್ಣದು. ಇರಲಿ ಅಡುಗೆ ನಾವು ಸುಧಾರಿಸ್ತೀವಿ. ಬೇಕಾದ ಸಾಮಾನು ಸುಜಾತಗೆ ಪಟ್ಟಿ ಮಾಡಿಕೊಡಕ್ಕೆ ಹೇಳ್ತೀನಿ" ಅಂದರು ಸುಬ್ಬಜ್ಜಿ.

ಪ್ರವಚನ ಮುಗಿಸಿ ಬಂದ ಸುಜಾತ "ಅತ್ತೆ, ಪದ್ಮಕ್ಕ ನವರು ರಾತ್ರಿ ಊಟಕ್ಕೆ ಬರ್ತಾರಲ್ಲ. ಮಧ್ಯಾಹ್ನದ ಬೋಳುಹುಳಿ ಇದೆ. ಸ್ವಲ್ಪಸ್ವಲ್ಪ ತರಕಾರಿ ಉಳಿದಿದೆ. ಒಂದು ಕೂಟು ಮಾಡಿಬಿಡೋಣ" ಎಂದು ಅತ್ತೆಯ ಜೊತೆ ಅಡುಗೆ ಮನೆ ಸೇರಿದಳು.

ರಾತ್ರಿ ಎಂಟರ ಹೊತ್ತಿಗೆ ಪದ್ಮಕ್ಕ ಪತಿಯೊಡನೆ ಮನೆಯೊಳಗೆ ಬಂದರು. "ಸುಮ್ಮನೆ ನಮ್ಮನ್ನು ಊಟಕ್ಕೆ ಕರೆದು ಏಕೆ ತೊಂದರೆ ತೆಗೆದುಕೊಂಡಿರಿ" ಎಂದು ಹೇಳುತ್ತಲೇ ಬಂದ ಅವರನ್ನು ಸುಹಾಸ ಸ್ವಾಗತಿಸಿದ.

"ನಾನೂ ಹಾಗೇ ಹೇಳಿದೆ. ಸುಬ್ಬಜ್ಜಿ ಬಿಡಬೇಕಲ್ಲ" ಅಂದಳು ಹಿಂದೆಯೇ ಬಂದ ಪದ್ಮಕ್ಕ

"ಅಯ್ಯೋ ನೀವೇನು ಬೇರೆಯವರೇ? ರಾತ್ರಿ ಬಂದು ಒಂದು ಹೊತ್ತಿಗೆ ಅಡುಗೆ ಮಾಡ್ಕೊಳೋದು ಯಾಕೆ ಅಂತ ಇಲ್ಲೇ ಬರಲಿಕ್ಕೆ ಹೇಳಿದೆ. ನಾವೂ ವಿಶೇಷ ಏನೂ ಮಾಡಿಲ್ಲ" ಎನ್ನುತ್ತಾ ಸುಬ್ಬಜ್ಜಿ ಬಾಳೆ ಎಲೆ ಹಾಕಲು ಅನುವಾದರು.

ನವ್ಯ ಆಗಲೇ ಅಡುಗೆ ಮನೆಯಲ್ಲಿ ಕರಿದ ಹಪ್ಪಳದ ರುಚಿ ನೋಡುತ್ತಿದ್ದಳು

ಊಟ ಮಾಡಿಕೊಂಡು ಪದ್ಮಕ್ಕ ಗಂಡನೊಡನೆ ಹೊರಟು ನಿಂತಾಗ ಅವರನ್ನು ಗೇಟ್‌ವರೆಗೂ ಬೀಳ್ಕೊಟ್ಟು ಹಾಗೇ ಸ್ವಲ್ಪ ಹೊತ್ತು ಆಕಾಶವನ್ನು ನೋಡುತ್ತಾ ನಿಂತಿದ್ದ ಸುಹಾಸ. ಅದೆಷ್ಟು ನಕ್ಷತ್ರಗಳು. ಅಗಾಧ ಬ್ರಹ್ಮಾಂಡದಲ್ಲಿ ಭೂಮಿ ಸುತ್ತುತ್ತಿರುವ ಒಂದು ಮಣ್ಣಿನಕಾಯಿ. ಇಲ್ಲಿ 84 ಲಕ್ಷ ಜೀವರಾಶಿಗಳಿವೆಯಂತೆ . ಈ ಜೀವರಾಶಿಗಳ ಹುಟ್ಟು ಸಾವಿನ ಚಕ್ರದ ಹಿಂದಿನ ಸೂತ್ರ ಬಲ್ಲವರಾದರೂ ಯಾರು?

ಪುನರ್ಜನ್ಮವಿದ್ದರೆ ಅಕ್ಕ ಈಗ ಎಲ್ಲೋ ಮತ್ತೆ ಜನಿಸಿರಬಹುದು.

ಯೋಚಿಸುತ್ತಾ ನಿಂತಿದ್ದವನನ್ನು 'ಅಪ್ಪ' ಎಂದು ನವ್ಯಾ ಕರೆದಾಗ ಪ್ರಸನ್ನಚಿತ್ತನಾಗೇ ಒಳಗೆ ಬಂದ.

#

ರಾಮಕೃಷ್ಣ ಭಟ್ಟರು ಬಂದು ಸತ್ಯನಾರಾಯಣ ವ್ರತವನ್ನು ಸಾಂಗವಾಗಿ ನೆರವೇರಿಸಿಕೊಟ್ಟರು. ರೇಷ್ಮೆ ಉಡುಪಿನಲ್ಲಿ ಸುಹಾಸ ಸುಜಾತ ದಂಪತಿಗಳು ಲಕ್ಷಣವಾಗಿ ಕಾಣಿಸುತ್ತಿದ್ದರು.

ರುಕ್ಮಿಣಿ ಎರಡು ದಿನ ಮೊದಲೇ ಬಂದದ್ದು ಸುಬ್ಬಜ್ಜಿಗೆ ಬಹಳ ಸಂತೋಷ ವಾಗಿತ್ತು. ಅವಳ ಚುರುಕಿನ ಕೆಲಸದಿಂದ ಎಲ್ಲರಿಗೂ ಅನುಕೂಲವಾಗಿತ್ತು .

ಪುರೋಹಿತರ ಜೊತೆಗೆ ಗೋಪಾಲಭಟ್ಟರೂ ಬಂದಿದ್ದರು. ಮೊಮ್ಮಗ ಬಂದ ಖುಷಿ ಅವರಿಗೆ. ಬಂದವರೇ ಸುಬ್ಬಜ್ಜಿಯ ಉಪಕಾರವನ್ನು ಬಾಯ್ತುಂಬ ಹೊಗಳಿದರು.

ಗೋಪಾಲ ಭಟ್ಟರು ಎಲಾಡಿಕೆ ಹಾಕಿಕೊಂಡು, ರಾಮಕೃಷ್ಣಯ್ಯ, ಭರತ್ ಹಾಗೂ ಅಭಿಲಾಷ್ ರೊಂದಿಗೆ ಪಟ್ಟಾಂಗ ಹೊಡೆಯುತ್ತಾ ಮೊಮ್ಮಗನ ಬಗ್ಗೆ ಹೇಳುವಾಗ ಆ ಸಂತೋಷದಲ್ಲಿ ಕಲ್ಯಾಣಮ್ಮನೂ ಜೊತೆಗೂಡಿದರು. ಸರಿತಾ ತನ್ನ ಟೀಚರ್ ವಸುಂದರಾ ದೇವಿಯೊಡನೆ ಮಾರನೇ ದಿನ ನೀಡಲಿರುವ ಸುಗಮ ಸಂಗೀತ ಕಾರ್ಯಕ್ರಮದ ಬಗ್ಗೆ ನವ್ಯಳ ಬಳಿ ಹೇಳುತ್ತಿದ್ದಳು. ನವ್ಯಾ, ಸರಿತಾ, ಸುಜಾತ ಸೇರಿ ಕಾಪಾಡು ಶ್ರೀ ಸತ್ಯನಾರಾಯಣ ಹಾಡನ್ನು ಬಹಳ ಸುಂದರವಾಗಿ ಹಾಡಿದರು. ಉಳಿದವರೂ ಪಲ್ಲವಿಗೆ ಜೊತೆಗೂಡುತ್ತಿದ್ದರು.

ಪದ್ಮಕ್ಕ ಕಲ್ಯಾಣಮ್ಮನ ಬಳಿ ಡಾ. ಭರತ್‌ನ ನಿಶ್ಚಿತಾರ್ಥ ನಡೆದ ವಿಚಾರ ಸವಿಸ್ತಾರವಾಗಿ ಹೇಳಿದರು. ಅಭಿಲಾಷ್, ಭರತ್‌ನಿಗೆ ತಮಾಷೆ ಮಾಡುತ್ತಿದ್ದರೆ ಉಳಿದವರೂ ಹುಡುಗಿಯ ಬಗ್ಗೆ ಕೇಳಿ ಅವನನ್ನು ಮತ್ತಷ್ಟು ರೇಗಿಸುತ್ತಿದ್ದರು.

ಊಟವಾದ ಮೇಲೆ ಎಲ್ಲರೂ ಅವರವರ ಮನೆಗೆ ಹೊರಟರು.

ಸುಜಾತ ಎಲ್ಲರಿಗೂ ಸ್ವಲ್ಪ ಪ್ರಸಾದ ಕಟ್ಟಿಕೊಟ್ಟು ಬೀಳ್ಕೊಟ್ಟಳು.

ಹೊರಗಡೆ ಡಾಕ್ಟರ್ ಅಭಿಲಾಶ್ ನೊಡನೆ ನಗುತ್ತಾ ಮಾತಾಡುತ್ತಾ ನಿಂತಿದ್ದ ನವ್ಯಳನ್ನು ಕಂಡು ಸುಜಾತ ಮನದೊಳಗೇ ಸಂತೋಷ ಪಟ್ಟಳು . ನೆಂಟರೆಲ್ಲ ಹೋದ ಮೇಲೆ ಮನೆ ಒಂದು ರೀತಿಯಲ್ಲಿ ಬಣ ಬಣ ಅನಿಸುತ್ತಿತ್ತು.

ಗಟ್ಟಿಯಾಗಿ ಟೀವಿ ಹಾಕಿಕೊಂಡು ನೋಡುತ್ತಿದ್ದ ನವ್ಯಳಿಂದ ರಿಮೋಟನ್ನು ಕಸಿದುಕೊಂಡು ಸೌಂಡ್ ಕಡಿಮೆ ಮಾಡಿ ಸುಜಾತ ಸುಹಾಸನ ಬಳಿ ಬಂದು ಕುಳಿತುಕೊಳ್ಳುತ್ತಾ "ಕರೆದವರೆಲ್ಲ ಬಂದಿದ್ದು ನನಗೆ ಬಹಳ ಸಂತೋಷ ಆಯ್ತು. ಅಡುಗೇನೂ ಹೆಚ್ಚಿಗೆ ಏನೂ ಉಳಿದಿಲ್ಲ ರಾತ್ರಿಗೆ ಸರಿಯಾಗುತ್ತೆ" ಅಂದಳು. ಮತ್ತೆ

ನವ್ಯಳಿಗೆ ಕೇಳುವಂತೆ ಡಾ. ಅಭಿಲಾಷ್‌ನ ನಡತೆ ಗುಣವನ್ನು ಮೆಚ್ಚಿ ನುಡಿಯುತ್ತಾ

ಮಗಳ ಮುಖವನ್ನು ಗಮನಿಸಿ "ಏನೋ ಇಬ್ಬರೂ ಬಹಳ ಮಾತಾಡ್ತಾ ಇದ್ದರು" ಅಂತ ಛೇಡಿಸಿ ಗಂಡನ ಪ್ರತಿಕ್ರಿಯೆ ನಿರೀಕ್ಷಿಸುವಾಗ

"ಏ ಹೋಗಮ್ಮ... ನೀನೊಬ್ಬಳು!" ಅಂದ ನವ್ಯಾ ಹುಸಿ ಮುನಿಸು ತೋರಿದಳು.

"ಹುಡುಗ ಒಳ್ಳೆಯವನೇ. ಮದುವೆ ವಿಚಾರ ಮಾಡೋದರಲ್ಲಿ ತಪ್ಪೇನಿಲ್ಲ" ಅಂತ ಸುಹಾಸ ಹೆಂಡತಿಯ ಮಾತಿಗೆ ದನಿ ಸೇರಿಸಿದ.

"ಏನಮ್ಮ.... ನನ್ ಮದುವೆ ವಿಷಯ ನೀವು ವಿಚಾರ ಮಾಡೋದೇ ಬೇಡ ನಾನು ಸದ್ಯಕ್ಕೆ ಮದುವೆ ಆಗೋದಿಲ್ಲ ನಾನು ಇನ್ನೂ ಓದಬೇಕು. ನನ್ನ ಕಾಲ್ ಮೇಲ್ ನಾನ್ ನಿಲ್ಬೇಕು"

ಅಂದ ಮಗಳಿಗೆ

"ಹಾಗಲ್ಲ ಮಗಳೇ ವಯಸ್ಸಿಗೆ ಬಂದ ಮೇಲೆ ನಮ್ ಕರ್ತವ್ಯ ನಾವು ಮಾಡಲೇಬೇಕಲ್ಲ" ಅಂದಳು ಸುಜಾತ.

"ಈಗಲೇ ಆ ಯೋಚನೆ ಬೇಡ ಅಮ್ಮ . . ಅವನಾಯ್ತಾ. . ಇವನಾಯ್ತಾ ಅಂತ ಕೇಳೋಕೆ ಶುರು ಮಾಡಬೇಡಿ"ನವ್ಯಾ ಗೊಣಗುವುದನ್ನು ಕೇಳಿದ ಸುಬ್ಬಜ್ಜಿ" ಹೋ.. ನಮ್ಮ ರಾಜಕುಮಾರಿಗೆ ಸ್ವಯಂವರಾನಾ" ಅಂತ ತಮಾಷೆಯಾಗಿ ನಕ್ಕು ಮಗನ ಮುಖ ನೋಡಿದರು.

"ಅಜ್ಜಿ. ಆಗಿನ ಕಾಲದ ಸ್ವಯಂವರಾನೇ ಎಷ್ಟೋ ಚೆನ್ನಾಗಿತ್ತು. ಹೆಣ್ಣುಮಕ್ಕಳಿಗೆ ವರನನ್ನು ಪರೀಕ್ಷೆ ಮಾಡಿ ಆರಿಸಿಕೊಳ್ಳೋ ಸ್ವಾತಂತ್ರ್ಯನಾದರೂ ಇತ್ತು. "ಅಂದಳು ನವ್ಯಾ

"ಈಗ ನಿನ್ನ ಸ್ವಾತಂತ್ರ್ಯಕ್ಕೇನಾಗಿದೆ. ಎಂತಹ ಗಂಡ ಬೇಕು ಅಂತ ಹೇಳು ಅಂತಹವನನ್ನೇ ಹುಡುಕೋಣ" ಅಂದ ಸುಹಾಸ.

ಅಪ್ಪನ ಮಾತಿಗೆ ಕೋಪದ ನೋಟ ಬೀರಿ ಎದ್ದು ಒಳಗೆ ಹೊರಟ ನವ್ಯಳನ್ನು ತನ್ನ ಬಳಿಯೇ ಎಳೆದು ಕೂರಿಸಿಕೊಂಡ ಸುಬ್ಬಜ್ಜಿ

"ಈಗ ಕಾಲ ಎಷ್ಟೋ ಸುಧಾರಿಸಿದೆ ಮಗು. ಮುಂಚೆ ಎಲ್ಲಾ ಹೆಣ್ಣುಮಕ್ಕಳ ಬದುಕು ನಾಲ್ಕು ಗೋಡೆ ಒಳಗೇ! ಹೆಣ್ಣು ಅಂದರೆ ನಾಚಿಕೆ ಭಯ ಭಕ್ತಿ ಇರಬೇಕು ಅಂತ ಸಣ್ಣಲ್ಲಿಂದಲೇ ಹೊರಗೆ ಆಡಕ್ಕೆ, ಕುಣಿಯಕ್ಕೆ ಎಲ್ಲಾ ಕಟ್ಟುಪಾಡು. ಮದುವೆ ಮಾಡಿಕೊಟ್ಟು ಬಿಡೋರು. ಹೆಣ್ಣಮಕ್ಕಳ ಮದುವೆ ಬಾಣಂತನಾನೇ ಒಂದು ಹೊರೆ ಅಂದುಕೊಳ್ತಿದ್ದರು. ಗಂಡು ಮಕ್ಕಳಾದರೆ ಆಸ್ತಿಗೆ ಹಕ್ಕುದಾರ, ಕುಲೋದ್ಧಾರಕ ಅಂತ! ಹೆಣ್ಣು ಸೇರಿದ ಮನೇಲಿ ಅತ್ತೆ ಮಾವ ಬಾವ ಮೈದುನ ಖಾಯಿಲೆ ಕಸಾಲೆಯೋರು ಎಲ್ಲಾರ ಚಾಕರಿ ಮಾಡಿಕೊಂಡು ಹೋಗಬೇಕಾಗಿತ್ತು. ಮನೆಯೊಳಗೆ ಏನೇ ಹಿಂಸೆ ಇದ್ರೂ ಮಾತಾಡೋ ಹಂಗಿರ್ಲಿಲ್ಲ. ಈಗ ಕಾಲ ಎಷ್ಟೋ ಸುಧಾರಿಸಿದೆ ಮಗು" ಅನ್ನುತ್ತಾ ತಲೆ ನೇವರಿಸಿದರು.

ಈ ಮಾತು ಹೇಳುತ್ತಾ ಅವರಿಗೆ ತಮ್ಮ ಸೋದರತ್ತೆಯರಾದ ಸತ್ಯ ಭಾಮೆ ಸಾವಿತ್ರಿಯರ ನೆನಪಾಗಿತ್ತು. ಪಾಪ ಎಂತಹ ಬದುಕು ಅವರದು. ನನ್ನದಾದರೂ ಏನು. ಸಮಾಜದಲ್ಲಿ ವಿಧವೆಯಾದ ಹೆಣ್ಣು ಅದೆಷ್ಟು ಅಪವಾದ ಕುಹಕಗಳನ್ನು

ಎದುರಿಸಬೇಕು. ಬಡತನವೂ ಸೇರಿದರೆ ಮುಗೀತು. ಗತಕಾಲದ ನೆನಪು ದೀರ್ಘ ನಿಟ್ಟುಸಿರನ್ನೇ ತಂದಿತ್ತು.

"ಅದು ಹೇಗೆ ಅಂತಹ ಉಸಿರುಕಟ್ಟುವ ವಾತಾವರಣದಲ್ಲಿ ಪ್ರತಿಭಟಿಸದೇ ಬದುಕುತ್ತಿದ್ದರೋ." ಎಂದು ನವ್ಯಾ ಅಚ್ಚರಿ ವ್ಯಕ್ತಪಡಿಸಿದಾಗ "ಸಂಸಾರ.. ಮರ್ಯಾದೆ ಅಂತ ಜೀವ ತೇಯೋದು. ಈಗಿನ ಹಾಗೆ ಅನಿಸಿದ್ದು ಹೇಳ್ತಾನೂ ಇರಲಿಲ್ಲ. ತಗ್ಗಿ ಬಗ್ಗಿ ನಡೀತಿದ್ದರಿಂದಲೇ ಸಂಸಾರ ಉಳಿಯೋದು. ಬಾಗದ ಮರ ಬಿರುಗಾಳಿಗೆ ಬೀಳುತ್ತದೆ. ಬಾಗುವ ಹುಲ್ಲು ಉಳಿಯುತ್ತೆ. ಸಂಸಾರ ಅಂದ ಮೇಲೆ ಒಬ್ಬರು ಬಾಗಲೇಬೇಕು"

"ಅದ್ಯಾಕೆ ಹೆಣ್ಣೇ ಬಾಗಬೇಕೋ.. ಮಗಳನ್ನು ಮದುವೆ ಮಾಡಿ ಕೊಟ್ಟು ಕೈ ತೊಳ್ಕೊಂಡು ಬಿಡೋದಾ. ಅವಳ ಆಸೆ ಆಕಾಂಕ್ಷೆಗೆ ಬೆಲೆನೇ ಇಲ್ವಾ" ಅನ್ನುತ್ತಾ ಅಜ್ಜಿಯ ಮಾತು ಕೇಳುತ್ತಾ ಕುಳಿತಿದ್ದ ಅಪ್ಪ ಅಮ್ಮನ ಮುಖ ನೋಡಿದಳು.

"ನಮಗೇನು ನೀನು ಭಾರ ಅಲ್ಲ ಮಗಳೇ. ಎಷ್ಟು ಓದುತ್ತೀಯೋ ಓದು. ನೀನೇ ನಮಗೆ ಮಗಳು ಮಗ ಎಲ್ಲಾ. ನಿನಗೆ ಇಷ್ಟವಾದವನಿಗೇ ಕೊಟ್ಟು ಮದುವೆ ಮಾಡೋಣ" ಅಂದ ಸುಹಾಸ.

ಅಪ್ಪನ ಮಾತಿಗೆ ಮುಗುಳ್ನಕ್ಕು ನವ್ಯಾ ಅಜ್ಜಿಯ ಭುಜಕ್ಕೆ ಪ್ರೀತಿಯಿಂದ ಒರಗಿದಳು. ದಟ್ಟ ಅನುಭವದ ಅಜ್ಜಿಯ ಬೆಚ್ಚಗಿನ ಆಸರೆಯಲ್ಲಿ ನವ್ಯಳ ಮನಸ್ಸು ಹಗುರಾಗಿತ್ತು.

❖ ❖ ❖

ಸರಿತಾ ಸುಗಮ ಸಂಗೀತದ ಕಾರ್ಯಕ್ರಮಕ್ಕೆ ಬಹಳ ಸಡಗರದಿಂದಲೇ ಸಿದ್ಧವಾಗಿದ್ದಳು. ಟೀಚರ್ ವಸುಂದರಾ ದೇವಿಯವರು ತಮ್ಮ ಕಾರಿನಲ್ಲೇ ಕರೆದು ಕೊಂಡು ಹೋಗುವುದಾಗಿ ಹೇಳಿ ನಾಲ್ಕೂವರೆಗೆ ನಾವಿಲ್ಲಿಂದ ಹೊರಡಬೇಕು ಎಂದಿದ್ದರು ಅದೂ ಅಲ್ಲದೆ ಅವರು ಸಮಯ ಪಾಲನೆಯಲ್ಲಿ ಬಹಳ ಕಟ್ಟುನಿಟ್ಟು ಹಾಗಾದ್ದರಿಂದ ನಾಲ್ಕು ಗಂಟೆಗೇ ಸಿದ್ಧವಾಗಿಬಿಟ್ಟಿದ್ದಳು.

ವಸುಂಧರಾ ದೇವಿ ಊರಿನಲ್ಲಿ ಪ್ರಮುಖ ಮಹಿಳೆಯಾಗಿ ಗುರುತಿಸಿ ಕೊಂಡಿದ್ದರು. ಮೂಲತಃ ಸಂಗೀತ ಗ್ರಾಮವೆಂದು ಹೆಸರಾದ ರುದ್ರಪಟ್ಟಣದ ಮೂಲದವರು. ಅನೇಕ ಜನರಿಗೆ ಸಂಗೀತ ಹೇಳಿಕೊಡುವುದರ ಜೊತೆಗೆ ಸಂಘಟನೆ ಹಾಗೂ ಕಾರ್ಯಕ್ರಮ ನಿರ್ವಹಣೆಯಲ್ಲಿ ಅವರದು ಎತ್ತಿದ ಕೈ. ಅವರ ಪತಿಯೂ ಅನೇಕ ಸಂಘ ಸಂಸ್ಥೆಗಳಲ್ಲಿ ತೊಡಗಿಕೊಂಡವರು.

ಹೀಗಾಗಿ ಊರಿನ ಜನರೊಂದಿಗೆ ಬೆರೆತು ಎಲ್ಲರ ವಿಶ್ವಾಸ ಗಳಿಸಿದ್ದರು. ಊರಿನ ಯಾವುದೇ ಕಾರ್ಯಕ್ರಮದಲ್ಲೂ ಒಂದು ರೀತಿಯ ಸ್ವಘೋಷಿತ ಯಜಮಾನಿಕೆ ವಹಿಸಿ ಬಿಡುತ್ತಿದ್ದ ಅವರ ಪ್ರವೃತ್ತಿ ಹೊಗಳಿಕೆಗೂ, ಲೇವಡಿಗೂ ಪಾತ್ರವಾದದ್ದಿದೆ. ಅಂತಹ ಮಾತು ಅವರ ಕಿವಿಗೆ ಬಿದ್ದರೂ ತಲೆ ಕೆಡಿಸಿಕೊಂಡವರಲ್ಲ.

ಹಬ್ಬ ಹರಿದಿನದಂತಹ ವಿಶೇಷ ದಿನಗಳಲ್ಲಿ ಅವರು ಅಲ್ಲಲ್ಲಿ ಸಣ್ಣ ಪುಟ್ಟ ಕಾರ್ಯಕ್ರಮಗಳು ಏರ್ಪಡಿಸಿ ಸುತ್ತಮುತ್ತಲಿನ ಸ್ಥಳೀಯರಿಗೆ ವೇದಿಕೆಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡುತ್ತಿದ್ದರು. ಇದರಿಂದ ತಮ್ಮ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆ ದೊರೆತ ಖುಷಿ ಹಲವರಿಗೆ. ಕಂದಾಚಾರಕ್ಕೆ ಅಂಟಿಕೊಂಡ ಮನೆ ಮಕ್ಕಳಿಗೆ ಆಧುನಿಕ ಪ್ರಜ್ಞೆ ಮೂಡಿಸುತ್ತಿದ್ದ ಅವರ ಗುಣಕ್ಕೆ ಬಹುತೇಕರ ಮೆಚ್ಚುಗೆ ಮತ್ತು ಕೆಲವರ ತಾತ್ಸಾರವಿತ್ತು.

ವಸುಂಧರಾ ದೇವಿ ಬರುತ್ತಾರೆಂದು ಕಲ್ಯಾಣಮ್ಮ ಮಧ್ಯಾಹ್ನ ಊಟವಾದ ಮೇಲೆ ಹೀರೇಕಾಯಿ ಬೋಂಡಾ ಮಾಡಲು ತಯಾರಿ ಮಾಡಿಕೊಂಡರು.

"ಸರಿತಾ, ನಿಮ್ಮ ಟೀಚರ್ ಬಂದ್ರೆ ಒಳಗೆ ಕರಿಯಮ್ಮ, ನಾಲ್ಕು ಬೋಂಡ ಕರೀತೀನಿ" ಅಂದರು.

"ಅವರು ಮನೆ ಒಳಗೆ ಬರ್ತಾರೋ ಇಲ್ಲವೋ ಅತ್ತೆ" ಎನ್ನುತ್ತಾ ಹೊರಟು ಸಿದ್ಧವಾಗಿದ್ದ ಸರಿತಾ ತೊಟ್ಟಿಲಲ್ಲಿ ಆಡುತ್ತಾ ಮಲಗಿದ್ದ ಮಗುವನ್ನು ನೋಡಿ ಅದರೊಟ್ಟಿಗೆ ಆಡಲು ಹೋದಳು. ಅದರ ಪುಟ್ಟ ಮುಷ್ಟಿಗೆ ತನ್ನ ಕಿರು ಬೆರಳು ನೀಡಿ ಅದರ ಕೈಯಲ್ಲಾಡಿಸಿ ನಗಿಸುತ್ತಿದ್ದಳು.

ಊಟ ಮುಗಿಸಿ ಸಣ್ಣ ನಿದ್ರೆ ಮಾಡಿ ಎದ್ದ ಗೋಪಾಲ ಭಟ್ಟರು ಎರಡು ಒಳ್ಳೆಯ ಸುಳಿ ಎಲೆ ತೆಗೆದುಕೊಂಡು ಅದರ ಬೆನ್ನ ನಾರು ತೆಗೆದು ಸುಣ್ಣ ಹಚ್ಚುತ್ತಿದ್ದರು.

ಸಂಜೆ ನಾಲ್ಕು ದಾಟುತ್ತಿದ್ದಂತೇ ಮನೆ ಮುಂದೆ ಕಾರು ಬಂದು ನಿಂತ ಶಬ್ದವಾಗಿ ಸರಿತಾ ಬೇಗ ಹೋಗಿ ಗೇಟು ತೆರೆದಳು.

ಗೋಪಾಲ ಭಟ್ರು ಕಲ್ಯಾಣಮ್ಮ ಬಾಗಿಲಲ್ಲಿ ನಿಂತು ವಸುಂಧರಾ ದೇವಿಯನ್ನು ಒಳಬರುವಂತೆ ಹೇಳಿ. ಸ್ವಾಗತಿಸಿದರು.

"ಒಳಗಡೆ ಬರೋದು ಯಾಕೆ ಬಿಡಿ . ಇನ್ನು ಹಾಗೇ ಹೊರಟುಬಿಡ್ತೀವಿ" ಎಂದ ವಸುಂದರ ದೇವಿಯನ್ನು "ಒಂದು ಘಳಿಗೆ ಬಂದು ಟೀಕುಡಿದು ಹೋಗಿ" ಎಂದು ಕಲ್ಯಾಣಮ್ಮ ಒತ್ತಾಯಿಸುವ ದನಿಯಲ್ಲಿ ಹೇಳಿದಾಗ ನಗುತ್ತಲೇ ಕಾರಿನಿಂದ ಇಳಿದು ಬಂದರು

ವಸುಂಧರಾ ದೇವಿಗೆ ವಯಸ್ಸು ಐವತ್ತು ದಾಟಿದ್ದರೂ ಚೆಲುವು ಮಾಸಿರಲಿಲ್ಲ. ಗುಂಗುರು ಕೂದಲು. ದೊಡ್ಡ ತುರುಬು. ಅಗಲ ಆಕರ್ಷಕ ಕಣ್ಣುಗಳು. ಮಂದ ನಗುವಿನಲ್ಲೂ ವಯೋಸಹಜ ಮಾರ್ದವತೆ. ಆಪ್ತತೆಯ ನೋಟದ ಮೊಗದಲ್ಲಿ ದಟ್ಟ ಅನುಭವದ ಗಾಂಭೀರ್ಯ.

ಉಭಯ ಕುಶಲೋಪರಿಯ ನಂತರ ಒಂದೆರಡು ಬಿಸಿ ಬಿಸಿ ಬೋಂಡಾ ಚಹಾ ಸ್ವೀಕರಿಸಿದ ವಸುಂಧರಾ ದೇವಿ .ಸ್ವಲ್ಪ ಅವಸರವಾಗಿಯೇ ಹೊರಡಲನುವಾಗುತ್ತಿರುವುದನ್ನು ಸರಿತಾ ಗಮನಿಸಿದಳು. ಅಷ್ಟರಲ್ಲೇ ಗೋಪಾಲ ಭಟ್ರು

ತಮ್ಮ ಮೊಮ್ಮಗನನ್ನು ತೋರಿಸಲು ಬಹಳ ಆನಂದದಿಂದ ಎತ್ತಿಕೊಂಡು ಬಂದರು. ಹಿಂದೆಯೇ ಬಂದ ಸುಗುಣಳ ಯೋಗ ಕ್ಷೇಮ ವಿಚಾರಿಸಿದ ಟೀಚರ್ ಎದ್ದು ನಿಂತು ಮಗುವಿನ ಮುಖ ನೋಡಿ "ಮುದ್ದಾಗಿದೆ" ಎಂದರು. ಅಷ್ಟರಲ್ಲಿ ಒಳ್ಳೆಯ ಬಟ್ಟೆ ತಂದು ಗಂಡನ ಕೈಯಿಂದ ಮಗುವನ್ನೆತ್ತಿಕೊಂಡು ಕಲ್ಯಾಣಮ್ಮ ಮೊಮ್ಮಗನನ್ನು ಟೀಚರ್ ಕೈಗೆ ಕೊಟ್ಟರು.

ವಸುಂಧರಾ ದೇವಿ ಹೊರಡುವ ಅವಸರದಲ್ಲಿದ್ದರೂ ಒಂದು ನಿಮಿಷ ನಗುತ್ತಲೇ ಎತ್ತಿಕೊಂಡು ಪಕ್ಕದಲ್ಲೇ ಇದ್ದ ಸರಿತಳ ಕೈಗೆ ಕೊಟ್ಟು, ಪರ್ಸಿನಿಂದ ನೋಟೊಂದ ತೆಗೆದು ಮಗುವಿನ ಕೈಗಿಟ್ಟು "ಇನ್ನು ಹೊರಡೋಣ. ತಡವಾಗುತ್ತದೆ" ಅಂದರು.

ಮನೆಯವರಿಗೆ ಇನ್ನೊಮ್ಮೆ ಬರುತ್ತೇನೆ ಎಂದು ಹೇಳಿ ಹೊರಟರು.

ಮಗುವನ್ನು ಬೇಗ ಸುಗುಣಳ ಕೈಗೆ ಕೊಟ್ಟು ಸರಿತಾ ಕಲ್ಯಾಣಮ್ಮನ ಕಡೆ ತಿರುಗಿ "ಅತ್ತೇ ನಾನೂ ಹೋಗ್ತೀನಿ" ಅನ್ನುತ್ತಾ ಕಾರಿನೆಡೆ ಓಡಿ

ಹಿಂದಿನ ಬಾಗಿಲು ತೆರೆದಾಗ ಟೀಚರ್ ಮುಂದೆಯೇ ಬಾ ಎಂದುಪಕ್ಕದ ಸೀಟಿಗೇ ಕರೆದರು.

"ಹೋಗ್ತೀನಿ ಅಂತ ಹೇಳಬೇಡವೇ. ಹೋಗಿಬರ್ತೀನಿ ಅಂತ ಹೇಳು" ಎಂದು ಗಟ್ಟಿಯಾಗಿ ಕೂಗಿ ಹೇಳುತ್ತಾ ಕಲ್ಯಾಣಮ್ಮ ಗೇಟಿನಬಳಿ ಬಂದರು. ಕಿಟಕಿಯ ಗ್ಲಾಸ್ ಇಳಿಸಿ ಸರಿತಾ ಟಾಟಾ ಎಂದು ಕೈ ಬೀಸಿದಳು.

ಗೋಪಾಲಭಟ್ಟರೂ ವಸುಂಧರಾ ದೇವಿ ಕಾರು ಸ್ಟಾರ್ಟ್ ಮಾಡುವುದನ್ನು ತದೇಕವಾಗಿ ಗಮನಿಸುತ್ತಾ ಗೇಟಿನ ಬಳಿ ನಿಂತಿದ್ದರು.

❖ ❖ ❖

ಕಾರ್ಯಕ್ರಮ ಬಹಳ ಸೊಗಸಾಗಿ ನಡೆಯಿತು ಸಾಕಷ್ಟು ಜನರು ಸೇರಿದ್ದರು. ವಸುಂಧರಾ ದೇವಿಯ ಶಿಷ್ಯರು ಆರಂಭದಲ್ಲಿ ಕೆಲವು ದೇವರ ನಾಮಗಳನ್ನು ಹಾಡಿ ನಂತರ ಸೊಗಸಾದ ಭಾವಗೀತೆಗಳನ್ನು ಹಾಡಿದರು.

ವಸುಂಧರಾ ದೇವಿ ಸ್ವತಃ ಜೊತೆಗೂಡಿ ಸರಿತಳೊಂದಿಗೆ ಒಂದು ಹಾಡು ಹಾಡಿದ್ದರು.

ಬರುತ್ತೇನೆ ಎಂದಿದ್ದ ಜೀವನ್‌ಗಾಗಿ ಸರಿತಾಳ ಕಣ್ಣು ಅರಸುತ್ತಿತ್ತು. ಸ್ವಲ್ಪ ತಡವಾಗಿ ಜೀವನ್ ಬಂದ. ಮತ್ತೊಮ್ಮೆ ತನ್ನ ಸರದಿ ಬಂದಾಗ ಸರಿತಾ' ಯಾವ ಜನ್ಮದ ಮೈತ್ರಿ ಈ ಜನ್ಮದಲಿ ಬಂದು ನಮ್ಮಿಬ್ಬರನು ಮತ್ತೆ ಬಂಧಿಸಿಹುದೋ ಕಾಣೆ' ಹಾಡನ್ನು ಬಹಳ ಭಾವಪೂರ್ಣವಾಗಿ ಹಾಡಿದಳು. ವಸುಂಧರಾ ದೇವಿ ಮೆಚ್ಚುಗೆಯಿಂದ ತಲೆಯಾಡಿಸುತ್ತಿದ್ದರು. ಝುರಿಝುರಿಯ ಲೆಹಂಗಾದಲ್ಲಿ ಸಾಕ್ಷಾತ್ ದೇವಕನ್ಯೆಯಂತೆ ಕಂಗೊಳಿಸುತ್ತಿದ್ದ ಅವಳನ್ನು ಕಣ್ತುಂಬಾ ನೋಡುತ್ತಾ ನಿಂತಿದ್ದ ಜೀವನ್.

ಕಾರ್ಯಕ್ರಮ ಮುಗಿಯುತ್ತಿದ್ದಂತೆ ವೇದಿಕೆಯ ಬಳಿ ಹೋದ ಜೀವನ್ ಸರಿತಳ ಬರುವಿಕೆಗೆ ಕಾದು ನಿಂತಿದ್ದ.

ಸರಿತಾ ವೇದಿಕೆಯಿಂದ ಇಳಿದು ಬಂದವಳು "ಜೀವನ್, ನೀನು ಹೋಗು ನಾನು ಟೀಚರ್ ಜೊತೆಯಲ್ಲೇ ಮನೆಗೆ ಹೋಗುತ್ತೇನೆ . ಅವರೇ ಬಿಡ್ತಾರಂತೆ. ಮಳೆ ಬೇರೆ ಬರುವ ಹಾಗಿದೆ ಕತ್ತಲೂ ಆಗುತ್ತಿದೆ. ನಿಧಾನ ಹೋಗು" ಎಂದಳು.

ಸರಿ ಹಾಗಾದರೆ ಎಂದು ಜೀವನ್ ಹೊರಟ. ಆದರೆ ಸ್ವಲ್ಪ ಹೊತ್ತಿನಲ್ಲೇ ಮಳೆ ಜೋರಾಗಿ ಬಂದು ದಾರಿ ಬದಿಯಲ್ಲಿ ಅರ್ಧ ಕಟ್ಟಿದ್ದ ಕಟ್ಟಡದ ಬಳಿಯಲ್ಲಿ ಬೈಕ್ ನಿಲ್ಲಿಸಿಕೊಂಡು ನಿಂತ.

ಮಳೆ ಕಡಿಮೆಯಾಗುತ್ತಾ ಬಂದು ಬಹುತೇಕ ನಿಂತಿತ್ತು. ಇನ್ನು ಹೊರಡೋಣ ಎಂದುಕೊಂಡು ಬೈಕ್ ಸ್ಟಾರ್ಟ್ ಮಾಡುವಾಗ ಕಾರಿನ ಬೆಳಕು ಮುಖಕ್ಕೆ ಬಡಿಯಿತು. ನೋಡುತ್ತಿರುವಂತೆಯೇ ರೊಯ್ಯನೆ ಮುಂದೆ ಸಾಗಿತ್ತು.

ಅದು ವಸುಂಧರಾ ದೇವಿಯದೇ ಕಾರು.

ಒಂದು ರೀತಿಯಲ್ಲಿ ಸ್ಫೂರ್ತಿಗೊಂಡು ಜೀವನ್ ಕೂಡಾ ವೇಗವಾಗೇ ಕಾರನ್ನು ಹಿಂಬಾಲಿಸಿದ.

ವೇಗವಾಗಿ ಹೋಗಿದ್ದ ಕಾರು ರಸ್ತೆಯ ತಿರುವಿನಲ್ಲಿ ಎದುರಿನಿಂದ ಬಂದ ಲಾರಿಗೆ ದಾರಿ ಮಾಡಿಕೊಡಲು ಬದಿಗೆ ಸರಿದು ಆಯತಪ್ಪಿ ಮರಕ್ಕೆ ಕುಟ್ಟಿ ನಿಂತಿತು.

ಕಣ್ಣೆದುರೇ ಈ ಅಪಘಾತವನ್ನು ನೋಡಿ ಜೀವನ್ ಬೆವತು ಕ್ಷಣ ಕಂಪಿಸಿದ. ತಕ್ಷಣ ವೇಗ ತಗ್ಗಿಸಿ ಕಾರಿನ ಹಿಂದೆ ಹೋಗಿ ಬೈಕ್ ನಿಲ್ಲಿಸಿದ.

ಅಧ್ಯಾಯ 20

ದಿವ್ಯಾ ಶ್ರೀಧರ್ ರಾವ್

ಸರಿತಾ!

ಜೀವನ್ ಕೂಗಿಕೊಳ್ಳುತ್ತಾ ಕಾರಿನ ಬಾಗಿಲಿನ ಮೂಲಕ ಸರಿತಾ ಹಾಗೂ ವಸುಂಧರಾ ದೇವಿಯವರಿಗೆ ಏನಾಗಿದೆ ನೋಡಿದನು. ಕಾರಿನ ಬಾಗಿಲು ತೆಗೆಯಲು ಬರಲಿಲ್ಲವಾದ್ದರಿಂದ ಗ್ಲಾಸ್ ಒಡೆಯುವ ಮೂಲಕ ಮುಖದಲ್ಲಿ ಗಾಯಗಳಾಗಿ ರಕ್ತ ಸೋರುತ್ತಿದ್ದ ಸರಿತಾಳನ್ನು ಕಾರಿನಿಂದ ಹೊರಗೆಳೆದನು. ಆದರೆ ವಸುಂಧರಾ ದೇವಿಯವರು ಪ್ರಜ್ಞೆ ತಪ್ಪಿದ್ದರಿಂದ ನೇರವಾಗಿ ಆಂಬುಲೆನ್ಸ್ ಗೆ ಕರೆ ಮಾಡಿ ಅವರನ್ನು ಆಸ್ಪತ್ರೆಗೆ ಸೇರಿಸಿ, ವಸುಂಧರಾ ದೇವಿಯವರ ಮೊಬೈಲಿನಲ್ಲಿ ತಂಗಿ ಎಂದು ಇದ್ದ ನಂಬರ್ ಗೆ ಕರೆ ಮಾಡಿ ಆಸ್ಪತ್ರೆಗೆ ಬರಲು ಹೇಳಿದನು.

ಓಡೋಡಿ ಆಸ್ಪತ್ರೆಗೆ ಬಂದ ಸರಳ, ಜೀವನ್ ಹತ್ತಿರ ಬಂದು,

'ನನ್ನಕ್ಕನಿಗೆ ಏನಾಗಿದೆ? ಹೇಗೆ ಅಪಘಾತವಾಗಿದ್ದು? ಜೊತೆಗಿದ್ದ ಸರಿತಾ ಹೇಗಿದ್ದಾಳೆ?'

ಹೀಗೆ ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸಿ ಜೀವನ್ ಕಡೆಯಿಂದ ಉತ್ತರ ಪಡೆದುಕೊಂಡಳು. ವಸುಂಧರಾ ದೇವಿಯವರಿಗೆ ಪ್ರಜ್ಞೆ ಬಂದು ಅವರು ಹುಷಾರಾಗಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ ಹೋದ ಮೇಲೆ ಸರಳ ಜೀವನ್‌ಗೆ ಕರೆ ಮಾಡಿ ಅವನ ತಂದೆ ತಾಯಿಯ ಬಗೆಗೆ ವಿಚಾರಿಸಿ, ಅವರು ಇವನನ್ನು ಪರೋಪಕಾರಿಯಾಗಿ ಬೆಳೆಸಿದ ಬಗೆಗೆ ಹೊಗಳಿದಳು.

'ದಿನಕರ್ ಎಂದರೆ ಪೋಲಿಸ್ ಅಲ್ವೇ?'

ಸರಳ ಕೇಳಿದಾಗ ಜೀವನ್‌ಗೆ ಆಶ್ಚರ್ಯವಾಯಿತು.

'ಹೌದು ಮ್ಯಾಡಂ_ ನಿಮಗೆ ಹೇಗೆ ಗೊತ್ತು ನನ್ನ ತಂದೆ?'

ಕೇಳಿದ ಜೀವನ್ ಮಾತಿಗೆ ಸರಳ,

'ಸಾಧ್ಯವಾದರೆ ನಿನ್ನ ತಂದೆ ದಿನಕರ್ ಅವರಲ್ಲಿ ಒಮ್ಮೆ ಮಾತನಾಡಿಸ್ತೀಯಾ ಜೀವನ್' ಎಂದು ದೀನವಾಗಿ ಬೇಡಿಕೊಂಡಳು. ಜೀವನ್ ಅವಳ ದೀನತೆಗೆ ಮಣಿದು ತನ್ನ ತಂದೆಯ ಕೋಣೆಗೆ ಹೋಗಿ,

'ಡ್ಯಾಡ್. ವಿದುಷಿ ವಸುಂಧರಾ ದೇವಿಯವರ ತಂಗಿ ಸರಳ ಅವರು ನಿಮ್ಮಲ್ಲಿ ಮಾತನಾಡಬೇಕಂತೆ' ಎಂದಾಗ ದಿನಕರನ ಮುಖಭಾವ ಬದಲಾಗಿದ್ದನ್ನು ಜೀವನ್ ಗಮನಿಸಿದ. ಆದರೆ ಈ ಸರಳ ಮ್ಯಾಡಂಗೂ ನಮ್ಮ ಡ್ಯಾಡಿಗೂ ಹೇಗೆ ಪರಿಚಯ ಎಂಬ ಬಗೆಗೆ ಸಣ್ಣದೊಂದು ಕುತೂಹಲ ಅವನನ್ನು ಕಾಡುತ್ತಲೇ ಇತ್ತು ಹಾಗೂ ತನ್ನ ತಂದೆ ಕರೆ ಮುಗಿಸಿ ಬರುವುದನ್ನೇ ಆತ ಕಾಯ್ತಾ ಇದ್ದ. ತಂದೆ ಮಾತನಾಡಿ ಬಂದ ಮರುಕ್ಷಣವೇ,

'ಡ್ಯಾಡಿ ಈ ಸರಳ ಯಾರು?'

ಕೇಳಿಯೇ ಬಿಟ್ಟ ಹಾಗೂ ತನ್ನ ತಂದೆಯ ಬಾಯಿಯಿಂದ ಹಳೆಯ ಎಲ್ಲಾ ಕತೆಗಳನ್ನು ಕೇಳಿಸಿಕೊಂಡು ದೀರ್ಘವಾದ ಉಸಿರನ್ನು ಬಿಟ್ಟಿದ್ದ.

ನನ್ನ ತಂದೆಗೂ, ಈ ನವ್ಯಾಳ ಅತ್ತೆಗೂ ಮದುವೆ ಫಿಕ್ಸ್ ಆದ ಸತ್ಯ, ಈ ಸರಳ ನವ್ಯಳ ಅತ್ತೆ ಸುಮಾಳ ಗೆಳತಿಯೆಂಬ ಸತ್ಯ, ಜೊತೆಗೆ ನವ್ಯಾಳ ಅತ್ತೆ ಸುಮಾ ಬಾವಿಗೆ ಬಿದ್ದು ಸತ್ತು ನವ್ಯಳ ಅಜ್ಜಿಗೆ ಮಾನಸಿಕವಾದ ಸತ್ಯವೆಲ್ಲವೂ ಜೀವನ್ ತಲೆಯಲ್ಲಿ ಓಡುತ್ತಲೇ ಇತ್ತು. ಯಾರಲ್ಲಿ ಈ ವಿಚಾರಗಳನ್ನು ಹಂಚಿಕೊಳ್ಳಲಿ? ಎಂಬ ಮಾನಸಿಕ ತುಮುಲಗಳನ್ನು ಅನುಭವಿಸಿದ ಜೀವನ್‌ಗೆ ಈ ವಿಚಾರಗಳನ್ನು ಹಂಚಿ ಕೊಳ್ಳಲು, ಸರಿತಾಳಾಗಲಿ, ನವ್ಯಳಾಗಲಿ ಸರಿಯಾದ ವ್ಯಕ್ತಿಗಳಲ್ಲ ಎಂಬುದೊಂದು ಖಾತ್ರಿಯಾಗಿತ್ತು. ಇವರಿಬ್ಬರ ನಂತರದಲ್ಲಿ ಈ ವಿಷಯವನ್ನು ನವ್ಯಳ ತಂದೆ ಸುಹಾಸನಲ್ಲಿ ಹಂಚಿಕೊಂಡರೆ ಹೇಗೆ ಎಂದು ಯೋಚಿಸಿದ ಜೀವನ್‌ಗೆ ನೂರಾರು ಪ್ರಶ್ನೆಗಳು ಪ್ರಶ್ನಾರ್ಥಕವಾಗಿಯೇ ಉಳಿದವು.

ರಾತ್ರಿಯೆಲ್ಲ ಇದೇ ಯೋಚನೆಯಲ್ಲಿದ್ದ ಜೀವನ್ ಬೆಳಗಾಗುತ್ತಿದ್ದಂತೆ ಸುಹಾಸನಲ್ಲಿ ಮಾತನಾಡಲು ನವ್ಯನ ಮನೆಗೆ ಹೊರಟನು. ಬೆಳಂಬೆಳಗ್ಗೆ ಮನೆಯ ಬಾಗಿಲಲ್ಲಿ ಬಂದು ನಿಂತ ಜೀವನನನ್ನು ನೋಡಿ ನವ್ಯಳ ಸಂತಸದ ಜೊತೆಗೆ ಗಾಬರಿಯೂ ಆಯಿತು.

'ಏನೋ ಇದು? ಇಷ್ಟು ಬೆಳಿಗ್ಗೆ?'

ಪ್ರಶ್ನಾರ್ಥಕವಾಗಿ ಜೀವನನನ್ನೇ ನೋಡುತ್ತಾ ನವ್ಯ ನುಡಿದಳು.

'ಸುಹಾಸ್ ಅಂಕಲ್ ಇದಾರಾ?'

ಜೀವನ್ ಕೇಳುತ್ತಿದ್ದಂತೆ ನವ್ಯಳಿಗೆ ಮತ್ತಷ್ಟು ಗಾಬರಿಯಾಯಿತು.

'ಏನಾಯ್ತೋ? ಏನಾದರೂ ಸಮಸ್ಯೆನಾ?'

ನವ್ಯ ಪ್ರಶ್ನಿಸುತ್ತಿರುವಾಗಲೇ ಸುಹಾಸ ಮೆಟ್ಟಿಲಿಳಿದು ಬಂದು,

'ಯಾರಮ್ಮಾ ಅದು?' ಎಂದನು. ಅಷ್ಟರಲ್ಲಿ ಒಂದೆರಡು ಸಲ ನೋಡಿ ಪರಿಚಯವಿದ್ದ ಸುಹಾಸನಲ್ಲಿ ಜೀವನ್ ಓಡಿ ಬಂದು,

'ಅಂಕಲ್ ನಾನು ನಿಮಗೊಂದು ವಿಷಯ ಹೇಳಬೇಕಿದೆ. ಆ ವಿಷಯ ನಿಮಗೂ ಗೊತ್ತಿರಬಹುದು ಆದರೆ...'

ನಿಧಾನವಾಗಿ ಆಚೆ ಈಚೆ ನೋಡುತ್ತಾ ನವ್ಯಳ ಮುಂದೆ ಮಾತನಾಡಬಾರದೆಂಬುದನ್ನು ಕಣ್ ಸನ್ನೆಯ ಮೂಲಕ ಹೇಳಿ, ಸುಹಾಸನನ್ನು ಮನೆಯಿಂದ ಹೊರಗೆ ಕರೆದುಕೊಂಡು ಬಂದು ವಿಷಯವನ್ನೆಲ್ಲ ಹೇಳಿದಾಗ ಸುಹಾಸನಿಗೆ ಈ ವಿಷಯ ಮೊದಲೇ ಗೊತ್ತಿರುವುದನ್ನು ಸುಹಾಸ ಹೇಳಿದ.

'ಆದರೆ ತನ್ನಕ್ಕ ಡೈರಿಯಲ್ಲಿ ಬರೆದುಕೊಂಡ ಗೆಳತಿ ಸರಳ ಸಿಕ್ಕಿರುವುದು ಬಹಳ ಸಂತೋಷ ಜೀವನ್. ನಾನು ನನ್ನಕ್ಕ ಸುಮಾಳ ಸಾವಿನ ದಿನ ಅದೇನು ನಡೆದಿರಬಹುದೆಂಬ ಸತ್ಯ ಸರಳ ಅವರಿಗೆ ಖಂಡಿತಾ ಗೊತ್ತಿರುತ್ತದೆ. ಹಾಗಾಗಿ ಸರಳ ಅವರನ್ನು ಒಮ್ಮೆ ನನಗೆ ಮೀಟ್ ಮಾಡಿಸ್ತೀಯಾ?' ಎಂದು ಕೇಳಿದ ಸುಹಾಸನ ಸ್ವರದಲ್ಲಿದ್ದ ಬೇಡಿಕೆಯನ್ನು ಜೀವನ್ ಅಲ್ಲಗಳೆಯದೇ ಸರಳ ಅವರಿಗೆ ಕರೆ ಮಾಡಿ,

'ಇಂದು ಮಧ್ಯಾಹ್ನ ನಿಮ್ಮನ್ನು ಭೇಟಿ ಮಾಡಲು ನಿಮ್ಮ ಗೆಳತಿ ಸುಮಾ ಅವರ ತಮ್ಮ ಸುಹಾಸ್ ಅವರು ಬರ್ತಾರೆ. ನೀವು ಸಿಗಬಹುದಾ? ಅವರಿಗೆ ಸುಮ ಅವರ ಸಾವಿನ ದಿನ ಏನು ನಡೆಯಿತು ಎಂಬ ಸಣ್ಣ ಕುರುಹು ಕೂಡ ಸಿಕ್ಕಿಲ್ಲವಂತೆ. ಪಾಪ.. ನಿಮ್ಮಲ್ಲಿ ವಿವರಗಳು ಸಿಗಬಹುದಾ ಎಂಬ ಸಣ್ಣ ಆಸೆ...'

ಎಂದಾಗ ಸರಳ ಸುಲಭದಲ್ಲಿ ಒಪ್ಪಿಗೆ ಕೊಟ್ಟಳು. ಸುಹಾಸನಿಗೆ ಸರಳ ಯಾವಾಗ ಸಿಗ್ತಾಳೋ? ಯಾವಾಗ ತನ್ನಕ್ಕನ ಸಾವಿನ ಹಿನ್ನೆಲೆಯನ್ನು ತಿಳಿದುಕೊಳ್ಳುವುದೋ? ಎಂಬ ಕೂತೂಹಲದಿಂದ ನಿಂತಲ್ಲಿ ನಿಲ್ಲಲಾಗದೇ, ಕುಳಿತಲ್ಲಿ ಕುಳಿತುಕೊಳ್ಳಲಾಗದೇ ವಿಲ ವಿಲ ಒದ್ದಾಡಿ ಮಧ್ಯಾಹ್ನದವರೆಗೆ ಕಾಲ ಕಳೆದು ಸರಳ ಅವರನ್ನು ಮಾತನಾಡಿಸಲು ಹೊರಟನು. ಹೊರಡುವಾಗ ಹೆಂಡತಿ ಸುಜಾತಳಲ್ಲಿ ಏನನ್ನೂ ಹೇಳದೆ ಸ್ವಲ್ಪ ಕೆಲಸವಿದೆ ಎಂದಷ್ಟೇ ಹೇಳಿ ಹೊರಟಿದ್ದನು. ವಿಷಯ ಪೂರ್ತಿ ತಿಳಿದ ಮೇಲೆ ಎಲ್ಲರಲ್ಲಿಯೂ ಹಂಚಿಕೊಂಡರಾಯ್ತು. ಇಷ್ಟಕ್ಕೂ ಹಂಚಿಕೊಂಡು ಸಂಭ್ರಮಿಸುವ ವಿಚಾರವೇ ಇದು? ಮನಸ್ಸು ಸಾವಿರ ವಿಷಯಗಳನ್ನು, ಸಾವಿರ ಗೊಂದಲಗಳನ್ನು ಹೊತ್ತು ಸರಳರವರನ್ನು ಭೇಟಿ ಮಾಡಿತು. ಕ್ಷೇಮ ಸಮಾಚಾರ ವಿಚಾರಿಸಿದ ಸುಹಾಸ ತನ್ನಕ್ಕನ ಬಗೆಗೆ ಆಕೆಗೇನು ಗೊತ್ತು ಎಂಬುದನ್ನು ಪ್ರಶ್ನಿಸಿದಾಗ,

'ಅವಳ ಉಸಿರಿನ ಏರಿಳಿತವೂ ನನಗೆ ಗೊತ್ತಿತ್ತು. ನಿನಗೇನು ಬೇಕು ಅದನ್ನು ನಾನು ಹೇಳಬಲ್ಲೆ. ಆದರೆ ಅದರಿಂದ ಪ್ರಯೋಜನವೇನೂ ಆಗದು. ಆಕೆ ಸತ್ತು

ಆಗಲೇ ಸುಮಾರು ಮೂವತ್ತು ಮೂವತ್ತೈದು ವರ್ಷವಾಗುತ್ತಾ ಬಂತು' ಎಂದು ಎಂದು ದೀರ್ಘವಾದ ಉಸಿರು ಬಿಟ್ಟಾಗ ಸುಹಾಸ.

ಅವಳ ಸಾವು ಹೇಗಾಯಿತು? ಇಂದು ಸಂಜೆ ನೀನು ಬಾವಿಕಟ್ಟೆಯ ಬಳಿ ಹೋಗಬೇಕೆಂದು ಆಕೆಗೆ ಆರ್ಡರ್ ಮಾಡಿದವರು ಯಾರು? ನನಗಿಷ್ಟೇ ಸಾಕು. ಯಾಕೆಂದರೆ ಅವಳ ಸಾವಿನ ಕಾರಣದಿಂದ ಅವರಮ್ಮ ಅರ್ಥಾತ್ ನಮ್ಮಮ್ಮನಿಗೆ ಶಾಕ್ ಆಗಿ ಆಕೆ ಇಂದಿಗೂ ಆ ಶಾಕಿನಿಂದ ಹೊರಬಂದಿಲ್ಲ. ಹೋದ ಅಕ್ಕನ ಆತ್ಮಕ್ಕೆ ಶಾಂತಿಯ ಜೊತೆಗೆ ಬದುಕಿರುವ ನನ್ನಮ್ಮನ ಸಂತೋಷವನ್ನೂ ನಾನು ಕಾಪಾಡಿಕೊಳ್ಳಬೇಕಿದೆ' ಎಂದಾಗ ಸರಳ ತನ್ನ ಬಾಲ್ಯದ ಗೆಳತಿ ಸುಮಾಳ ಬಗೆಗೆ ತನಗೆ ತಿಳಿದ ವಿಷಯಗಳನ್ನು ಹೇಳುತ್ತಾ ಹೋದಳು.

'ಸುಮಾ ಮತ್ತು ನನ್ನದು ಬಹಳ ಹಳೆಯ ಗೆಳೆತನ. ಆಕೆ ಸುಂದರಿ. ನಾನು ಕಪ್ಪು ಸುಂದರಿ. ಆದರೂ ನನಗೆ ಆಕೆಯ ಮೇಲೆ ಒಂದಿನಿತೂ ಹೊಟ್ಟೆಯುರಿ ಇರಲಿಲ್ಲ. ಆಕೆಯ ನಗುವಿಗೆ ಮಾರು ಹೋಗದವರಿಲ್ಲ. ಅವಳು ಎರಡು ಜಡೆ ಹಾಕಿಕೊಂಡು, ಲಂಗ ದಾವಣಿಯಲ್ಲಿ ನಡೆದು ಬರುತ್ತಿದ್ದರೆ ಅವಳನ್ನು ಹಲವು ಹುಡುಗರು ಬಿಟ್ಟ ಕಣ್ಣು ಬಿಟ್ಟಂತೆ ನೋಡುತ್ತಿದ್ದರು. ಆ ಸಾಲಿನಲ್ಲಿ ಗೋಪಾಲನೂ ಒಬ್ಬ. ಅವನಿಗೆ ಅವಳನ್ನು ಪಡೆಯುವ ಹಂಬಲ. ಆದರೆ ಸುಮಾಳಿಗೆ ಮಧುಕರನ ಮೇಲೆ ಒಲವು. ಮಧುಕರ ಎಂದರೆ ಯಾರು ಅಂತ ಗೊತ್ತಲ್ವಾ? ನಿಮ್ಮ ಪದ್ಮಕ್ಕನ ಮೈದುನ. ಮಧುಕರನಿಗೂ ಈಕೆಯ ಮೇಲೆ ಪ್ರೀತಿ. ಆದರೆ ತನ್ನ ತಾಯಿಯ ಮೇಲಿನ ಪ್ರೀತಿಗಾಗಿ ಆ ಪೋಲಿಸ್ ದಿನಕರನನ್ನು ಸುಮಾ ಮನಸಾರೆ ಒಪ್ಪಿಗೆ ಸೂಚಿಸಿದ್ದಳು. ತಾನು ಹೆತ್ತ ತಾಯಿಗೆ ಮೋಸ ಮಾಡುವುದಿಲ್ಲವೆಂದು ಅವಳು ಮಧುಕರನಲ್ಲಿಯೂ ಹೇಳಿದ್ದಳು.

ಅಂದು ದಿನಕರನೊಂದಿಗೆ ಪೇಟೆಗೆ ಹೋಗಿ ಬಂದ ಸುಮಾಳನ್ನು ಮಧುಕರ ಅಡ್ಡ ಹಾಕಿದ್ದ. ನಿನ್ನೆಯೇ ನಾನು ಹೇಳಿದಂತೆ ಸಂಜೆ ಬಾವಿಯ ಬಳಿ ಬರಬೇಕು ಹಾಗೂ ನೀನು ಬಂದೇ ಬರುತ್ತೀಯಾ ಎಂದು ಸುಮಾಳಲ್ಲಿ ಹೇಳಿದಾಗ ಸುಮಾ ಅದೆಲ್ಲ ಸಾಧ್ಯವಿಲ್ಲ. ಈಗಲೂ ನಾನು ನೀನು ಬರಹೇಳಿದ ಬಾವಿಯ ಬಳಿಯೇ ಇದ್ದೇನೆ. ಅದೇನು ಅಂತ ಹೇಳು. ಅಮ್ಮ ಮನೆಯಲ್ಲಿ ಕಾಯುತ್ತಿರುತ್ತಾಳೆ ಎಂದು ಹೇಳುತ್ತಿದ್ದಂತೆ, ಮಧುಕರ ಅವಳ ಕೈ ಹಿಡಿದು ತನ್ನನ್ನು ಮದುವೆಯಾಗುವಂತೆ ಒತ್ತಾಯಿಸಿದ. ಎಷ್ಟು ಬಿಡಿಸಿಕೊಳ್ಳಲು ಪ್ರಯತ್ನಿಸಿದರೂ ಅವನು ಕೈ ಬಿಟ್ಟಿರಲಿಲ್ಲ. ಅಷ್ಟರಲ್ಲಿ ಅಲ್ಲಿಗೆ ಗೋಪಾಲ ಬಂದಿದ್ದ. ಅವನು ಆ ದೃಶ್ಯ ನೋಡಿ ಸುಮಾಳ ಬಳಿ ಓಡಿಬಂದ. ಅವರು ಮೂರು ಜನರ ಕೈ ಕೊಸರಾಟದಲ್ಲಿ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ ಸುಮಾ ಆಯತಪ್ಪಿ ಅಥವಾ ಕಾಲು ಜಾರಿ ಬಾವಿಗೆ ಬಿದ್ದಳೇನೋ. ಆ ಕ್ಷಣದಲ್ಲಿ ಏನು ನಡೆದಿರಬಹುದೆಂಬುದು ಇವತ್ತಿಗೂ ನಿಗೂಢವಾಗಿಯೇ

ಉಳಿದಿದೆ. ಅವಳ ಸಾವಿನ ನೋವಿನಲ್ಲಿದ್ದ ಮಧುಕರ ಕೆಲವೇ ತಿಂಗಳ ನಂತರ ಸಾವನ್ನಪ್ಪಿದ. ದಿನಕರ ಹಾಗೂ ಗೋಪಾಲ ಬೇರೆ ಮದುವೆಯಾಗಿ ಇಂದು ಬದುಕುತ್ತಿದ್ದಾರೆ. ಒಂದರ್ಥದಲ್ಲಿ ಸುಮಾಳ ಸಾವಿಗೆ ಯಾರೂ ಕಾರಣರಲ್ಲ. ಇನ್ನೊಂದರ್ಥದಲ್ಲಿ ಇವರೆಲ್ಲರೂ ಕಾರಣರು...' ಎಂದ ಸರಳಾಳ ಮಾತಿನಿಂದ ಸುಹಾಸನ ಅನುಮಾನಗಳೆಲ್ಲ ಬಗೆಹರಿದು.

'ನನ್ನಕ್ಕನ ಆಯುಷ್ಯವೇ ಅಷ್ಟಿತ್ತೇನೋ? ಮತ್ತೆ ನನಗಿನ್ನೊಂದು ಅನುಮಾನ ನಮ್ಮಕ್ಕ ಸತ್ತ ಸಮಯದಲ್ಲಿ ಅಮ್ಮ ಯಾಕೆ ಪ್ರಜ್ಞೆ ತಪ್ಪಿದ್ದು?'

'ಯಾವ ತಾಯಿಗಾದರೂ ಮಗಳು ಬಾವಿಗೆ ಬೀಳುವುದನ್ನು ನೋಡಿ ಸಹಿಸಿ ಕೊಳ್ಳಲು ಸಾಧ್ಯವೇ ಹೇಳು? ಅಷ್ಟಕ್ಕೂ ಸುಬ್ಬತ್ತೆಗೆ ಮಗಳು ಬಾವಿಗೆ ಬಿದ್ದ ಕಾರಣ ವಾಗಲಿ, ಗೋಪಾಲ ಹಾಗೂ ಮಧುಕರನ ಪ್ರೀತಿಯಾಗಲಿ ಯಾವುದರ ಸುಳಿವೂ ಇರಲಿಲ್ಲ. ಸುಬ್ಬತ್ತೆಗೆ ಇದು ಆತ್ಮಹತ್ಯೆಯಾಗಿ ಕಂಡಿತು. ದಿನಕರ ತಪ್ಪಿತಸ್ಥನಾಗಿ ಕಂಡಿದ್ದ. ಅವಳಿಗಂದು ಆದ ಶಾಕಿನಿಂದ ಅವಳು ಪ್ರಜ್ಞೆ ತಪ್ಪಿದ್ದಷ್ಟೇ ಸುಹಾಸ.'

ಸುಹಾಸನ ಎಲ್ಲಾ ಪ್ರಶ್ನೆಗಳಿಗೂ ಸರಳ ಉತ್ತರ ಕೊಟ್ಟಿದ್ದಳು. ಅಂದು ಸುಹಾಸ ನಿರಾಳವಾಗಿ ಮನೆಗೆ ಬಂದು ಸಂಜೆ ಊಟವಾದ ಮೇಲೆ ಅಮ್ಮ ಹಾಗೂ ಹೆಂಡತಿಯನ್ನು ಕೂರಿಸಿಕೊಂಡು ಎಲ್ಲವನ್ನೂ ವಿವರಿಸಿ, ಸುಮಕ್ಕನ ಆಯುಷ್ಯ ವಿದ್ದದ್ದೇ ಅಷ್ಟು, ಅವಳ ಸಾವಿಗೆ ಯಾರೂ ಕಾರಣರಲ್ಲ ಎಂಬುದನ್ನು ಮನದಟ್ಟು ಮಾಡಿದ. ಸುಬ್ಬಜ್ಜಿಗೂ ಮಗನ ಮಾತಿನ ಮೇಲೆ ನಂಬಿಕೆ ಬಂದು ನಿರಾಳವಾದಳು. ದಿನಕರನ ತಪ್ಪಿಲ್ಲವೆಂಬುನ್ನು ತಿಳಿದ ಸುಬ್ಬಜ್ಜಿ ಮರುದಿನ ದಿನಕರನನ್ನು ಬರಹೇಳಿ,

'ನನ್ನ ಮಗಳು ಸುಮಾಳನ್ನು ಮದುವೆಯಾಗಬೇಕಿದ್ದ ನೀನು ಇಂದು ಬೇರೆ ಯಾರನ್ನೋ ಮದುವೆಯಾಗಬೇಕಾಗಿ ಬಂತು. ನಿನ್ನ ಹೆಂಡತಿಯನ್ನೇ ನಾನಿಂದು ಸುಮಾ ಅಥವಾ ನನ್ನ ಮಗಳೆಂದು ಭಾವಿಸಿ ನಿನ್ನಲ್ಲೊಂದು ಮನವಿ ಮಾಡುತ್ತೇನೆ ದಿನಕರ. ದಯಮಾಡಿ ನನ್ನ ಮೊಮ್ಮಗಳಾದ ನವ್ಯಳನ್ನು ನಿನ್ನ ಮಗನಿಗೆ ಮದುವೆ ಮಾಡಿಸುವ ಮೂಲಕ ನಮ್ಮ ಸಂಬಂಧವನ್ನು ಮತ್ತೆ ಮುಂದುವರೆಸುವ ಬಯಕೆಯಾಗಿದೆ'

ಎಂದಾಗ ದಿನಕರ ಬಹಳ ಸಂತೋಷದಿಂದ ಒಪ್ಪಿಗೆ ನೀಡಿದ. ದಿನಕರನ ಹೆಂಡತಿಯೂ ಈ ಕತೆಯನ್ನೆಲ್ಲ ಕೇಳಿದ ಮೇಲೆ ಸರಿತಾಳನ್ನು ಸೊಸೆಯಾಗಿ ತರುವ ಮನಸ್ಸನ್ನು ಬದಲಾಯಿಸಿ ನವ್ಯಳನ್ನು ಒಪ್ಪಿಕೊಂಡಳು. ನವ್ಯಳಿಗೆ ಜೀವನ್ ಒಪ್ಪಬಹುದಾ ಎಂಬ ಅನುಮಾನ ಕಾಡಿತ್ತಾದರೂ ಜೀವನ್ ಸಂತೋಷದಿಂದ ಒಪ್ಪಿದನೆಂಬಲ್ಲಿಗೆ ಸುಹಾಸ್ ಹಾಗೂ ಸುಜಾತ ಕೂಡ ಸಂಭ್ರಮದಿಂದಲೇ ಸುಬ್ಬಜ್ಜಿಯ ಮಾತಿಗೆ ಒಪ್ಪಿಗೆ ಕೊಟ್ಟರು.

ನವ್ಯಳಿಗೆ ತನ್ನ ಮದುವೆಯ ಜೊತೆ ತನ್ನ ಗೆಳತಿ ಸರಿತಾಳ ಮದುವೆಯೂ ಆಗಬೇಕೆಂಬ ಆಸೆ ಹುಟ್ಟಿಕೊಂಡು ಅದನ್ನು ಸುಹಾಸನಲ್ಲಿ ಹೇಳಿ, ಗೋಪಾಲ ಭಟ್ಟರಲ್ಲಿ ಹಾಗೂ ಪದ್ಮಕ್ಕನಲ್ಲಿ ಮಾತನಾಡಿ ಪದ್ಮಕ್ಕನ ಸಂಬಂಧಿ ಡಾ ಅಭಿ ಜೊತೆ ಸರಿತಾಳ ಮದುವೆಯನ್ನು ನಿಶ್ಚಯಿಸಿದಳು.

ಒಂದೇ ಕಲ್ಯಾಣಮಂಟಪದಲ್ಲಿ ಸರಿತಾ & ಅಭಿಲಾಷ್ ಮತ್ತು ನವ್ಯ & ಜೀವನ್ ಮದುವೆ ನಡೆದು ಬದುಕಿನ ಜಂಜಾಟಗಳಲ್ಲಿ ಕಳೆದುಹೋಗಿದ್ದ ಸಂಬಂಧಗಳೆಲ್ಲ ಮತ್ತೆ ಒಂದಾಗಲು ಈ ಮದುವೆ ಸಹಕರಿಸಿತು.

ಮದುವೆ ಮಂಟಪದಲ್ಲಿ ಕುಳಿತಿದ್ದ ಜೀವನ್ ಓರೆನೋಟದಿಂದ ಸರಿತಾಳನ್ನು ನೋಡುವ ನಾಟಕವಾಡುತ್ತಾ ಎದೆಯ ಗರ್ಭದಲ್ಲಿದ್ದ ನವ್ಯಳನ್ನು ರೇಗಿಸುತ್ತಿದ್ದ. ಸುಬ್ಬಜ್ಜಿ ಮೊಮ್ಮಗಳ ಬದುಕಿಗೆ ಶುಭಾಶೀರ್ವಾದವಾಗಿ ಮದುವೆ ಮನೆಯಲ್ಲಿ ಓಡಾಡಿಕೊಂಡಿದ್ದಳು. ಸಂಭ್ರಮ ಮುಗಿಲು ಮುಟ್ಟುವಂತಿತ್ತು ಹಾಗೂ ಆ ಸಂಭ್ರಮ ಎಲ್ಲರ ಬದುಕಿನಲ್ಲಿಯೂ ಮುಂದುವರೆಯಿತು.

(ಮುಗಿಯಿತು)

ಅಧ್ಯಾಯ 1, 20 : ಶ್ರೀಮತಿ ದಿವ್ಯಾ ಶ್ರೀಧರ್ ರಾವ್



ತೀರ್ಥಹಳ್ಳಿಯಲ್ಲಿ ಜನನ. ಕುಂದಾಪುರ ಮಂಗಳೂರು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ. ಬಿಬಿಎಂ ಪದವಿ. ಉತ್ತಮ ವಾಗ್ಮಿ. 'ಯಕ್ಷ ಯಶಸ್ವಿ' ಎಂಬ ಟ್ರಸ್ಟ್ ಸ್ಥಾಪಿಸಿ ಯಕ್ಷಗಾನ ಕಲಾವಿದರಿಗೆ ಹಾಗೂ ಅವರ ಮಕ್ಕಳಿಗೆ ಸಹಾಯ ಮಾಡಿದ್ದಾರೆ. ಇವರು ರಚಿಸಿದ ಕರ್ಣ ವೃಷಾಲಿ ಯಕ್ಷಗಾನ ಪ್ರಸಂಗ ಜನಮನ್ನಣೆ ಗಳಿಸಿದೆ.

ಕುವೆಂಪು ಸಂಘದವರು ಏರ್ಪಡಿಸಿದ್ದ ಕತಾ ಸ್ಪರ್ಧೆಯಲ್ಲಿ 'ಸಾಹಿತ್ಯ ರತ್ನ' ಪ್ರಶಸ್ತಿ (2020) ಮೈಸೂರಿನಲ್ಲಿ ನಡೆಸಿದ ಕತಾ ಸ್ಪರ್ಧೆಯಲ್ಲಿ 'ಸೃಜನಶೀಲ ಕತಾ ಪ್ರಶಸ್ತಿ' (2021) ದೊರೆತಿದೆ.

'ಆ ನೀಲಿ ಕಂಗಳ ಹುಡುಗಿ, ಮೌನ ಧ್ವನಿಸಿತು, ಮಿಂಚದ ಮಿಂಚು' ಇವರ ಜನಪ್ರಿಯ ಕಾದಂಬರಿಗಳು. 'ಮೌನ ಧ್ವನಿಸಿತು' ಕಾದಂಬರಿಗೆ ತ್ರಿವೇಣಿ ಯುವ ಕಾದಂಬರಿ ಪ್ರಶಸ್ತಿ ದೊರೆತಿದೆ. ಎರಡು ಕಥಾ ಸಂಕಲನ ಪ್ರಕಟಿಸಿದ್ದಾರೆ. ಇವರ ಅಂಕಣ ಬರಹಗಳು ಹಲವು ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಅಧ್ಯಾಯ 2: ಶ್ರೀಮತಿ ಪಲ್ಲವಿ ರವೀಂದ್ರ



ಸ್ವಂತ ಐಸ್‌ಕ್ರೀಮ್ ಫ್ಯಾಕ್ಟರಿ ಮತ್ತು ಐಸ್‌ಕ್ರೀಂ ಪಾರ್ಲರ್ ನಡೆಸುತ್ತಿರುವ ಇವರದು ಶಿಸ್ತು ಮತ್ತು ಸಾಹಸದ ಬದುಕು. ಮಲೆನಾಡಿನ ಭಾಗದಲ್ಲಿ ಸುಪ್ರಸಿದ್ಧರಾದ ಕಂಕಳೆ ಕಿಟ್ಟಯ್ಯನವರ ಮೊಮ್ಮಗಳು. ಪದವೀಧರೆ. ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸಿದ ಅನುಭವ. ಸಾಹಿತ್ಯದಲ್ಲಿ ಆಸಕ್ತಿ. ಜಾಲತಾಣಗಳ ಜನಪ್ರಿಯ ಲೇಖಕಿ. ಉತ್ತಮ ಗಾಯಕಿ ಮತ್ತು ನಿರೂಪಕಿ.ಉತ್ತಮ ಪುಸ್ತಕಗಳ ಓದು ಜೊತೆಗೆ ಮಕ್ಕಳಿಗೆ ಭಗವದ್ಗೀತೆಯ ಪಾಠ. ತಾರಸಿಯಲ್ಲಿ ಹೂಗಿಡ ಮತ್ತು ತರಕಾರಿಗಳನ್ನು ಬೆಳೆಸುವುದು ಇವರ ಇಷ್ಟದ ಹವ್ಯಾಸ.

ಅಧ್ಯಾಯ 3 : ಶ್ರೀಮತಿ ವತ್ಸಲಾ ಶ್ರೀಧರ್



BSNLನಲ್ಲಿ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿ ಪಡೆದಿದ್ದಾರೆ. ಮಲೆನಾಡಿನ ಜಯಪುರ ಹುಟ್ಟೂರು. ತಂದೆ ಟಿ.ಆರ್.ಕೃಷ್ಣಮೂರ್ತಿ ರಾವ್ ಸುಂದರ ಕೈಬರಹಕ್ಕೆ ಹೆಸರಾದವರು. ಇವರು ಪ್ರಕೃತಿ ಪ್ರಿಯರು. ಬೆಂಗಳೂರಲ್ಲಿ ವಾಸ ಕವನ ಬರೆಯುವುದು ವಿದ್ಯಾರ್ಥಿ ದೆಸೆಯಿಂದಲೂ ಹವ್ಯಾಸ. ಚುಟುಕು, ಲೇಖನ ಗಳನ್ನೂ ಬರೆಯುತ್ತಾರೆ. ಉತ್ತಮ ಸಂಘಟಕರು. ಪ್ರವಾಸ, ಸಮೂಹ ಗಾಯನ, ನೃತ್ಯ ಮತ್ತಿತರ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿಶೇಷ ಆಸಕ್ತಿ. ಮತ್ತೊಬ್ಬರ ಕಷ್ಟಕ್ಕೆ ಸ್ಪಂದಿಸುವ ಗುಣ.

ಅಧ್ಯಾಯ 4–15, ಶ್ರೀಮತಿ ಡಿ. ಎಸ್. ಪುಷ್ಪ



ನಿತ್ಯ ಹರಿದ್ವರ್ಣ ವನದ ಬಸರೀಕಟ್ಟೆಯಲ್ಲಿ ಜನನ. ಈಗ ಶೃಂಗೇರಿ ಪುರವಾಸಿನಿ. ಮಲೆನಾಡಿನ ಅತ್ಯಂತ ಜನಪ್ರಿಯ ವ್ಯಕ್ತಿ. ಮಹಿಳಾ ಸಮಾಜದಿಂದ ಪ್ರಾರಂಭವಾದ ಸಾಮಾಜಿಕ ಚಟುವಟಿಕೆ. ಎರಡು ಬಾರಿ ಶೃಂಗೇರಿ ತಾಲೂಕು ಪಂಚಾಯತ್ ಅಧ್ಯಕ್ಷೆ ಹಾಗೂ ಒಂದು ಬಾರಿ ಜಿಲ್ಲಾ ಪಂಚಾಯತಿಯ ಉಪಾಧ್ಯಕ್ಷೆಯಾಗಿ ಯಶಸ್ವೀ ಕಾರ್ಯ ನಿರ್ವಹಣೆ. ಮೂರು ಬಾರಿ ಚುನಾವಣೆ ಎದುರಿಸಿ ಗೆದ್ದ ಖ್ಯಾತಿ. ಹಲವಾರು ಸಂಘ ಸಂಸ್ಥೆಗಳ ಅಧ್ಯಕ್ಷೆ, ಪದಾಧಿಕಾರಿ. ಭಾರತ ಜ್ಞಾನವಿಜ್ಞಾನ ಸಂಸ್ಥೆಯ ತಾಲ್ಲೂಕು ಅಧ್ಯಕ್ಷೆಯಾಗಿ ಹಳ್ಳಿಯಲ್ಲೇ ಅತ್ಯಧಿಕ ವಿಜ್ಞಾನ ಕಾರ್ಯಕ್ರಮಗಳನ್ನು ಮಕ್ಕಳಿಗಾಗಿ ಆಯೋಜಿಸಿದವರು. ಶೃಂಗೇರಿ ರೋಟರಿ ಕ್ಲಬ್ ಸದಸ್ಯೆ. ಈಗ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಜಿಲ್ಲಾ ಸಂಚಾಲಕಿ.

ಅಧ್ಯಾಯ 5, ಡಾ.ಮೇಘಾ ಕೆ.ಎಸ್.



ಆಯುರ್ವೇದ ವೈದ್ಯರು. ಕೊಪ್ಪ ಆರೂರು ಲಕ್ಷ್ಮೀನಾರಾಯಣ ಆಯುರ್ವೇದ ಮೆಡಿಕಲ್ ಕಾಲೇಜ್‌ನಲ್ಲಿ ತಮ್ಮ ವೈದ್ಯಕೀಯ ವ್ಯಾಸಂಗ ಮುಗಿಸಿ ನಂತರ ಮುಂದಿನ ಅನುಭವ/ಶಿಕ್ಷಣಕ್ಕೆ ಕೇರಳದಲ್ಲಿ ಒಂದು ವರ್ಷ ಕೆಲಸ ಮಾಡಿದ್ದಾರೆ.

ತಮ್ಮ ಸ್ವಂತ ಆಯುರ್ವೇದ ಆಸ್ಪತ್ರೆ 'ಸೃಷ್ಟಿ ಆಯುರ್ವೇದಾಲಯ'ವನ್ನು ಬೆಂಗಳೂರಿನ ಹೆಚ್.ಬಿ.ಆರ್. ಲೇಔಟ್‌ನಲ್ಲಿ ಯಶಸ್ವಿಯಾಗಿ ನಡೆಸುತ್ತಿದ್ದಾರೆ.

ಸಮಾಜ ಸೇವೆಯಲ್ಲಿ ಒಲವಿರುವ ಇವರು ಇನ್ನರ್ ವ್ಹೀಲ್ ಆಫ್ ಬೆಂಗಳೂರು ಹೆಚ್. ಬಿ. ಆರ್. ಸಂಘದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. ಹಲವಾರು ಪ್ರತಿಷ್ಠಿತ ಸಂಘ ಸಂಸ್ಥೆಗಳಿಗೆ ಆಯುರ್ವೇದದ ಆನ್ಲೈನ್ ಕ್ಲಾಸ್‌ಗಳನ್ನು ನಡೆಸುತ್ತಾ ಬಂದಿದ್ದಾರೆ. ಆರೋಗ್ಯಕ್ಕೆ ಸಂಬಂಧಿಸಿದಂತೆ ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿರುತ್ತಾರೆ. ಯೋಗ ತರಗತಿಗಳನ್ನೂ ನಡೆಸುವ ಇವರಿಗೆ ಓದುವುದು, ಹೊಸ ರುಚಿಗಳನ್ನು ಟ್ರೈ ಮಾಡುವುದು ನೆಚ್ಚಿನ ಹವ್ಯಾಸ. ಒಳ್ಳೆಯ ಸಿನಿಮಾ ತಪ್ಪಿಸುವುದಿಲ್ಲ.

ಅಧ್ಯಾಯ 6, ಶ್ರೀಮತಿ ಪೂರ್ಣಿಮಾ



ಇವರು ಕೊಪ್ಪದಲ್ಲಿ ಕಾಫಿ ವರ್ಕ್ಸ್ ಮತ್ತು ಸ್ಟೇಷನರಿ ಅಂಗಡಿಯನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದು ಸ್ಥಳೀಯರ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ.

ಸಾಹಿತ್ಯದಲ್ಲಿ ಆಸಕ್ತಿ. ಆರೂರು ಕುಟುಂಬದವರು. ಸತೀಶ್ ರವರ ಕೈ ಹಿಡಿದು ಸೇರಿದ್ದು ಜಿಗಳೆಮನೆ. ಸಮಯವಾದಾಗ ಉತ್ತಮ ಕೃತಿಗಳ ಓದು, ಕತೆ ಕವನ ಬರೆಯುವುದು ಇವರ ಹವ್ಯಾಸ. ಟೈಲರಿಂಗ್, ಕಸೂತಿ ಹಾಕುವುದರಲ್ಲೂ ಇವರು ನಿಪುಣರು. ಮನೆಯ ಕೈ ತೋಟದಲ್ಲಿ ವಿವಿಧ ಹೂವಿನ ಗಿಡಗಳು,ತರಕಾರಿ ಬೆಳೆಸುವುದು, ಹೊಸ ರುಚಿಯ ಪ್ರಯತ್ನ ಮಾಡುವುದು ಇವರಿಗೆ ಬಹಳ ಇಷ್ಟದ ಕೆಲಸ.

ಅಧ್ಯಾಯ 7. ಎಸ್. ವಿಶ್ವನಾಥ್



ಜನನ ಬಾಳೆಹೊನ್ನೂರಿನಲ್ಲಿ. ವಿದ್ಯಾಭ್ಯಾಸ ಬಾಳೆಹೊನ್ನೂರು. ಅಳಿಕೆ ಶಿವಮೊಗ್ಗ ಮತ್ತು ಸುಳ್ಯಾ ಊರುಗಳಲ್ಲಿ. ಇವರು ಟಿಸಿಎಸ್ ಕಂಪನೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಬೆಂಗಳೂರಿನಲ್ಲಿ ವಾಸವಾಗಿದ್ದಾರೆ.

ಉತ್ತಮ ಸಾಹಿತ್ಯ ಕೃತಿಗಳ ಓದಿನ ಜೊತೆಗೆ ಬಿಡುವಾದಾಗ ಸಿನಿಮಾ ನಾಟಕಗಳ ವೀಕ್ಷಣೆ ಇವರಿಗೆ ಇಷ್ಟ. ಬ್ಯಾಡ್ಮಿಂಟನ್ ಇವರ ನೆಚ್ಚಿನ ಆಟ. ಸ್ನೇಹ ಜೀವಿ. ಕನಸುಗಾರ. ಮಲೆನಾಡೆಂದರೆ ತುಂಬಾ ಪ್ರೀತಿ.

ಅಧ್ಯಾಯ 8. ಶ್ರೀಮತಿ ರೇಖಾದೇವಿ. ಕೆ



ಗ್ರಂಥಾಲಯ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವೀಧರೆ. ಕನ್ನಡ ಸಾಹಿತ್ಯದಲ್ಲಿ ಎಂ.ಎ. ಪದವಿ. ಮಂಗಳೂರಿನ ಕೆನರಾ ಕಾಲೇಜಿನಲ್ಲಿ ಗ್ರಂಥಪಾಲಕರಾಗಿದ್ದ ಇವರು ಸ್ವಯಂ ನಿವೃತ್ತಿಯನ್ನು ಪಡೆದುಕೊಂಡಿದ್ದಾರೆ.

ತಾಯಿ ಖ್ಯಾತ ಕವಯಿತ್ರಿ, ಶಿಕ್ಷಕಿ,ಕನ್ನಡ ಪಂಡಿತರಾಗಿದ್ದ ದಿ.ವಾಸಂತಿ ಕದಿರೆ. ಹೀಗಾಗಿ ಬಾಲ್ಯದಲ್ಲಿಯೇ ಸಾಹಿತ್ಯದ ವಾತಾವರಣವಿತ್ತು. ಕಾಲೇಜಿನಲ್ಲಿ 'ಓದುಗರ ಸಂಘ'ದ ಮೂಲಕ ಪ್ರಕಟಗೊಂಡ ಎರಡು ಕೃತಿಗಳನ್ನು ಸಂಪಾದಿಸಿದ್ದಾರೆ. ಇವರ ಹಲವಾರು ಸಣ್ಣ ಕತೆ, ಲೇಖನಗಳು ವಾರ ಪತ್ರಿಕೆಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟವಾಗಿವೆ. ಖ್ಯಾತ ಲೇಖಕಿಯರಾದ ಭುವನೇಶ್ವರಿ ಹೆಗಡೆ , ಉಷಾ ಪಿ.ರೈ ಮತ್ತು ಶ್ಯಾಮಲಾ ಮಾಧವ ರೊಂದಿಗೆ ನಡೆಸಿದ ಸಂದರ್ಶನವು ಮುಖಪುಟದ 'ಪುಸ್ತಕಾವಲೋಕನ ಓದು ಬರಹದ ಸುತ್ತ' ದಲ್ಲಿ ಪ್ರಕಟಗೊಂಡಿದೆ.

ಉತ್ತಮ ವಿಮರ್ಶಕಿ. ಸಾಹಿತ್ಯಕ್ಕೆ ಸಂಬಂಧಿಸಿದ ಸ್ಪರ್ಧಾ ವಿಜೇತರಿಗೆ ತಮ್ಮ ತಂದೆ ತಾಯಿಯ ಸ್ಮರಣಾರ್ಥ ಬಹುಮಾನಗಳನ್ನು ಪ್ರಾಯೋಜಿಸಿ ನೀಡುತ್ತಾ ಬಂದಿದ್ದಾರೆ.

ಅಧ್ಯಾಯ 9, ಶ್ರೀಮತಿ ಸುಭಾಷಿಣಿ ಮೋಹನ್



ವಕೀಲರು. ನಿಜ ನಾಮಧೇಯ ಕಮಲಾದೇವಿ.ಇವರ ವಿದ್ಯಾಭ್ಯಾಸ ಶೃಂಗೇರಿ, ಮೈಸೂರು, ಮದ್ದೂರು, ಬಾಳೇಹೊನ್ನೂರು, ಹಾಸನ, ಕೊಪ್ಪ ಹಾಗೂ ಶಿವಮೊಗ್ಗಗಳಲ್ಲಾಯಿತು. ಕಳೆದ 26 ವರ್ಷಗಳಿಂದಲೂ ಮೈಸೂರಿನಲ್ಲಿ ವಕೀಲ ವೃತ್ತಿ ನಡೆಸುತ್ತಿದ್ದು 2011ರಲ್ಲಿ ಭಾರತ ಸರ್ಕಾರದಿಂದ ನೇಮಿಸಲ್ಪಟ್ಟ ನೋಟರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದರ ಜೊತೆಗೆ ಮೈಸೂರಿನ ಕುಟುಂಬ ನ್ಯಾಯಾಲಯದಲ್ಲಿ ಸಂಧಾನಕಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಉತ್ತಮ ಗಾಯಕಿ. ಹಿಂದೂಸ್ತಾನಿ ಸಿತಾರ್ ವಾದನದಲ್ಲಿ ಸೀನಿಯರ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದಾರೆ. ಸಾಹಿತ್ಯ ಮತ್ತು ಸಂಗೀತದಲ್ಲಿ ಆಸಕ್ತಿ. ವಿಚಾರವಾದಿ.

ಅಧ್ಯಾಯ 10, ಶ್ರೀಮತಿ ವಾಣಿ ದಿನೇಶ್



ಕೋ ಆಪರೇಟಿವ್ ಸೊಸೈಟಿಯಲ್ಲಿ ಕಾರ್ಯದರ್ಶಿ ಹಾಗೂ ಹಲವು ಶಾಲೆಗಳಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ ಅನುಭವ.

ಸರಕಾರಿ ಉದ್ಯೋಗದಲ್ಲಿದ್ದ ತಂದೆ ಎನ್. ಪ್ರಭಾಕರ ರಾವ್ ಉತ್ತಮ ಸಿತಾರ್ ವಾದಕರು. ಅವರದೇ ತರಬೇತಿಯಲ್ಲಿ ಹಿಂದೂಸ್ತಾನಿ ಸಂಗೀತದ ಸಿತಾರ್ ವಾದನದಲ್ಲಿ ಸೀನಿಯರ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ.

ಮೈಸೂರಿನಲ್ಲಿ ನೆಲೆಸಿರುವ ಇವರಿಗೆ ಕನ್ನಡ ಕಾದಂಬರಿಗಳನ್ನು ಓದುವ ಹವ್ಯಾಸ ತಾಯಿಯಿಂದ ಬಂದ ಬಳುವಳಿ. ಟೈಲರಿಂಗ್ ಬಲ್ಲವರು. ಪದಬಂಧ ಬಿಡಿಸುವುದೆಂದರೆ ಇಷ್ಟ. ವ್ಯಾಕರಣ ಮತ್ತು ಕಾಗುಣಿತಗಳನ್ನು ಸೂಕ್ಷ್ಮ ವಾಗಿ ಗಮನಿಸುವ ಇವರು ಕನ್ನಡ ಭಾಷಾ ಪ್ರೇಮಿ.

ಅಧ್ಯಾಯ 11. ಡಾ ಚೇತನ್ ಸದಾನಂದ



ನೇತ್ರ ತಜ್ಞರು. ನಾಗವಾರದಲ್ಲಿ ತಮ್ಮದೇ ಆದ 'ಚೇತನ್ ಐ ಕೇರ್ ಸೆಂಟರ್' ಹೊಂದಿದ್ದಾರೆ. ಬಡವರಿಗೆ ಉಚಿತ ನೇತ್ರ ಚಿಕಿತ್ಸಾ ಶಿಬಿರ ನಡೆಸುವ ಎನ್‌ಜಿಓಗಳೊಡನೆ ಕೈ ಜೋಡಿಸಿ ಕರ್ನಾಟಕದಾದ್ಯಂತ ಪ್ರವಾಸ ಮಾಡುತ್ತಿರುತ್ತಾರೆ. ಇದುವರೆಗೂ 35000ಕ್ಕೂ ಹೆಚ್ಚು ಕ್ಯಾಟರಾಕ್ಟ್ ಆಪರೇಷನ್ ಗಳನ್ನು ಮಾಡಿದ್ದು ಇದರಲ್ಲಿ ಶೇ 80ರಷ್ಟು ಸೇವಾರ್ಥವಾಗಿ ನೇತ್ರ ಶಿಬಿರಗಳಲ್ಲಿ ಮಾಡಲ್ಪಟ್ಟಿರುತ್ತದೆ. ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೂ ಉತ್ಸಾಹ ದಿಂದ ಭಾಗವಹಿಸುವ ಇವರು ಉತ್ತಮ ತಬಲಾ ವಾದಕರೂ ಹೌದು. ಬನಾರಸಿ ಶೈಲಿಯ ತಬಲಾ ಜ್ಯೂನಿಯರ್ ಆಗಿದೆ.

ಉತ್ತಮ ಲೇಖಕ, ಕವಿ, ಕೆಲವು ಚಲನಚಿತ್ರಗಳಿಗೆ ಹಾಡುಗಳನ್ನು ಬರೆದಿದ್ದಾರೆ. ಹೀಗೆ ಇವರ ಆಸಕ್ತಿಯಲ್ಲಿ ಹಲವು ಕವಲು.

ಅಧ್ಯಾಯ 12, ಶ್ರೀಮತಿ ಬಿ. ಅನ್ನಪೂರ್ಣಮ್ಮ



ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಹೈತೂರ್ ಎಂಬ ಕುಗ್ರಾಮದಲ್ಲಿ ಜನನ. ಹೆಗ್ಗೋಡು ಸಾಗರದಲ್ಲಿ ವಿದ್ಯಾಭ್ಯಾಸ.

ಸಮಾಜಕಲ್ಯಾಣ ಇಲಾಖೆಯಲ್ಲಿ 35 ವರ್ಷ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತಿ. ಒಂದು ಕವನಸಂಕಲನ ಪ್ರಕಟಿಸಿದ್ದಾರೆ. ನಿವೃತ್ತಿ ನಂತರ ಯೋಗ ತೆರಪಿ ಮತ್ತು ಅನೇಕ ಯೋಗ ತರಬೇತಿಗಳನ್ನು ಪಡೆದು ಸೌಗಂಧಿಕಾ ಯೋಗ ಕೇಂದ್ರ ಸ್ಥಾಪಿಸಿದ್ದಾರೆ. ಆನ್ ಲೈನ್ ಮತ್ತು ಆಫ್ ಲೈನ್ ತರಗತಿಗಳನ್ನು ನಡೆಸುತ್ತಿದ್ದಾರೆ. ಅನೇಕ ಸಂಘ ಸಂಸ್ಥೆಗಳಲ್ಲಿ ಪದಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದು ಸೌಗಂಧಿಕಾ ವಿವಾಹ ವೇದಿಕೆಯನ್ನು ನಡೆಸುತ್ತಿದ್ದಾರೆ. ಕ್ರಿಯಾಶೀಲ ವ್ಯಕ್ತಿತ್ವ.

ಅಧ್ಯಾಯ 13, ಶ್ರೀಮತಿ ಸುಮಾ ವೆಂಕಟೇಶ್



ಪುತ್ತೂರಿನಲ್ಲಿ ಜನನ. ಬಾಲ್ಯ ವಿದ್ಯಾಭ್ಯಾಸ ಪ್ರಸ್ತುತ ಬದುಕು ಅಂದದೂರು ಬೆಂಗಳೂರಿನಲ್ಲಿ. ಬಾಲ್ಯದಲ್ಲೇ ಸಂಗೀತ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳತ್ತ ಒಲವು. ಒಂಬತ್ತನೇ ತರಗತಿಯಲ್ಲಿ ಇರುವಾಗಲೇ ಶ್ರೀಮತಿ ಸುಗಂಧಿ ರಾಧಾಕೃಷ್ಣ ರವರ ತಂಡದೊಂದಿಗೆ ಆಕಾಶವಾಣಿ ಯಲ್ಲಿ ಕಾರ್ಯಕ್ರಮ ನೀಡಿದ ಅನುಭವ. ವೀಣಾವಾದಕಿ. ಶಾಸ್ತ್ರೀಯ ಸಂಗೀತದಲ್ಲಿ ಜ್ಯೂನಿಯರ್ ಪರೀಕ್ಷೆ ಪಾಸು ಮಾಡಿರುವುದಲ್ಲದೆ ಸುಗಮಸಂಗೀತವನ್ನು ಶ್ರೀಮತಿ ಮಂಜುಳಾ ಗುರುರಾಜ್‌ರವರ ಬಳಿ ಅಭ್ಯಾಸ ಮಾಡಿದ್ದಾರೆ. ಪ್ರಕೃತಿ ಮತ್ತು ಸಂಗೀತವೆಂದರೆ ಸೆಳೆತ.

ಕನ್ನಡ ಪತ್ರಿಕೆ ಹಾಗೂ ಸಾಹಿತ್ಯ ಕೃತಿಗಳ ಓದು ಹವ್ಯಾಸ.ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿಶೇಷ ಆಸಕ್ತಿ. ಸೇವಾ ಮನೋಭಾವ ಇರುವ ಇವರು ಸಾಮಾಜಿಕ ಚಟುವಟಿಕೆಗಳಲ್ಲೂ ಭಾಗಿಯಾಗಿದ್ದಾರೆ. ಅಂಧಮಕ್ಕಳ ಶಾಲೆಯ ಮಕ್ಕಳಿಗೆ ಪರೀಕ್ಷೆಗೆ ಉತ್ತರ ಬರೆಯುವ ಕಾರ್ಯದಲ್ಲಿ ನೆರವಾಗಿದ್ದಾರೆ.

ಅಧ್ಯಾಯ 14, ಶ್ರೀಮತಿ ಸುಹಾಸಿನಿ ಪ್ರಸನ್ನ ಹೆಗಡೆ



ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಕವಲಕೊಪ್ಪ ಗ್ರಾಮದಲ್ಲಿ ವಾಸ. ಅಡಿಕೆ ತೋಟ ಗದ್ದೆಯ ಕೆಲಸದ ನಿರ್ವಹಣೆಯ ಜೊತೆಗೆ ಸಿದ್ದಾಪುರದಲ್ಲಿ ತೆರಿಗೆ ಸಲಹೆಗಾರರಾಗಿ ಕಾರ್ಯ ನಿರ್ವಹಿಸುತ್ತಿರುವ ಪತಿಗೆ ಆಪ್ತ ಸಹಾಯಕಿ. ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸಿರುವ ಅನುಭವ ಇರುವ ಇವರು ಸಿತಾರ್ ಪರೀಕ್ಷೆಯಲ್ಲಿ ಪಾಸ್ ಆಗಿದ್ದು, ಸಿತಾರ್ ತರಗತಿಯನ್ನು ಸಿದ್ದಾಪುರದಲ್ಲಿ ಆರಂಭಿಸುವ ಉದ್ದೇಶ ಹೊಂದಿದ್ದಾರೆ. ಹುಟ್ಟಿದ್ದು ಮೈಸೂರು.ಸಂಗೀತ ಕಲೆಗಳಲ್ಲಿ ಆಸಕ್ತಿ. ಹೂವಿನ ಗಿಡ ತರಕಾರಿಗಳನ್ನು ಬೆಳೆಯುವುದಲ್ಲದೆ ವೆನಿಲ್ಲಾ ಗಿಡಗಳ ಬಗ್ಗೆ ವಿಶೇಷ ಆಸಕ್ತಿ ಹೊಂದಿದ್ದಾರೆ. ವೆನಿಲ್ಲಾ ಪೋಲಿನೇಷನ್ ಮಾಡುವುದರಲ್ಲಿ ನಿಪುಣೆ. ಕನ್ನಡ ಪುಸ್ತಕಗಳ ಓದು, ಟೈಲರಿಂಗ್ ಹಾಗೂ ಬೇರೆ ಬೇರೆ ರೀತಿಯ ಹೊಸರುಚಿಗಳನ್ನು ಮಾಡುವುದು ಇವರ ಹವ್ಯಾಸ.

ಅಧ್ಯಾಯ 16, ಶ್ರೀಮತಿ ಆಶ್ರಿತಾ ಕಿರಣ್



ಮೂಲತಃ ಕುಂದಾಪುರ ತಾಲ್ಲೂಕಿನ ಸಿದ್ಧಾಪುರದವರು. ಆಂಗ್ಲ ಭಾಷೆಯಲ್ಲಿ ಎಂ.ಎ. ಪದವಿಯನ್ನು ಪಡೆದು ಉಪನ್ಯಾಸಕಿಯಾಗಿ ಕೆಲಸ ನಿರ್ವಹಿಸಿದ್ದಾರೆ. ವಿವಾಹಾನಂತರ ಬೆಂಗಳೂರಿನಲ್ಲಿ ವಾಸ.

ಕವನದಿಂದ ಆರಂಭವಾದ ಇವರ ಸಾಹಿತ್ಯ ಕೃಷಿ ಇತರ ಪ್ರಕಾರಗಳಲ್ಲೂ ಮುಂದುವರೆದಿದೆ. ಇವರ ಲೇಖನ, ಕತೆಗಳು ಅನೇಕ ಪ್ರತಿಷ್ಠಿತ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.ಕೆಲವು ಕಥೆಗಳು 92.7 ಎಫ್ ಎಂ ರೇಡಿಯೋದಲ್ಲಿ ಪ್ರಸಾರವಾಗಿದೆ. ತಮ್ಮ ಬ್ಲಾಗ್ ಬರಹಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ಜನಪ್ರಿಯರಾಗಿದ್ದಾರೆ. ಇವರ ಎರಡು ಕತೆಗಳಿರುವ 'ಕಥಾ ಪಂಜರ' ಎಂಬ ಕಥಾ ಸಂಕಲನ, ಏಳು ಲೇಖನಗಳಿರುವ 'ಸ್ಪಂದನಾ' ಎಂಬ ಹೆಸರಿನ ಕೃತಿ ಪ್ರಕಟವಾಗಿವೆ.

'ಜ್ಞಾನತಾಣ' ಎಂಬ ವೆಬ್‌ಸೈಟ್‌ನಲ್ಲಿ ಬರೆಯುತ್ತಾ ಇತರರ ಬರಹಗಳನ್ನು ಪ್ರಕಟಿಸಿ ಓದುಗರಿಗೆ ತಲುಪಿಸುವ ಕೆಲಸವನ್ನು ಗೆಳತಿಯರ ತಂಡದೊಂದಿಗೆ ನಿರ್ವಹಿಸುತ್ತಿದ್ದಾರೆ.

ಅಧ್ಯಾಯ 17, ಕುಮಾರಿ ಅನುಷ ಎಂ. ಎಂ.



ಇಂಜಿನಿಯರಿಂಗ್ ಪದವೀಧರೆ. ಬೆಂಗಳೂರಿನ ಬೋಯಿಂಗ್ ಸಂಸ್ಥೆಯಲ್ಲಿ ಕೆಲಸ. .ಊರು ಸಂಗೀತ ಕಲೆಗಳ ತವರೂರು ಮೈಸೂರು. ಸಂಗೀತ ಕೇಳುವುದು ಪುಸ್ತಕಗಳನ್ನು ಓದುವುದು ಇವರ ಹವ್ಯಾಸ . ನೃತ್ಯವೆಂದರೆ ಇಷ್ಟ.ಕ್ವಿಜ್ ಮತ್ತು ಇತರ ಸ್ಪರ್ಧೆಗಳಲ್ಲಿ ಭಾಗವಹಿಸುವುದೆಂದರೆ ಖುಷಿ. ಮಹತ್ವಾಕಾಂಕ್ಷಿ. ಭರತನಾಟ್ಯದಲ್ಲಿ ಜ್ಯೂನಿಯರ್ ಆಗಿದೆ. ಎಳೆಯ ವಯಸ್ಸಿನಲ್ಲೇ ವಿದ್ಯಾಭ್ಯಾಸದೊಂದಿಗೆ ಯು & ಐ ಎಂಬ ಎನ್.ಜಿ.ಓನಲ್ಲಿ ಅನಾಥಾಶ್ರಮದ ಮಕ್ಕಳಿಗೆ ಶಿಕ್ಷಕಿಯಾಗಿ ಸಮಾಜ ಸೇವೆಯಲ್ಲಿ ತೊಡಗಿಕೊಂಡವರು. ತಂದೆಯ ಪ್ರೇರಣೆಯಿಂದ ಇಸ್ಕಾನ್ ನಡೆಸುವ ಕಾರ್ಯಕ್ರಮಗಳಲ್ಲಿ ಸ್ವಯಂಸೇವಕಿಯಾಗಿ ಸಕ್ರಿಯರಾಗಿ ಭಾಗವಹಿಸುತ್ತಾ ಬಂದಿದ್ದಾರೆ.

ಅಧ್ಯಾಯ ೧೮, ಶ್ರೀಮತಿ ಸ್ವರ್ಣಲತಾ ಎಚ್.ವಿ.




ಮಲೆನಾಡಿನಲ್ಲಿ ಬಾಲ್ಯ, ವಿದ್ಯಾಭ್ಯಾಸ ಹುಲ್ಸೆ, ಮೈಸೂರು ಹಾಗೂ ಬೆಂಗಳೂರಿನಲ್ಲಿ ನಡೆಯಿತು.

ಬಿಎಸ್‌ಎನ್‌ಎಲ್ ಹಾಸನದಲ್ಲಿ ಹಿರಿಯ ಸಹಾಯಕಿ ಯಾಗಿದ್ದ ಇವರು 35 ವರ್ಷ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿ ಪಡೆದಿದ್ದಾರೆ. ಓದುವುದು, ರಂಗೋಲಿ ಬಿಡಿಸುವುದು ಹಾಗೂ ಅಕ್ಷರದಾಟಗಳಲ್ಲಿ ವಿಶೇಷ ಆಸಕ್ತಿ. ಶ್ರೀಮತಿ ವಸುಮತಿ ಉಡುಪ ರವರ ಕತೆಗಳು ಇವರಿಗೆ ಅಚ್ಚುಮೆಚ್ಚು. ದೈವಭಕ್ತೆ.

ಆದ್ಯಾತ್ಮದೆಡೆ ಒಲವು. ಭಗವದ್ಗೀತೆ ಹಾಗೂ ಶ್ಲೋಕ ಪಠಣ ಕಲಿಕೆಯಲ್ಲಿ ತೊಡಗಿದ್ದಾರೆ. 'ಸಿದ್ಧಿ ಸಮಾಧಿಯೋಗ' ಹಾಗೂ ಇನ್ನಿತರ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ.

ಅಧ್ಯಾಯ 19, ಹು ವಾ ಶ್ರೀಪ್ರಕಾಶ



ಭಾರತೀಯ ಸ್ಟೇಟ್ ಬ್ಯಾಂಕಿನ ನಿವೃತ್ತ ವ್ಯವಸ್ಥಾಪಕರು. ಬೆಂಗಳೂರಿನಲ್ಲಿ ವಾಸ. ಮೂಲತಃ ಮಲೆನಾಡಿನವರು.

ವಿದ್ಯಾಭ್ಯಾಸ ಹುಲ್ಸೆ, ಮಂಗಳೂರು, ಹುಬ್ಬಳ್ಳಿ ಮತ್ತು ಮೈಸೂರಿನಲ್ಲಿ. ಬ್ಯಾಂಕ್ ಉದ್ಯೋಗದ ನಿಮಿತ್ತ ಕರ್ನಾಟಕದ ವಿವಿಧ ಊರುಗಳಲ್ಲಿ ಕಾರ್ಯನಿರ್ವಹಿಸಿಸಿ ನಿವೃತ್ತಿಯ ನಂತರ ಬೆಂಗಳೂರಿನಲ್ಲಿ ವಾಸ.

ಸಾಹಿತ್ಯ, ಯಕ್ಷಗಾನ, ನಾಟಕ ಯೋಗ, ಆದ್ಯಾತ್ಮಗಳಲ್ಲಿ ಆಸಕ್ತಿ. ಪ್ರವಾಸ ವೆಂದರೆ ಇಷ್ಟ. ನಿವೃತ್ತಿಯ ನಂತರ ಜ್ಯೋತಿಷ್ಯ ಕಲಿಕೆಯಲ್ಲಿ ತೊಡಗಿದ್ದು ಅಡ್ವಾನ್ಸ್ ಡಿಪ್ಲೊಮಾ ಮಾಡಿದ್ದಾರೆ. ಇವರ ಎರಡು ಕೃತಿಗಳು ಬಿಡುಗಡೆಯಾಗಿವೆ.

ನಿತಿನ್ ಶೇಖರ್, (ಮುಖಪುಟ ಕಲಾವಿದ)



ದೃಶ್ಯ ವಿನ್ಯಾಸಕ, ಕಲಾವಿದ ಶ್ರೀ ನಿತಿನ್ ಶೇಖರ್ ಚಿತ್ರಕಲಾ ಪರಿಷತ್ ಮತ್ತು CAVAದಿಂದ ಬ್ಯಾಚುಲರ್ ಆಫ್ ಫೈನ್ ಆರ್ಟ್ಸ್ ಪದವಿ ಪಡೆದಿರುವರು. ಇವರು ಕಳೆದ ಹತ್ತು ವರ್ಷಗಳಿಂದ ಕಾಕ್ಟೈಲ್ಜ್ (Cocktaliz) ಎಂಬ ತಮ್ಮ ಸ್ವಂತ ಉದ್ಯಮ ನಡೆಸುತ್ತಿದ್ದಾರೆ.

ವಿಶೇಷವಾಗಿ ಇವರು ಕಾರ್ಪೊರೇಟ್ ಸಂಸ್ಥೆಗಳಿಗೆ ಬೆರಗುಗೊಳಿಸುವ ಗೋಡೆ ವಿನ್ಯಾಸ ಮತ್ತು ಕಲಾ ವಿನ್ಯಾಸಗಳನ್ನು ಮಾಡಿಕೊಡುತ್ತಿದ್ದಾರೆ. ಬಿಕೋ ಎನ್ನುವ ಕಛೇರಿಗಳನ್ನು ಕಣ್ಮನ ಸೂರೆಗೊಳ್ಳುವಂತೆ ವಿನ್ಯಾಸಗೊಳಿಸಬಲ್ಲರು. ಸ್ನೇಹ ಜೀವಿ.ಮಿತ ಮಾತು. ಚಿತ್ರಗಳಲ್ಲಿ ಭಾವನೆಗಳನ್ನು ತುಂಬಬಲ್ಲರು.

ಅ. ಶಾ. ನಾಗೇಂದ್ರ



ಮಲೆನಾಡ ಬಂಧುಗಳು ವಾಟ್ಸಪ್ ವೇದಿಕೆಯ ಸ್ಥಾಪಕರು. ಅರ್ಧಿನಿ, ಶೃಂಗೇರಿ ಮೂಲ ಊರು. ಬೆಂಗಳೂರಿನ ಜಾಲಹಳ್ಳಿಯಲ್ಲಿ ವಾಸ್ತವ್ಯ. ಅಂಚೆ ಇಲಾಖೆಯ (ಅಂಚೆ ಮಹಾ ಕಾರ್ಯಾಲಯ) ನಿವೃತ್ತ ನೌಕರರು. ಇಲಾಖೆಯಲ್ಲಿ ಇದ್ದಾಗ ಕನ್ನಡ ಸಂಘದ ಚಟುವಟಿಕೆ ಮತ್ತು ಗಣಪತಿ ದೇವಸ್ಥಾನ ನಿರ್ಮಾಣ ಕಾರ್ಯ ಮತ್ತಿತರ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗಿ.

ಪ್ರಗತಿ ಸಿಂಡಿಕೇಟ್ ಮಾತೃ ಸಂಸ್ಥೆ ಹಾಗೂ ಕನ್ನಡ ಸಂಘದ ಮಾಜಿ ಅಧ್ಯಕ್ಷರು. ಪ್ರಗತಿ ಸಿಂಡಿಕೇಟ್ ಮಲ್ಟಿಪರ್ಪಸ್ ಕೋ-ಆಪರೇಟಿವ್ ಸೊಸೈಟಿಯ ನಿರ್ದೇಶಕರಲ್ಲಿ ಒಬ್ಬರು. ಇವರು 11.04.2015ರಂದು ಆರಂಭಿಸಿದ ಮಲೆನಾಡ ಬಂಧುಗಳು ವೇದಿಕೆ ಈಗ 300ಕ್ಕೂ ಹೆಚ್ಚು ಸದಸ್ಯರನ್ನು ಹೊಂದಿವೆ.

ನವೀನ್ ಸಾಗರ್



ಈ ಕೃತಿಗೆ ಇವರದೇ ಮುನ್ನುಡಿ. ಸಾಗರ ಹುಟ್ಟೂರು. ನವೀನ್ ಕುಮಾರ್ ಆದ ಇವರು ನವೀನ್ ಸಾಗರ್ ಆಗಿ ಜನಪ್ರಿಯರಾಗಿದ್ದಾರೆ. ಪತ್ರಿಕೋದ್ಯಮಕ್ಕೆ ಕಾಲಿಟ್ಟು ಕ್ರೈಂ ಜರ್ನಲಿಸಂ, ಸಿನಿಮಾ, ರಾಜಕೀಯ, ಪ್ರಸ್ತುತ ವಿದ್ಯಮಾನ, ಕ್ರೀಡಾವಿಭಾಗ ಹೀಗೆ ಎಲ್ಲ ವಿಭಾಗಗಳಲ್ಲಿ ವರದಿಗಾರಿಕೆ ಮತ್ತು ಬರವಣಿಗೆ ಮಾಡಿರುವ ಇವರು ಹಾಯ್ ಬೆಂಗಳೂರ್, ಕನ್ನಡಪ್ರಭ, ವಿಶ್ವವಾಣಿಯಂಥ ಪ್ರಖ್ಯಾತ ಪತ್ರಿಕೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ ಸಿನಿಮಾ ಮತ್ತು ಧಾರಾವಾಹಿಗಳ ಬರವಣಿಗೆಯನ್ನೂ ಮಾಡಿ ಸೈ ಎನಿಸಿಕೊಂಡಿದ್ದಾರೆ. ಸಂಭಾಷಣಾಕಾರನಾಗಿ ಸಾವಿರಾರು ಎಪಿಸೋಡ್ ಬರೆದಿದ್ದಾರೆ.

ಸೋಷಿಯಲ್ ಮೀಡಿಯಾದಲ್ಲಿ ಅತ್ಯಂತ ಜನಪ್ರಿಯರು. ಇವರ ಫೇಸ್ ಬುಕ್ ಬರಹಗಳಿಗೆ ಅಪಾರ ಜನಪ್ರಿಯತೆ ಇದೆ. ಣವಿಣ, ಸಿಸ್ಸಾ ಎಂಬ ವಿಲಕ್ಷಣ ಹೆಸರುಗಳ ಪುಸ್ತಕಗಳ ಜೊತೆ ಪದಸಾಗರ ಎಂಬ ಕೃತಿ ಇದುವರೆಗೆ ಪ್ರಕಟವಾಗಿವೆ. ಡೆಡ್ ಲೈನ್ ಕ್ರಿಯೇಷನ್ಸ್ ಎಂಬ ಪ್ರಕಾಶನದಡಿಯಲ್ಲಿ ವಿವಿಧ ಬರಹಗಾರರ ಹದಿನೈದು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ನಟನೆ, ಧಾರಾವಾಹಿ ಸಿನಿಮಾ ನಿರ್ಮಾಣ ಹೀಗೆ ಹಲವು ಚಟುವಟಿಕೆ.

ಈ ಶೋ ಕಾದಂಬರಿ, ಅಧ್ಯಾಯದಿಂದ ಅಧ್ಯಾಯಕ್ಕೆ ಓದುಗನನ್ನು ತನ್ನೊಳಗೆ ಎಳೆದುಕೊಳ್ಳುತ್ತದೆ. ಪರಿಸರದ ತೆಕ್ಕೆಯೊಳಗೆ ತೆಗೆದುಕೊಳ್ಳುತ್ತದೆ. ಪಾತ್ರಗಳ ನಡುವೆ ಕೂತು ವೀಕ್ಷಕರಾಗ್ತೀವಿ ಓದುಗರು. ಕೆಲವೊಮ್ಮೆ ನಾವೇ ಪಾತ್ರವಾಗಿ ರಿಯಾಕ್ಟ್ ಮಾಡಿಬಿಡುವಷ್ಟು ಗಾಢತೆ ಕೂಡ ಇದೆ ನಿರೂಪಣೆಯಲ್ಲಿ.

. ಈ ಕಾದಂಬರಿಯಲ್ಲಿ ನಮ್ಮನ್ನು ನಿಗೂಢತೆಗಿಂತ ಹೆಚ್ಚಾಗಿ ಪಾತ್ರಗಳ ಎಮೋಷನ್ ಗಳೇ ಕಾಡುತ್ತವೆ. ಹೀಗಾಗಿ ಇದನ್ನು ಸಸ್ಪೆನ್ಸ್ ಥ್ರಿಲ್ಲರ್ ವಿಭಾಗಕ್ಕೆ ಸೇರಿಸೋದಕ್ಕಿಂತ ಒಂದು ಭಾವುಕ ಕೌಟುಂಬಿಕ ಕಾದಂಬರಿ ವಿಭಾಗಕ್ಕೆ ಸೇರಿಸೋದು ಹೆಚ್ಚು ಸೂಕ್ತ ಅಂದುಕೊಳ್ಳುತ್ತೇನೆ.

(ಮುನ್ನುಡಿಯಿಂದ)

ನವೀನ್ ಸಾಗರ್

ISBN 819821086-5
9788198210869

ಸ್ನೇಹ ಬುಕ್ ಹೌಸ್
ಪ್ರಕಾಶಕರು ಮತ್ತು ಪುಸ್ತಕ ಮಾರಾಟಗಾರರು
ನಂ. 165, 10ನೇ ಮುಖ್ಯರಸ್ತೆ, ಶ್ರೀನಗರ, ಬೆಂಗಳೂರು – 560 050
ಮೊಬೈಲ್ : 9845031335, email : snehabookhouse@gmail.com

ರೂ. 200/-